
೭೫ನೇ
ಅಖಿಲಭಾರತ
ಅಮೃತಮಹೋತ್ಸವ
ಕನ್ನಡ ಸಾಹಿತ್ಯ
ಸಮ್ಮೇಳನ
ಚಿತ್ರದುರ್ಗ

ಪ್ಲೇಟೋವಿನ ಆದರ್ಶರಾಜ್ಯ

ಎಂ. ಎ. ವೆಂಕಟರಾವ್



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

೭೫ ನೇ ಅಖಿಲ ಭಾರತ ಅಮೃತ ಮಹೋತ್ಸವ ಕನ್ನಡ ಸಾಹಿತ್ಯ ಸಮ್ಮೇಳನ – ಚಿತ್ರದುರ್ಗ

ಪ್ಲೇಟೋವಿನ ಆದರ್ಶ ರಾಜ್ಯ

ಎಂ.ಎ. ವೆಂಕಟರಾವ್

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

PLETOVINA AADARSHA RAAJYA

by : **M.A. Venkata Rao**

Published by : **Kannada Sahitya Parishat**

Pampa Mahakavi Road, Chamarajapet, Bangalore - 560018

Pages : 154 + viii Price : Rs. **70=00 : 2009**

ಮೊದಲನೆಯ ಮುದ್ರಣ	: ೧೯೫೬
ಎರಡನೆಯ ಮುದ್ರಣ	: ೨೦೦೯
ಪ್ರತಿಗಳು	: ೧೦೦೦
ಬೆಲೆ	: ಎಪ್ಪತ್ತು ರೂಪಾಯಿಗಳು

ಪ್ರಕಟಣ ಸಮಿತಿ

ಅಧ್ಯಕ್ಷರು	–	ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಸಂಚಾಲಕರು	–	ಶ್ರೀ ಎಚ್.ಕೆ. ಮಳಲಿಗೌಡ

ಸದಸ್ಯರು

ಶ್ರೀ ಟಿ.ಎಸ್.ದಕ್ಷಿಣಾಮೂರ್ತಿ

ಡಾ. ಗಿರಡ್ಡಿ ಗೋವಿಂದರಾಜ

ಪ್ರೊ. ಎಸ್.ಜಿ.ಸಿದ್ಧರಾಮಯ್ಯ

ಶ್ರೀ ಬಿ.ಆರ್.ಪೊಲೀಸ್ ಪಾಟೀಲ

ಶ್ರೀ ಮಾನಸ

ಶ್ರೀ ಪ್ರದೀಪ್‌ಕುಮಾರ ಕಲ್ಲೂರ

ಶ್ರೀ ಪುಂಡಲೀಕ ಹಾಲಂಬಿ

ಡಾ. ಎಚ್. ಜಯಮ್ಮ ಕರಿಯಣ್ಣ

ಶ್ರೀ ಕುಂ.ವೀರಭದ್ರಪ್ಪ

ಶ್ರೀ ವಿಷ್ಣು ನಾಯ್ಕ

ಡಾ. ಬೈರಮಂಗಲ ರಾಮೇಗೌಡ

ಸಮ್ಮೇಳನಾಧ್ಯಕ್ಷರು	–	ಪ್ರೊ. ಎಲ್. ಎಸ್. ಶೇಷಗಿರಿರಾವ್ ೭೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ
ನಿರ್ದೇಶಕರು	–	ಶ್ರೀ ಮನು ಬಳಿಗಾರ್ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುಖಪುಟ ವಿನ್ಯಾಸ : ಶ್ರೀ ಮೋನಪ್ಪ

ಮುದ್ರಣ : ನಂದಿ ಪ್ರೋಸಸ್, ನಂ.೬/೧, ೪ನೇ ಅಡ್ಡರಸ್ತೆ, ನೇತಾಜಿ ರಸ್ತೆ,
ನಾಗಸಂದ್ರ, ತ್ಯಾಗರಾಜನಗರ, ಬೆಂಗಳೂರು-೫೬೦ ೦೨೮
ದೂ: ೨೬೭೭೨೯೨, ೨೬೭೬೬೨೪೨

ಅಧ್ಯಕ್ಷರ ನುಡಿ

ಬಿ.ಎಂ.ಶ್ರೀ. ಅಚ್ಚುಕೂಟ ಪ್ರಾರಂಭವಾದಾಗಿನಿಂದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರಿಗೆ ಬೇಕಾಗುವ ಸಾಹಿತ್ಯವನ್ನು ಕಾಲಕಾಲಕ್ಕೆ ಕೊಡುತ್ತಾ ಬಂದಿದೆ. ಪರಿಷತ್ತು ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದ ಈ ದೀರ್ಘ ಅವಧಿಯಲ್ಲಿ ಅಧ್ಯಕ್ಷರು ಮತ್ತು ಪ್ರಕಟಣಾ ಸಮಿತಿ ಸಹೃದಯ ಓದುಗರ ಅಭಿರುಚಿಗೆ ಸ್ಪಂದಿಸಿರುವುದಲ್ಲದೆ ಸದಭಿರುಚಿಯನ್ನು ನಿರ್ಮಾಣ ಮಾಡುವ ಕೆಲಸವನ್ನು ಎಚ್ಚರದಿಂದ ಮಾಡುತ್ತಾ ಬಂದಿದ್ದಾರೆ. ಎಲ್ಲ ಕ್ಷೇತ್ರಗಳಿಂದ ಹರಿದುಬರುವ ಜ್ಞಾನಧಾರೆಗಳನ್ನು ಹಿಡಿದುಕೊಟ್ಟು ಲೋಕಜ್ಞಾನವನ್ನು ಓದುಗರಲ್ಲಿ ತುಂಬುವ, ಅವರ ಅರಿವಿನ ದಿಗಂತಗಳನ್ನು ವಿಸ್ತರಿಸುವ, ಆತ್ಮವಿಶ್ವಾಸವನ್ನು ಹುಟ್ಟಿಸುವ ಕೆಲಸಕ್ಕೆ ಪರಿಷತ್ತು ವೇದಿಕೆಯಾಗಿದೆ. ವಿವಿಧ ಜ್ಞಾನ ಶಿಸ್ತುಗಳಲ್ಲಿ ಪರಿಣಿತರಾದವರನ್ನು ಗುರುತಿಸಿ ಅವರಿಂದ ಪುಸ್ತಕ ಬರೆಸಿದೆ. ಸ್ವಯಂಪ್ರೇರಿತರಾಗಿ ಪ್ರಕಟಣೆಗೆ ಹಸ್ತಪ್ರತಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ಅವುಗಳಲ್ಲಿ ಉತ್ತಮವಾದವುಗಳನ್ನು ಆಯ್ದು ಪ್ರಕಟಿಸಿದೆ. ವಿಚಾರ ಸಂಕಿರಣಗಳನ್ನು ನಡೆಸಿ, ಅಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಾತಿನಿಧಿಕವೆನಿಸುವ ಕೃತಿಗಳನ್ನು ಹೊರತಂದಿದೆ. ಪುಸ್ತಕ ದತ್ತಿಯಿಂದ ಮೌಲಿಕ ಕೃತಿಗಳನ್ನು ಪ್ರಕಟಿಸಿದೆ. ಕರ್ನಾಟಕ ಸರ್ಕಾರದ ಧನಸಹಾಯದ ನೆರವಿನಿಂದಲೂ ಎಲ್ಲರಿಗೆ ಎಲ್ಲ ಕಾಲಗಳಲ್ಲೂ ಉಪಯುಕ್ತವಾಗುವ ನಿಘಂಟು, ಕೋಶಗಳನ್ನು ಪ್ರಕಟಿಸಿದೆ.

ಬೇರೆ ಬೇರೆ ಸಂದರ್ಭಗಳಲ್ಲಿ ಹೊರಬಂದ ಪುಸ್ತಕಗಳ ನೆಲೆ ಬೆಲೆಗಳನ್ನು ಗುರುತಿಸಿ ಆಗಿನ ಪರಿಷದಧ್ಯಕ್ಷರು ಮುನ್ನುಡಿಯ ರೂಪದಲ್ಲಿ ನಾಲ್ಕು ಮಾತುಗಳನ್ನು ಆಡಿದ್ದಾರೆ. ವಿವಿಧ ಸಂದರ್ಭಗಳಲ್ಲಿ ಹೊರಬಂದ ಕೃತಿಗಳಲ್ಲಿ ಕೆಲವು ಮತ್ತೆ ಮತ್ತೆ ಪ್ರಕಟವಾಗುವ ಭಾಗ್ಯವನ್ನು ಪಡೆದುಕೊಂಡಿವೆ. ಹಳಗನ್ನಡ ಕಾವ್ಯಗಳ ಗದ್ಯಾನುವಾದ, ಜೀವನ ಚರಿತ್ರೆ, ಸಾಹಿತ್ಯ ಪರೀಕ್ಷೆಗಳ ಪಠ್ಯಪುಸ್ತಕಗಳು, ನಾಟಕ ಸಂಪುಟ, ವಿಮರ್ಶೆ, ಸಂಶೋಧನೆ, ಪ್ರಬಂಧ ಮುಂತಾದ ಪ್ರಕಾರಗಳಲ್ಲಿ ಹೆಚ್ಚು ಬೇಡಿಕೆ ಇರುವ ಪುಸ್ತಕಗಳನ್ನು ಮರುಮುದ್ರಣದ ಮೂಲಕ ಸಹೃದಯರಿಗೆ ತಲುಪಿಸುವುದು ಪರಿಷತ್ತಿನ ಕರ್ತವ್ಯವಾಗಿದೆ. ಅಯ್ಯೋ, ಇಂಥ ಪುಸ್ತಕ ಸಿಗಲಿಲ್ಲವಲ್ಲ ಎಂದು ಕನ್ನಡಿಗರು ಕೊರಗದಂತೆ ನೋಡಿಕೊಳ್ಳಬೇಕಾಗಿದೆ.

ನಾಡು ನುಡಿಯ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡು ಕನ್ನಡಿಗರ ಮನಸ್ಸಿನಲ್ಲಿ ಚಿರಸ್ಮರಣೀಯರಾಗಿರುವ ಮಹನೀಯರ ಜೀವನ–ಕಾರ್ಯಗಳನ್ನು ಪರಿಚಯಿಸುವ ಪುಸ್ತಕಗಳು, ಕುವೆಂಪು, ಡಿ.ವಿ.ಜಿ., ಕೆ.ಎಸ್.ನ., ಎ.ಎನ್.ಮೂರ್ತಿರಾವ್, ಗೊರೂರು,

ಶಂ.ಬಾ.ಜೋಶಿ, ಆಲೂರು ವೆಂಕಟರಾಯರು ಮುಂತಾದ ಸಾಹಿತ್ಯ ದಿಗ್ಗಜಗಳ ಪುಸ್ತಕಗಳು, ಕನ್ನಡ ನಾಡಿನ ಚರಿತ್ರೆಯನ್ನು ಸಾದ್ಯಂತವಾಗಿ ಕಟ್ಟಿಕೊಡುವ ಹಿರಿಯ ಸಂಶೋಧಕರ ಪುಸ್ತಕಗಳು, ಹಳಗನ್ನಡದ ಮಹಾಕವಿಗಳ ಮಹತ್ವವನ್ನು ಸಾದರಪಡಿಸುವ ಪುಸ್ತಕಗಳು, ಹಳಗನ್ನಡ, ನಡುಗನ್ನಡದ ಶ್ರೇಷ್ಠ ಕಾವ್ಯಗಳು ಅಮೃತ ಮಹೋತ್ಸವ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಬಿಡುಗಡೆಯಾಗುತ್ತಿದ್ದು, ಇವು ಕನ್ನಡಿಗರ ಮನೆಗಳಲ್ಲಿ ಅತ್ಯವಶ್ಯಕವಾಗಿ ಸೇರ್ಪಡೆಗೊಳ್ಳುವಂಥವಾಗಿವೆ ; ಆಗಾಗ ತಿರುವಿಹಾಕಲು, ಮನನ ಮಾಡಲು ಯೋಗ್ಯವಾದವುಗಳಾಗಿವೆ.

ಇವತ್ತಿನ ಸಂದರ್ಭದಲ್ಲೂ ಬೇರೆ ಬೇರೆ ಪ್ರಕಾಶನ ಸಂಸ್ಥೆಗಳು ಹೊರತರುತ್ತಿರುವ ಕೃತಿಗಳ ಜೊತೆಯಲ್ಲಿ ಹೋಲಿಸಿದರೆ ಪರಿಷತ್ತಿನ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ. ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ಈ ನೀತಿಗೆ ಬೆನ್ನೆಲುಬಾಗಿದೆ. ತಮಿಳು, ತೆಲುಗು, ಮಲೆಯಾಳಂ ಮಾತೃಭಾಷೆಯವರೂ ಕರ್ನಾಟಕದಲ್ಲಿ ಕನ್ನಡಿಗರಾಗಿರಬೇಕೆಂದು ಬಯಸುವ ಪರಿಷತ್ತು ಅಂಥವರಿಗೆ ಸಹಾಯಕವಾಗುವಂತೆ ಸ್ವಯಂಬೋಧಿನಿಗಳನ್ನು ರೂಪಿಸಿರುವುದು ಅಕ್ಕಪಕ್ಕದ ರಾಜ್ಯಗಳವರ ಜೊತೆ ಪರಿಷತ್ತು ತೋರುತ್ತಾ ಬಂದಿರುವ ಭ್ರಾತೃ ವಾತ್ಸಲ್ಯದ ಸಂಕೇತವಾಗಿದೆ.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಪುಸ್ತಕಗಳನ್ನು ಮತ್ತು ಹೊಸ ಪುಸ್ತಕಗಳನ್ನು ಚಿತ್ರದುರ್ಗದಲ್ಲಿ ನಡೆಯುತ್ತಲಿರುವ ಅಖಿಲ ಭಾರತ ೭೫ನೆಯ ಅಮೃತ ಮಹೋತ್ಸವ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ. "ಮಾತಿಗೆ ನಾಶಪಡಿಸುವ ಹಾಗೂ ಶಮನಗೊಳಿಸುವ ಶಕ್ತಿಯಿದೆ. ಸತ್ಯ ಮತ್ತು ದಯೆಯನ್ನು ಸಮ್ಮಿಲನಗೊಳಿಸುವ ಶಕ್ತಿಯೂ ಉಂಟು. ಅಷ್ಟೇ ಅಲ್ಲ ಮಾತಿಗೆ ವಿಶ್ವವನ್ನು ಬದಲಾಯಿಸುವ ಶಕ್ತಿ ಇದೆ" ಎಂದಿದೆ ಬುದ್ಧವಾಣಿ. ಇದು ಮಾತಿಗಿರುವ ಶಕ್ತಿ ಮತ್ತು ಮಾತನ್ನೇ ಕೃತಿಯಾಗಿಸುವ ಬರಹಕ್ಕಿರುವ ಶಕ್ತಿ. ಇಂಥ ಶಕ್ತಿಸ್ಫೋಟ ಪರಿಷತ್ತಿನ ಪುಸ್ತಕಗಳ ಮೂಲಕ ಆಗುತ್ತದೆನ್ನುವ ವಿಶ್ವಾಸ ನಮ್ಮದಾಗಿದೆ.

ದಿನಾಂಕ : ೧೬-೧-೨೦೦೯

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಅರಿಕೆ

(ಮೊದಲನೆ ಮುದ್ರಣ)

ಮೈಸೂರು ಸರ್ಕಾರದ ಧನಸಹಾಯದಿಂದ ಕನ್ನಡ ಸಾಹಿತ್ಯ ಪರಿಷತ್ತು ಹೊಸಗ್ರಂಥಗಳನ್ನು ರಚನೆ ಮಾಡಿಸಿ, ಜ್ಞಾನಪ್ರಸಾರಕ್ಕೆ ಪ್ರಯತ್ನಿಸುತ್ತಿರುವುದು ಓದುಗರಿಗೆ ತಿಳಿದೇ ಇದೆ. ಈಗ ನಾವು ಅವರ ಮುಂದೆ ಮತ್ತೊಂದು ಗ್ರಂಥವನ್ನು ಇಡುತ್ತಿದ್ದೇವೆ. ಈ ಗ್ರಂಥವು ಈಗಿನ ಕಾಲದಲ್ಲಿ ಎಷ್ಟು ಪ್ರಯೋಜನಕಾರಿಯೆಂಬುವುದು ಇದನ್ನು ಓದುವವರಿಗೆಲ್ಲರಿಗೂ ತಾನಾಗಿ ತಿಳಿಯುತ್ತದೆ.

ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆ ರೂಪುಗೊಂಡ ಪ್ಲೇಟೋವಿನ ತತ್ತ್ವಗಳ ನಿರೂಪಣೆಯು ಈಗಿನ ಜನರಿಗೂ ಉಪಯುಕ್ತವಾಗಿರುವುದಷ್ಟೇ ಅಲ್ಲದೆ ಅವುಗಳ ಮನನದಿಂದ ಇಂದಿನ ರಾಜಕೀಯ ಆವರಣದಲ್ಲಿ ಅತ್ಯಾವಶ್ಯಕವಾಗಿರುವ ಕೆಲವು ಮಾರ್ಪಾಟುಗಳನ್ನು ತರಲು ಶಕ್ತವಾಗಿದೆ. ಪ್ರಜಾರಾಜ್ಯದ ನ್ಯೂನತೆಗಳು, ಆದರ್ಶರಾಜ್ಯದ ಕಲ್ಪನೆ ಮುಂತಾದ ವಿವಿಧ ರಾಜಕೀಯ ವಿಷಯಗಳ ವಿವರಣೆಯಿಂದ ಬಹುಜನರಿಗೆ ಸಹಾಯಕವಾಗಬಹುದಾದ ಈ ಗ್ರಂಥವನ್ನು ನಮಗೆ ಬರೆದುಕೊಟ್ಟು ಶ್ರೀ ಎಂ.ಎ. ವೆಂಕಟರಾಯರು ನಮ್ಮನ್ನು ಕೃತಜ್ಞರನ್ನಾಗಿ ಮಾಡಿದ್ದಾರೆ. ಇವರಿಗೆ ಪರಿಷತ್ತು ತನ್ನ ವಂದನೆಗಳನ್ನರ್ಪಿಸಿ ಈ ಪುಸ್ತಕವನ್ನು ಓದುಗರಿಗೆ ಅರ್ಪಿಸುತ್ತಿದೆ.

ಇದರ ಪ್ರಕಟಣೆಗೆ ಸಹಾಯಕವಾಗಿರುವ ಮೈಸೂರು ಸರ್ಕಾರದ ಸಂಸ್ಕೃತಿ ಪ್ರಸಾರ ಶಾಖೆಯವರಿಗೆ ಪರಿಷತ್ತು ತುಂಬಾ ಕೃತಜ್ಞವಾಗಿದೆ.

ಬೆಂಗಳೂರು
ದಿನಾಂಕ ೨೨-೨-೧೯೫೬

ಡಿ.ಸಿ. ಸುಬ್ಬರಾಯಪ್ಪ
ಜಿ. ವೆಂಕಟಸುಬ್ಬಯ್ಯ
ಗೌರವ ಕಾರ್ಯದರ್ಶಿಗಳು

ಮುನ್ನುಡಿ
(ಮೊದಲನೆ ಮುದ್ರಣ)

"ಬನ್ನಿ, ಎರಡುಗಳಿಗೆ ಕಥೆ ಹೇಳಿಕೊಂಡು ಕಾಲ ಕಳೆಯೋಣ; ಕಥೆಯ ವಿಷಯ ಧೀರರ ವಿದ್ಯಾಭ್ಯಾಸವೇ ಆಗಲಿ." ಇದು ಪ್ಲೇಟೋವಿನ **ರಿಪಬ್ಲಿಕ್**‌ನಲ್ಲಿ ಬರುವ ವಾಕ್ಯ.

ಜೀವನದ ತತ್ತ್ವವನ್ನರಿಯಲು ಪರಸ್ಪರ ವಿಚಾರವಿನಿಮಯ ಸಂವಾದಗಳು ಅವಶ್ಯಕ, ಇವುಗಳಿಗೆ ಕೊನೆಮೊದಲಿಲ್ಲ.

ಪುರಾಣ ಪುಣ್ಯಕಥೆಗಳನ್ನು ಹೇಳಿ ಕೇಳುವುದರಲ್ಲಿಯೂ ಧೀರೋದಾತ್ತರ ಜೀವನಚರಿತ್ರೆಯನ್ನು ನೀತಿಬೋಧೆ ಮನರಂಜನೆಗಳಿಗಾಗಿ ನಿರೂಪಿಸುವುದರಲ್ಲಿಯೂ, ಭಾರತದ ಸಂಪ್ರದಾಯದಲ್ಲಿಯಂತೆಯೇ ಪುರಾತನ ಗ್ರೀಕ್ ಜನಗಳಲ್ಲಿಯೂ ಬಹಳ ಪ್ರೀತಿಶ್ರದ್ಧೆಗಳು ಕಾಣಬರುವುವು.

ಪ್ಲೇಟೋವಿನ ಸಂವಾದ ಗ್ರಂಥಗಳಲ್ಲಿ ಆಗಿನ ನವಯುಗದ ಬುದ್ಧಿ ವಿಕಾಸವು ಹೃದಯಂಗಮವಾಗಿ ಚಿತ್ರಿತವಾಗಿದೆ. ಸ್ವತಂತ್ರ ಭಾರತದಲ್ಲಿ ಈಗ ನಡೆಯಬೇಕಾಗಿರುವ ದೊಡ್ಡ ಕೆಲಸಗಳಲ್ಲಿ ಅಂಥ ಬುದ್ಧಿವಿಕಾಸ ಬಹುಮುಖ್ಯವಾಗಿದೆ.

ಸಾಧಾರಣ ಜೇಡಿಮಣ್ಣನ್ನು ಚಿನ್ನವನ್ನಾಗಿ ಮಾಡಬಲ್ಲರೆಂದು ಮಹಾತ್ಮಾ ಗಾಂಧಿಯವರ ವಿಷಯವಾಗಿ ಗೋಖಲೆಯವರು ಆಶ್ಚರ್ಯ ಪಟ್ಟು ಒಂದು ಸಾರಿ ಹೇಳಿದರು. ನಮಗೆ ಈಗ ಅಗತ್ಯವಾಗಿ ಬೇಕಾಗಿರುವುದು ಸಾಧಾರಣಜನರ ಸ್ವಭಾವವನ್ನು ತಿದ್ದಿ, ಸಮಾಜದ ನಾಯಕತ್ವವನ್ನು ನಾನಾ ಕ್ಷೇತ್ರಗಳಲ್ಲಿ ನಿಂತು ನಿರ್ವಹಿಸಲು ಶಕ್ತರಾದ ಮುಂದಾಳುಗಳನ್ನು ತರಪೇತು ಮಾಡಲರ್ಹರಾದ ಮಹಾ ಗುರುಗಳು.

ಇಂಥ ಗುರುವರ್ಗವು ನಮಗೆ ಲಭಿಸುವುದು ಹೇಗೆ? ಹಿಂದಿನವರ ಅನುಭವಸಾರವನ್ನೆಲ್ಲ ಭಟ್ಟಿಯಿಳಿಸಿ, ಅದಕ್ಕೆ ತಕ್ಕ ಆಕಾರ ಕೊಟ್ಟು, ಅದನ್ನು ಉಳಿಸಿಕೊಂಡು ಬಂದಿರುವ ಮಹಾಗ್ರಂಥಗಳ ಮನನವೇ ಇಂಥ ಪ್ರತಿಭಾಶಾಲಿಗಳಾದ ಉಪದೇಶಕವೃಂದವನ್ನು ಬೆಳಸಲು ಅನುಕೂಲವಾದ ಸಾಧನ.

ಸಮಾಜದ ಪುನರುಜ್ಜೀವನ, ರಾಜ್ಯಸೂತ್ರಗಳ ಪುನಃಪರಿಶೀಲನೆ–ಈ ಉದ್ದೇಶಗಳ ದೃಷ್ಟಿಯಿಂದ ಪ್ಲೇಟೋವಿನ **ರಿಪಬ್ಲಿಕ್, ಲಾಸ್ ಮತ್ತು ಪೊಲಿಟಿಕಸ್** (ಅಥವಾ ಸ್ಟೇಟ್ಸ್‌ಮೆನ್) ಎಂಬ ಸಂವಾದಗಳು ಮನನೀಯವಾಗಿವೆ.

ಈ ಸಣ್ಣ ಪ್ರಬಂಧದಲ್ಲಿ ಇವುಗಳಲ್ಲಿ ಉಲ್ಲೇಖವಾಗಿರುವ ರಾಜ್ಯತಂತ್ರದ ಮೂಲತತ್ತ್ವಗಳನ್ನು ಸಂಗ್ರಹರೂಪದಲ್ಲಿ ಸೂಚಿಸಿದ್ದೇನೆ. ಇದರಲ್ಲಿ, ಈಗ ಜನಾದರಣೀಯವಾಗಿರುವ ಪ್ರಜಾರಾಜ್ಯದ ವಿಷಯವನ್ನು ಮೊದಲು ಪ್ರಸ್ತಾಪಿಸಿದೆ. ಪ್ರಜಾರಾಜ್ಯದ ಗುಣದೋಷಗಳನ್ನು ವಿಮರ್ಶಿಸಿ, ಆ ಮೇಲೆ ರಾಜ್ಯವ್ಯವಸ್ಥೆಯಲ್ಲಿ ಪರಿವರ್ತನೆ ಹೇಗೆ ಉಂಟಾಗುತ್ತದೆ, ರಾಜ್ಯಧರ್ಮವೇನು, ರಾಜ್ಯಕ್ಕೂ ಸಮಾಜಕ್ಕೂ ಇರಬೇಕಾದ ಸಂಬಂಧ ಎಂಥದು, ಆದರ್ಶರಾಜ್ಯದ ಸ್ವರೂಪವೇನು–ಎಂಬ ಮುಖ್ಯ ವಿಷಯಗಳನ್ನು ಪ್ಲೇಟೋ ಹೇಳಿರುವ ರೀತಿಯಲ್ಲಿ ವಿವರಿಸಲಾಗಿದೆ. ಈಗಿನ ಕಾಲದಲ್ಲಿ ಎಲ್ಲೆಲ್ಲೂ ಹರಡುತ್ತಿರುವ ಸಮಾಜವಾದ (Socialism), ಸಮತಾವಾದ (Communism) ಗಳಿಗೂ ಪ್ಲೇಟೋವಿನ ಆದರ್ಶರಾಜ್ಯ ವ್ಯವಸ್ಥೆಗೂ ಇರುವ ಸಾಮ್ಯ ವೈಷಮ್ಯಗಳನ್ನು ನಿರೂಪಿಸಿದೆ. ಭಾರತೀಯ ರಾಜ್ಯತತ್ತ್ವಗಳನ್ನೂ, ಪ್ಲೇಟೋವಿನ ರಾಜ್ಯತತ್ತ್ವಗಳನ್ನೂ ಹೋಲಿಸಿ ವಿಷಯವನ್ನು ಸ್ಪಷ್ಟಪಡಿಸಿದೆ.

ಈ ಗ್ರಂಥವನ್ನು ಬರೆಯಲು ಪ್ರೇರಿಸಿ ಉತ್ತೇಜನ ಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊಫೆಸರ್ ಎ.ಎನ್. ಮೂರ್ತಿರಾಯರಿಗೂ, ರಾಜಸೇವಾಸಕ್ತ ಶ್ರೀ ಸಿ.ಕೆ. ವೆಂಕಟರಾಮಯ್ಯನವರಿಗೂ ಕೃತಜ್ಞನಾಗಿದ್ದೇನೆ.

೨೦ನೆಯ ನವೆಂಬರ್ ೧೯೫೪ ಎಂ. ಎ. ವೆಂಕಟರಾವ್.

ಪರಿವಿಡಿ

೧ ನೆಯ ಅಧ್ಯಾಯ

ಪ್ಲೇಟೋವಿನ ಆಧುನಿಕತೆ

ಪ್ರಾಚೀನ ಗ್ರೀಸ್ ದೇಶದ ಸಂಸ್ಕೃತಿಯು ಪಾಶ್ಚಾತ್ಯ ನಾಗರಿಕತೆಯ ಮೂಲಸ್ಫೂರ್ತಿಗಳಲ್ಲಿ ಮುಖ್ಯಸ್ಥಾನ ಪಡೆದಿದೆ. ಸುಮಾರು ಐನೂರು ವರ್ಷಗಳ ಕಾಲದಲ್ಲಿ ಗ್ರೀಕರು ಗ್ರೀಸ್ ದೇಶದಲ್ಲಿಯೂ ಮೆಡಿಟೆರೇನಿಯನ್ ಸಮುದ್ರದ ತೀರಪ್ರದೇಶಗಳಲ್ಲಿಯೂ ಅನೇಕ ಪಟ್ಟಣಗಳನ್ನು ಕಟ್ಟಿ, ಪ್ರೌಢಿಮೆಯಿಂದ ಬಾಳಿ, ಶಾಸ್ತ್ರ ಕಲೆಗಳನ್ನು ಬೆಳಸಿ ಉಚ್ಛ್ರಾಯ ಸ್ಥಿತಿಗೆ ಬಂದರು.

ಏಷ್ಯಾ ಮೈನರಿನಲ್ಲಿರುವ ಪಟ್ಟಣಗಳಿಗೂ ಗ್ರೀಸಿನ ಹತ್ತಿರ ಇರುವ ದ್ವೀಪಗಳಿಗೂ ಅಯೋನಿಯ ಎಂಬ ಹೆಸರಿದ್ದಿತು. ಅವನ್ನೇ ನಮ್ಮ ಚರಿತ್ರೆಯಲ್ಲಿ ಯವನರಾಜ್ಯಗಳೆಂದು ಕರೆದಿದ್ದಾರೆ. ಅಲೆಕ್ಸಾಂಡರನು ಭಾರತಕ್ಕೆ ದಂಡಯಾತ್ರೆ ಬಂದು ಹೋದಮೇಲೆ, ಅವನು ಪರ್ಷಿಯ, ಬಾಕ್ಟ್ರಿಯ, ಬೇಬಿಲಾನ್ ದೇಶಗಳಲ್ಲಿ ತನ್ನ ಸೇನಾಧಿಪತಿಗಳನ್ನು ನಿಲ್ಲಿಸಿ ಹೋದನು. ಪಂಜಾಬಿನ ಬಹುಭಾಗವೂ ಕಲವು ಕಾಲ ಗ್ರೀಕರ ಆಳ್ವಿಕೆಯಲ್ಲಿತ್ತು. ಮೌರ್ಯರ ಕಾಲದಲ್ಲಿ ಭಾರತಕ್ಕೂ ಯವನರಾಜ್ಯಗಳಿಗೂ ಸಂಪರ್ಕವಿದ್ದಿತು.

ಅಥೆನ್ಸ್ ನಗರವು ಗ್ರೀಕ್ ಸಂಸ್ಕೃತಿಯ ಕೇಂದ್ರಸ್ಥಾನ. ಪರ್ಷಿಯದ ದೊರೆಯ ದಂಡಯಾತ್ರೆಯನ್ನು ಎದಿರಿಸಿ ಹಿಮ್ಮೆಟ್ಟಿಸಿ ಯವನರು ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಂಡ ಮಹಾಕಾರ್ಯದಲ್ಲಿ ಅಥೆನ್ಸ್ ನಗರವು ಮುಂದಾಳುತನ ವಹಿಸಿ ಪ್ರಸಿದ್ಧಿಗೆ ಬಂತು. ತರುವಾಯ ಸುಮಾರು ನೂರು ವರ್ಷಗಳ ಕಾಲ ಅಥೆನ್ಸ್ ನಗರವು ಸರ್ವ ಪ್ರಕಾರದಲ್ಲಿಯೂ ಉನ್ನತಸ್ಥಿತಿಗೇರಿ ತನ್ನ ಸಾಮ್ರಾಜ್ಯವನ್ನು ಕಟ್ಟಿತು. ವ್ಯಾಪಾರದಿಂದ ಸಂಪದಭಿವೃದ್ಧಿಯಾಯಿತು. ಯವನ ನಗರಗಳಲ್ಲಿ ಹೊಸ ಸ್ವಾತಂತ್ರ್ಯದ ಫಲವಾಗಿ ಶಾಸ್ತ್ರಕಲೆಗಳು ಉಚ್ಛ್ರಾಯಸ್ಥಿತಿಗೆ ಬಂದವು. ಪೆರಿಕ್ಲೀಸ್ ಎಂಬ ಪ್ರಜಾಪ್ರಭುವಿನ ಕಾಲದಲ್ಲಿ ಕಲೆಗಳಿಗೆ ಬಹಳ ಉತ್ತೇಜನ ಸಿಕ್ಕಿತು.

ಈ ವಾತಾವರಣದಲ್ಲಿ ಸೋಕ್ರೆಟೀಸ್, ಪ್ಲೇಟೋ, ಅರಿಸ್ಟೋಟಲ್ ಎಂಬವರು ತತ್ತ್ವಶಾಸ್ತ್ರದಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದರು. ಇವರ ವಿಚಾರವಾಹಿನಿಗಳು ಪಾಶ್ಚಾತ್ಯಶಾಸ್ತ್ರಗಳಿಗೆ ತಳಹದಿಯಾದವು.

ಇವರು ಅಥೆನ್ಸ್ ನಗರದಲ್ಲಿ ತತ್ತ್ವಾನ್ವೇಷಣ ಮಾಡುತ್ತಿದ್ದಾಗ ಭಾರತದಲ್ಲಿ ತಕ್ಷಶಿಲಾ ವಿಶ್ವವಿದ್ಯಾನಿಲಯವು ಉನ್ನತಸ್ಥಿತಿಯಲ್ಲಿತ್ತು. ಪ್ಲೇಟೋ, ಅರಿಸ್ಟೋಟಲ್ ಮುಂತಾದವರು ಅಥೆನ್ಸಿನಲ್ಲಿ ರಾಜಕೀಯ ತತ್ತ್ವಗಳನ್ನು ಪರ್ಯಾಲೋಚಿಸುತ್ತಿದ್ದಾಗ ಭಾರತದಲ್ಲಿ ಕೌಟಿಲ್ಯನೇ ಮೊದಲಾದವರು ರಾಷ್ಟ್ರನಿರ್ಮಾಣ ತತ್ತ್ವಗಳನ್ನು ಕುರಿತು ಖಚಿತವಾದ ಸಿದ್ಧಾಂತಗಳನ್ನು ಮಂಡಿಸುತ್ತಿದ್ದರು. ಅರಿಸ್ಟೋಟಲನು ಅಲೆಕ್ಸಾಂಡರಿಗೆ ಗುರುವಾದರೆ, ಕೌಟಿಲ್ಯನು ಚಂದ್ರಗುಪ್ತ ಮೌರ್ಯನಿಗೆ ಗುರುಸ್ಥಾನದಲ್ಲಿ ನಿಂತು ಮೌರ್ಯಚಕ್ರಾಧಿಪತ್ಯವನ್ನು ಸುದೃಢವಾಗಿ ಕಟ್ಟುವ ಮಹಾ ಉದ್ಯಮದಲ್ಲಿ ನೆರವಾದನು.

ಯೂರೋಪಿನಲ್ಲಿಯೂ ಭಾರತದಲ್ಲಿಯೂ ಅನೇಕವೇಳೆ ರಾಜ್ಯವೂ ಸಮಾಜವೂ ಕ್ಷೀಣದೆಸೆಗೆ ಬಂದು ರಾಷ್ಟ್ರಪುನರ್ನಿರ್ಮಾಣ ಕಾರ್ಯವನ್ನು ಕೈಕೊಳ್ಳಬೇಕಾದ ಸಂದರ್ಭಗಳು ಬಂದಿವೆ. ಪಾಶ್ಚಾತ್ಯರಲ್ಲಿ ಅಂತಹ ಯುಗಸಂಧಿಗಳಲ್ಲಿ ಪ್ಲೇಟೋವಿನ ರಾಜಕೀಯ ತತ್ತ್ವಗಳಿಗೆ ಹೊಸ ಸನ್ಮಾನ ದೊರಕುತ್ತಾ ಬಂದಿದೆ. ಪ್ರಪಂಚದ ಈಗಿನ ಪರಿಸ್ಥಿತಿಯಲ್ಲಿಯೂ ಕೂಡ ಪ್ಲೇಟೋವಿನ ಆಲೋಚನಾವಾಹಿಗಳು ಸ್ಫೂರ್ತಿದಾಯಕವಾಗಿ ಕಂಡುಬಂದಿವೆ. ಪ್ಲೇಟೋ ಬರೆದ ಈಗ್ಗೆ ಸುಮಾರು ೨,೪೦೦ ವರ್ಷಗಳಾದರೂ, ಆತನು ನಿರೂಪಿಸಿದ ತತ್ತ್ವಗಳು ಈಗಿನ ರಾಜಕೀಯ ಪರಿಸ್ಥಿತಿಗೆ ಅನ್ವಯವಾಗುವಂತೆ ತೋರುತ್ತವೆ.

ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ನಮ್ಮಲ್ಲಿ ರಾಷ್ಟ್ರನಿರ್ಮಾಣ ಕಾರ್ಯದ ಮಹತ್ತ್ವವು ಜನತೆಯ ಮನಸ್ಸಿಗೆ ತೋರಿಬರುತ್ತಿದೆ. ಭಾರತವು ಆಧುನಿಕ ಸಂಪ್ರದಾಯದಂತೆ ಪ್ರಜಾಪ್ರಭುತ್ವ ನೀತಿಯನ್ನು ಅಂಗೀಕರಿಸಿ ರಾಜ್ಯದ ರಚನಾವಿಧಾನವನ್ನು ನಿರ್ಮಿಸಿಕೊಂಡಿದೆ. ಹಿಂದೆ ಯಾವ ದೇಶಕಾಲಗಳಲ್ಲಿಯೂ ಕಾಣದ ಪ್ರಮಾಣದಲ್ಲಿ ಭಾರತವು ಪ್ರಜಾರಾಜ್ಯ ನೀತಿಯನ್ನು ಸಫಲಗೊಳಿಸಲು ಬದ್ಧಕಂಕಣವಾಗಿ ತನ್ನ ಸ್ವಾತಂತ್ರ್ಯದ ನವಯುಗವನ್ನು ಆರಂಭಿಸಿದೆ. ಇಂತಹ ಸಮಯದಲ್ಲಿ ಪ್ಲೇಟೋವಿನ ರಾಜಕೀಯ ತತ್ತ್ವಗಳು ವಿಚಾರಪರರಿಗೆ ಅನುಕೂಲವಾಗುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ. ಅವನ ಸಿದ್ಧಾಂತಗಳನ್ನು ನಾವು ಅಂಧಶ್ರದ್ಧೆಯಿಂದ ಒಪ್ಪಿಕೊಳ್ಳಬೇಕಾಗಿಲ್ಲ. ಹಾಗೆಯೇ ನಮ್ಮ ಪೂರ್ವಿಕರ ಸಿದ್ಧಾಂತಗಳನ್ನೂ ಅಂತಹ ಅಂಧಶ್ರದ್ಧೆಯಿಂದ ಸ್ವೀಕರಿಸಬೇಕಾಗಿಲ್ಲ. ತತ್ತ್ವಗಳಲ್ಲಿ ಸರ್ವಕಾಲಗಳಿಗೂ ಅನ್ವಯಿಸಿ, ಬುದ್ಧಿವಿಕಾಸ ಮಾಡುವ ಅಂಶಗಳೂ ಇರುತ್ತವೆ ; ಅಲ್ಲದೆ ತಾತ್ಕಾಲಿಕ ಸನ್ನಿವೇಶಗಳಿಗೆ ಹೊಂದಿಕೊಂಡು, ಬೇರೆ ದೇಶಕಾಲಗಳಿಗೆ ಸರಿಹೋಗದ ಅಂಶಗಳೂ ಇರುತ್ತವೆ. ಹಿಂದಿನವರ ಸದ್ಧಾಂತಗಳನ್ನೂ ವಿಚಾರದೃಷ್ಟಿಯನ್ನೂ ಅವಲೋಕಿಸುವುದರ ಪ್ರಯೋಜನವೇನೆಂದರೆ, ಬುದ್ಧಿ ವಿಕಾಸ ಮತ್ತು ವಿಚಾರಚೋದನೆ. ನಮ್ಮ ಬುದ್ಧಿಯು ನಮ್ಮನ್ನು ಎದುರಿಸಿ ನಿಂತಿರುವ ವಿಷಯ ಸನ್ನಿವೇಶಗಳಲ್ಲಿ ಮಗ್ನವಾಗಿ ಹೋಗುವುದು ಅದಕ್ಕೆ ಸ್ವಭಾವ. ಹಿಂದಿನವರ ಅಥವಾ ಬೇರೆ ನಾಗರಿಕತೆಯ ಶಾಸ್ತ್ರಕಾರರ ವಿಚಾರದೃಷ್ಟಿಗಳಿಗೆ ನಾವು ಗಮನ ಕೊಟ್ಟರೆ, ಆವರೆಗೆ ಅಗೋಚರವಾಗಿದ್ದ ಹೊಸ ತತ್ತ್ವಗಳು ಹೊಳೆಯುವುವು. ಅಂತಹ

ಸಮಯದಲ್ಲಿ ಎಲ್ಲ ಸನ್ನಿವೇಶಗಳಿಗೂ ಹೊಂದುವ ಸಾಮಾನ್ಯ ತತ್ತ್ವಗಳೂ ಮತ್ತೆ ಗಮನಕ್ಕೆ ಬರುತ್ತವೆ.

ಮಾನಸಿಕ ವಾತಾವರಣವು ಒಂದೇ ರೀತಿಯಾಗಿ ಬಹು ಕಾಲ ಜನಜೀವನದಲ್ಲಿ ಸ್ಥಾಯಿಯಾಗಿ ನಿಂತುಹೋದರೆ, ಜನರ ಮನಸ್ಸು ಆಚಾರ ಸಂಪ್ರದಾಯಗಳಲ್ಲಿ ಲೀನವಾಗಿಹೋಗುವುದು ಸ್ವಭಾವವಾಗಿದೆ. ಆದರೆ, ಪರಿಸ್ಥಿತಿ ಬದಲಾದ ಹಾಗೆಲ್ಲ ಆಚಾರ ವಿಚಾರಗಳಲ್ಲಿ ಪರಿವರ್ತನೆಯು ಅವಶ್ಯಕ. ಏಕೆಂದರೆ, ಸ್ಥಾಯಿಯಾಗಿ ನಿಂತ ವಾತಾವರಣದ ಪ್ರಭಾವದಿಂದ ಜನರ ಮನಸ್ಸು ಹೊಸ ಸನ್ನಿವೇಶಗಳನ್ನು ಅವುಗಳಿಗೆ ತಕ್ಕ ರೀತಿಯಲ್ಲಿ ಎದುರಿಸಿ, ಆಚಾರ, ಸಂಪ್ರದಾಯ, ಧರ್ಮ, ಸಂಸ್ಕೃತಿಗಳಲ್ಲಿ ಆವಶ್ಯಕವಾದ ಪರಿವರ್ತನೆ ಮಾಡಿಕೊಂಡು ಜೀವನದ ತೊಡಕುಗಳನ್ನು ಬಿಡಿಸಿಕೊಳ್ಳುವ ಮನೋವೃತ್ತಿಯು ಉಡುಗಿಹೋಗುವ ಸಂಭವವಿದೆ. ಅಂತಹ ಸಮಯಗಳಲ್ಲಿ ಬೇರೆ ನಾಗರಿಕತೆಯ ಅಥವಾ ಆಚಾರ ಪದ್ಧತಿಗಳ ದೃಶ್ಯವು ಬುದ್ಧಿಗೆ ನವಚೈತನ್ಯವನ್ನು ಉಂಟು ಮಾಡುತ್ತದೆ. ಹೊಸದಕ್ಕೂ ಹಳೆಯದಕ್ಕೂ ಹೋಲಿಕೆ ವ್ಯತ್ಯಾಸಗಳು ಬುದ್ಧಿಯ ಮುಂದೆ ಹರಿಯುತ್ತದೆ. ಈ ಬುದ್ಧಿವಿಕಾಸವೇ ಭಿನ್ನ ಸಂಸ್ಕೃತಿಗಳ ಘರ್ಷಣೆಯಿಂದ ಆಗಬಹುದಾದ ಪ್ರಯೋಜನ. ಈ ತತ್ತ್ವವನ್ನು ಮನಸ್ಸಿನಲ್ಲಿಟ್ಟುಕೊಂಡೇ **ಮ್ಯಾಥ್ಯೂ ಆರ್ನಾಲ್ಡ್** ಎಂಬ ಆಂಗ್ಲ ಲೇಖಕನು– ಆತನು ಕವಿಯೂ ಹೌದು, ವಿಮರ್ಶಕನೂ ಹೌದು_ಸಾಹಿತ್ಯಪ್ರೇಮಿಗಳಿಗೆ ಒಂದು ಅಮೂಲ್ಯವಾದ ಸೂಚನೆಯನ್ನು ಕೊಟ್ಟಿದ್ದಾನೆ. ಅದೇನೆಂದರೆ, ಸಾಹಿತಿಗಳು ತಮ್ಮ ಸ್ವಂತ, ಎಂದರೆ ತಮ್ಮ ಮಾತೃಭಾಷೆಯಲ್ಲಿ ಬೆಳೆದ ಸಾಹಿತ್ಯವನ್ನಲ್ಲದೆ ಬೇರೆ ಭಾಷೆಯ ಸಾಹಿತ್ಯಗಳಲ್ಲಿ ಒಂದನ್ನಾದರೂ ಅಭ್ಯಾಸ ಮಾಡುವುದು ಒಳ್ಳೆಯದು– ಎಂದು.

ಹಾಗೆಯೇ **ಬ್ರೌನಿಂಗ್** ಎಂಬ ಆಂಗ್ಲ ಕವಿಯು Home thoughts from Abroad (ವಿದೇಶ ಸಂಚಾರ ಕಾಲದಲ್ಲಿ ಸ್ವದೇಶದ ಹಂಬಲ) ಎಂಬ ಸಣ್ಣ ಕವಿತೆಯಲ್ಲಿ, "ಇಂಗ್ಲೆಂಡನ್ನು ಮಾತ್ರ ತಿಳಿದವರು ಇಂಗ್ಲೆಂಡಿನ ಪ್ರಭಾವವನ್ನು ಎಷ್ಟುಮಟ್ಟಿಗೆ ತಿಳಿದಾರು ?" ಎಂದು ಕೇಳಿದ್ದಾನೆ. ಅವನ ಅಭಿಪ್ರಾಯವೇನೆಂದರೆ, ಪರರಾಷ್ಟ್ರಗಳ ಜೀವನ, ಕಲೆ, ಇತಿಹಾಸ ಮೊದಲಾದವುಗಳನ್ನು ಸ್ವಲ್ಪಮಟ್ಟಿಗಾದರೂ ತಿಳಿಯವುದಕ್ಕೆ ಪ್ರಯತ್ನ ಮಾಡಬೇಕು. ಹಾಗೆ ನಮ್ಮದನ್ನೂ ಹೊರಗಿನವರದನ್ನೂ ಏಕಕಾಲದಲ್ಲಿ ಹೋಲಿಸಿ ನೋಡಿದರೆ, ನಮಗೆ ನಮ್ಮ ಸಂಸ್ಕೃತಿಯ ಸ್ವರೂಪವು ಸ್ಫುರಣವಾಗುವುದಲ್ಲದೆ ಹೊಸ ತತ್ತ್ವಗಳು ಗೋಚರವಾಗುವ ಸಂಭವವಿದೆ.

ಇದು ಒಂದು ಬಗೆಯ ರಾಷ್ಟ್ರೀಯ ಆತ್ಮಸಾಕ್ಷಾತ್ಕಾರ ಎನ್ನಬಹುದು. ಬೇರೆ ಸಂಸ್ಕೃತಿಯ ದರ್ಶನಲಾಭದಂತೆಯೇ ನಮ್ಮದೇ ಆದ ಪುರಾತನ ಸಂಸ್ಕೃತಿಯ ದರ್ಶನಲಾಭವು ಕೂಡ ಈ ಬಗೆಯ ಆತ್ಮ ಸಾಕ್ಷಾತ್ಕಾರಕ್ಕೆ ಚೋದಕವಾಗುವುದು.

ಇದು ಕ್ರಾಂತಿಯುಗ, ಪಾಶ್ಚಾತ್ಯ ರಾಜ್ಯಗಳಲ್ಲಿಯೂ ಪೂರ್ವ ರಾಷ್ಟ್ರಗಳಲ್ಲಿಯೂ ಕ್ರಾಂತಿಪರವಾದ ಮನೋವೃತ್ತಿಯ ಪ್ರವಲವಾಗುತ್ತಿದೆ. ಜನಜೀವನದ ಸಮಸ್ತ ರಂಗಗಳಲ್ಲಿಯೂ ಪುನರಾವಿಷ್ಕರಣದ ಕರೆ ಕೇಳುತ್ತಿದೆ. ಹಳೆಯ ಸಂಪ್ರದಾಯಗಳ

ಬಲ ಕುಂದಿಹೋಗಿದೆ. ಆದರೆ, ಯಾವ ರೀತಿಯಲ್ಲಿ ಸಮಾಜವನ್ನು ಪುನರುದ್ಧಾರಗೊಳಿಸ ಬೇಕೆಂಬ ವಿಷಯದಲ್ಲಿ ತೀವ್ರವಾದ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡಿವೆ. ಬೇರೆ ಬೇರೆ ದೃಷ್ಟಿಗಳನ್ನವಲಂಬಿಸಿ, ಪರಸ್ಪರ ವಿರುದ್ಧವಾದ ಧ್ಯೇಯಗಳನ್ನು ಮಂಡಿಸುವ ಕಕ್ಷಿಪ್ರತಿಕಕ್ಷಿಗಳು ಪ್ರಬಲವಾಗಿ ವಾದ ಮಾಡುತ್ತಿವೆ. ಸಾಮ್ಯವಾದ ಕಕ್ಷಿಯವರಂತೂ ಈ ಗುಂಪಿನವರಲ್ಲಿ ಅಗ್ರಗಣ್ಯರಾಗಿದ್ದಾರೆ. ರಷ್ಯಾ ದೇಶದಲ್ಲಿ ೧೯೧೭ ರಲ್ಲಿ ನಡೆದ ಕ್ರಾಂತಿಯ ಫಲವಾಗಿ ಸಾಮ್ಯವಾದದ ತತ್ತ್ವಗಳನ್ನೊಳಗೊಂಡ ರಾಷ್ಟ್ರವು ಅಲ್ಲಿ ರೂಪುದಾಳಿವೆ. ಕಳೆದ ಮಹಾಯುದ್ಧದಲ್ಲಿ ಜರ್ಮನಿ, ಇಟಲಿ, ಜಪಾನುಗಳು ಸೋತು ಹೋದ ಮೇಲೆ, ರಷ್ಯದ ಸಾಮ್ಯವಾದದ ಆಕರ್ಷಣೆಯು ಮತ್ತೂ ಪ್ರಬಲವಾಗಿದೆ.

ಈ ವಿಚಾರವಾಹಿನಿಗಳಿಗೆ ಎಡೆಗೊಡದ ದೇಶವಿಲ್ಲ. ಪ್ರಪಂಚದ ಎಲ್ಲಾ ಭೂಖಂಡಗಳಲ್ಲಿಯೂ ಈ ವಿಚಾರಮಥನವು ಒಂದಲ್ಲ ಒಂದು ರೀತಿಯಲ್ಲಿಯೂ ಒಂದಲ್ಲ ಒಂದು ಪ್ರಮಣದಲ್ಲಿಯೂ ನಡೆಯುತ್ತಲೇ ಇದೆ. ಸ್ವತಂತ್ರ ಭಾರತದಲ್ಲಿ ಕೂಡ ಸಾಮ್ಯವಾದ ಸಮಾಜವಾದಗಳು ರಾಜಕೀಯ ಕಕ್ಷಿಗಳನ್ನು ಕಟ್ಟಿಕೊಂಡು ತಮ್ಮ ತಮ್ಮ ರಾಷ್ಟ್ರನಿರ್ಮಾಣ ತತ್ತ್ವಗಳನ್ನು ಜನತೆಯ ಮುಂದೆ ಇಡುತ್ತಿವೆ. ಅವುಗಳ ಪರವಗಿ ಸತತವಾಗಿ ಪ್ರಚಾರಮಾಡುತ್ತಿವೆ.

ನಮ್ಮಲ್ಲಿ ಇವೆಲ್ಲದರ ಫಲವಾಗಿ ಈಗ ಸಮಾಜಪರಿವರ್ತನೆ, ರಾಷ್ಟ್ರನಿರ್ಮಾಣ ಅಥವಾ ಪುನರ್‍ರಚನೆಯ ವಿಷಯವಾಗಿ ರಾಜಕೀಯ ಮುಖಂಡರಲ್ಲಿಯೂ ಸಾಹಿತಿಗಳಲ್ಲಿಯೂ ಅಧಿಕಾರಿವರ್ಗದವರಲ್ಲಿಯೂ ಸಾಮಾನ್ಯ ಜನರಲ್ಲಿಯೂ ಬಲವಾದ ಗೊಂದಲವೆದ್ದಿದೆ. ಅನೇಕ ಹೊಸ ಸಮಸ್ಯೆಗಳು ದೇಶವನ್ನು ಎದುರಿಸುತ್ತಿವೆ.

ಇಂತಹ ಸಂಧಿಸಮಯದಲ್ಲಿ ಪ್ಲೇಟೋವಿನಂತಹ ತತ್ತ್ವಾನ್ವೇಷಿಯ ಅಭಿಪ್ರಾಯಗಳನ್ನು ಅವಲೋಕಿಸುವುದರಲ್ಲಿ ಪ್ರಯೋಜನವಿದೆ, ಸ್ವಾರಸ್ಯವೂ ಇದೆ. ಪ್ಲೇಟೋವಿನ ಪುಸ್ತಕಗಳು ಸಂವಾದ ರೂಪದಲ್ಲಿವೆ. ಇವು ಪ್ರಪಂಚದ ಸಾಹಿತ್ಯದಲ್ಲಿ ಭಾರತದ ಉಪನಿಷತ್ತುಗಳ ಸಂವಾದಗಳನ್ನೂ ಬುದ್ಧನ ಸಂವಾದಗಳನ್ನೂ ಜ್ಞಾಪಿಸುತ್ತವೆ. ಬಹುಶಃ ಒಟ್ಟಿನಲ್ಲಿ ಇವು ಮೂರೂ ಒಂದೇ ಮೂಲತತ್ತ್ವದ ಆವಿಷ್ಕಾರಗಳೆಂದು ಹೇಳಿದರೆ ತಪ್ಪಾಗಲಾರದು. ಉಪನಿಷತ್ತುಗಳಲ್ಲಿ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳಿಗೆ ಮೂಲಕರಣವಾದ ಪರಬ್ರಹ್ಮದ ವಿಚಾರ ಅಗ್ರಸ್ಥಾನ ಹೊಂದಿದೆ. ಬುದ್ಧನ ಸಂವಾದಗಳಲ್ಲಿ ಧರ್ಮಸ್ವರೂಪವು ಮುಖ್ಯ ಕಥಾವಸ್ತುವಾಗಿದೆ. ಪ್ಲೇಟೋವಿನ ಸಂವಾದಗಳಲ್ಲಿ ಸರ್ವ ದೃಶ್ಯ ಪ್ರಪಂಚಕ್ಕೆ ಮೂಲವೂ ಚೈತನ್ಯಸ್ವರುಪವೂ ಆದ ಪರತತ್ತ್ವವು ವಿಚಾರದ ಅಂತಿಮ ಧ್ಯೇಯವಾಗಿ ಕಾಣಬರುತ್ತದೆ. ಅಂತಹ ಪರತತ್ತ್ವದೊಡನೆ ಜೀವನವನ್ನು ಹೊಂದಿಸಿಕೊಂಡು, ಅದರ ಸ್ವಭಾವವನ್ನು ಜೀವನದಲ್ಲಿ ಪ್ರತಿಬಿಂಬಿಸುವುದು ಮಾನವನ ಧರ್ಮಸರ್ವಸ್ವ–ಎಂಬ ಅಭಿಪ್ರಾಯವು ಪ್ಲೇಟೋವಿನ ಸಂವಾದಗಳಿಗೆ ಸ್ಫೂರ್ತಿಯನ್ನು ಕೊಟ್ಟಿದೆ. ಆದರೆ, ಈ ಪಾಶ್ಚಾತ್ಯ ದಾರ್ಶನಿಕನ ನಿರೂಪಣೆಯ ಮಾರ್ಗದಲ್ಲಿ ಒಂದು ವಿಶೇಷವಿದೆ. ಅದೇನೆಂದರೆ, ಅವನ

ವಿಚಾರಗಳನ್ನು ಮಂಡಿಸುವ ಮಾರ್ಗವು ಸಾಮಾನ್ಯ ಜನರ ಪ್ರಪಂಚಾನುಭವಕ್ಕೆ ಸಮೀಪವಾಗಿದೆ. ಪ್ಲೇಟೊ ನಮ್ಮ ಅನುಭವಿಸಿದ್ಧವಾದ ಅಂಶಗಳಿಂದ ಹೊರಟು ಇಂದ್ರಿಯಾತೀತವಾದ, ಕೇವಲ ಬುದ್ಧಿಗೋಚರವಾದತತ್ತ್ವಗಳು ಬಳಿಗೆ ನಮಗಮ ಮನಸ್ಸನ್ನು ಎಳೆಯುತ್ತಾನೆ. ಪ್ರತ್ಯಕ್ಷ ಅನುಮಾನಗಳ ಮಾರ್ಗವಾಗಿ, ಮಾನವನ ಅನುಭವದಲ್ಲಿ ಕಾಣಬರುವ ಸೂಚನೆಗಳನ್ನೇ ಹಿಡಿದು, ಪ್ಲೇಟೋವಿನ ವಿಚಾರಧಾರೆಯು ನಮ್ಮನ್ನು ಪರಬ್ರಹ್ಮ ಅಥವ ಬ್ರಹ್ಮಮೂಲವಾದ ಧರ್ಮಸೂಕ್ಷ್ಮಗಳ ದರ್ಶನಕ್ಕೆ ಕೊಂಡೊಯ್ಯುತ್ತದೆ. ಈ ಯುಕ್ತಿಮಾರ್ಗವು ಪಾಶ್ಚಾತ್ಯ ದರ್ಶನ ಕಾರರ ವೈಶಿಷ್ಟ್ಯ.

ಆದುದರಿಂದ ವಿಷಯ, ಭೋಧನಾಮಾರ್ಗ ಇವೆರಡರ ದೃಷ್ಟಿಯಿಂದಲೂ ಪ್ಲೇಟೋವಿನ ಸಂವಾದಗಳು ನಮಗೆ ಆಕರ್ಷಣೀಯವಾಗಿವೆ. ಈ ಸಂವಾದಗಳು ತತ್ತ್ವಶಾಸ್ತ್ರದ ಎಲ್ಲ ವಿಭಾಗಗಳನ್ನೂ ಒಳಗೊಂಡಿವೆ. ಪ್ರಮಾಣಶಾಸ್ತ್ರ, ಧರ್ಮಶಾಸ್ತ್ರ, ಸಮಾಜಶಾಸ್ತ್ರ, ವಿದ್ಯಾಭ್ಯಾಸಕ್ರಮ, ವೇದಾಂತಕ್ಕೆ ಸಮಾನವಾದ ಪರತತ್ತ್ವಶಾಸ್ತ್ರ ಇವುಗಳೆಲ್ಲ ಈ ಸಂವಾದಗಳಲ್ಲಿ ಬಹು ಸ್ವಾರಸ್ಯವಾಗಿ, ವಿಚಾರ ಸ್ವಭಾವಕ್ಕೆ ಅನುಗುಣವಾದ ಪ್ರಶ್ನೋತ್ತರ ರೂಪದಲ್ಲಿ ಕಾಣಬರುತ್ತದೆ.

ಇವುಗಳಲ್ಲಿ ರಾಜಕೀಯ ತತ್ತ್ವಗಳ ವಿಚಾರವನ್ನು ಮಾತ್ರ ಆರಿಸಿಕೊಂಡು ಈ ಗ್ರಂಥದಲ್ಲಿ ಪ್ರತಿಪಾದನೆ ಮಾಡಲಾಗುವುದು.

* * * *

ಪ್ಲೇಟೋವಿನ ವಿಚಾರಲಹರಿಗಳೂ ಸಿದ್ಧಾಂತಗಳೂ ಈಗ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ನಡೆಯುತ್ತಿರುವ ಕ್ರಾಂತಿಕಾರಕ ಅಥವಾ ರಚನಾತ್ಮಕ ಆಂದೋಳನಗಳ ಮೇಲೆ ಹಲವಾರು ದೃಷ್ಟಿಗಳಿಂದ ಒಂದು ಅಪೂರ್ವವಾದ ಬೆಳಕನ್ನು ಬೀರುತ್ತವೆ. ಈಗಿನ ಸಮಸ್ಯೆಗಳ ಮೂಲಕಾರಣಗಳೂ ಕೆಲವು ಆಕಾರ ವಿಶೇಷಗಳೂ ಪ್ಲೇಟೋವಿನ ಕಾಲದಲ್ಲಿಯೇ ರೂಪುಗೊಂಡು ಆತನ ಸೂಕ್ಷ್ಮದೃಷ್ಟಿಯಿಂದ ಗ್ರಹಿಸಲ್ಪಟ್ಟಿದ್ದವು. ಅವುಗಳ ಮೂಲತತ್ತ್ವಗಳು ಈಗ ನಮ್ಮ ಬುದ್ಧಿಗೆ ಖಚಿತವಾಗಿ ಗೋಚರವಾಗುತ್ತಿವೆ. ಇದು ಆಶ್ಚರ್ಯಕರವಾಗಿದೆ.

ಉದಾಹರಣೆಗೆ ಈಗಿನ ಸಾಮ್ಯವಾದವನ್ನು ತೆಗೆದುಕೊಳ್ಳೋಣ. ಮಾನವನ ಇತಿಹಾಸದಲ್ಲಿ ಮೊದಲಿನಿಂದಲೂ–ಎಂದರೆ, ಕಾಡು ಮನುಷ್ಯನ ಅನಾಗರಿಕ ಸ್ಥಿತಿಯ ಕಾಲದಿಂದಲೂ–ಬಲಿಷ್ಠರೂ ಆಸ್ತಿವಂತರೂ ಸಮಾಜದ ನಾಯಕರಾಗಿ, ಸಾಮಾನ್ಯ ಜನರನ್ನು ಪೀಡಿಸಿ ಅವರಿಂದ ಕೆಲಸ ತೆಗೆದುಕೊಳ್ಳುತ್ತಾ, ಅವರು ತಮ್ಮ ಪ್ರಯಾಸ ಶ್ರಮಗಳಿಂದ ಗಳಿಸಿದ ಸಂಪತ್ತಿನ ಬಹುಭಾಗವನ್ನು ತಾವೇ ಅನ್ಯಾಯವಾಗಿ ಅನುಭವಿಸುತ್ತಿರುವುದು ಕಂಡುಬರುತ್ತದೆ–ಎನ್ನುವುದು ಸಾಮ್ಯವಾದದ ಪ್ರತಿಪಾದಕನಾದ 'ಕಾರ್ಲ್‌ಮಾರ್ಕ್ಸ್' ಎಂಬುವನ ಮುಖ್ಯ ತತ್ತ್ವ. ಎಂದರೆ, ಮೊದಲಿನಿಂದಲೂ ಸಮಾಜದಲ್ಲಿ ಸಮರಸವಿಲ್ಲ, ಸಮಾನತೆಯಿಲ್ಲ. ಇವಕ್ಕೆ ಪ್ರತಿಯಾಗಿ ವರ್ಗಭೇದ, ವರ್ಗಘರ್ಷಣೆ, ವರ್ಗಶೋಷಣೆಗಳೇ ಪ್ರಧಾನವಾಗಿ ಕಂಡುಬರುತ್ತವೆ. ರಾಜ್ಯದ

ಪ್ರಭುತ್ವವು ಮೊದಲು ರಾಜವಂಶದವರ ಕೈಯಲ್ಲಿದ್ದು, ತರುವಾಯ ಆಸ್ತಿವಂತರ ಕೈಸೇರುತ್ತದೆ. ರಾಜ್ಯವೆಂದರೆ ಆಸ್ತಿವಂತರ ಪ್ರಭತ್ವ-ತಮ್ಮ ಅನುಕೂಲಕ್ಕಾಗಿ. ಆಸ್ತಿಯಿಲ್ಲದ ಕೂಲಿಕಾರರಿಗೆ ತಾವು ದುಡಿದು ಗಳಿಸಿದ ಸಂಪತ್ತಿನಲ್ಲಿ ಕೇವಲ ಅಲ್ಪಾಂಶವು ದೊರೆಯುತ್ತದೆ. ಇದಕ್ಕೆ ಸ್ವತ್ತು, ಆಸ್ತಿ ಇವುಗಳ ಸ್ವಾಮ್ಯನಿಯಮಗಳೇ ಕಾರಣ. ಇವುಗಳ ತಾರತಮ್ಯದಿಂದಲೇ ವರ್ಗಭೇದಗಳುಂಟಾಗುವುವು. ಆಸ್ತಿ ವ್ಯವಸ್ಥೆಯನ್ನು ತೊಡೆದುಹಾಕಿ, ಪ್ರಭುತ್ವವನ್ನು ಕೆಲಸಗಾರರ ವರ್ಗವು ಪ್ರಭುತ್ವ ಸ್ಥಾನವನ್ನು ಪಡೆದರೆ, ಆಗ ವರ್ಗರಹಿತ ಸಮಾಜವು ಏರ್ಪಡುವುದು. ಆಗ ಸರ್ವರಿಗೂ ಆರ್ಥಿಕ ಸಮಾನತೆ ಉಂಟಾಗುವುದು. ಇದು ಮಾರ್ಕ್ಸ್‌ವಾದದ ಜೀವಾಳ. ಅಂತೂ ವ್ಯಕ್ತಿಗತವಾದ ಆಸ್ತಿ ಅಥವಾ ಸಂಪತ್ತಿನ ವಿಷಯವಾದ ಹಕ್ಕು ಹೋಗಬೇಕೆಂಬುದು ಸಾಮ್ಯವಾದದ ಹೇಳಿಕೆ.

ಪ್ಲೇಟೋವಿನ ಮುಖ್ಯ ಗ್ರಂಥವಾದ 'ರಿಪಬ್ಲಿಕ್'ನಲ್ಲಿ ಈ ಆಧುನಿಕ ವಿಚಾರಧಾರೆಯು ಕಂಡುಬರುವುದು ಆಶ್ಚರ್ಯಕರವಾಗಿ ತೋರಬಹುದು. ಪ್ಲೇಟೋ ಈ ಉದ್ಗ್ರಂಥದಲ್ಲಿ ಒಂದು ಆದರ್ಶರಾಜ್ಯದ ಚಿತ್ರವನ್ನು ರಚಿಸಿದ್ದಾನೆ. ಇದರಲ್ಲಿ ಸಾಮ್ಯವಾದದ ಮೂಲತತ್ತ್ವವಾದ ವ್ಯಕ್ತಿಗತ ಸಂಪತ್ತಿನ ನಿರೋಧವು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಸಮಾಜದಲ್ಲಿ ಹುಟ್ಟುವ ಎಲ್ಲ ಕಷ್ಟಪರಂಪರೆಗಳಿಗೂ ಸ್ವಾರ್ಥಪರತೆಯೇ ಮೂಲಕಾರಣವೆಂಬುದನ್ನು ಸರ್ವರೂ ಒಪ್ಪಬೇಕಾದದ್ದೇ. ಆದರೆ ಸ್ವಾರ್ಥಪರತೆಯನ್ನು ದಮನಮಾಡುವುದಕ್ಕೆ ಹಲವಾರು ಮಾರ್ಗಗಳನ್ನು ಎಲ್ಲ ದೇಶಗಳಲ್ಲಿಯೂ ಮಂಡಿಸಿದ್ದಾರೆ. ಸಾಮ್ಯವಾದದ ವಿಶೇಷವೇನೆಂದರೆ: ಅಂತಹ ವ್ಯಕ್ತಿಗತ ಇಂದ್ರಿಯನಿಗ್ರಹ, ಧರ್ಮಬುದ್ಧಿ, ಆಚಾರ ಪದ್ಧತಿಗಳು ಬಲಿಷ್ಠರ ಸ್ವಾರ್ಥಪರತೆಯನ್ನು ಎಷ್ಟರಮಟ್ಟಿಗೂ ಕುಗ್ಗಿಸಲಾರದು. ಅದನ್ನು ನಿರ್ಮೂಲ ಮಾಡುವುದಕ್ಕೆ ಅದರ ಅಭಿವ್ಯಕ್ತಿ ಪಾತ್ರವಾದ ಆಸ್ತಿ ಅಥವಾ ಸ್ವತ್ತು ಎಂಬುದನ್ನೇ ತೊಡೆದುಹಾಕಬೇಕು. ಸಮಾಜದಲ್ಲಿ ಯಾರಿಗೂ ಸಂಪತ್ತಿನ ಮೇಲೆ ವ್ಯಕ್ತಿಗತವಾದ ಹಕ್ಕು ಅಧಿಕಾರಗಳು ಇರಕೂಡದು-ಎಂಬ ಧೋರಣೆ.

ಪ್ಲೇಟೋವಿಗೆ ಈ ರೀತಿಯ ವಾದವು ಬಹುಮಟ್ಟಿಗೆ ಸಮಂಜಸವೆಂದು ತೋರಿದಂತೆ ಕಾಣುತ್ತದೆ. ಸಂಪತ್ತನ್ನು ಶೇಖರಣೆ ಮಾಡುವುದು, ಅದರ ರಕ್ಷಣೆ ವೃದ್ಧಿಗಳಲ್ಲಿ ಮಗ್ನರಾಗಿರುವುದು, ತಮ್ಮ ತರುವಾಯ ತಮ್ಮ ಮಕ್ಕಳ ಪುರೋಭಿವೃದ್ಧಿಗಾಗಿ ಸಂಪತ್ತನ್ನು ಕಾಪಾಡುವುದು, ಇವು ಆಸ್ತಿವಂತರ ಮತ್ತು ಅಧಿಕಾರವರ್ಗದವರ ಮುಖ್ಯಕೆಲಸವಾಗಿ, ಅವರು ಇದಕ್ಕಾಗಿ ಇತರರಿಗೆ ಅನ್ಯಾಯ ಮಾಡುವುದು-ಇವೆಲ್ಲ ಪ್ಲೇಟೋವಿನ ಮನಸ್ಸಿನ ಮೇಲೆ ಪ್ರಬಲವಾದ ಪರಿಣಾಮವನ್ನುಂಟುಮಾಡಿದವು. ಆದುದರಿಂದ ಅವನು ತನ್ನ ಆದರ್ಶ ರಾಜ್ಯದ ಪ್ರತಿಪಾದನೆಯಲ್ಲಿ ಪ್ರಭುತ್ವದವರಿಗೆ ಆಸ್ತಿ ಇರಕೂಡದೆಂದು ಶಾಸನ ಮಾಡಿದನು. ಸಮಾಜವು ಅದಕ್ಕಾಗಿ ವಿಶೇಷ ವಿದ್ಯಾಭ್ಯಾಸ ಹೊಂದಿ ವಿಶೇಷ ಪರೀಕ್ಷೆಗಳ ಮೂಲಕ ಆರಿಸಲ್ಪಟ್ಟ ಒಂದು ಗುಂಪಿನ ಅದಕ್ಕೆ ಸೇರಿದವರು ಸಮಾಜದ ರಾಜಪದವಿಯಲ್ಲಿದ್ದರೂ ಅವರು ಸ್ವಂತ ಆಸ್ತಿಗೆ ಮನಸೋಲಬಾರದು. ಅವರಿಗೆ ಬೆಳ್ಳಿ ಬಂಗಾರ ಭೂಮಿ ಮನೆಗಳೆಂಬ ವ್ಯಕ್ತಿಗತ

ಸ್ವತ್ತು ಎಂಬುದೇ ಇರಕೂಡದು. ಅವರಿಗೆ ಬೇಕಾದದ್ದನ್ನೆಲ್ಲಾ ಸಮಾಜವು ಒದಗಿಸಬೇಕು. ಅಧಿಕಾರವರ್ಗದವರಿಗೆಲ್ಲ ಒಂದೇ ಸಮನಾದ ಅನುಕೂಲಗಳು ವ್ಯವಸ್ಥೆಯಾಗಬೇಕು. ಅವಶ್ಯಕ ಕ್ಲುಪ್ತ ಪ್ರಮಾಣದಲ್ಲಿ ಒದಗಿಸುವುದಾಗಬೇಕು. ಅವರೇ ಸರ್ಕಾರವಾದ್ದರಿಂದ ಅವರೇ ಇವುಗಳನ್ನು ಶಾಸನದ ಪ್ರಕಾರ ಉಪಯೋಗಿಸಿಕೊಳ್ಳಬಹುದು. ಪ್ರಭುತ್ವದವರು ಸ್ವಂತ ವ್ಯಾಪಾರ ಉದ್ಯಮಗಳಿಗೆ ಕೈಹಾಕಬಾರದು. ಸ್ವಂತ ಸಂಪತ್ತಿದ್ದರೆ ಮಮಕಾರ ಬೆಳೆದು ಆಡಳಿತಗಾರರ ಮನಸ್ಸು ಒಡೆದು ಇಬ್ಭಾಗವಾಗುವುದು ಎಂಬ ಹೆದರಿಕೆಯು ಪ್ಲೇಟೋವಿನ ಮನಸ್ಸಿನಲ್ಲಿ ಬೇರೂರಿತ್ತು. ಆದ್ದರಿಂದ ಅವನು ಆಡಳಿತ ವರ್ಗದವರಿಗೆ ಸ್ವಂತ ಸ್ವತ್ತು ಇರಕೂಡದೆಂದು ಶಾಸನ ಮಾಡಿದನು ಅವರು ಸ್ವಂತ ಸ್ವತ್ತಿಗೆ ಹಕ್ಕಿಲ್ಲದೆ ತಮ್ಮೆಲ್ಲರಿಗೂ ಸಮಾನವಾದ ಅನುಕೂಲ ಸಾಮಗ್ರಿಗಳಲ್ಲಿ ತೃಪ್ತಿ ಹೊಂದಿ, ಅರ್ಥ ವಿಷಯವಾದ ವಾಸನೆಯನ್ನೇ ಮನಸ್ಸಿನಿಂದ ತೊಡೆದುಹಾಕಿ ರಾಜ್ಯಸೂತ್ರಗಳನ್ನು ನಡಸಬೇಕೆಂಬುದು ಪ್ಲೇಟೋವಿನ ರಾಜಕೀಯ ತತ್ತ್ವಗಳಲ್ಲಿ ಮುಖ್ಯವಾದ್ದು.

ಇದು ಬಹುಮಟ್ಟಿಗೆ ಈಗಿನ ಸಾಮ್ಯವಾದವನ್ನು ಜ್ಞಾಪಕಮಾಡಿ ಕೊಡುತ್ತದೆ. ಆದರೆ ಸೂಕ್ಷ್ಮದೃಷ್ಟಿಗೆ ಪ್ಲೇಟೋವಿನ ಸಾಮ್ಯಪ್ರತಿಪಾದನೆಗೂ ಮಾರ್ಕ್ಸನ ಸಾಮ್ಯವಾದಕ್ಕೂ ಹೋಲಿಕೆಗಿಂತ ವ್ಯತ್ಯಾಸವೇ ಹೆಚ್ಚಾಗಿ ತೋರಿಬರುತ್ತದೆ. ಇವೆರಡರ ಮಾನಸಿಕ ವಾತಾವರಣವೇ ಬೇರೆ; ಧ್ಯೇಯಗಳೂ ಬೇರೆ. ಪ್ಲೇಟೋವಿನ ಧ್ಯೇಯ ಧರ್ಮಸ್ಥಾಪನೆ. ಉತ್ತಮ ಜೀವನಕ್ಕೆ ಆರ್ಥಿಕ ಸಂಪತ್ತು ಅಷ್ಟು ಹೆಚ್ಚಾಗಿ ಅವಶ್ಯಕವಿಲ್ಲವೆಂಬುದು ಅವನ ಅಭಿಪ್ರಾಯ. ಮಾರ್ಕ್ಸನ ದೃಷ್ಟಿ ಸಂಪದ್ವಿನಿಯೋಗ. ಸರ್ವರಿಗೂ ಸಮಾನವಾಗಿ ಹಂಚಿಕೆಯಾಗುವ ಮಾರ್ಗ. ಪ್ಲೇಟೋವಿನ ರಾಜ್ಯದಲ್ಲಿ ಅಧಿಕಾರಿಗಳಿಗೆ ಮಾತ್ರ ಸಂಪತ್ತಿಲ್ಲ. ವೈಶ್ಯವೃತ್ತಿಯಲ್ಲಿರುವ ವರ್ಗವು (ಸಂಖ್ಯೆಯಲ್ಲಿ ಅಧಿಕಾರದವರನ್ನು ಮೀರಿಸಿದ್ದು) ರಾಜ್ಯದ ನಿಯಮಗಳಿಗೆ ಒಳಪಟ್ಟು ಸಂಪದಭಿವೃದ್ಧಿ ಕಾರ್ಯದಲ್ಲಿ ತೊಡಗಿರಬಹುದು. ಆದರೆ ಇದಕ್ಕೆ ಪ್ರತಿಯಾಗಿ ಮಾರ್ಕ್ಸನ ಮನೋರಾಜ್ಯದಲ್ಲಿ ಯಾರಿಗೂ ಆಸ್ತಿಯಿಲ್ಲ. ಎಲ್ಲರೂ ರಾಜ್ಯದ ನೌಕರರೇ. ಬಂಡವಾಳಗಾರರು, ಕೆಲಸಗಾರರು, ಎಂಬ ವ್ಯತ್ಯಾಸವೇ ಇಲ್ಲ.

ಪ್ಲೇಟೋವಿನ ತತ್ತ್ವದೃಷ್ಟಿಯು ಈಗಿನ ಸಾಮ್ಯವಾದದ ವಿಮರ್ಶೆಗೆ ಬಹುಮಟ್ಟಿಗೆ ಅನುಕೂಲವಾಗುತ್ತದೆ. ಅದರಲ್ಲಿ ಅಡಗಿರುವ ಸತ್ಯಾಂಶವನ್ನು ಗ್ರಹಿಸಿ ಅದರ ಜೊತೆಯಲ್ಲಿ ಸೇರಿ ಬರುವ ಅಸತ್ಯವೂ ಅನರ್ಥಕಾರಿಗಳೂ ಆದ ಅಂಶಗಳನ್ನು ಬಿಡಿಸಿಕೊಂಡರೆ, ಈಗಿನ ಸಮಾಜ ಪುನರ್ರಚನಾ ಕಾರ್ಯದಲ್ಲಿ ಪ್ಲೇಟೋವಿನ ವಿಚಾರಧಾರೆಯು ಸಹಾಯವಾಗುತ್ತದೆ.

ಸ್ವಾತಂತ್ರ್ಯವೆಂಬುದು ಆಧುನಿಕ ಪ್ರಪಂಚದ ಮೂಲಮಂತ್ರ. ಈಗ್ಗೆ ಸುಮಾರು ೪೦೦ ವರ್ಷಗಳಿಂದ ಪಾಶ್ಚಾತ್ಯರಲ್ಲಿ ಸ್ವಾತಂತ್ರ್ಯದ ಕೂಗು ಹೆಚ್ಚಾಗಿ ಕೇಳಿಬರುತ್ತಿದೆ. ಮೊದಲು ಸಾಹಿತ್ಯ ಕಲಾ ಪುನರುಜ್ಜೀವನದ (ರಿನೇಸಾನ್ಸ್) ಹೊಸ ದೃಷ್ಟಿಯ ಕಾಲದಲ್ಲಿ ವಿಚಾರ ಸ್ವಾತಂತ್ರ್ಯವು ಮೂಡಿತು. ಪ್ರಕೃತಿಯ ಸ್ವಭಾವನಿಯಮಗಳನ್ನು ಮತಾಧಿಕಾರಿಗಳ ಮತ್ತು ಮತಾಧಿಕಾರಿಗಳ ಶಾಸನಗಳ ಭಯವಿಲ್ಲದೆ ಶೋಧನೆಮಾಡಲು

ಯೂರೋಪಿನಲ್ಲಿ ಒಂದು ದೊಡ್ಡ ಯುದ್ಧವೇ ನಡೆಯಬೇಕಾಯಿತು. ತರುವಾಯ ಮತದ ವಿಷಯದಲ್ಲಿ ವ್ಯಕ್ತಿ ಸ್ವಾತಂತ್ರ್ಯವೂ, ರಾಷ್ಟ್ರ ಸ್ವಾತಂತ್ರ್ಯವೂ ಮತಸುಧಾರಣೆ (ರೆಫಾರ್ಮೇಷನ್) ಕಾಲದಲ್ಲಿ ಜನರ ಮನಸ್ಸನ್ನಾಕರ್ಷಿಸಿತು. ಫ್ರಾನ್ಸಿನ ಮಹಾಕ್ರಾಂತಿಯ ಸ್ವಾತಂತ್ರ್ಯದ ಕ್ಷೇತ್ರವನ್ನು ರಾಜಕೀಯಕ್ಕೆ ವಿಸ್ತರಿಸಿ ಪ್ರಜಾಪ್ರಭುತ್ವದ ಮಹತ್ತ್ವವನ್ನು ಯೂರೋಪಿನ ಜನತೆಗೆ ಗಳಿಸಿಕೊಟ್ಟಿತು. ಆಮೇಲೆ ಯಂತ್ರೋಪಕರಣಗಳ ಯುಗ ಬೆಳೆದು ಹೆಂಗಸರಿಗೆ ಕಾರ್ಖಾನೆಗಳಲ್ಲಿಯೂ ಕಚೇರಿಗಳಲ್ಲಿಯೂ ಉದ್ಯೋಗ ವೇರ್ಪಟ್ಟಿತು. ಇದರ ಫಲವಾಗಿ ಸ್ತ್ರೀ ಸ್ವಾತಂತ್ರ್ಯವು ಆಧುನಿಕ ನಾಗರಿಕತೆಯಲ್ಲಿ ಮಾನ್ಯಸ್ಥಾನವನ್ನು ಪಡೆಯಿತು. ಕ್ರಮವಾಗಿ ಸ್ತ್ರೀಯರ ಹಕ್ಕು ಅಧಿಕಾರಗಳು ಶಾಸನ ಬದ್ಧವಾಗಿ ಪೋಷಿಸಲ್ಪಟ್ಟವೆ. ಇಂಗ್ಲೆಂಡ್ ಅಮೆರಿಕಗಳಲ್ಲಿ ಸ್ತ್ರೀಯರಿಗೆ ಇನ್ನೂ ಕೆಲವು ಕುಂದುಕೊರತೆಗಳಿವೆ. ಉದಾಹರಣೆಗೆ, ಇಂಗ್ಲೆಂಡಿನಲ್ಲಿ ಇನ್ನೂ ಸ್ತ್ರೀಪುರುಷರಿಗೆ ಸಮಾನ ಕೆಲಸಕ್ಕೆ ಸಮಾನ ಸಂಬಳ ದೊರಕುತ್ತಿಲ್ಲ. ಹೆಂಗಸರಿಗೆ ಸ್ವಲ್ಪ ಕಡಮೆ ಸಂಬಳ ಸಲ್ಲುತ್ತಿದೆ. ಒಂದೇ ಕೆಲಸಕ್ಕೆ ಒಂದೇ ಸಂಬಳವು ಸ್ತ್ರೀಪುರುಷ ಭೇದವಿಲ್ಲದೆ ಸಲ್ಲತಕ್ಕದ್ದೆಂಬ ಹಕ್ಕಿಗೆ ಇನ್ನೂ ಹೋರಾಟ ನಡೆಯುತ್ತಿದೆ. ಸ್ವತಂತ್ರ ಭಾರತದಲ್ಲಿ ಸಂಪೂರ್ಣ ಸಮಾನತೆಯನ್ನು ರಾಜ್ಯಾಂಗದಲ್ಲಿ ಘೋಷಿಸಿದ್ದಾರೆ. ಸ್ತ್ರೀಯರು ಸಿವಿಲ್ ಸರ್ವಿಸ್ ಪರೀಕ್ಷೆಗಳಿಗೂ ಕುಳಿತು ಅಧಿಕಾರಸ್ಥಾನಗಳನ್ನು ಗಳಿಸಬಹುದು. ಆದರೆ ಈ ರೀತಿಯ ಸ್ತ್ರೀಪುರುಷರ ಸಂಪೂರ್ಣ ಸಮಾನತೆಯು ಆಧುನಿಕ ಕಾಲದಲ್ಲಿ ಮೊನ್ನೆ ಮೊನ್ನೆ ಒಪ್ಪಲ್ಪಟ್ಟ ವಿಷಯ. ಕಳೆದ ಮೂವತ್ತು ವರ್ಷಗಳಲ್ಲಿ ನಡೆದ ಎರಡು ಮಹಾಯುದ್ಧಗಳು ಸ್ತ್ರೀಸ್ವಾತಂತ್ರ್ಯವನ್ನು ಬಹುಮಟ್ಟಿಗೆ ಮುಂದುವರಿಸಿದವು. ಈಚಿನ ಚರಿತ್ರೆಯನ್ನು ಮನಸ್ಸಿನಲ್ಲಿಟ್ಟು ನಾವು

ಪ್ಲೇಟೋವಿನ ರಿಪಬ್ಲಿಕ್ ಗ್ರಂಥವನ್ನು ನೋಡಿದರೆ, ಅದರಲ್ಲಿ ಕಾಣಬರುವ ಸ್ತ್ರೀ ಸ್ವಾತಂತ್ರ್ಯದ ನಿರೂಪಣೆಯು ನಮಗೆ ಆಶ್ಚರ್ಯವುಂಟುಮಾಡುವುದು. ಏಕೆಂದರೆ, ಪ್ಲೇಟೋ ತನ್ನ ಆದರ್ಶರಾಜ್ಯದ ಅಧಿಕಾರಸ್ಥಾನಕ್ಕೆ ಬರಲು ಸ್ತ್ರೀಯರಿಗೂ ಸಂಪೂರ್ಣ ಸಮಾನತೆಯನ್ನು ಘೋಷಿಸಿದ್ದಾನೆ. ರಾಷ್ಟ್ರದ ರಕ್ಷಕರೂ ನಾಯಕರು ಗಹನವಾದ ವಿದ್ಯಾಭ್ಯಾಸದ ಮೂಲಕ ಆರಿಸಿಲ್ಪಡುತ್ತಾರೆ. ಅಂತಹ ವಿದ್ಯಾಭ್ಯಾಸಕ್ಕೂ ಅದರ ಫಲವಾದ ಅಧಿಕಾರ ಪದವಿಗಳಿಗೂ ಸ್ತ್ರೀಯರೂ ಅರ್ಹರು. ಸರ್ಕಾರದ ಅಗ್ರಗಣ್ಯ ಪದವಿಗಳಲ್ಲಿಯೂ ಆಡಳಿತ ಗುಂಪಿನಲ್ಲಿಯೂ ಸ್ತ್ರೀಯರು ಪ್ರವೇಶಿಸಲು ಸಮಾನವಾದ ಅವಕಾಶಗಳನ್ನು ಪ್ಲೇಟೋ ಸಮರ್ಥಿಸಿ, ನಿರೂಪಿಸಿದ್ದಾನೆ.

ಆದರೆ, ಪ್ಲೇಟೋವಿನ ದೃಷ್ಟಿಯಲ್ಲಿ ಸ್ವಾತಂತ್ರ್ಯ ಮುಖ್ಯವಲ್ಲ. ಸ್ತ್ರೀ ಪುರುಷರಿಬ್ಬರೂ ತಮ್ಮ ತಮ್ಮ ಆಂತರಿಕವಾದ ಶಕ್ತಿಗಳಿಗನುರೂಪವಾಗಿ ಸಮಾಜಸೇವೆ ಸಲ್ಲಿಸಬೇಕೆಂಬುದು ಮುಖ್ಯ. ರಾಷ್ಟ್ರದ ಹಿತ ಚಿಂತನೆಯೇ ಮುಖ್ಯ ಧ್ಯೇಯ. ಸ್ತ್ರೀಪುರುಷರಿಗೆ ಸಮಾಜನಯ ಮತ್ತು ರಾಷ್ಟ್ರನಿಯಮನ ಕಾರ್ಯಗಳಲ್ಲಿ ನೆರವಾಗುವ ಶಕ್ತಿವಿಶೇಷಗಳು ಸಮಾನವಾಗಿಯೇ ಇರುತ್ತವೆಯೆಂಬುದು ಪ್ಲೇಟೋವಿನ ನಂಬಿಕೆ. ಲಿಂಗಭೇದವು ವಿದ್ಯೆ, ಬುದ್ಧಿ, ಪ್ರಜಾಪಾಲನೆ–ಈ ಉನ್ನತ ಕಾರ್ಯಗಳಲ್ಲಿ ಪ್ರಭಾವ ಬೀರಿ

ಕಾರ್ಯಹಾನಿಯಾಗುವಂಥ ಯಾವ ಪರಿಣಾಮವನ್ನೂ ತಂದೊಡ್ಡುವುದಿಲ್ಲ ಎಂಬುದು ಅವನ ದೃಷ್ಟಿ. ಇದು ಈಗಿನವರ ಪುನರ್ವಿಚಾರಕ್ಕೆ ಯೋಗ್ಯವಾದ ವಿಷಯ.

ಸ್ವಾತಂತ್ರವೇ ಮುಖ್ಯ ಧ್ಯೇಯವೆ? ಅಥವಾ ಸ್ವಾತಂತ್ರ್ಯವನ್ನು ಪರಮ ಪುರುಷಾರ್ಥವೆಂದು ಒಪ್ಪಿದರೂ ಯಾವ ಯಾವ ಕ್ಷೇತ್ರಗಳ ಮೂಲಕ ಸ್ವಾತಂತ್ರ್ಯವು ಸಫಲವಾಗುತ್ತದೆ?_ಎಂಬ ಈ ಪ್ರಶ್ನೆಗಳೂ ಏಳುತ್ತವೆ. ಸ್ವಾತಂತ್ರ್ಯ ಸಾಧನೆಗೆ ನಿಯಮಬದ್ಧತೆಯೂ ಒಂದು ಅಂಗವಾಗಿದೆಯೆಂಬ ತತ್ವವೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ತೋರಿಬರುತ್ತದೆ.

ಸ್ವತಂತ್ರಭಾರತವು ಬಹುಮಟ್ಟಿಗೆ ಆಧುನಿಕ ನಾಗರಿಕತೆಯ ಸೆಳೆತಕ್ಕೆ ಸಿಲುಕಿದೆ. ಆದರೆ, ಭಾರತವೂ ಕೂಡ ಕೇವಲ ಅನುಕರಣ ಬುದ್ಧಿಯಿಂದ ಆಧುನಿಕ ವಿಚಾರ ಸಂಪ್ರದಾಯಗಳನ್ನು ಅನುಸರಿಸುವುದು ಶ್ರೇಯಸ್ಕರವೇ, ಅಥವಾ ಮೂಲತತ್ತ್ವಗಳನ್ನು ಪುನರಾಲೋಚನೆ ಮಾಡಿ, ಹಿಂದಿನ ಸಂಸ್ಕೃತಿಯಲ್ಲಿ ಅಡಗಿರುವ ಶ್ರೇಷ್ಠವಾದ ಅಂಶಗಳನ್ನು ಉಳಿಸಿಕೊಂಡು ಈಗಿನ ವಿಚಾರಗಳಲ್ಲಿ ಇರಬಹುದಾದ ಉತ್ತಮ ಅಂಶಗಳನ್ನು ನಮ್ಮ ಸಮಾಜ ರಾಷ್ಟ್ರಗಳ ಪುರೋಭಿವೃದ್ಧಿಗೆ ಹೊಂದಿಸಿಕೊಂಡು, ನಮ್ಮದೇ ಆದ ಹೊಸ ಮಾರ್ಗವನ್ನು ನಿರ್ಮಿಸುವುದು ಸಾಧ್ಯವೇ, ಎಂಬುದು ನಮ್ಮ ಮುಂದೆ ನಿಂತಿರುವ ಮೂಲ ಸಮಸ್ಯೆ: ಈ ವಿಚಾರದಲ್ಲಿ ಕೂಡ ಪ್ಲೇಟೋವಿನ ದೃಷ್ಟಿಯಿಂದ ನಮಗೆ ಬುದ್ಧಿಪ್ರಚೋದಕವಾಗುತ್ತದೆ.

ರಾಜರೂ ಮಂತ್ರಿಗಳೂ ಎಂತಹ ವಿದ್ಯಾ ಸಂಸ್ಕಾರಗಳನ್ನು ಪಡೆದವರಾಗಿದ್ದು ರಾಜ್ಯ ಪರಿಪಾಲನೆಯ ಕರ್ತವ್ಯದಲ್ಲಿ ಯಾವ ನಿಯಮಗಳನ್ನು ಅನುಸರಿಬೇಕೆಂಬ ವಿಷಯದಲ್ಲಿ ಭಾರತದ ಶಾಸ್ತ್ರಕಾರರು ವಿಸ್ತಾರವಾಗಿ ಸಿದ್ಧಾಂತ ಮಾಡಿದ್ದಾರೆ. ರಾಜನು ಸಂಯಮವಂತನಾಗಿದ್ದು, ಇಂದ್ರಿಯ ನಿಗ್ರಹದಲ್ಲಿ ಜಯಶೀಲನಾಗಿ, ಕಾಮಕ್ರೋಧ ಮೊದಲಾದ ಅರಿಷಡ್ವರ್ಗವನ್ನು ಗೆದ್ದು ಪ್ರಜಾಕ್ಷೇಮ ಚಿಂತನೆಯಲ್ಲಿ ಮಗ್ನನಾಗಿರಬೇಕೆಂಬುದು ರಾಜನೀತಿಯ ಮುಖ್ಯ ತತ್ತ್ವ.

ಎಂದರೆ, ರಾಜ್ಯದಲ್ಲಿ ಅಧಿಕಾರಸ್ಥಾನಕ್ಕೆ ಬರಬೇಕಾದರೆ ಅದಕ್ಕೆ ತಕ್ಕ ಆಂತರಿಕ ಅಧಿಕಾರವಿರಬೇಕು. ಅದಕ್ಕೆ ತಕ್ಕ ಮನೋಬುದ್ಧಿ ಸಂಸ್ಕಾರಗಳು ಅತ್ಯಾವಶ್ಯಕ.

ಆದರೆ ಪ್ರಜಾರಾಜ್ಯ ಪದ್ಧತಿಯಲ್ಲಿ ಈ ತತ್ತ್ವವನ್ನು ಅನುಸರಿಸುವುದು ಸುಲಭಸಾಧ್ಯವಾಗಿಲ್ಲ. ಮಹಾಜನರ ಚುನಾವಣೆಯಿಂದ, ಕಕ್ಷಿಗಳ ಸಹಾಯದಿಂದ ಲೋಕಸಭೆಗಳ ಸದಸ್ಯರು ತಮ್ಮ ಸ್ಥಾನಗಳನ್ನು ಪಡೆಯುತ್ತಾರೆ. ಪಕ್ಷಗಳ ಮುಖಂಡರು ಪ್ರಭುಗಳಾಗತ್ತಾರೆ. ಈ ಪದ್ಧತಿಯಿಂದ ರಾಜ್ಯಶಾಸನಕ್ಕೆ ಆವಶ್ಯಕವಾದ ಗುಣಸಂಪತ್ತಿಯಿರ ತಕ್ಕ ಜನರೇ ಅಧಿಕಾರಸ್ಥಾನಕ್ಕೆ ಏರುತ್ತಾರೆಂಬ ಭರವಸೆಯಿಲ್ಲವಾಗಿದೆ. ಪ್ಲೇಟೋವಿನ ಆದರ್ಶರಾಜ್ಯ ಪ್ರತಿಪಾದನೆಯಲ್ಲಿ ಈ ವಿಷಯವು ಅಗ್ರಸ್ಥಾನವನ್ನು ಪಡೆದಿದೆ. ಆದರ್ಶರಾಜ್ಯದ ಧ್ಯೇಯವೇನು? ಅದರಲ್ಲಿ ವರ್ಗಸಾಮರಸ್ಯವನ್ನು ಹೇಗೆ ಸಾಧಿಸಲಾಗುತ್ತದೆ? ನಾಗರಿಕ ಶಾಶ್ವತ ಸುಖಸಂಪತ್ತಿಗಳು ಹೇಗೆ ಫಲಿಸುತ್ತವೆ? ರಾಜ್ಯದಲ್ಲಿ

ಧರ್ಮವು ಯಾವ ರೀತಿಯಲ್ಲಿ ನೆಲಸುವಂತಾಗುತ್ತದೆ? ಈ ಫಲಗಳು ಲಭಿಸುವುದಕ್ಕೆ ರಾಜ್ಯ ಸೂತ್ರಗಳನ್ನು ರಚಿಸಿ ನಡಸುವ ಪ್ರಭುತ್ವದವರು ಎಂತಹ ವಿದ್ಯಾಭ್ಯಾಸ ಕ್ರಮದಿಂದ ಸಿದ್ಧರಾಗುತ್ತಾರೆ?–ಇವೇ ಪ್ಲೇಟೋವಿನ ರಾಜ್ಯತತ್ತ್ವ ಚಿಂತನೆಯಲ್ಲಿ ಮುಖ್ಯವಾದ ಪ್ರಶ್ನೆಗಳು.

ಹೀಗೆ ಅನೇಕ ದೃಷ್ಟಿಗಳಿಂದ ಪ್ಲೇಟೋವಿನ ತತ್ತ್ವಾನ್ವೇಷಣವು ನಮ್ಮ ಕಾಲದ ಸಮಸ್ಯೆಗಳಿಗೆ ಅನ್ವಯವಾಗುತ್ತದೆ. ನಾಗರಿಕರೂ, ಪ್ರಜಾಪ್ರತಿನಿಧಿಗಳೂ, ಪ್ರಭುತ್ವದವರೂ ಪ್ಲೇಟೋವಿನ ಅಭಿಪ್ರಾಯಗಳನ್ನು ತಿಳಿದು ಅನಂತರ ವೋಟಿನ ಅಧಿಕಾರದ ವಿಷಯವನ್ನು ಪರ್ಯಾಲೋಚಿಸುವುದು ಶ್ರೇಯಸ್ಕರವೆಂಬುದರಲ್ಲಿ ಸಂದೇಹವಿಲ್ಲ.

* * *

೨ನೆಯ ಅಧ್ಯಾಯ

ಪ್ರಜಾರಾಜ್ಯದ ನ್ಯೂನತೆಗಳು

ಇದು ಪ್ರಜಾರಾಜ್ಯದ ಯುಗ. ಪ್ರಜಾನಾಯಕರ ಪ್ರಭುತ್ವವೇ ರಾಜ್ಯಭಾರ ಕ್ರಮಗಳಲ್ಲಿ ಸರ್ವೋತ್ಕೃಷ್ಟ ಎಂಬ ನಂಬಿಕೆ ಈಗ ಎಲ್ಲೆಲ್ಲಿಯೂ ರೂಢಮೂಲವಾಗಿದೆ.

ಪ್ಲೇಟೋವಿನ ಕಾಲವೂ ಕೂಡ ಪ್ರಜಾರಾಜ್ಯದ ಪ್ರಾಬಲ್ಯದ್ದೇ ಆಗಿತ್ತು. ಪ್ರಜಾರಾಜ್ಯದ ಬಲದಿಂದಲೇ ಅಥೆನ್ಸ್ ನಗರವು ಪರ್ಷಿಯಾ ಚಕ್ರವರ್ತಿಯ ಮಹಾ ದಂಡಯಾತ್ರೆಯನ್ನು ಎದುರಿಸಿ ಸೋಲಿಸಿ ತನ್ನ ಮತ್ತು ಇತರ ಗ್ರೀಕ್ ಪಟ್ಟಣಗಳ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಈ ಮಹಾ ಸಮರದಲ್ಲಿ ಗ್ರೀಸಿನ ಸಣ್ಣ ಪುಟ್ಟ ರಾಜ್ಯಗಳು ಅಥೆನ್ಸ್ ನಗರದವರ ಮುಂದಾಳುತನದಲ್ಲಿ ಕಲೆತು ಹೋರಾಡಿದವು. ಅಥೆನ್ಸಿನಲ್ಲಿ ಪೆರಿಕ್ಲೀಸ್ ಎಂಬ ಗಣ್ಯ ನಾಯಕನು ಪ್ರಜೆಗಳ ಬೆಂಬಲದಿಂದ ಯಶಸ್ವಿಯಾಗಿ ರಾಜ್ಯಾಡಳಿತ ನಡೆಸಿದನು. ಅವನ ತರುವಾಯ, ಎಂದರೆ ಪ್ಲೇಟೋವಿನ ಕಾಲದಲ್ಲಿ, ಪ್ರಜಾರಾಜ್ಯವು ಸಡಿಲವಾಗಿ ದೋಷಗಳು ತಲೆಯೆತ್ತಿದವು.

ಜನರಲ್ಲಿ ಸ್ವಾತಂತ್ರ್ಯ ಪ್ರೇಮವು ಹೆಚ್ಚಿ ದೇಶದ ಒಗ್ಗಟ್ಟೂ ಶಿಸ್ತೂ ಕಡಮೆಯಾಗುತ್ತಾ ಬಂತು. ಕೊನೆಗೆ ಸ್ಪಾರ್ಟಾ–ಅಥೆನ್ಸ್ ಯುದ್ಧದಲ್ಲಿ ಅಥೆನ್ಸಿಗೆ ಪರಾಜಯವಾಯಿತು. ಅದರ ಸ್ವರ್ಣಯುಗವು ಮುಗಿದು ಅವನತಿಯ ಕಾಲ ಬಂತು. ಪ್ಲೇಟೋ ಬಾಳಿದ್ದು ಈ ಕಾಲದಲ್ಲಿ. ಅವನ ಕಣ್ಣ ಮುಂದೆ ಅಥೆನ್ಸ್ ನಗರದಲ್ಲಿಯೂ ಗ್ರೀಸಿನ ಇತರ ನಗರಗಳಲ್ಲಿಯೂ ಪ್ರಜಾರಾಜ್ಯಕ್ರಮದ ದೋಷಗಳು ತಾಂಡವವಾಡುತ್ತಿದ್ದವು.

ಪ್ಲೇಟೋ ಪ್ರಜಾತಂತ್ರವನ್ನು ತೀವ್ರವಾಗಿ ಖಂಡಿಸುವುದಕ್ಕೆ ಇದೇ ಮುಖ್ಯ ಕಾರಣ. ಅವನ ದೃಷ್ಟಿ ಪ್ರಜಾತಂತ್ರದ ಮರ್ಮ ಭೇದಕವಾಗಿದೆ. ಅವನು ಮಂಡಿಸುವ ದೋಷಗಳು ಪ್ರಜಾತಂತ್ರ ಕ್ರಮದಲ್ಲಿ ಸ್ವಭಾವವಾಗಿಯೇ ತಲೆದೋರುವುವು. ಅವು ಮಾನವ ಸಮಾಜಕ್ಕೆ ತಪ್ಪಿದ್ದಲ್ಲ. ಆದರೆ ಈ ದೋಷಗಳು ಸರ್ವಥಾ ಅನಿವಾರ್ಯವೇ,

ಎಂಬುದು ವಿಚಾರಾರ್ಹವಾಗಿದೆ. ಅವು ಅನಿವಾರ್ಯಗಳಾದರೆ, ಈಗಿನ ಪ್ರಜಾಪ್ರಭುತ್ವ ಪದ್ಧತಿಗಳು ಅಲ್ಪಾಯುಗಳಾಗ ಬೇಕು; ಅವು ಪರ್ಯವಸಾನದಲ್ಲಿ ಜನರಿಗೆ ಶ್ರೇಯಸ್ಕರವಾಗಲಾರವು ಭಾರತವು ಸ್ವಾತಂತ್ರ್ಯ ಬಂದ ತರುವಾಯ ಗಣತಂತ್ರ ವಿಧಾನವನ್ನು ರಚಿಸಿಕೊಂಡು ಅದರ ಆಶ್ರಯದಲ್ಲಿ ಪ್ರಜಾಕ್ಷೇಮ ರಾಷ್ಟ್ರಪುರೋಭಿವೃದ್ಧಿಗಳನ್ನು ಸಂಪಾದಿಸಲು ಉದ್ಯುಕ್ತವಾಗಿದೆ. ಇಂಥ ಸಮಯದಲ್ಲಿ ಭಾರತೀಯರು ಪ್ರಜಾತಂತ್ರದ ಬಲಾಬಲಗಳನ್ನೂ, ಗುಣಾವಗುಣಗಳನ್ನೂ ಸೂಕ್ಷ್ಮವಾಗಿಯೂ ಸಮಗ್ರವಾಗಿಯೂ ಪರ್ಯಾಲೋಚಿಸುವುದು ಅಗತ್ಯವಾಗಿದೆ.

ಪ್ರಜಾರಾಜ್ಯದ ತಳಹದಿಯೆಂದರೆ ಸ್ವಾತಂತ್ರ್ಯ. ಅಂಥ ರಾಜ್ಯದಲ್ಲಿ ಎಲ್ಲರಿಗೂ ಸ್ವಾತಂತ್ರ್ಯವುಂಟು. ಪ್ರಜೆಗಳು ತಮ್ಮ ಮನ ಬಂದಂತೆ ಮಾತಾನಾಡಬಹುದು, ಮನ ಬಂದದ್ದನ್ನು ಮಾಡಬಹುದು. ಪ್ರತಿಯೊಬ್ಬನೂ ತನ್ನ ಜೀವನಕ್ರಮವನ್ನು ತನ್ನ ಇಷ್ಟಪ್ರಕಾರ ನಡೆಸಬಹುದು. ಆದ್ದರಿಂದ ಇಂಥ ರಾಜಕೀಯ ವ್ಯವಸ್ಥೆಯಲ್ಲಿ ಮಾನವನ ವೈವಿಧ್ಯವು ನಿರರ್ಗಳವಾಗಿ ಹೊರಬೀಳುತ್ತದೆ. ರಾಜ್ಯವು ಬಣ್ಣ ಬಣ್ಣದ ಶಾಲಿನಲ್ಲಿ ವಿಧವಿಧವಾದ ಹೂವುಗಳು ಚಿತ್ರಿಸಲ್ಪಟ್ಟಿರುತ್ತವೆ. ಹೆಂಗಸರಿಗೂ ಮಕ್ಕಳಿಗೂ ಬಣ್ಣಗಳ ವೈವಿಧ್ಯವೂ ಸೊಂಪೂ ಪ್ರಿಯವಲ್ಲವೆ? ಅದರಂತೆ ಸ್ವಾತಂತ್ರ್ಯ ನಿಷ್ಠವಾದ ಜನತಂತ್ರದಲ್ಲಿ ಪ್ರಜೆಗಳಿಗೆ ವೈವಿಧ್ಯವು ಪ್ರಿಯವಾಗುತ್ತದೆ. ಅಂಥ ರಾಜ್ಯವು ಅನೇಕ ರೀತಿಯ ಶೀಲಸ್ವಭಾವಗಳನ್ನೂ ಚಾರಿತ್ರವನ್ನೂ ಹೊರಸೂಸುತ್ತ ಸ್ಥೂಲದೃಷ್ಟಿಗೆ ಬಹು ಸೊಗಸಾಗಿರುವಂತೆ ಭಾಸವಾಗುತ್ತದೆ.

ಇಂಥ ರಾಜ್ಯದಲ್ಲಿ ರಾಜಕೀಯ ಸಂವಿಧಾನಗಳೂ ಕೂಡ ಹೇರಳವಾಗಿರುವುದು ನ್ಯಾಯವಾಗಿಯೇ ಇದೆ. ಏಕೆಂದರೆ, ಸ್ವಾತಂತ್ರ್ಯದ ಹುರುಪಿನಿಂದ ಪ್ರೇರಿತರಾದ ಪ್ರಜಾನಾಯಕರು, ಹೊಸಹೊಸ ಶಾಸನಗಳನ್ನು ಮೇಲೆ ಮೇಲೆ ಹೊರಡಿಸುತ್ತಿರುತ್ತಾರೆ. ಹಳೆಯ ಸಂಪ್ರದಾಯಗಳೂ ಕಾನಾನುಗಳೂ ಅವರಿಗೆ ರುಚಿಸುವುದಿಲ್ಲ. ಯಾವ ಕಟ್ಟಳೆಯನ್ನೂ ಅವರು ಬಹುಕಾಲ ಮನ್ನಿಸಲಾರರು. ಅದುದರಿಂದ ಸಂವಿಧಾನಗಳಲ್ಲಿ ಆಸಕ್ತಿಯಿರುವವರೂ ಹೊಸ ರಾಷ್ಟ್ರಗಳನ್ನು ವ್ಯವಸ್ಥೆ ಮಾಡತಕ್ಕವರೂ ಪ್ರಜಾರಾಜ್ಯಗಳನ್ನು ಪರೀಕ್ಷಿಸಿದರೆ ಅವರಿಗೆ ಬೇಕಾದ ಸಲಹೆಗಳು ಹೇರಳವಾಗಿ ದೊರಕುತ್ತವೆ. ಜನರಾಜ್ಯವು ರಾಜ್ಯಾಂಗ ಶಾಸನಗಳ ಪರೀಕ್ಷೆಯೋ ಎಂಬಂತೆ ತೋರುತ್ತದೆ.

ಪ್ಲೇಟೋ ಈ ರೀತಿಯಲ್ಲಿ ಪ್ರಜಾರಾಜ್ಯದ ಸ್ವಭಾವವನ್ನು ಕುರಿತು ವ್ಯಂಗ್ಯವಾಗಿ ಬರೆಯುತ್ತಾನೆ. ಈತನಿಗೆ ಪ್ರಜಾಪ್ರಭುತ್ವದ ಪದ್ಧತಿಯಲ್ಲಿ ದೋಷಗಳೇ ಎದ್ದು ಕಾಣುತ್ತಿದ್ದವು. ಇದಕ್ಕೆ ಅವನ ಅನುಭವವೇ ಮುಖ್ಯಕಾರಣ. ಮೇಧಾವಿಯೂ ವಿಚಾರತತ್ಪರನೂ ಆದ್ದರಿಂದ ತನ್ನ ಕಾಲದಲ್ಲಿ ಗ್ರೀಸಿನ ನಗರಗಳಲ್ಲಿ ಕಂಡುಬರುವ ದೋಷಗಳಿಗೆ ಮೂಲ ಕಾರಣಗಳನ್ನು ಮನುಷ್ಯಸ್ವಭಾವದಲ್ಲಿಯೇ ಕಾಣಬಹುದೆಂದು ಹೇಳುತ್ತಾನೆ.

ಸ್ವಾತಂತ್ರ್ಯ ಪ್ರೇಮವು ಪ್ರಜಾಭುತ್ವದ ಮೂಲಮಂತ್ರವಾಗಿರುವುದರಿಂದ, ಅದರಲ್ಲಿ ಅನೇಕ ಗುಣದೋಷಗಳು ಸ್ವಭಾವವಾಗಿಯೇ ತಲೆದೋರುವುವು.

ಇವುಗಳಲ್ಲಿ ಮುಖ್ಯವಾದ್ದೆಂದರೆ 'ಆಡಳಿತದಲ್ಲಿ ಶಿಥಿಲತೆ'. ರಾಜ್ಯದ ಯಾವ ಕಾರ್ಯಭಾರವೂ ಒಮ್ಮನಸ್ಸಿನಿಂದಲೂ ಶಿಸ್ತಿನಿಂದಲೂ ನಡೆಯುವುದು ಕಷ್ಟವಾಗುತ್ತದೆ. ಏಕೆಂದರೆ, ಯಾವ ಧೋರಣೆಗೇ ಆಗಲಿ ವಿರೋಧಪಕ್ಷಗಳೇಳುತ್ತವೆ. ಯಾವ ನಿಶ್ಚಯವೇ ಆಗಲಿ ದೇಶದ ಏಳಿಗೆಗೆ ಎಷ್ಟುಮಟ್ಟಿಗೆ ಅದು ಆವಶ್ಯಕವಾಗಿದ್ದರೂ ಅದು ಸರ್ವಸಮ್ಮತವಾಗುವುದು ಅಪರೂಪ. ಅದಕ್ಕೆ ವಿರುದ್ಧವಾದ ಅಭಿಪ್ರಾಯಗಳು ಎದ್ದು, ವಿರೋಧಪಕ್ಷಗಳು ಏರ್ಪಡುತ್ತವೆ. ದೇಶದ ಮುಖಂಡರು ಯುದ್ಧಮಾಡಬೇಕೆಂದು ನಿಶ್ಚಯಿಸಿದರೆ, ಹಾಗೆ ಯುದ್ಧ ಹೂಡುವುದು ತಪ್ಪೆಂದೂ ಅನಾವಶ್ಯಕವೆಂದೂ ಹೇಳುವ ಗುಂಪುಗಳು ಬಹಿರಂಗವಾಗಿ ವಾದಮಾಡುತ್ತವೆ.

ಹೀಗೆಯೇ ಶಾಂತಿಕಾಲದಲ್ಲಿಯೂ ದೇಶದ ಒಳಾಡಳಿತದಲ್ಲಿ ಜನರು ಪ್ರಚಲಿತವಾದ ಶಾಸನಗಳಿಗೆ ಮನ್ನಣೆ ಕೊಡುವುದಿಲ್ಲ. ಶಾಸನದ ಪ್ರಕಾರ ಅಧಿಕಾರಕ್ಕೆ ಯಾರು ಅನರ್ಹರೋ ಅವರೇ ಅಧಿಕಾರಲಾಲಸೆಯಿಂದ ಶಾಸನವನ್ನು ತಿರಸ್ಕರಿಸಿ, ಸ್ಥಾನ ಮಾನಗಳನ್ನು ಗಳಿಸಬೇಕೆಂದು ಪ್ರಯತ್ನ ಪಡುತ್ತಾರೆ.

ಇದು ಮನುಷ್ಯ ಸಾಮಾನ್ಯಕ್ಕೆ ಸೇರಿದ ಗುಣ. ಸರ್ವದೇಶ ಕಾಲಗಳಲ್ಲಿಯೂ ಈ ಗುಣದ ಪ್ರಭಾವವನ್ನು ಕಾಣಬಹುದು. ನಮ್ಮಲ್ಲಿ ಈಗ ಈ ದೋಷ ಪ್ರಬಲವಾಗಿದೆಯೆಂಬ ಖಂಡನೆಯು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ಸ್ವಾತಂತ್ರ್ಯ ಲಭಿಸಿದಮೇಲೆ ನಮ್ಮ ಜನರಿಗೆ ಸರ್ವಾಧಿಕಾರ ಬಂತು. ಈ ನಾಲ್ಕಾರು ವರ್ಷಗಳಲ್ಲಿ ಆಳುವ ರಾಜಕೀಯಪಕ್ಷದ ಮುಖಂಡರು ತಮಗೆ ಬೇಕಾದವರಿಗೆ ಸ್ಥಾನಮಾನಗಳನ್ನು ಶಾಸನ ಸಂಪ್ರದಾಯಗಳಿಗೆ ವಿರೋಧವಾಗಿ ದೊರಕಿಸಿ ಕೊಡುತ್ತಿದ್ದಾರೆಂಬ ಕೂಗು ಎಲ್ಲೆಲ್ಲಿಯೂ ಕೇಳಿ ಬರುತ್ತಿದೆ. ಪ್ರತಿಯೊಂದು ಸ್ಥಾನಕ್ಕೂ ಅದಕ್ಕೆ ತಕ್ಕಂತೆ ವಿದ್ಯಾವಿನಯಗಳ ಅರ್ಹತೆಯಿರಬೇಕು–ಎನ್ನುವುದು ಶಾಸನ, ಮರ್ಯಾದೆ. ಆದರೆ, ಅಧಿಕಾರ ನಡಸುವವರು ನಿರಂಕುಶ ಪ್ರವೃತ್ತಿಯಿಂದ ಸ್ವಾತಂತ್ರ್ಯದ ಹುರುಪಿನಲ್ಲಿ ಸ್ವೇಚ್ಛಾಶೀಲರಾಗಿ, ಅರ್ಹತೆ ಅನರ್ಹತೆಗಳನ್ನು ನಿರ್ಲಕ್ಷಿಸಿ ತಮಗೆ ಬೇಕಾದವರನ್ನು ಅಧಿಕಾರಸ್ಥಾನಗಳಲ್ಲಿ ತುಂಬಿಸುವುದು ಸ್ವಾತಂತ್ರ್ಯದ ಶೈಶವದಲ್ಲಿ ಕಾಣಬರುವ ದೋಷ.

ಪ್ರಜಾರಾಜ್ಯದಲ್ಲಿ ಈ ದೋಷಗಳು ಅನಿವಾರ್ಯವೆಂದು ಪ್ಲೇಟೋನಂಬಿದ್ದಂತೆ ತೋರುತ್ತದೆ. ಪ್ರಜಾತಂತ್ರದಲ್ಲಿ ಜನರು ಸಮಾಜದ ಕಟ್ಟುಗಳಿಗೆ ಅಧೀನರಾಗಿ ನಡೆದುಕೊಳ್ಳುವುದು ಅಸಾಧ್ಯವೆಂದೇ ಆತನ ಅಭಿಪ್ರಾಯವೆಂದು ತೋರುತ್ತದೆ.

ಈ ದೋಷದ ಫಲವಾಗಿ ಪದವೀಧರರಿಂದ ದೇಶಕ್ಕೆ ಸಲ್ಲಬೇಕಾದ ಸೇವೆ ಸಲ್ಲದೆಹೋಗುತ್ತದೆ. ಏಕೆಂದರೆ, ಅವರವರ ಕರ್ಮಗುಣ ವಿದ್ಯಾ ಕೌಶಲಗಳಿಗೆ ಅನುಸಾರವಾಗಿ ಅಧಿಕಾರಕ್ಕೆ ಬಂದ ಜನರು ಅಪರೂಪವಾಗುತ್ತಾರೆ. ಯಾವ ಸ್ಥಾನವನ್ನು ನೋಡಿದರೂ ಅದಕ್ಕೆ ತಕ್ಕ ಪ್ರೌಢಿಮೆಯನ್ನು ಹೊಂದಿರುವಂಥವರೇ ಅದನ್ನು ಆಕ್ರಮಿಸಿರುವುದು ಕಂಡುಬರುತ್ತದೆ. ಹೀಗಿರಲಾಗಿ, ಸೇನಾಧಿಪತಿಯೇ ಆಗಲಿ ರಾಯಭಾರಿಯೇ ಆಗಲಿ, ತಮ್ಮ ತಮ್ಮ ಕೆಲಸವನ್ನು ದಕ್ಷತೆಯಿಂದ ನಡಸದಿದ್ದಿರೆ ದೇಶಕ್ಕೆ ವಿಪತ್ತು ಸಂಭವಿಸುವುದು ನಿಶ್ಚಯ. ಹೀಗೆಯೇ ರಾಜ್ಯದ ಸಮಸ್ತ

ಕಾರ್ಯರಂಗಗಳಲ್ಲಿಯೂ ಸರಿಯಾದ ಜನರು ನೇಮಿಸಲ್ಪಡದೆ ಇದ್ದರೆ ಸಮಾಜವು ಹದಗೆಡುವುದು ಸ್ವತಃಸಿದ್ಧವೇ ಸರಿ. ಕ್ರಮವಾಗಿ ಕಾಲಾನುಕಾಲದಲ್ಲಿ ರಾಜ್ಯದ ಸ್ವಾತಂತ್ರ್ಯವೇ ನಷ್ಟವಾಗುವುದು. ಹೀಗೆ ವ್ಯಕ್ತಿಸ್ವಾತಂತ್ರ್ಯವು ಮಿತಿಮೀರಿದರೆ, ಅದು ದೇಶದ ಸ್ವಾತಂತ್ರ್ಯವನ್ನೇ ಹಾಳುಮಾಡುತ್ತದೆ.

ಆದರೆ, ಈ ಅನಿಷ್ಟಪ್ರಾಪ್ತಿಯು ಪ್ರಜಾಪ್ರಭುತ್ವಕ್ಕೆ ಎಷ್ಟು ಮಟ್ಟಿಗೆ ಅನ್ವಯಿಸುತ್ತದೆಯೆಂಬ ಪ್ರಶ್ನೆ ತಲೆದೋರುವುದು ಸ್ವಾಭಾವಿಕ. ಇಂಥ ಕಾರ್ಯಕಾರಣಸಂಬಂಧವು ರಾಜ್ಯಸಾಮಾನ್ಯಕ್ಕೇ ಸಂಬಂಧ ಪಟ್ಟಿರುವುದೆಂದು ವಾದಿಸಲು ಸಾಕದಷ್ಟು ಅವಕಾಶವಿದೆ. ಯಾವ ರೀತಿಯ ರಾಜಕೀಯವ್ಯವಸ್ಥೆಯಲ್ಲಿಯೇ ಆಗಲಿ, ಸ್ಥಾನಮಾನಗಳಿಗೂ ಅಧಿಕಾರಿಗಳ ವಿದ್ಯಾಸಂಪತ್ತಿಗೂ ಇರಬೇಕಾದ ಮೇಳನವಿಲ್ಲದಿದ್ದರೆ ಅವ್ಯವಸ್ಥೆ ತಲೆದೋರುವುದು ಅನಿರೀಕ್ಷಿತವಲ್ಲ. ಆದರೂ ಪ್ಲೇಟೋವಿನ ಖಂಡನೆಯಲ್ಲಿ ಸತ್ಯಾಂಶವಿದೆ. ಈ ದೋಷ ಪ್ರಜಾರಾಜ್ಯದಲ್ಲಿ ಹೆಚ್ಚು ಪ್ರಮಾಣದಲ್ಲಿ ತೋರಿಬರುವುದಕ್ಕೆ ಸಾಕದಷ್ಟು ಕಾರಣವಿದೆಯೆನ್ನಬಹುದು. ಏಕೆಂದರೆ, ಪ್ಲೇಟೋ ಪರ್ಯಾಲೋಚಿಸುತ್ತಿರುವ ಪ್ರಜಾರಾಜ್ಯಗಳಲ್ಲಿ ಪ್ರಜಾಪ್ರತಿನಿಧಿಗಳ ಅಧಿಕಾರವಿಲ್ಲ. ಆಗಿನ ಕಾಲದಲ್ಲಿ ಗ್ರೀಸಿನ ನಗರಗಳಲ್ಲಿ ಪ್ರಜಾರಾಜ್ಯವೆಂದರೆ, ನಾಗರಿಕರ ನೇರವಾದ ಅಧಿಕಾರ. ಎಲ್ಲ ನಾಗರಿಕರೂ ನಗರ ಸಭೆಯ ಸದಸ್ಯರಾಗಿ ನಗರದ ಸರ್ವಾಧಿಕಾರದಲ್ಲಿ ಸಮವಾಗಿ ಭಾಗಿಗಳಾಗಿದ್ದರು. ಪ್ರಜಾಸಭೆಗೆ ಪ್ರತಿನಿಧಿಗಳ ಚುನಾವಣೆಯ ಪದ್ಧತಿಯಿರಲಿಲ್ಲ. ಆದರೆ, ಈಗ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಪ್ರಚಲಿತವಾಗಿರುವುದು ಅಂಥ ನೇರವಾದ ಪ್ರಜಾಪ್ರಭುತ್ವವಲ್ಲ. ಪುರಾತನ ಗ್ರೀಕ್ ನಗರಗಳಲ್ಲಿ ನಾಗರಿಕರು ಸುಮಾರು ೧೦ಸಾವಿರ, ೨೦ಸಾವಿರ ಇರುತ್ತಿದ್ದರು, ಅವರಲ್ಲಿ ರಾಜ್ಯವೆಂದರೆ 'ನಗರ ರಾಜ್ಯ'(City State), ಅವರ ಸಭಾಂಗಣವು ಬಹಿರಂಗವಾಗಿತ್ತು; ಕೂರುವುದಕ್ಕೆ ಸಾಲುಪೀಠ ಇತ್ತೇ ಹೊರತು ಚುನಾವಣೆಯಿರಲಿಲ್ಲ. ಸಾವಿರಾರು ಜನರು ಸಭಾಂಗಣದಲ್ಲಿ ಕೂತು ದೇಶದ ಮುಖ್ಯ ರಾಜಕೀಯ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು.

ಈಗಿನ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಜನರಿಗಿರುವುದು ಆಡಳಿತಗಾರರನ್ನು ಆರಿಸುವ ಹಕ್ಕು ಮಾತ್ರ, 'ವೋಟು' ಇರುವವರೆಲ್ಲ ರಾಜ್ಯ ಸಭಾಸದಸ್ಯರಾಗುವ ಸಂಭವವಿಲ್ಲ; ಉನ್ನತ ಸ್ಥಾನಗಳಲ್ಲಿ ನಿಂತು ಕಾರ್ಯಭಾರ ನಡಸಬೇಕಾಗಿಲ್ಲ. ಆದ್ದರಿಂದ, ಈಗಿನ ಪದ್ಧತಿಯಲ್ಲಿ ಜನರ ಸ್ವೇಚ್ಛಾಪ್ರವೃತ್ತಿಗೆ ಸ್ವಲ್ಪ ತಡೆಯುಂಟಾಗುತ್ತದೆ. ಅಲ್ಲದೆ, ಅಧಿಕಾರಸ್ಥರ ಮತ್ತು ಪ್ರಜಾನಾಯಕರ ಸ್ವೇಚ್ಛಾಪ್ರವೃತ್ತಿಯನ್ನು ತಡೆದು ಲೋಕ ಹಿತವನ್ನು ರಕ್ಷಿಸಲು ನೆರವಾಗುವ ಅನೇಕ ಸಂಪ್ರದಾಯಗಳೂ ಶಾಸನಗಳೂ ಆಧುನಿಕ ಪ್ರಜಾರಾಜ್ಯಗಳಲ್ಲಿ ಏರ್ಪಟ್ಟಿವೆ.

ಈ ರೀತಿಯಲ್ಲಿ ಜನಸ್ವಾತಂತ್ರ್ಯಕ್ಕೆ ಶಾಸನಸಂಪ್ರದಾಯ ಮೂಲವಾದ ನಿರ್ಬಂಧಗಳಿದ್ದರೂ ಕೂಡ ಒಟ್ಟಿನಲ್ಲಿ ಪ್ಲೇಟೋ ನಿರ್ದೇಶ ಮಾಡುವ ದೋಷಗಳು ಪ್ರಜಾರಾಜ್ಯಕ್ಕೆ ಸ್ವಭಾವಸಿದ್ಧವಾಗಿವೆ. ಸ್ವಾತಂತ್ರ್ಯವೇ ಮೂಲ ಮಂತ್ರವಾದ್ದರಿಂದ

ಪ್ರಜಾರಾಜ್ಯದಲ್ಲಿ ಶಾಸನ ಪ್ರಭುತ್ವ ಅಥವಾ ಶಾಸನ ಪ್ರಾಬಲ್ಯ (Rule of Law) ವನ್ನು ಕಾಪಾಡುವುದು ಕಷ್ಟಸಾಧ್ಯವೆಂಬುದು ನಿರ್ವಿವಾದವಾಗಿದೆ. ಪ್ರಜಾರಾಜ್ಯಪದ್ಧತಿಯಲ್ಲಿ ಕಂಡುಬರುವ ಇನ್ನೂ ಅನೇಕ ದೋಷಗಳನ್ನು ಪ್ಲೇಟೋ ಹೃದಯಂಗಮವಾಗಿ ವರ್ಣಿಸುತ್ತಾನೆ. ಇವುಗಳಲ್ಲಿ ಮತ್ತೊಂದು ಅವಗುಣವೇನೆಂದರೆ, ಇಂಥ ರಾಜ್ಯದಲ್ಲಿ ತಪ್ಪಿತಸ್ಥರ ಮೇಲೆ ಪ್ರಭುತ್ವದವರಿಗೂ ಜನ ಸಾಮಾನ್ಯರಿಗೂ ಇರುವ ಕರುಣೆ, ಶಾಸನೋಲ್ಲಂಘನ ಮಾಡಿದವರಿಗೆ ಶಾಸನದಲ್ಲಿ ವಿಧಿಸಿರುವ ಶಿಕ್ಷೆಯು ನಿಯತವಾಗಿ ನಿರ್ವಿವಾದವಾಗಿ ಕೊಡಲ್ಪಡುವುದಿಲ್ಲ. ಅಂತಹ ತಪಿತಸ್ಥರು ಯಾವುದಾದರೊಂದು ಪಕ್ಷಕ್ಕೆ ಸೇರಿರಬಹುದು. ಆ ಪಕ್ಷದವರು ತಮ್ಮ ಕಡೆಯವನನ್ನು ಬಿಡಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಎಲ್ಲ ಪಕ್ಷದವರ ವೋಟೂ ಅಧಿಕಾರಿಗಳಿಗೆ ಬೇಕಾಗಿರುವುದರಿಂದ ಅವರು ಶಿಕ್ಷೆಯನ್ನು ಕಡಮೆಮಾಡುವುದಕ್ಕಾಗಲಿ, ಕೆಲವು ವೇಳೆ ಶಿಕ್ಷೆಯೇ ಇಲ್ಲದೆ ಬಿಟ್ಟುಬಿಡುವುದಕ್ಕಾಗಲಿ ಪ್ರಯತ್ನಪಡುತ್ತಾರೆ. ಹೀಗಾಗಿ, ತಪಿತಸ್ಥರಿಗೆ ಮರಣದಂಡನೆಯಾಗಲಿ ದೇಶೋಚ್ಚಾಟನೆಯಾಗಲಿ ನ್ಯಾಯಸ್ಥಾನದಲ್ಲಿ ವಿಧಿಸಲ್ಪಟ್ಟಿದ್ದರೂ ಅಂಥವರು ಪ್ರಜಾರಾಜ್ಯದಲ್ಲಿ ನಿರ್ಭಯವಾಗಿ ಓಡಾಡುವುದು ಸಾಮಾನ್ಯವಾಗಿದೆಯೆಂದು ಪ್ಲೇಟೋ ಹೇಳುತ್ತಾನೆ. ಅಷ್ಟೇ ಏಕೆ, ಅಂಥವರು ತಮ್ಮ ದುರ್ನಡತೆಯ ವಿಷಯವಾಗಿ ನಾಚಿಕೊಂಡು ಗುಟ್ಟಾಗಿ ಅಡಗಿರುವುದಕ್ಕೆ ಪ್ರತಿಯಾಗಿ, ಜನಾಭಿಪ್ರಾಯದ ಅಥವಾ ತಮ್ಮ ಆತ್ಮಸಾಕ್ಷಿಯ ದೂಷಣೆ ಇಲ್ಲವೇ ಇಲ್ಲವೋ ಎಂಬಂತೆ ನಿರ್ಭಯವಾಗಿ, ವೀರಾಗ್ರಣಿಗಳಂತೆ ಧೈರ್ಯವಾಗಿ ಬಹಿರಂಗವಾಗಿ ಓಡಾಡುವುದೂ ಅಪರೂಪವಲ್ಲ. ಅಧಿಕಾರಿಗಳೇ ಆಗಲಿ ಸಾಮಾನ್ಯಜನರೇ ಆಗಲಿ ಈ ವಿಷಯದಲ್ಲಿ ಕಳವಳ ಹೊಂದಿದಂತೆ ಕಾಣಿಸುವುದಿಲ್ಲ–ಎನ್ನುತ್ತಾನೆ.

ಸ್ವತಂತ್ರಭಾರತದಲ್ಲೂ ಈ ಬಗೆಯ ಸುದ್ದಿಗಳು ಆಗಾಗ ಕಂಡು ಬಂದಿವೆ. ರಾಜಕೀಯಪಕ್ಷಗಳಿಗೆ ಸೇರಿ ಆ ಪಕ್ಷಗಳ ಕಾರ್ಯಕ್ರಮ ಸಾಧನೆಗೋಸ್ಕರವಾಗಿ ಕೆಲವರು ಶಾಸನೋಲ್ಲಂಘನೆ ಮಾಡಿರುವುದುಂಟು. ಹಿಂಸಾಕೃತ್ಯಗಳನ್ನು ಕೂಡ ಮಾಡಿರುವುದುಂಟು. ರೈಲುಗಳನ್ನು ಅಡ್ಡಗಟ್ಟಿ, ರೈಲು ಸ್ಟೇಷನ್ನುಗಳ ಮೇಲೆ ದಾಳಿ ನಡೆಸಿರುವುದುಂಟು. ರಾಜಬೀದಿಗಳಲ್ಲಿ ಓಡಾಡುವ 'ಟ್ರಾಂ' ಗಾಡಿಗಳನ್ನು ನಿಲ್ಲಿಸಿ ಅವುಗಳಿಗೆ ಬೆಂಕಿ ಹಚ್ಚಿದ್ದಾರೆ. ಆದರೂ ಕೂಡ ಅವರಿಗೆ ತಕ್ಕ ಶಿಕ್ಷೆಯಾಗಿಲ್ಲ. ಶಾಸನೋಕ್ತವಾದ ಶಿಕ್ಷೆಗಳನ್ನು ನ್ಯಾಯಸ್ಥಾನಗಳು ವಿಧಿಸಿ ತಪಿತಸ್ಥರನ್ನು ಕಾರಾಗೃಹಗಳಲ್ಲಿ ಸೇರಿಸಿದ್ದರೂ, ಅನೇಕವೇಳೆ ಅವರ ಅವಧಿ ಮುಗಿಯುವುದರೊಳಗೇ ಅಧಿಕಾರವರ್ಗದವರು ಅವರನ್ನು ರಾಜಕೀಯದೃಷ್ಟಿಯಿಂದ ಮನ್ನಿಸಿ ಬಿಟ್ಟಿರುವುದುಂಟು. ಹೀಗೆ ಪ್ರಜಾರಾಜ್ಯದಲ್ಲಿ ಪಕ್ಷಗಳ ಒತ್ತಡವೂ ಪೈಪೋಟಿಯೂ ಹೆಚ್ಚು ಪ್ರಭಾವ ಹೊಂದಿ ರಾಜ್ಯಾಡಳಿತದ ಬಿಗಿ ಸಿಡಿಲವಾಗುವ ಸಂಭವವಿದೆಯೆಂದು ಪ್ಲೇಟೋ ಹೇಳಿರುವುದರಲ್ಲಿ ಬಹುಮಟ್ಟಿಗೆ ಸತ್ಯಾಂಶವಿದೆಯೆನ್ನಬಹುದು. ವಿಶಾಲವಾದ ಸ್ವಂತ ಅನುಭವದ ಆಧಾರದ ಮೇಲೆಯೇ ಆತನು ಹಾಗೆ ಹೇಳಿರುವುದು. ಪ್ರಜಾರಾಜ್ಯಗಳಲ್ಲಿ ಸ್ವಾಭಾವಿಕವಾಗಿ ತಲೆದೋರುವ ಸಾಮಾಜಿಕ ಸಂಭವಗಳು ಇಂಥ ಪರಿಣಾಮವನ್ನುಂಟುಮಾಡುತ್ತವೆ. ಜನರ ಸ್ವಾತಂತ್ರ್ಯಪ್ರೇಮವು ಮಿತಿಮೀರಿದ್ದೇ ಇದಕ್ಕೆ ಮುಖ್ಯ ಕಾರಣ. ಸ್ವಾತಂತ್ರ್ಯಕ್ಕೂ

ಶಾಸನ ಬದ್ಧತೆಗೂ ನೇರವಾದ ವಿರೋಧವಿದೆ. ಆದರೆ, ಶಾಸನಕ್ಕೆ ಮಾರ್ಯಾದೆಯಿಲ್ಲದಿದ್ದರೆ ಸಮಾಜ ಜೀವನ ನಡೆಯುವುದೇ ಕಷ್ಟವಾಗುತ್ತದೆ. ಈ ಸಮಸ್ಯೆಯನ್ನು ಬಗೆಹರಿಸುವುದೇ ಪ್ರಜಾರಾಜ್ಯದ ರಾಜಕಾರಣಿಗಳ ಮುಂದಿರುವ ಮುಖ್ಯ ಕರ್ತವ್ಯ. ಶಿಕ್ಷೆಯ ಭಯದಿಂದಲ್ಲದಿದ್ದರೆ ಪ್ರಜಾಹಿತದೃಷ್ಟಿಯಿಂದಲಾದರೂ ಜನರು ಆತ್ಮನಿಗ್ರಹವನ್ನು ಕಲಿಯಬೇಕು. ಶಾಸನಕ್ಕೆ ಮರ್ಯಾದೆಯನ್ನು ಸಲ್ಲಿಸುವ ಅಭ್ಯಾಸಮಾಡಬೇಕು.

ಇಂಥ ಆತ್ಮನಿಗ್ರಹವು ಜನರ ಮನಸ್ಸಿನಲ್ಲಿ ರೂಢ ಮೂಲವಾಗಿ ನೆಲಸುವ ಹಾಗೆ ಮಡುವುದು ಸುಲಭ ಸಾಧ್ಯವಿಲ್ಲ. ಸ್ವಾತಂತ್ರ್ಯವೇ ಮುಖ್ಯ ಪ್ರವೃತ್ತಿಯಾದರೆ, ತಾತ್ಕಾಲಿಕವಾಗಿ ಕಷ್ಟವಾಗಿ ತೋರಿದರೂ ಪರ್ಯವಸಾನದಲ್ಲಿ ಶ್ರೇಯಸ್ಸುಂಟುಮಾಡುವ ಪದ್ಧತಿಗಳಿಗೆ ನಾಗರಿಕರು ಹೆಚ್ಚು ಬೆಲೆ ಕೊಡುವುದಿಲ್ಲ. ಬಾಲ್ಯದಲ್ಲಿ ಪ್ರಯೋಗಿಸಬೇಕಾದ ವಿದ್ಯಾಭ್ಯಾಸಕ್ರಮದ ಮಹತ್ತ್ವವು ಮಾನ್ಯವಾಗುವ ಸಂಭವವಿರುವುದಿಲ್ಲ.

ರಾಜಕಾರಣಿಗಳಲ್ಲಿ ಎರಡು ವಿಧ, ಒಂದು ಗುಂಪಿನವರು ಸ್ವಾರ್ಥಪರರು. ತಾತ್ಕಾಲಿಕ ಸಂದರ್ಭದಲ್ಲಿ ಜಯಪಡೆದು ಅಧಿಕಾರ ಸಂಪಾದನೆ ಮಾಡುವುದೋ, ಅಧಿಕಾರವನ್ನುಳಿಸಿಕೊಳ್ಳುವುದೋ ಮುಖ್ಯಸೂತ್ರವೆಂದು ತಿಳಿದವರೇ ಹೆಚ್ಚು ಜನ. ಇದಕ್ಕಾಗಿ ಜನಗಳ ಅಭಿಪ್ರಾಯವನ್ನೇ ಅನುಮೋದಿಸಿ ಜನರಂಜನೆಯ ಕಾರ್ಯಗಳಲ್ಲಿಯೇ ಮಗ್ನರಾಗಿರುತ್ತಾರೆ. ಆದರೆ, ಜನರಿಗೆ ತಾತ್ಕಾಲಿಕವಾಗಿ ಪ್ರಿಯವಾಗಿ ತೋರುವ ನೀತಿಗಳು ರಾಜ್ಯದ ಪುರೋಭಿವೃದ್ಧಿಗೆ ವಿರೋಧವಾಗುವ ಸಂದರ್ಭವಿರಬಹುದು. ಉದಾಹರಣೆಗೆ ಜರ್ಮನಿಯಲ್ಲಿ ಯೆಹೂದ್ಯ ಜನರ ಆಸ್ತಿ ಪಾಸ್ತಿಗಳನ್ನು ಅಪಹರಿಸಿ ಸರಕಾರಕ್ಕೆ ಸೇರಿಸಿ ಮಿಕ್ಕವರಿಗೆ ಹಂಚುವುದು ಜನಪ್ರಿಯವಾಗಿತ್ತು. ಯೆಹೂದ್ಯರಿಗೆ ಚಿತ್ರಹಿಂಸೆ ಕೊಟ್ಟು ಅವರನ್ನು ದೇಶದಿಂದ ಹೊರಗಟ್ಟಿಯೋ, ದೇಶದಲ್ಲಿಯೇ ಅವರನ್ನು ಕಾರಾಗೃಹದಲ್ಲಿ ಕೂಡಿಸಿಯೋ ಗೋಳು ಹೊಯ್ದುಕೊಳ್ಳುವುದೂ ಜನರಿಗೆ ಪ್ರಿಯವಾಗಿತ್ತು. ಈ ನೀತಿಯನ್ನು ಸರ್ವಾಧಿಕಾರಿ ಹಿಟ್ಲರನು ಮರ್ಮಭೇದಕವಾದ ಕ್ರೌರ್ಯದಿಂದ ಅನುಸರಿಸಿದನು. ಈ ಕಾರ್ಯಕ್ರಮದಿಂದ ತತ್ಕಾಲದಲ್ಲಿ ಜನರಂಜನೆಯಾದರೂ ಅದು ಅಂತ್ಯದಲ್ಲಿ ಜರ್ಮನಿ ದೇಶಕ್ಕೆ ಶ್ರೇಯಸ್ಸನ್ನು ತರಲಿಲ್ಲ. ಆ ಮಹಾರಾಜ್ಯದ ಅವನತಿಗೆ ಇದು ಬಹುಮಟ್ಟಿಗೆ ಕಾರಣವಾಯಿತು.

ಸ್ವಾತಂತ್ರ್ಯಪ್ರಿಯತೆಗೆ ಶ್ರೇಯೋಭಿವೃದ್ಧಿಯ ದೃಷ್ಟಿಯಿಂದ ಅಡ್ಡಿ ತಡೆಗಳು ಆವಶ್ಯಕ. ಇದನ್ನರಿತು ದೂರದೃಷ್ಟಿಯಿಂದ ರಾಜನೀತಿಯನ್ನು ನಿರೂಪಿಸಿ, ಅವರುಗಳ ವಿಷಯವಾಗಿ ಜನಸಮುದಾಯದಲ್ಲಿ ಮರ್ಯಾದೆಯನ್ನು ಬಲಪಡಿಸುವರೇ ಎರಡನೆಯ ಗುಂಪಿಗೆ ಸೇರಿದ ರಾಜಕಾರಣಿಗಳು, ಇವರು ರಾಷ್ಟ್ರ ನಿರ್ಮಾಪಕರು.

ಸ್ವಾತಂತ್ರ್ಯ ಪ್ರೇಮವಲ್ಲದೆ ಇದಕ್ಕೆ ಸಂಬಂಧಪಟ್ಟು ಇನ್ನೊಂದು ಮನೋವೃತ್ತಿಯೂ ಪ್ರಜಾರಾಜ್ಯದಲ್ಲಿ ಪ್ರಬಲವಾಗುತ್ತದೆ. ಇದು ಸಮಾನತೆ. ಎಲ್ಲ ನಾಗರಿಕರೂ ಸ್ವತಂತ್ರರಾದುದರಿಂದ ಎಲ್ಲರಿಗೂ ಸಮಾನವಾದ ಹಕ್ಕು

ಬಾಧ್ಯತೆಗಳುಂಟಾಗುವುದು ನ್ಯಾಯವೇ ಆಗಿದೆ. ಒಬ್ಬನ ಸ್ವಾತಂತ್ರ್ಯವು ಇನ್ನೊಬ್ಬನ ಸ್ವಾತಂತ್ರ್ಯವನ್ನು ಅಪಹರಿಸಬಾರದು. ಸ್ವಾತಂತ್ರ್ಯದ ಅಧಿಕಾರಕ್ಕೆ ಸ್ವಾಭಾವಿಕವಾಗಿ ಇರಬೇಕಾದ ಪರಿಮಿತಿ ಇದು. ಆದುದರಿಂದ ಸಮಾನತೆಯೂ ಕೂಡ ಪ್ರಜಾರಾಜ್ಯದಲ್ಲಿ ಶ್ರೇಷ್ಠಸ್ಥಾನವನ್ನು ಪಡೆದಿರುತ್ತದೆ.

ಸಮಾನತೆಯ ವಿಷಯದಲ್ಲಿಯೂ ಪ್ಲೇಟೊ ವ್ಯಂಗ್ಯಭಾಷೆಯಲ್ಲಿ ಖಂಡನೆಯಲ್ಲಿ ಸೂಚಿಸುತ್ತಾನೆ. ಜನರಲ್ಲಿ ವಿದ್ಯಾವಿನಯ ಸಂಪತ್ತಿಯ ದೃಷ್ಟಿಯಿಂದಲೂ ಗುಣಕ್ರಿಯಾ ಕೌಶಲಗಳ ದೃಷ್ಟಿಯಿಂದಲೂ ಎಷ್ಟೋ ಭೇದಗಳಿರುತ್ತವೆ. ಯಾವ ವಿಷಯದಲ್ಲಿಯೂ ಜನರಲ್ಲಿ ಸಮಾನತೆಯಿರುವುದು ದುರ್ಲಭ. ಆದರೂ ಕೂಡ ಪ್ರಜಾರಾಜ್ಯದಲ್ಲಿ ಸಮಾನತೆಗೆ ಅಪೂರ್ವವಾದ ದೊಡ್ಡಸ್ತಿಕೆ ಸಿಕ್ಕುತ್ತದೆ, ಸರಿಸಮಾನರೂ ಅಸಮಾನರೂ ಒಂದೇ ಸಮವಾದ ರೀತಿಯಲ್ಲಿ ಪರಿಗಣಿಸಲ್ಪಡುತ್ತಾರೆ. ಅಜ್ಞರೂ ಜ್ಞಾನಿಗಳೂ ಸಮಾನರೆಂದು ಎಣಿಸಲ್ಪಟ್ಟು ಅಜ್ಞರಿಗೆ ದೊಡ್ಡ ಪದವಿಗಳು ಸಲ್ಲುತ್ತವೆ. ಜ್ಞಾನಿಗಳಿಗೆ ಅವರ ವಿದ್ಯೆಗೆ ತಕ್ಕ ಅವಕಾಶವಿಲ್ಲದೆ ಸಾಮಾನ್ಯ ಸ್ಥಾನಗಳು ಸಿಕ್ಕುತ್ತವೆ. ಇದರಿಂದ ದೇಶಕ್ಕೆ ಆಗುವ ನಷ್ಟವು ಪ್ರಜಾಪ್ರಭುತುದವರಿಗೆ ಅಷ್ಟೇನು ಕೆಟ್ಟದೆಂದು ತೋರುವುದಿಲ್ಲ.

ಸ್ವಾತಂತ್ರ್ಯಪ್ರೇಮ, ಸಮಾನತೆಯ ಮೇಲಿನ ಶ್ರದ್ಧೆ–ಇವು ಉತ್ಕಟಾವಸ್ಥೆಯಲ್ಲಿರಲು, ಪ್ರಜಾರಾಜ್ಯದಲ್ಲಿ ಅವ್ಯವಸ್ಥೆ ಹೆಚ್ಚುತ್ತ ಬರುವ ರೀತಿಯನ್ನು ಪ್ಲೇಟೊ ನಿರೂಪಿಸುತ್ತಾನೆ:–

ಈ ಅವ್ಯವಸ್ಥೆಗಳಲ್ಲಿ ಮುಖ್ಯವಾದ್ದು, ಅನರ್ಹರಿಗೆ ಉಂಟಾಗುವ ಅಧಿಕಾರಪ್ರಾಪ್ತಿ. ಆಡಳಿತ ನಡೆಸುವುದಕ್ಕೆ ಅರ್ಹತೆಯಿರುವವರಿಗೆ ಪ್ರಭುತ್ವವರ್ಗದಲ್ಲಿ ಸ್ಥಾನ ಸಿಕ್ಕುವುದಿಲ್ಲ. ಅದಕ್ಕೆ ಅನರ್ಹರಾಗಿರುವವರೇ ಹೆಚ್ಚಾಗಿ, ಇತರ ಕಾರಣಗಳ ಬಲದಿಂದ, ಅಧಿಕಾರ ಸ್ಥಾನಗಳನ್ನು ಆಕ್ರಮಿಸುತ್ತಾರೆ. ಇದಕ್ಕಿಂತ ವಿಷಮವಾದ ಅವ್ಯವಸ್ಥೆಬೇರೊಂದಿಲ್ಲ. ಆದರೂ ಇಂಥ ವಿದ್ಯಾವಿಹೀನರಾದ ಅಯೋಗ್ಯರನ್ನೇ ಜನತೆಯು ಮರ್ಯಾದಿಸುವುದು ವಾಡಿಕೆಯಾಗಿ ಹೋಗುತ್ತದೆ. ಇದು ಸಮಾನತಾ ನೀತಿಯ ಪರಮಾವಧಿ.

ಇದು ಅನಾಯಕತ್ವಕ್ಕೆ ದಾರಿ. ಕ್ರಮೇಣ ಅನಾಯಕತ್ವವು ಜನ ಜೀವನದ ಎಲ್ಲ ರಂಗಗಳಿಗೂ ಹರಡುತ್ತದೆ. ಕುಟುಂಬ ಜೀವನವನ್ನು ಪ್ರವೇಶಿಸಿ, ಅಲ್ಲಿ ನೆಲಸಿರಬೇಕಾದ ಸಾತ್ವಿಕ ಸಾಮರಸ್ಯಕ್ಕೆ ಭಂಗತರುತ್ತದೆ. ತಂದೆತಾಯಿಗಳಿಗೂ ಮಕ್ಕಳಿಗೂ ವಿರಸ ತಲೆದೋರುತ್ತದೆ. ಮಕ್ಕಳು ದೊಡ್ಡವರಿಗೆ ಸಲ್ಲಿಸಬೇಕಾದ ಮರ್ಯಾದೆಯನ್ನು ಮರೆತು ಅವರೊಡನೆ ಸರಿಸಮಾನತೆಯನ್ನು ಅವಲಂಬಿಸುತ್ತಾರೆ. ದೊಡ್ಡವರು ಕಾಲಮಹಿಮೆಗೆ ತಲೆಬಾಗಿ ಚಿಕ್ಕವರ ಮನೋವೃತ್ತಿಗೆ ಹೊಂದಿಸಿಕೊಂಡು ಅವರೊಡನೆ ಅನ್ಯೋನ್ಯವಾಗಿರುವುದಕ್ಕೆ ಪ್ರಯತ್ನ ಪಡುತ್ತಾರೆ. ಯುವಕರ ಅಭಿಪ್ರಾಯಗಳನ್ನೇ ಅನುಮೋದಿಸುತ್ತ ಅವರ ಭಾಷೆಯ ಧೋರಣೆಯನ್ನೇ ಅನುಕರಣೆ ಮಾಡುತ್ತಾರೆ. ಅವರು ಕೂಡ ಯುವಕರಿಗೆ ಸಲ್ಲುವ ಹಾಸ್ಯಕುಚೋದ್ಯಗಳಲ್ಲಿ ಭಾಗಿಗಳಾಗುತ್ತಾರೆ. ಹಾಗೆ ಮಾಡದಿದ್ದರೆ ಮುಂದಿನ ತಲೆಮಾರಿನವರ ದೃಷ್ಟಿಯಲ್ಲಿ ಮೂದೇವಿಗಳಂತೆ

ತೋರಬೇಕಾಗುವುದು. ಇದನ್ನು ಸಹಿಸದೆ ತಮಗೆ ಸಹಜವಾದ ಅಧಿಕಾರ ವಾಣಿಯನ್ನು ಮರೆತು ಯುವಕರ ಮನೋವಾತಾವರಣದಲ್ಲಿ ತಲ್ಲೀನರಾಗಿಹೋಗುವುದಕ್ಕೆ ಪ್ರಯತ್ನ ಪಡುತ್ತಾರೆ.

ಹೀಗೆಯೇ ವಿದ್ಯಾನಿಲಯುಗಳಲ್ಲಿಯೂ ಕಾಲಕ್ರಮದಲ್ಲಿ ಅವ್ಯವಸ್ಥೆ ತಲೆದೋರುತ್ತದೆ. ಗುರುಸ್ಥಾನದಲ್ಲಿರುವ ಅಧ್ಯಾಪಕರು ಹೊಸಕಾಲದ ಮರ್ಮವನ್ನರಿತು, ತಮ್ಮ ವಿದ್ಯಾರ್ಥಿಗಳ ವಿಷಯದಲ್ಲಿ ಭಯಗ್ರಸ್ತರಾಗುತ್ತಾರೆ. ತಮ್ಮ ವಿದ್ಯಾರ್ಥಿವೃಂದದವರನ್ನೇ ಹೊಗಳುವುದಕ್ಕೆ ಪ್ರಾರಂಭಿಸುತ್ತಾರೆ. ವಿದ್ಯಾರ್ಥಿಗಳಾದರೋ ತಮ್ಮ ಗುರುಗಳನ್ನು ಹಿಂದಿನ ಕಾಲದ ಮರ್ಯಾದೆಯಿಂದ ಕಾಣುವುದನ್ನು ಕ್ರಮೇಣ ಮರೆಯುತ್ತ ಬರುತ್ತಾರೆ. ಅವರನ್ನು ಅವಹೇಳನ ಮಾಡುವುದಕ್ಕೂ ಹೇಸುವುದಿಲ್ಲ. ವಿದ್ಯಾರ್ಥಿಗಳು ಸ್ವಾತಂತ್ರ್ಯ ಸಮಾನತೆಗಳ ಹೊಸ ಹುರುಪಿನಲ್ಲಿ ವಿದ್ಯಾರ್ಜನೆಗೆ ಅವಶ್ಯಕವಾದ ವಿನಯವನ್ನೂ ಇಂದ್ರಿಯನಿಗ್ರಹವನ್ನೂ ಗುರುಭಕ್ತಿಯನ್ನೂ ತ್ಯಜಿಸುತ್ತಾರೆ. ಅಲ್ಲದೆ, ಇವೆಲ್ಲ ಮೂಢಭಕ್ತಿಯ ಕಾಲದ ನಿರರ್ಥಕವಾದ ಕಂದಾಚಾರಗಳೆಂದೂ ವಾದ ಮಾಡುತ್ತಾರೆ.

ಹಿಂದೆ ಯಾವಯಾವ ಕಟ್ಟಳೆಗಳಿಗೆ ಸನ್ಮಾನವಿದ್ದಿತೋ ಅವೆಲ್ಲ ತೀಕ್ಷ್ಣವಾದ ಖಂಡನೆಗೆ ಗುರಿಯಾಗುತ್ತವೆ. ಸಂಪ್ರದಾಯದ ಕಟ್ಟುಗಳು ಸಡಿಲವಾಗುವ ಕಾಲದಲ್ಲಿ ಈರೀತಿಯ ಬುದ್ಧಿಸ್ವಾತಂತ್ರ್ಯವು ಸ್ವೇಚ್ಛಾಪ್ರವೃತ್ತಿಯೂ ತಲೆದೋರುವುವು. ಪ್ಲೇಟೋ ಈ ಬಗೆಯ ಸಂದರ್ಭವನ್ನು ಹೃದಯಂಗಮವಾಗಿ ವರ್ಣನೆ ಮಾಡುತ್ತಾನೆ.

ಈಗ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಈ ತೆರನಾದ ಮಾನಸಿಕ ವಾತಾವರಣವೇ ಪ್ರಬಲವಾಗಿದೆ. ಆದುದರಿಂದ ಪ್ಲೇಟೋವಿನ ಖಂಡನಾ ಲಹರಿಯು ನಮಗೇನು ಅಷ್ಟು ಹೊಸದೂ ಆಶ್ಚರ್ಯಕರವೂ ಆಗಿ ತೋರುವುದಿಲ್ಲ, ಆಶ್ಚರ್ಯವೇನೆಂದರೆ; ಅಷ್ಟು ಹಿಂದಿನ ಕಾಲದಲ್ಲಿಯೇ ಈಗಿನ ನವೀನ ನಾಗರಿಕತೆಯ ಕಾಲದಲ್ಲಿ ಕಾಣಬರುತ್ತಿರುವ ಮನೋವೃತ್ತಿಗಳೂ ವಿಚಾರಲಹರಿಗಳೂ ಏಥೆನ್ಸ್ ಮೊದಲಾದ ಗ್ರೀಕ್ ನಗರಗಳಲ್ಲಿ ಉದ್ಭವವಾದದ್ದು ಮತ್ತು ಪ್ಲೇಟೋವಿನಂತಹ ವಿಚಾರಕರು ಅಷ್ಟು ಸೂಕ್ಷ್ಮದೃಷ್ಟಿಯಿಂದ ಈ ಮಾನಸಿಕ ವಾತಾವರಣವನ್ನು ಚಿತ್ರಿಸಿರುವುದು.

ಪಾಶ್ಚಾತ್ಯರಲ್ಲಿ ಮೊನ್ನೆಮೊನ್ನೆಯ ತನಕ ಗುಲಾಮಗಿರಿಯ ಪದ್ಧತಿಯಿತ್ತು. ಬ್ರಿಟಿಷ್ ವಲಸೆಗಳಲ್ಲಿ ಈ ತುಚ್ಛ ಪದ್ಧತಿಯನ್ನು ೧೮ನೆಯ ಶತಮಾನದಲ್ಲಿ ಕೊನೆಗಾಣಿಸಿದರು. ೧೯ನೆಯ ಶತಮಾನದಲ್ಲಿ ರಷ್ಯದಲ್ಲಿ 'ಸರ್ಫ್‌ಡಂ' ಎಂಬ ಜೀತಗಾರಿಕೆಯ ವ್ಯವಸ್ಥೆ ನಿಂತುಹೋಯಿತು. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ನೀಗ್ರೋ ಗುಲಾಮಗಿರಿಯನ್ನು ತಪ್ಪಿಸಲು ಒಂದು ದೊಡ್ಡ ಒಳಯುದ್ಧವೇ ನಡೆಯಬೇಕಾಯಿತು. ಕಳೆದ ಶತಮಾನದ ಮಧ್ಯದಲ್ಲಿ ಇದು ನಡೆದು ಈ ಪದ್ಧತಿಯ ಶಾಸನದೆದುರು ರದ್ದು ಹೊಂದಿತು. ಆದರೆ ಇದರ ಹಿಂದಿದ್ದ ಮನೋಭಾವವು ಬಹುಕಾಲ ಪ್ರಬಲವಾಗಿಯೇ ಉಳಿಯಿತು; ಇನ್ನೂ ಅಳಿದುಹೋಗಿಲ್ಲ. ಈಚಿನ

ಮಹಾಯುದ್ಧಗಳ ತರುವಾಯ ಪರಿಸ್ಥಿತಿ ನೀಗ್ರೋಜನರಿಗೆ ಸ್ವಲ್ಪ ಅನುಕೂಲವಾಗುತ್ತ ಬಂದಿದೆ.

ಪ್ಲೇಟೋವಿನ ದೃಷ್ಟಿಯಲ್ಲಿ ಗುಲಾಮರಿಗೂ ಅವರ ಯಜಮಾನರಿಗೂ ಕೂಡ ಸಮಾನತೆಯ ಪ್ರಭಾವವು ಹರಡುವುದು ಅರಾಜಕತೆಯ ಸೂಚನೆ. ಅವನ ಶಿಷ್ಯನಾಗಿದ್ದು, ಮ್ಯಾಸಿಡೋನಿಯದ ರಾಜನಾದ ಪ್ರಖ್ಯಾತ ಅಲೆಕ್ಸಾಂಡರನಿಗೆ ವಿದ್ಯಾಗುರುವೂ ಆಗಿದ್ದ ಅರಿಸ್ಟಾಟಲ್ ಕೂಡ ಗುಲಾಮಗಿರಿಯ ಪದ್ಧತಿಯನ್ನು ಅನುಮೋದಿಸಿದ್ದನು. ದಾಸರಿಲ್ಲದಿದ್ದರೆ ಸಮಾಜದ ಕೆಲಸ ಹೇಗೆ ನಡೆದೀತು ಎಂಬ ಶಂಕೆ ಅವರನ್ನು ಬಾಧಿಸಿತ್ತು. ಗುಲಾಮರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ; ಅವರು ಒಂದು ಬಗೆಯ ಮೂಕಪ್ರಾಣಿಗಳಂತೆ–ಎಂಬುದೇ ಅರಿಸ್ಟಾಟಲಿನ ಅಭಿಪ್ರಾಯ. ನಮ್ಮಲ್ಲಿ ಕೂಡ ಗುಲಾಮರಲ್ಲದಿದ್ದರೂ ಸಮಾಜದ ಕಷ್ಟ ಕೆಲಸಗಳನ್ನು ಮಾಡುವುದಕ್ಕೆ ವಿದ್ಯಾವಿಹೀನರಾದ ಜನಸಾಮಾನ್ಯರು ಅವಶ್ಯಕವೆಂಬ ಅಭಿಪ್ರಾಯ ರೂಢಮೂಲವಾಗಿದೆ. ಎಲ್ಲರೂ ಪಲ್ಲಕ್ಕಿಯಲ್ಲಿ ಕೂರಬೇಕೆಂದು ಹಟಮಾಡಿದರೆ, ಅದನ್ನು ಹೊರುವವರು ಯಾರು? ಎಲ್ಲರೂ ವಿದ್ಯಾವಂತರಾದರೆ ಬೀದಿ ಗುಡಿಸುವರಾರು; ಈ ಪ್ರಶ್ನೆಗಳಿಗೆ ಈಗಲೂ ಕೂಡ ಸಮಂಜಸವಾದ ಉತ್ತರ ದೊರೆತಿಲ್ಲ; ಅಂತೂ, ಪ್ರಜಾರಾಜ್ಯದಲ್ಲಿ ಸ್ವಾತಂತ್ರ್ಯಭಾವನೆಯ ಫಲವಾಗಿ, ಸಮಾನತೆಯ ಆಕರ್ಷಣೆಯ ಪರಿಣಾಮವಾಗಿ, ಸಮಾಜದ ವ್ಯವಸ್ಥೆಗಳೆಲ್ಲ ಸಡಿಲವಾಗುತ್ತ ಬರುತ್ತವೆ. ಸಮಾಜ ತಲೆಕೆಳಕಾಗಿ ಕಲಕಿ ಹೋಗುತ್ತದೆ–ಎಂದಂತಾಯಿತು.

ಗುಲಾಮರೂ ಕೆಲಸಗಾರ ವರ್ಗದವರೂ ಮೇಲೇಳುವಂತೆಯೇ ಸ್ತ್ರೀಪುರುಷರಿಗಿರಬೇಕಾದ ಅಂತರವೂ ಮಾಯವಾಗುತ್ತ ಬರುತ್ತದೆ. ಸ್ತ್ರೀಯರೂ ಸಮಾನ ಸ್ವಾತಂತ್ರ್ಯವನ್ನು ಬಯಸುತ್ತಾರೆ. ತಮ್ಮ ಪರಾಧೀನಸ್ಥಾನವನ್ನು ತಿರಸ್ಕರಿಸಿ ಸಮಾಜದ ಎಲ್ಲ ರಂಗಗಳನ್ನೂ ಪ್ರವೇಶಿಸುತ್ತಾರೆ. ಇದರಿಂದ ಕುಟುಂಬ ಜೀವನವು ಸಡಿಲವಾಗುತ್ತದೆ. ಸಮಾಜದಲ್ಲಿ ಶ್ರೀಲಸಂಪ್ರದಾಯಗಳು ಕ್ಷೀಣದೆಸೆಗೆ ಬರುತ್ತವೆ. ಹೆಂಗಸರೂ ಗಂಡಸರಂತೆ ಸ್ವೇಚ್ಛಾಪ್ರವೃತ್ತಿಯ ಮನೋಹರತ್ವಕ್ಕೆ ಮನಸೋಲುತ್ತಾರೆ.

ಪ್ರಜಾರಾಜ್ಯದ ತೊಡುಕುಗಳನ್ನು ಹೇಳುವ ಸಂದರ್ಭದಲ್ಲಿ ಸ್ತ್ರೀಪುರುಷರಿಗೆ ಸಮಾನತೆಯನ್ನು ಖಂಡಿಸಿದರೂ, ಮುಂದೆ 'ಆದರ್ಶ ರಾಜ್ಯ'ದ ಪ್ರಭುತ್ವವರ್ಗದವರ ವಿಷಯವಾಗಿ ಪರ್ಯಾಲೋಚನೆ ಮಾಡುವಾಗ ಸ್ತ್ರೀಯರಿಗೂ ಪುರುಷರೊಡನೆ ಸಮಾನಸ್ಥಾನವನ್ನು ಕೊಡುತ್ತಾನೆ. ಅವರಿಗೆ ವಿದ್ಯಾಭ್ಯಾಸದಲ್ಲಿಯೂ ಆಡಳಿತದಲ್ಲಿಯೂ ಸಮಾನಸ್ಥಾನವನ್ನು ಅನುಮೋದಿಸುತ್ತಾನೆ.

ಹೀಗೆ ಪ್ರಜಾರಾಜ್ಯದಲ್ಲಿ ಸ್ವಾತಂತ್ರ್ಯಸಮಾನತೆಗಳು ತಾಂಡವವಾಡುತ್ತವೆ. ನಾಗರಿಕರಿಗೂ ಬಡಗಿ ಕಮ್ಮಾರ ಮುಂತಾದ ಕಾಮಾಟಗಳಿಗೂ ಇರುವ ಭೇದ ಕೂಡ ದೂರವಾಗುತ್ತದೆ. ಎಲ್ಲರಿಗೂ ಸಮಾನ ಹಕ್ಕುಗಳು ದೊರಕುತ್ತವೆ.

ಇನ್ನೂ ಅಪಾಯಕರವಾದದ್ದೇನೆಂದರೆ–ದೇಶಸ್ಥರಿಗೂ ವಿದೇಶಿಗಳಿಗೂ

ಸಮಾನತೆ. ರಾಜ್ಯವು ಬಹುಕಾಲ ಬಾಳಿ ಉನ್ನತಸ್ಥಿತಿಗೆ ಬರುತ್ತ, ನಾಗರಿಕರ ನಿತ್ಯಜೀವನದ ಪುರೋಭಿವೃದ್ಧಿಗೆ ಬೇಕಾದ ಅವಕಾಶಗಳನ್ನು ಕಲ್ಪಿಸುತ್ತ ಸಾರ್ಥಕ್ಯಹೊಂದಬೇಕಾದರೆ, ಜನರಲ್ಲಿ ದೇಶಪ್ರೇಮವಿರಬೇಕು. ರಾಜ್ಯದ ಪ್ರಜೆಗಳಲ್ಲಿ ಒಮ್ಮನಸ್ಸು ಏರ್ಪಡಬೇಕು. ರಾಜ್ಯದ ಕಾರ್ಯರಂಗಗಳಲ್ಲಿ ಸಾಮರಸ್ಯವಿರಬೇಕಾದರೆ ನಾಗರಿಕರ ಮನಸ್ಸಿನಲ್ಲಿ ಭಾವನಾಸಾಮರಸ್ಯವಿರಬೇಕು. ಇದು ಸಾಮಾಜಿಕರ ಹೃದಯದಲ್ಲಿ ರೂಢಮೂಲವಾಗಿರಬೇಕು. ಆದುದರಿಂದ, ದೇಶಸ್ಥರಿಗೂ ವಿದೇಶಿಗಳಿಗೂ ವ್ಯವಹಾರದಲ್ಲಿ ಸ್ವಲ್ಪ ಅಂತರವಿರಬೇಕಾಗಿದೆ. ಸ್ವದೇಶಿಗಳಿಗೆ ಸಲ್ಲುವ ಹಕ್ಕುಬಾಧ್ಯತೆಗಳಿಗೆ ವಿದೇಶಿಗಳು ಅರ್ಹರಾಗುವುದಿಲ್ಲ. ವಿದೇಶಿಗಳು ವ್ಯಾಪಾರಕ್ಕೋ ವಿಹಾರಕ್ಕೋ ವಿದ್ಯಾಭ್ಯಾಸಕ್ಕೋ ಯಾವುದಾದರೂ ಒಂದು ವಿದ್ಯೆಯಲ್ಲಿ ಪ್ರವೀಣರಾಗಿ ಅದರ ಬೋಧನೆಯ ಮೂಲಕ ಜೀವನ ನಡೆಸಿಕೊಳ್ಳುವುದಕ್ಕಾಗಿಯೋ ಬಂದು ನೆಲಸಿರಬಹುದು. ಪ್ರಜಾರಾಜ್ಯದಲ್ಲಿ ಜನರು ಹಾಗೆ ನೆಲಸಿರುವ ವಿದೇಶಿಗಳ ಸಹಾಯವನ್ನು ಪಡೆದು ತಮ್ಮ ಅಥವಾ ತಮ್ಮ ಪಕ್ಷದ ಸ್ವಾರ್ಥವನ್ನು ನೆರವೇರಿಸಿಕೊಳ್ಳಬಹುದು. ಹೀಗೆ ಮಾಡುವುದಾದರೆ । ರಾಜ್ಯದಲ್ಲಿ ವಿದೇಶಿಗಳ ಕೈವಾಡ ಮೊದಲಾಗುತ್ತದೆ. ಸಂದರ್ಭಾನುಸಾರ ಇದು ದೇಶಕ್ಕೆ ಹಾನಿಯನ್ನು ತಂದೊಡ್ಡುತ್ತದೆ.

ಜರ್ಮನರ ವಲಸೆಯಿದ್ದ ಜೆಕೋಸ್ಲೊವಾಕಿಯಾ ದೇಶವು ಕಳೆದ ಯುದ್ಧದಲ್ಲಿ ಈ ರೀತಿಯಲ್ಲಿ ನಾಶಹೊಂದಿತು. ದಕ್ಷಿಣ ಅಮೆರಿಕ ಮತ್ತು ಸಂಯುಕ್ತ ಸಂಸ್ಥಾನಗಳಲ್ಲಿ ನೆಲಸಿದ್ದ ಜರ್ಮನರು ಯುದ್ಧಕಾಲದಲ್ಲಿ ಜರ್ಮನಿಗೆ ಸಹಾಯಕರಾಗಿ ಗುಟ್ಟಾಗಿ ಪಿತೂರಿ ನಡೆಸಿದರು. ಈಗ ಪ್ರಾಯಶಃ ಎಲ್ಲ ರಾಜ್ಯಗಳಲ್ಲಿಯೂ ಕಮ್ಯೂನಿಸ್ಟ್ ಪಕ್ಷಗಳಿವೆ. ಅವುಗಳೆಲ್ಲ ದೇಶೀಯರು ರಚಿಸಿರುವ ಪಕ್ಷಗಳೇ ಆದರೂ ಆ ಪಕ್ಷಗಳವರು ವಿದೇಶವಾದ ರಷ್ಯಕ್ಕೆ ಸಹಾಯಕರಾಗಿ ತಮ್ಮ ತಾಯಿನಾಡನ್ನು ವಿದೇಶದವರಿಗೆ ವಶಮಾಡಿಕೊಡುತ್ತಾರೆಂಬ ಅಪವಾದವಿದೆ. ಇದುಹೇಗಾದರೂ ಇರಲಿ, ದೇಶೀಯರಿಗೂ ದೇಶದಲ್ಲಿ ನೆಲಸಿರುವ ಪರದೇಶೀಯರಿಗೂ ಇರಬೇಕಾದ ಅಂತರವು ನಶಿಸಿಹೋಗಿ, ಅವರಿಗೂ ದೇಶದ ರಾಜಕೀಯದಲ್ಲಿ ಪ್ರವೇಶಿಸುವ ಅವಕಾಶ ಸಿಕ್ಕಿದಲ್ಲಿ ದೇಶಕ್ಕೆ ಹಾನಿಸಿದ್ಧ–ಎಂಬುದು ಪ್ಲೇಟೋವಿನ ಸೂಚನೆ. ಇದಕ್ಕೆ ಆತನ ಕಾಲದಲ್ಲಿಯೂ ನಮ್ಮ ಕಾಲದಲ್ಲಿಯೂ ಅನುಭವಸಿದ್ಧವಾದ ನಿದರ್ಶನಗಳು ಸಾಕಾದಷ್ಟಿವೆ. ಇಂತಹ ಸನ್ನಿವೇಶವು ಎಲ್ಲ ರೀತಿಯ ರಾಜ್ಯಪದ್ಧತಿಗಳಲ್ಲಿಯೂ ಹುಟ್ಟಬಹುದು. ಆದರೆ, ಪಕ್ಷಪ್ರತಿಪಕ್ಷಗಳ ವಿರೋಧವೂ ತಾತ್ಕಾಲಿಕ ಸ್ವಾರ್ಥಗಳೂ ಪ್ರಬಲವಾಗಿರುವ ಪ್ರಜಾರಾಜ್ಯಪದ್ಧತಿಯಲ್ಲಿ ಇಂಥ ಸಂದರ್ಭಗಳಿಗೆ ಹೆಚ್ಚು ಅವಕಾಶವಿರುವುದೆಂಬುದು ಪ್ಲೇಟೋವಿನ ಅಭಿಪ್ರಾಯ.

ಪ್ರತಿಯೊಂದು ರಾಜ್ಯಕ್ರಮವೂ ಅದಕ್ಕೆ ಅನುಗುಣವಾದ ಮನೋಧರ್ಮವನ್ನು ಬಲಪಡಿಸುತ್ತದೆ. ಕ್ಷತ್ರಿಯ ರಾಜ್ಯದಲ್ಲಿ ಕ್ಷಾತ್ರಧರ್ಮಕ್ಕೆ ಪ್ರೋತ್ಸಾಹ ಸಿಕ್ಕಿ ಅದು ಜನಜೀವನದಲ್ಲಿ ಮಾನ್ಯ ಸ್ಥಾನವನ್ನು ಪಡೆಯುತ್ತದೆ. ವೈಶ್ಯರಾಜ್ಯದಲ್ಲಿ ದ್ರವ್ಯವೇ

ದೇವತೆ. ದ್ರವ್ಯಸಂಪಾದನೆಗೆ ಅನುಕೂಲವಾದ ಮನೋಧರ್ಮಗಳೇ ಮುಂದಕ್ಕೆ ಬರುತ್ತವೆ. ಹಾಗೆಯೇ ಪ್ರಜಾರಾಜ್ಯದಲ್ಲಿಯೂ ಒಂದು ವಿಶೇಷವಾದ ಮನೋವೃತ್ತಿ ರೂಪುಗೊಳ್ಳುತ್ತದೆ. ಹೀಗೆ ಮಾನಸಿಕ ವೃತ್ತಿ ಸಂಸ್ಕಾರಗಳಿಗೂ ರಾಜ್ಯಸಮಾಜಗಳ ಶಾಸನವ್ಯವಸ್ಥೆಗಳಿಗೂ ಒಂದು ಬಗೆಯ ಗೂಢವಾದ ಸಂಬಂಧವಿರುತ್ತದೆ. ಇದರ ವಿಷಯವಾಗಿ ಪ್ಲೇಟೋವಿನ ಅಭಿಪ್ರಾಯಗಳು ಮನನೀಯವಾಗಿವೆ.

ಜನರ ಮನಸ್ಸು ರಾಜ್ಯದ ರಚನೆಗೆ ಮೂಲ. ಮನಸ್ಸಿಗೂ ರಾಜ್ಯಕ್ಕೂ ನಿಕಟವಾದ ಸಂಬಂಧವಿರುತ್ತದೆ. ಮನಸ್ಸು ರಾಜ್ಯಾಂಗವನ್ನು ರೂಪಿಸುತ್ತದೆ. ರಾಜ್ಯಾಂಗವು ಮನಸ್ಸಿನಮೇಲೆ ಪ್ರಬಲವಾದ ಪರಿಣಾಮವುಂಟುಮಾಡುತ್ತದೆ. ಹೀಗೆ ಮನಸ್ಸು ರಾಜ್ಯಾಂಗಗಳು, ಪರಸ್ಪರ ಕಾರಣವೂ ಕಾರ್ಯವೂ ಆಗುತ್ತದೆ.

ಮನಸ್ಸು ಕನ್ನಡಿಯಂತೆ. ಅದರ ಮುಂದೆ ಬರುವ ವಿಷಯಗಳನ್ನು ಪ್ರತಿಬಿಂಬಿಸುವುದು ಅದರ ಸ್ವಭಾವ. ಪ್ರಜಾರಾಜ್ಯದಲ್ಲಿ ಅಭಿಪ್ರಾಯಗಳು ಸದಾ ಬದಲಾಯಿಸುತ್ತಿರುತ್ತವೆ. ಪಕ್ಷನಾಯಕರು ಹೊಸ ಹೊಸ ನೀತಿಗಳನ್ನು ಸಿದ್ಧಪಡಿಸಿ ತಮ್ಮ ಸ್ವಾರ್ಥವನ್ನು ನೆರವೇರಿಸಿಕೊಳ್ಳುತ್ತಾರೆ. ಈ ನೀತಿಗಳಲ್ಲಿ ರಾಜ್ಯದ ಯೋಗಕ್ಷೇಮವೂ ಅಲ್ಪ ಸ್ವಲ್ಪ ಸೇರಿರಬಹುದು. ಅಂತೂ ರಾಜ್ಯದ ಯೋಗಕ್ಷೇಮದ ಹೆಸರಿನಲ್ಲಿ ಹೊಸಹೊಸ ನೀತಿಗಳು ಜನರ ಮುಂದೆ ಬರುತ್ತವೆ. ಹೊಸಹೊಸ ಶಾಸನಗಳು ಜನರ ಮನಸ್ಸನ್ನು ಆಕರ್ಷಿಸುತ್ತವೆ. ಇದಕ್ಕೆ ಮೂಲಕಾರಣ ಪ್ರಜಾರಾಜ್ಯಕ್ಕೆ ಸಹಜವಾದ ಮನೋವೃತ್ತಿ. ಈ ಮನೋವೃತ್ತಿ ಎಂತಹುದು? ಸ್ವಾತಂತ್ರ್ಯ ಸಮಾನತೆಗಳ ಸಂಪಾದನೆಗೋಸ್ಕರ ಹೋರಾಟವಾಗಿ ಪ್ರಜಾರಾಜ್ಯಗಳೆಲ್ಲ ಬಹುಶಃ ಏರ್ಪಟ್ಟಿರುತ್ತವೆ. ಆದುದರಿಂದ ಈ ಹೋರಾಟದಲ್ಲಿ ಯಶಸ್ಸು ಪಡೆದು ಅಧಿಕಾರಕ್ಕೆ ಬಂದ ಜನಸಮುದಾಯವು ಸ್ವಾತಂತ್ರ್ಯ ಸಮಾನತೆಗಳಿಗೆ ಮನಸೋಲುವುದು ಆಶ್ಚರ್ಯವಲ್ಲ.

ಪ್ರಜಾರಾಜ್ಯದ ಮಾದರಿ ನಾಯಕನು. ಸ್ವಾತಂತ್ರ್ಯಪ್ರಿಯ. ಹಳೆಯ ಕಂದಾಚಾರಗಳನ್ನು ನಿರಾಕರಿಸುವವನು. ಹಳೆಯ ಶಾಸನ ಪದ್ಧತಿಗಳನ್ನು ನಿರಾಕರಿಸಿ ಸ್ವಾತಂತ್ರ್ಯ ಜೀವನದ ಸವಿಯನ್ನು ಅನುಭವಿಸುವವನು, ಇಂಥ ಮನಸ್ಸಿನಲ್ಲಿ ಎಲ್ಲ ಇಚ್ಛೆಗಳಿಗೂ ಒಂದೇ ಸಮನಾದ ಗೌರವಸ್ಥಾನವಿರುತ್ತದೆ. ಯಾವ ಇಷ್ಟವಸ್ತುವೂ ಅಧಿಕಾರ ಸ್ಥಾನದಲ್ಲಿರುವುದಿಲ್ಲ. ಇಂಥ ನಾಗರಿಕನು ತನ್ನ ಇಷ್ಟವಸ್ತುಗಳನ್ನು ಸ್ವೇಚ್ಛೆಯಿಂದ ಸಾಧಿಸಿಕೊಳ್ಳುತ್ತ ಹೋಗುತ್ತಾನೆ. ಇಷ್ಟಗಳು ಬದಲಾಯಿಸುತ್ತ ಹೋಗುತ್ತವೆ. ಇವು ಕೆಲವುಕಾಲ ಒಳ್ಳೆಯದಾಗಿ ಕಾಣುತ್ತವೆ; ಕೆಲವುಕಾಲ ಕೆಟ್ಟದಾಗಿ ತೋರುತ್ತವೆ. ಕೆಲವುಕಾಲ ಧನ ಆಕರ್ಷಿಸುತ್ತವೆ. ಒಂದುವೇಳೆ ಸಂಗೀತನೃತ್ಯಗಳು ಅವನಿಗೆ ಬೇಕಾಗುತ್ತವೆ. ಆಮೇಲೆ ಆಹಾರಪಾನಾದಿಗಳ ಸುಖ ತಲೆಯೆತ್ತುತ್ತದೆ. ಹಠಾತ್ತಾಗಿ ಇವೆಲ್ಲ ಹೋಗಿ ವ್ಯಾಯಾಮ ಕ್ಲುಪ್ತಾಹಾರಗಳ ಮೂಲಕ ಸಿದ್ಧಿಸುವ ದೇಹದಾರ್ಢ್ಯವು ಮುಖ್ಯ ಧ್ಯೇಯವಾಗಿ ಪರಿಣಮಿಸುತ್ತದೆ. ಜೀವನದಲ್ಲಿ ಯಾವ ಅರ್ಥ ಪ್ರಯೋಜನಗಳೂ ಅಗ್ರಸ್ಥಾನವನ್ನು ಪಡೆಯುವುದಿಲ್ಲ. ಚಿತ್ತವೃತ್ತಿಯ ಸಾಗರದ ಅಲೆಗಳಂತೆ ಮೇಲಿಂದ ಮೇಲೆ ಹರಿಯುತ್ತ ಯಾವ ನೆಲೆಯೂ ಇಲ್ಲದಂತೆ ಸತತವಾಗಿ ಚಲಿಸುತ್ತಿರುತ್ತದೆ.

ಎಲ್ಲ ಚಿತ್ತವೃತಿಗಳಿಗೂ ಸಮನ ಬೆಲೆ ಸಲ್ಲುತ್ತದೆ. ಅವುಗಳಲ್ಲಿ ಪ್ರತಿಯೊಂದು ಒಂದೊಂದು ಕಾಲದಲ್ಲಿ ಸರ್ವಾಧಿಕಾರ ನಡಸಿ ತತ್ಕಾಲದಲ್ಲಿ ಅವನ ಆತ್ಮವನ್ನು ಸಂಪೂರ್ಣವಾಗಿ ಆವರಿಸಿರುತ್ತದೆ. ಈ ಚಿತ್ತವೃತ್ತಿಗಳು ಸಮಾಜದ ವಾತಾವರಣಕ್ಕೆ ಬಹುಮಟ್ಟಿಗೆ ಅಧೀನವಾಗಿ ವರ್ತಿಸುತ್ತವೆ. ಹೀಗೆ ನಮ್ಮ ಪ್ರಜಾರಾಜ್ಯದ ನಾಗರಿಕನು ಇಂದ್ರಿಯ ಸುಖಗಳಲ್ಲಿ ಮಗ್ನನಾಗಿರುವಾಗ ಈ ವೃತ್ತಿಗೆ ತೀರ ವಿರೋಧವಾದ ಜೀವನಾದರ್ಶವು ಅವನ ಮುಂದೆ ಹರಿದರೆ, ಅದನ್ನು ಬಿಟ್ಟು ಹೊಸ ದಾರಿಯನ್ನು ಹಿಡಿಯುತ್ತಾನೆ. ಒಮ್ಮೆ ತತ್ತ್ವಜ್ಞಾನಿಗಳ ಮತ್ತು ಯೋಗಿಗಳ ಸಹವಾಸವನ್ನು ಸೇರುವನು. ಅದು ಬೇಸರವಾದಾಗಲೋ ಸಮಾಜದಲ್ಲಿ ಬೇರೆ ವಿಚಾರವಾಹಿನಿಗಳು ಪ್ರಬಲವಾದಾಗಲೋ ಅವನ ಲಕ್ಷ್ಯ ಮತ್ತೆ ಬದಲಾಯಿಸುತ್ತದೆ. ರಾಜಕೀಯ ವಾಹಿನಿಗಳು ಪ್ರಬಲವಾಗಿ ರಾಜಕೀಯ ಮುಖಂಡರು ಉನ್ನತಸ್ಥಿತಿಗೆ ಬರುವುದನ್ನು ಕಂಡು ತಾನೂ ರಾಜಕೀಯ ರಂಗಕ್ಕೆ ಇಳಿಯುತ್ತಾನೆ., ಈ ರಂಗದಲ್ಲಿ ಇತರರು ಘೋಷಿಸುತ್ತಿರುವ ಘೋಷಣೆಗಳನ್ನು ತಾನೂ ಘೋಷಿಸುತ್ತಾನೆ. ಅವರ ಸಭೆಗಳಲ್ಲಿಯೂ ಚರ್ಚೆಗಳಲ್ಲಿಯೂ ದ್ವೇಷಾಸೂಯೆಗಳಲ್ಲಿಯೂ ಕದನಗಳಲ್ಲಿಯೂ ಭಾಗವಹಿಸುತ್ತಾನೆ. ಆದರೆ ರಾಜಕೀಯವೇ ಅವನ ಮುಖ್ಯ ಗುರಿಯಾಗುವುದಿಲ್ಲ. ಪರಿಸ್ಥಿತಿ ಬದಲಾಯಿಸಿದರೆ ಅವನ ಆಶಯಗಳೂ ಬದಲಾಯಿಸುತ್ತವೆ. ದೇಶದಲ್ಲಿ ಯೋಧರೂ ವೀರರೂ ಮುಂದಕ್ಕೆ ಬಂದರೆ ಪುನಃ ಅವರಂತೆ ಜನಮನ್ನಣೆ ಪಡೆಯಬೇಕೆಂಬ ಹಂಬಲು ಪ್ರಜಾರಾಜ್ಯದ ಮಾದರಿ ನಾಗರಿಕನನ್ನು ಪೀಡಿಸುತ್ತದೆ. ಪುನಃ ಮೊದಲಿನಂತೆ ಧನಾರ್ಜನೆಗೆ ಅವನ ಮನಸ್ಸು ತಿರುಗಬಹುದು.

ಈ ರೀತಿಯಾಗಿ ಪ್ಲೇಟೋವಿನ ಜನತಂತ್ರ ಪದ್ಧತಿಗೆ ಅನುಗುಣವಾದ ಮನೋವೃತ್ತಿಯನ್ನು ಮರ್ಮಭೇದಕವಾಗಿ ವರ್ಣಿಸಿದ್ದಾನೆ. ಈ ಖಂಡನೆಯ ಮುಖ್ಯ ಸೂತ್ರವೇನೆಂದರೆ; ಸ್ವಾತಂತ್ರ್ಯವೇ ಜೀವನದ ಮುಖ್ಯನಿಯಮವೆಂದು ನಾವು ಅಂಗೀಕರಿಸಿ ಅದರ ಪ್ರಕಾರ ನಡೆದುಕೊಂಡುಬಂದರೆ, ನಮ್ಮ ಮನಸ್ಸಿನಲ್ಲಿ ಅಡಗಿರುವ ಎಲ್ಲ ಸ್ಥಾಯೀಭಾವಗಳಿಗೂ ಸಮಾನವಾದ ಅವಕಾಶವನ್ನು ಕೊಡಬೇಕಾಗುವುದು. ಮನಸ್ಸು ಒಂದು ಮುಖ್ಯ ನೆಲೆಯಲ್ಲಿ ನಿಲ್ಲದೆ, ವಿಷಯತರಂಗಗಳ ಮೇಲೆ ತೇಲಾಡಬೇಕಾಗುವುದು. ಹೀಗಾಗಿ ಜೀವನ ರಥವು ಅದನ್ನು ಎಳೆಯುವ ಅಶ್ವಗಳ ಸ್ವಾಧೀನವಾಗಿ ಹಳ್ಳಕ್ಕೋ ದಿಬ್ಬಕ್ಕೋ ಹರಿದು ನಷ್ಟವಾಗುವುದು.

ಕಠೋಪನಿಷತ್ತಿನಲ್ಲಿ ಈ ಸಾಮ್ಯವನ್ನು ಹೇಳಿದ್ದಾರೆ:

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥
ಇಂದ್ರಿಯಾಣಿಹಯಾನಾ ಹುಃ ವಿಷಯಾನ್ಸ್ತೇಷು ಗೋಚರಾನ್
ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ ॥
ಯಸ್ತ್ವವಿಜ್ಞಾನವಾನ್ ಭವತ್ಯಯುಕ್ತೇನ ಮನಸಾ ಸದಾ
ತಸ್ಯೇಂದ್ರಿಯಾಣ್ಯವಶ್ಯಾನಿ ದುಷ್ಟಾಶ್ವಾ ಇವ ಸಾರಥೇಃ ॥

ಯಸ್ತು ವಿಜ್ಞಾನವಾನ್ ಭವತ್ಯಾಕ್ತೇನ ಮನಸಾ ಸದಾ
ತಸ್ಯೇಂದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇಃ ॥

ಕಠೋಪನಿಷತ್, ಅಧ್ಯಾಯ ೩, ಶ್ಲೋಕ ೩.

ಪ್ಲೇಟೋ ಕೂಡ ತನ್ನ 'ಫೇಡ್ರಸ್' ಎಂಬ ಗ್ರಂಥದಲ್ಲಿ ಇದೇ ಸಾಮ್ಯವನ್ನ ಹೇಳುತ್ತಾನೆ. ಇವೆರಡು ಸಾಮ್ಯಗಳಿಗೂ ಕೊಂಚ ವ್ಯತ್ಯಾಸವಿದ್ದರೂ ಅವುಗಳ ಉದ್ದೇಶವೊಂದೇ. ಪ್ಲೇಟೋವಿನ ಪ್ರಕಾರ ಜೀವಾತ್ಮನೇ ಸಾರಥಿ, ದೇಹವೇ ರಥ. ಈ ರಥಕ್ಕೆ ಎರಡು ಕುದುರೆಗಳಿವೆ. ಒಂದು ಕುದುರೆ ಬಿಳಿಯದು ಚಟುವಟಿಕೆಯುಳ್ಳದ್ದು, ಶಕ್ತಿಶಾಲಿ, ವೇಗವಾಗಿ ಓಡತಕ್ಕ ಸ್ವಭಾವವುಳ್ಳದ್ದು. ಅದಕ್ಕೆ ಚಾವಟಿಯ ಸೋಂಕು ಬೇಕಾಗಿಲ್ಲ. ಸದಾ ಓಡುವುದೇ ಅದರ ಸ್ವಭಾವ; ಆತ್ಮಸಾರಥಿಯ ಇಂಗಿತಗಳಿಗೆ ಅನುಕೂಲವಾಗಿ ನಡೆಯುವ ಸ್ವಭಾವವುಳ್ಳದ್ದು. ಇದರ ಜೊತೆ ಇರುವ ಇನ್ನೊಂದರ ಗುಣವೇ ಬೇರೆ. ಇದು ಕರಿಯ ಬಣ್ಣವುಳ್ಳದ್ದು. ಇದರ ಕಣ್ಣು ರಕ್ತವರ್ಣ. ಇದು ಸೋಮಾರಿ, ನಿದ್ರೆಯಲ್ಲಿ ಆಸಕ್ತಿಯುಳ್ಳದ್ದು. ಇದನ್ನು ಸದಾ ಹೊಡೆದು ಹತೋಟಿಯಲ್ಲಿಟ್ಟುಕೊಳ್ಳಬೇಕಾಗಿದೆ. ಸಾರಥಿಯ ಮನಸ್ಸಿಗೆ ಇದು ಅನುಕೂಲವಾಗಿರುವುದಿಲ್ಲ. ಪ್ರತಿಕೂಲಪ್ರವೃತ್ತಿಯೇ ಇದರ ಸ್ವಭಾವದಲ್ಲಿ ಹೆಚ್ಚು. ಆದರೂ ಇದನ್ನು ಹತೋಟಿಗೆ ತರುವುದು ಸಾಧ್ಯ. ಹಾಗೆ ಇದನ್ನು ಸ್ವಾಧೀನ ಪಡಿಸಿಕೊಳ್ಳುವುದು ಕಷ್ಟವಾಗುತ್ತದೆ. ಅದಕ್ಕೆ ವಿಶೇಷ ಪ್ರಯತ್ನವೂ ಸತತವಾದ ಎಚ್ಚರಿಕೆಯೂ ಅಗತ್ಯ.

ಇಲ್ಲಿ ಭಾರತೀಯ ಸಂಸ್ಕೃತಿ ಪ್ರಪಂಚದಲ್ಲಿ ಪ್ರಸಿದ್ಧವಾಗಿರುವ ಸತ್ವ–ರಜಸ್–ತಮೋ ಗುಣಗಳ ಸೂಚನೆಯನ್ನು ಕಾಣಬಹುದು. ಒಂದು ಕುದುರೆ ರಜೋಗುಣ ಪ್ರಾಧಾನ್ಯವುಳ್ಳದ್ದು; ಇನ್ನೊಂದು ತಮೋಗುಣ ಪ್ರಬಲವಾದದ್ದು.

ಪ್ರಜಾತಂತ್ರಕ್ಕೆ ಅನುರೂಪನಾದ ವ್ಯಕ್ತಿಯ ಮನೋವೃತ್ತಿ ಸ್ವಭಾವಗಳನ್ನು ವರ್ಣಿಸುವುದನ್ನು ಗಮನಿಸಿದರೆ, ಆತನು ರಜೋಗುಣ ಪ್ರಧಾನನೆಂಬುದು ಪ್ಲೇಟೋವಿನ ಅಭಿಪ್ರಾಯವೆಂದು ಹೇಳಬಹುದು. ಸಾಮರಸ್ಯವಿಲ್ಲದ ಚಲನೆ, ಶಕ್ತಿಪ್ರದರ್ಶನ, ಶಾಂತಿನೆಲೆ ಸಿಗದ ವ್ಯಾಪಾರ, ಸುಖಾಸುಖಗಳ ಸಮಾನಪ್ರಭುತ್ವ–ಇವು ರಜೋಗುಣದ ಪರಿಣಾಮಗಳು.

ಪ್ರಜಾರಾಜ್ಯದಲ್ಲಿ ಪ್ರಭುತ್ವವು ನಿಯತವಾಗಿ ಸರ್ವಮಾನ್ಯವಾಗಿ ಯಾವ ವ್ಯಕ್ತಿವಂಶಗಳಿಗೂ ಮೀಸಲಾಗಿರುವುದಿಲ. ಯಾರು ಬೇಕಾದರೂ ಪ್ರಭುತ್ವವರ್ಗವನ್ನು ಸೇರಬಹುದು. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಎಂಥ ಬಡವನಾದರೂ ದೇಶದ ಅಗ್ರನಾಯಕ ಅಥವಾ ಅಧ್ಯಕ್ಷನಾಗಬಹುದು. ಎಂದರೆ, ಹೀಗೆ ಸಾಧಾರಣ ಮನುಷ್ಯನು ಪ್ರಭುತ್ವಸ್ಥಾನಕ್ಕೆ ಬರಬೇಕಾದರೆ ಸಾಮಾಜಿಕವಾದ ಇಲ್ಲವೆ ರಾಜಕೀಯವಾದ ಯಾವ ಅಡ್ಡಿಯೂ ಇರುವುದಿಲ್ಲ. ಅವನಿಗೆ ಜನಮೆಚ್ಚಿಕೆಯನ್ನು ಸಂಪಾದಿಸುವ ಶಕ್ತಿಯಿದ್ದು ಇತರ ಅನುಕೂಲತೆಗಳಿದ್ದರೆ ಸಾಕು. ದೇಶದ ಶಾಸನವು ಅಡ್ಡಿ ತರುವುದಿಲ್ಲ; ಜಾತಿ ಕುಲಗಳ ಅತಂಕವೇನೂ ಇರುವುದಿಲ್ಲ.

ಹೀಗಿರುವಲ್ಲಿ, ಜನರಲ್ಲಿ ಉತ್ಸಾಹಿಗಳು ಪಕ್ಷಗಳನ್ನು ಕಟ್ಟಿಕೊಂಡು ಜನರ ಬಹುಮತಗಳನ್ನು ಗಳಿಸಿ ಪ್ರಭುತ್ವವರ್ಗಕ್ಕೆ ಏರುತ್ತಾರೆ. ಈ ಉದ್ಯಮದಲ್ಲಿ ಅವರು ಪ್ರಜೆಗಳಿಗೆ ಬೇಕಾದುದನ್ನು ಸರಕಾರದ ಮೂಲಕ ಮಾಡಿಸಿಕೊಡುತ್ತೇವೆಂದು ಮಾತುಕೊಡುತ್ತಾರೆ; ಆಸೆಹುಟ್ಟಿಸುತ್ತಾರೆ. ನ್ಯಾಯವಾಗಿ ರಾಜ್ಯದ ಪುರೋಭಿವೃದ್ಧಿಗೆ ಅನುಕೂಲವಾಗುವ ಕಾರ್ಯಕ್ರಮಗಳು ಸುಲಭಸಾಧ್ಯವಾಗುವುದಿಲ್ಲ. ಅವು ಸಫಲವಾಗಬೇಕಾದರೆ ದೇಶದಲ್ಲಿ ಸರ್ವರೂ ಸಹಕರಿಸಬೇಕು, ಕಷ್ಟಪಡಬೇಕು. ಸರ್ವರೂ ತಮ್ಮ ವರ್ಗಭೇದಗಳನ್ನು ಮರೆತು ಪಕ್ಷಸಾಧನೆಗಳನ್ನು ಬದಿಗಿಟ್ಟು ಜನತೆಯ, ರಾಷ್ಟ್ರದ ಶಾಶ್ವತವಾದ ಹಿತವನ್ನು ಸಾಧಿಸುವುದರಲ್ಲಿ ಉತ್ಸಾಹ ತೋರಿಸಬೇಕು. ಹೀಗೆ ರಾಷ್ಟ್ರಹಿತವನ್ನು ಸೂಚಿಸಿ ಜನರಲ್ಲಿ ಸಾತ್ವಿಕ ಉತ್ಸಾಹವನ್ನು ಉದ್ಬೋಧಮಾಡಬೇಕಾದರೆ ನಾಯಕರಿಗೆ ದೂರದೃಷ್ಟಿಯಿರಬೇಕು, ಆತ್ಮನಿಗ್ರಹವಿರಬೇಕು. ಗಾಢವಾದ ದೇಶ ಪ್ರೇಮವಿರಬೇಕು, ಈ ಸದ್ಗುಣಗಳು ಬಹಳ ದುರ್ಲಭ.

ಆದುದರಿಂದ ಜನರ ತಾತ್ಕಾಲಿಕ ಆಶಯಗಳನ್ನು ನೆರವೇರೆಸುವೆವೆಂಬ ಆಶ್ವಾಸನವನ್ನು ಕೊಟ್ಟು, ವಿವಿಧಶ್ರೇಣಿಯ ಜನರಿಗೆ ಪರಸ್ಪರ ವಿರೋಧವಾದ ಕಾರ್ಯಕ್ರಮಗಳನ್ನು ಬೋಧಿಸಿ ಜನಮತವನ್ನು ಸಂಗ್ರಹಿಸುವುದು ಪ್ರಜಾನಾಯಕರಿಗೆ ಬಹು ಸುಲಭ. ಈ ತೆರನಾದ ನಾಯಕರೇ ಪ್ರಜಾರಾಜ್ಯದಲ್ಲಿ ಬಹುಮಂದಿ.

ಇವರ ಪ್ರಚಾರ ಮಾರ್ಗವನ್ನು ಪ್ಲೇಟೋ ಒಂದು ಸಮ್ಯದಿಂದ ವಿಶದಪಡಿಸುತ್ತಾನೆ. ಪ್ರಜಾನಾಯಕರು ಸಭೆಗಳಲ್ಲಿ ಜನಸ್ತೋಮವನ್ನು ಕುರಿತು ಮಾತಾಡುವಾಗ ಅವರಿಗೆ ಉದಾತ್ತ ತತ್ತ್ವಗಳನ್ನು ಬೋದಿಸುವುದಕ್ಕೆ ಬದಲಾಗಿ ಅವರಿಗೆ ತತ್ಕಾಲದಲ್ಲಿ ಪ್ರಿಯವಾದ ಅಭಿಪ್ರಾಯ ಕಾರ್ಯಕ್ರಮಗಳನ್ನೇ ರಾಷ್ಟ್ರಹಿತಕ್ಕೆ ಸಾಧನಗಳೆಂದು ಸಾರುತ್ತಾರೆ. ಅವರಿಗೆ ಬೇಕಾದ್ದು ಶಾಶ್ವತವಾದ, ಸರ್ವತೋಮುಖವಾದ, ಸರ್ವವರ್ಗದವರ ಅಂತಿಮ ಶ್ರೇಯಸ್ಸಲ್ಲ; ಕೇವಲ ಚುನಾವಣೆಯಲ್ಲಿ ಜಯ, ತಮ್ಮ ಪಕ್ಷದ ಗೆಲವು.

ಸಾಮ್ಯವೆಂದರೆ : ರಾಜ್ಯವೇ ಒಂದು ಮಹಾ ಬಲಿಷ್ಠವಾದ ಕಾಡುಪ್ರಾಣಿಯಂತೆ. ಪ್ರಜಾನಾಯಕರು ಅದರ ಇಂಗಿತವನ್ನರಿತು ಅದನ್ನು ಸ್ವಾಧೀನಪಡಿಸಿಕೊಂಡು ತಮ್ಮ ಸ್ವಾರ್ಥವನ್ನು ಸಂಪಾದಿಸಿಕೊಳ್ಳುವ ಸರ್ಕಸ್ಸಿನ ಸಾಹಸಿಗಳಂತೆ. ಸರ್ಕಸ್ಸಿನಲ್ಲಿ ಸಾಹಸಿಗಳು ಸಿಂಹ, ಹುಲಿ, ಆನೆಗಳನ್ನು ಪಳಗಿಸಿ ಅವುಗಳಿಂದ ಆಟ ಆಡಿಸಿ ತಮ್ಮ ಜೀವನವನ್ನು ನಡೆಸಿಕೊಳ್ಳುತ್ತಾರೆ. ಅದರಂತೆಯೇ ಪ್ರಜಾರಾಜ್ಯದ ಮುಖಂಡರು ಜನತೆಯೆಂಬ ಮಹಾಪ್ರಾಣಿಯನ್ನು ಪಳಗಿಸಿ ತಮ್ಮ ಸ್ವಾರ್ಥವನ್ನು ನೋಡಿಕೊಳ್ಳುತ್ತಾರೆ. ಅವರು ಈ ಕಾರ್ಯದಲ್ಲಿ ಬಹಳ ಚಾತುರ್ಯ ತೋರಿಸುತ್ತಾರೆ. ಪ್ರಾಣಿಯ ವಿಧವಿಧವಾದ ಕೂಗುಗಳ ಅರ್ಥವನ್ನು ಅವರು ಸೂಕ್ಷ್ಮವಾಗಿ ತಿಳಿದಿರುತ್ತಾರೆ, ಅದನ್ನು ಯಾವ ರೀತಿಯಲ್ಲಿ ಯಾವ ಶಬ್ದಪ್ರಯೋಗಗಳಿಂದ ಪ್ರಶಾಂತಗೊಳಿಸಬಹುದು ಇಲ್ಲವೇ ರೇಗಿಸಬಹುದು ಎಂಬುದನ್ನು ತಿಳಿದು ಆವಿದ್ಯೆಯಲ್ಲಿ ನಿಪುಣರಾಗಿರುತ್ತಾರೆ. ಪ್ರಾಣಿಗೆ ಯಾವುದು ರುಚಿಸುವುದೋ ಅದೇ ಒಳ್ಳೆಯದು, ಯಾವುದು ರುಚಿಸುವುದಿಲ್ಲವೋ

ಅದೇ ಕೆಟ್ಟದು. ವಾಸ್ತವವಾಗಿ ಪ್ರಾಣಿಗೆ ಅದರ ಸ್ವಭಾವಾನುಸಾರ ಹಿತವಾದ್ದು ಯಾವುದು, ಅಹಿತವಾದ್ದು ಯಾವುದು ಎಂಬುದನ್ನು ತಿಳಿಯುವುದು ಕಷ್ಟಸಾಧ್ಯ. ಇದಕ್ಕೆ ಶಾಸ್ತ್ರಾಭ್ಯಾಸ ಬೇಕಾಗುತ್ತದೆ. ಆದರೆ, ಅಂಥ ಶಾಸ್ತ್ರಸಮ್ಮತವಾದ ಪ್ರವೀಣತೆಯು ನಮ್ಮ ಪ್ರಜಾಮುಖಂಡರಿಗೆ ನಿಲುಕದ ವಸ್ತು. ಅವರಿಗಾದರೋ ಸುಲಭಸಾಧ್ಯವಾದ ಮಾರ್ಗ ಬೇಕಾಗಿದೆ.

ಜನತಂತ್ರದ ಮುಖಂಡರ ವಿಷಯವಾಗಿ ಈ ಸಾಮ್ಯವು ತೀಕ್ಷ್ಣವಾದ ಖಂಡನೆಯನ್ನು ಸೂಚಿಸುತ್ತದೆ, ಇದು ಪ್ಲೇಟೋವಿನ ಮನೋವೇದನೆಯನ್ನು ಹೊರಹೊಮ್ಮಿಸುತ್ತದೆ, ಅತನು ಕಂಡು ಕೇಳೀದ ಅನುಭವಗಳೆಲ್ಲ ಇದರಲ್ಲಿ ಮೂರ್ತಿಮತ್ತಾಗಿದೆ. ತನ್ನ ನಗರದಲ್ಲಿಯೇ ಈ ಸಾಮ್ಯದ ಸಾರವಾದ ತತ್ತ್ವ ಪ್ಲೇಟೋವಿನ ಅನುಭವಕ್ಕೆ ಬಂದಿತು. ಅಥೆನ್ಸ್ ನಗರವು ತನ್ನ ಪ್ರತಿಸ್ಪರ್ಧಿಯಾದ ಸ್ಪಾರ್ಟಾ ನಗರದ ಕೈಯಲ್ಲಿ ಸೋಲು ಹೊಂದಿದಮೇಲೆ ಅದರಲ್ಲಿ ಪ್ರಜಾರಾಜ್ಯದ ಸ್ಥಿತಿ ಮತ್ತೂ ಹದಗೆಟ್ಟಿತ್ತು. ಪ್ಲೇಟೋ ದೊಡ್ಡವಂಶಕ್ಕೆ ಸೇರಿದವನು. ಆಡಳಿತಕ್ಕೆ ಬಂದ ಪಕ್ಷದರವರಲ್ಲಿ ಅವನಿಗೆ ಬೇಕಾದವರು ಇದ್ದರು. ಆದರೂ ಅವರ ಮನೋಧರ್ಮ ಇವನಿಗೆ ಸರಿಬೀಳಲಿಲ್ಲ. ರಾಜಕೀಯ ರಂಗದಲ್ಲಿ ಭಾಗವಹಿಸಿ ಅದರಲ್ಲಿ ಏಳಿಗೆಗೆ ಬರುವ ಹಂಬಲನ್ನು ತ್ಯಜಿಸಿ ಪ್ಲೇಟೋ ತನ್ನ 'ಅಕಾಡೆಮಿ'ಯನ್ನು (ವಿದ್ಯಾನಿಲಯವನ್ನು) ಸ್ಥಾಪಿಸಿದನು. ಇದು ಸುಮಾರು ಒಂದುಸಾವಿರ ವರ್ಷಗಳವರೆಗೆ ಯೂರೋಪಿಗೆ ಗುರು ಸ್ಥಾನದಲ್ಲಿದ್ದು ಅಪಾರವಾಗಿ ಸಂಸ್ಕೃತಿ ಸೇವೆ ಸಲ್ಲಿಸಿತು.

ಪ್ರಜಾಮುಖಂಡರ ಮುಖ್ಯ ಆಶಯ ಜನಮತ ಸಂಪಾದನೆ; ಆ ಮೂಲಕ ಅಧಿಕಾರ ಸಂಪಾದನೆ. ಇಂಥ ಜನಮತ ಬೆಂಬಲ, ಅಧಿಕಾರ ಸ್ಥಾನಭದ್ರತೆ–ಇಷ್ಟಕ್ಕೆ ಬೇಕಾಗುವಷ್ಟು ಜನಹಿತ ಕಾರ್ಯಕ್ರಮ, ತತ್ವ ಅವರಿಗೆ ಸಾಕು.

ಈ ಪ್ರಜಾಮುಖಂಡರು ಅನೇಕ ವಿಧ ಮನೋಧರ್ಮಗಳುಳ್ಳ ಜನಸ್ತೋಮವನ್ನು ಅನುನಯ ಮಾಡುವುದರಲ್ಲಿ ನಿರಂತರವೂ ತೊಡಗಿರುತ್ತಾರೆ. ಎಲ್ಲ ಕ್ಷೇತ್ರಗಳಲ್ಲಿಯೂ ಜನಪ್ರಿಯತೆಯೇ ಅವರ ಭಾಗಕ್ಕೆ ಪ್ರಮಾಣವಾಗುತ್ತದೆ. ನೋಡಿದರೆ ಶ್ರೇಷ್ಠರು, ಶಿಷ್ಟರು, ಜ್ಞಾನಿಗಳು ಆಚರಿಸುವುದು ತತ್ತ್ವದೃಷ್ಟಿಯಿಂದ ಪ್ರಮಾಣ. ಪ್ರಜಾಮುಖಂಡರಿಗಾದರೋ ಪ್ರಜಾಸ್ತೊಮಕ್ಕೆ ಸಂತೋಷಜನಕವಾಗುವುದೇ ಪ್ರಮಾಣ. ಕಾವ್ಯವೇ ಆಗಲಿ, ಸಂಗೀತವೇ ಆಗಲಿ, ಆರ್ಥಿಕ ವ್ಯವಸ್ಥೆಯೇ ಆಗಲಿ, ರಾಜಕೀಯವೇ ಆಗಲಿ ಸಾಧಾರಣ ಜನರ ಅಭಿಪ್ರಾಯವೇ ಪ್ರಜಾಮುಖಂಡರಿಗೆ ಈ ವಿಷಯಗಳಲ್ಲಿ ಪ್ರಮಾಣವಾಗುತ್ತದೆ. ಈ ಮನೋವೃತ್ತಿಯುಳ್ಳವರಾಗಿ, ದೇಶಕ್ಕೆ ಶಾಶ್ವತವಾದ ಹಿತಸಾಧನೆಯ ಮಾರ್ಗವನ್ನು ಬಿಟ್ಟು ತಾತ್ಕಾಲಿಕವಾದ (ಪರ್ಯವಸಾನದಲ್ಲಿ ಅಪಾಯಕರವಾದರೂ ಚಿಂತೆಯಿಲ್ಲ) ಇಷ್ಟು ಸಾಧನೆಗಳಲ್ಲಿಯೇ ಅವರು ನಿರತರಾಗಿರುತ್ತಾರೆ. ಕುರುಡರು ಕುರುಡರನ್ನು ನಡೆಸಿಕೊಂಡು ಹೋಗಿ ದಾರಿತೋರಿಸುವಂತೆ ಅಜ್ಞರು ಅಜ್ಞರ ಪುರೋಭಿವೃದ್ಧಿಯ ಭಾರವನ್ನು ವಹಿಸುವುದು ಪ್ರಜಾರಾಜ್ಯಕ್ಕೆ ಸಹಜವಾದ ವ್ಯಾಪಾರ–ಇದು ಈ ಸಾಮ್ಯದ ಗೂಢಸೂಚನೆ.

ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಅರ್ಥಸಂಪತ್ತಿಯಿಂದ ವಿಕಸಿತವಾದ ತತ್ತ್ವಗಳೇ ಪ್ರಚುರವಾಗುವುದು ಜನತಂತ್ರಕ್ಕೆ ಸ್ವಭಾವ. ಜ್ಞಾನಸಂಪಾದನೆಯೇ ಪರಮಧ್ಯೇಯವೆಂದು ಭಾವಿಸಿ ಜೀವನಪಥವನ್ನು ನಡಸುವವರು ಜನರಾಜ್ಯದಲ್ಲಿ ವಿರಳ. ಎಲ್ಲೋ ನಾಲ್ಕಾರು ಮಂದಿ ತತ್ತ್ವಪ್ರೇಮಿಗಳಿದ್ದರೂ ಅವರಿಗೆ ಜನಮನ್ನಣೆ ಸಿಕ್ಕುವುದಿಲ್ಲ. ಜನತೆಯ ಪ್ರೀತಿಯನ್ನು ಗಳಿಸುವ ಕುಶಲತೆಯು ಅವರ ಪಾಲಿಗೆ ಬಂದಿರುವುದಿಲ್ಲ. ಅವರು ಮಳೆಗಾಳಿಗಳಿಗೆ ಸಿಕ್ಕದ ಜನರು ಬೀದಿ ಮನೆಯ ಸೂರಿನ ಕೆಳಗೆ ಗೋಡೆಗೆ ಒರಗಿಕೊಂಡು ನಿಂತು ಸಮಯ ಕಾಯುವಂತೆ ತಮ್ಮ ಜೀವಿತವನ್ನು ಉಪಾಯವಾಗಿ, ಜನತೆಯ ಕಣ್ಣಿಗೆ ಬೀಳದೆ ಸಾಗಹಾಕುವುದರಲ್ಲಿ ನಿರತರಾಗಿರುತ್ತಾರೆ.

ಈಗಿನ ಪ್ರಜಾಪ್ರಭುತ್ವ ಪದ್ಧತಿಗಳಲ್ಲಿಯೂ ಪ್ಲೇಟೋ ಖಂಡನೆ ಮಾಡುವ ನ್ಯೂನತೆಗಳು ಕಂಡುಬರುತ್ತವೆ, ಆದರೆ ಕಳೆದ ಇನ್ನೂರು ವರ್ಷಗಳಿಂದ ಪಾಶ್ಚಾತ್ಯರಲ್ಲಿ ಪ್ರಜಾಪ್ರಭುತ್ವವು ಪ್ರಚಲಿತವಾಗಿರುವ ರಾಷ್ಟ್ರಗಳು ಈ ದೋಷಗಳು ವಿಶೇಷ ಪ್ರಬಲಿಸದಿರುವಂತೆ ಕೆಲವು ಸಂಪ್ರದಾಯಗಳನ್ನು ಬೆಳೆಸಿಕೊಂಡಿವೆ.

ಇವುಗಳಲ್ಲಿ ಒಂದನ್ನು ಆಗಲೇ ಸೂಚಿಸಲಾಗಿದೆ, ಇದು ಪ್ರಜಾಪ್ರತಿನಿಧಿಪದ್ಧತಿ. ಈಗಿನ ಜನತಂತ್ರರಾಷ್ಟ್ರಗಳಲ್ಲಿ ಅಧಿಕಾರಕ್ಕೆ ಬರುವವರು ಚುನಾಯಿತರಾದ ಪ್ರತಿನಿಧಿಗಳು. ಜನಸಮುದಾಯವು ನೇರವಾಗಿ ಸಭೆಸೇರಿ ಕಾರ್ಯಭಾರ ಮಾಡುವುದಿಲ್ಲ. ಹಾಗೆ ಮಾಡುವುದಕ್ಕೆ ಈಗಿನ ರಾಷ್ಟ್ರಗಳ ಜನಬಾಹುಳ್ಯವೇ ಅಡ್ಡಿ. ಈಗಿನ ರಾಷ್ಟ್ರಗಳಲ್ಲಿ ಕೋಟ್ಯಂತರ ಜನಸಂಖ್ಯೆಯಿರುತ್ತದೆ. ಭಾರತದಲ್ಲಿ ಸುಮಾರು ೫೦,೦೦೦ದಿಂದ ೭೫,೦೦೦ ಜನಸಂಖ್ಯೆಯುಳ್ಳ ದೇಶವಿಭಾಗವು ಒಬ್ಬೊಬ್ಬ ಪ್ರತಿನಿಧಿಯನ್ನು ಆಯುತ್ತದೆ. ಈ ಒಂದೊಂದು ಚುನಾವಣಾ ಕ್ಷೇತ್ರವೂ ಕೂಡ ಗ್ರೀಸಿನ ನಗರರಾಷ್ಟ್ರಗಳನ್ನು ಮೀರಿಸಿದ್ದಾಗಿವೆ.

ಪ್ರಜಾಪ್ರತಿನಿಧಿಗಳು ಜನಸಾಮಾನ್ಯರಿಗಿಂತ ಹೆಚ್ಚು ಸಂಸ್ಕೃತರಾಗಿರುವುದಕ್ಕೆ ಅವಕಾಶವಿದೆ; ಹಾಗಿರುವ ಸಂಭವವಿದೆ. ಜನರು ನಿರಕ್ಷರಕುಕ್ಷಿಗಳಾದರೂ ಅನುಭವಸ್ಥರಾಗಿದ್ದು ಪ್ರತಿನಿಧಿಗಳಲ್ಲಿ ಯೋಗ್ಯರನ್ನು ಕಾರ್ಯನೀತಿಗಳಲ್ಲಿ ಶ್ರೇಷ್ಠವಾದದ್ದನ್ನು ಆಯುವುದಕ್ಕೆ ಅವಾಕಾಶ ವಿದೆ.

ಇದಲ್ಲದೆ ಆಯ್ಕೆಹೊಂದಿದ ಎಲ್ಲ ಪ್ರತಿನಿಧಿಗಳೂ ಪ್ರಭತ್ವಕ್ಕೆ ಬರುವುದಿಲ್ಲ. ಅವರಲ್ಲಿ ನಿರ್ವಿವಾದವಾಗಿ ಮುಖಂಡತನವನ್ನು ಗಳಿಸಿರುವ ಸಮರ್ಥರ ಗುಂಪು ಸರಕಾರವನ್ನು ರಚಿಸುತ್ತದೆ. ಇಂಥ ಸರ್ವಮಾನ್ಯ ಸ್ಥಾನಕ್ಕೆ ಬರಬೇಕಾದರೆ ಹತ್ತಾರು ವರ್ಷಗಳಿಂದ ಅವರು ದೇಶಸೇವೆಯಲ್ಲಿ ನಿರತರಾಗಿರಬೇಕು: ಸರ್ವಸಮ್ಮತವಾದ ನೀತಿಗಳನ್ನು ಜನತೆಯ ಮುಂದೆ ಮಂಡಿಸಿ ಮನಸ್ಸನ್ನು ಒಲಿಸಿಕೊಳ್ಳಲು ತಕ್ಕ ಬುದ್ಧಿವಂತಿಕೆಯನ್ನು ಪಡೆದಿರಬೇಕು.

ಪ್ರಭುತ್ವಕ್ಕೆ ಬಂದಮೇಲೆ ಸದಾಕಾಲವೂ ಸರ್ಕಾರದವರು ಪ್ರತಿ ಕಕ್ಷಿಗಳ ಕಣ್ಣುಮುಂದೆ ಕೆಲಸಮಾಡುತ್ತಿರಬೇಕು. ಲೋಕಸಭೆಯಲ್ಲಿ ಯಾವಾಗಲೂ ಪ್ರಶ್ನೆಗಳಿಗೆ

ಉತ್ತರ ಕೊಡಲು ಸಿದ್ಧರಾಗಿರಬೇಕು. ಹೀಗೆ ಪ್ರತಿಕಕ್ಷಿಗಳಿಗೆ ಸರಿಯಾದ ಉತ್ತರ ಕೊಡಲು ಅಸಮರ್ಥರಾದರೆ, ಪುನಃ ಚುನಾವಣೆಗಳಾಗಿ ಪ್ರಭುತ್ವದವರು ತಮ್ಮ ಅಧಿಕಾರವನ್ನು ಕಳೆದುಕೊಳ್ಳುವ ಸಂಭವವಿದೆ. ಈ ಭೀತಿಯೇ ಅವರನ್ನು ಸರಿಯಾದ ಮಾರ್ಗದಲ್ಲಿ ನಡಸಲು ಸಹಾಯವಾಗುತ್ತದೆ.

ಎಲ್ಲಕ್ಕಿಂತ ಮೇಲಾಗಿ ಈಗಿನ ಪ್ರಜಾರಾಜ್ಯಗಳಲ್ಲಿ ಶಾಸನದ ಮಹತ್ವವನ್ನು ರಾಷ್ಟ್ರದ ಅಡಿಗಲ್ಲಾಗಿ ಮಾಡಿದ್ದಾರೆ. ರಾಷ್ಟ್ರವನ್ನಾಳುವುದು ಶಾಸನ; ಮಂತ್ರಿಗಳಲ್ಲ. ಶಾಸನದ ಆಳ್ವಿಕೆಯನ್ನು ದಿನಚರಿಯಲ್ಲಿ ರೂಪುಗೊಳಿಸುವುದೇ ಈಗಿನ ಪ್ರಜಾರಾಜ್ಯದ ಸರ್ವೋತ್ಕೃಷ್ಟ ಸೂತ್ರವಾಗಿದೆ. ಶಾಸನಗಳಲ್ಲಿ ಮುಖ್ಯವಾದವು ಪ್ರಜೆಯ ಮೂಲ ಭೂತ ಹಕ್ಕುಗಳನ್ನು ಕಾಪಾಡುತ್ತವೆ. ಸರ್ಕಾರವು ಯಾವ ಪ್ರಜೆಯ ವಿಷಯದಲ್ಲಿಯಾದರೂ ಈ ಹಕ್ಕುಗಳಿಗೆ ಧಕ್ಕೆತರುವಂತೆ ನಡೆದುಕೊಂಡರೆ, ನ್ಯಾಯಸ್ಥಾನದ ಮೂಲಕ ಅದನ್ನು ತಡೆಯುವ ಶಕ್ತಿಯನ್ನು ಶಾಸನವು ಪ್ರಜೆಗಳಿಗೆ ಕೊಟ್ಟಿದೆ.

ಈ ರೀತಿಯಾಗಿ ಹಲವಾರು ವಿಧಗಳಲ್ಲಿ ಪ್ರಜಾರಾಜ್ಯದಲ್ಲಿ ಸ್ವಾಭಾವಿಕವಾಗಿ ಸಂಭವಿಸಬಹುದಾದ ಅನರ್ಥಕಾರಿ ಸನ್ನಿವೇಶಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಈಗಿನ ಪ್ರಜಾರಾಜ್ಯಗಳು ಶಾಸನಗಳನ್ನೂ ಸಂಪ್ರದಾಯಗಳನ್ನೂ ಏರ್ಪಡಿಸಿಕೊಂಡಿವೆ.

ಹಾಗೂ, ಪ್ಲೇಟೋ ಸೂಚಿಸುವ ಅವಗುಣಗಳೂ ಅಪಾಯಕಾರಿಯಾದ ಮನೋಲಹರಿಗಳೂ ಪ್ರಜಾರಾಜ್ಯಕ್ಕೆ ಸ್ವಾಭಾವಿಕವಾಗಿವೆ (ಇತರ ರಾಜ್ಯಭಾರಕ್ರಮಗಳಿಗಿಂತ ಹೆಚ್ಚಾಗಿ)ಎನ್ನುವುದರಲ್ಲಿ ಸಂದೇಹವಿಲ್ಲ. ಹೀಗೆಂದರೆ, 'ಇದಕ್ಕೆ ಮದ್ದೇನು?' ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಈ ಪ್ರಶ್ನೆಗೆ ! ಉತ್ತರವಾಗಿ ಪ್ಲೇಟೋ ತನ್ನ ಆದರ್ಶ ರಾಜ್ಯದ ಚಿತ್ರವನ್ನು ನಮ್ಮ ಮುಂದೆ ಇಟ್ಟಿದ್ದಾನೆ.

* * *

೩ನೆಯ ಅಧ್ಯಾಯ

ರಾಜ್ಯದ ರೂಪಾಂತರಗಳು

ಇದುವರೆಗೆ ಪ್ರಜಾರಾಜ್ಯದ ನ್ಯೂನತೆಗಳನ್ನು ನಿರೂಪಿಸಿದ್ದಾಯಿತು. ಆದರೆ ಮಾನವರ್ಗದ ಇತಿಹಾಸವನ್ನು ನೋಡಿದರೆ, ಪ್ರಜಾರಾಜ್ಯವು ಮೊಟ್ಟಮೊದಲಿನಲ್ಲೇ ಹುಟ್ಟಿದ್ದಾಗಿ ಬಹುಶಃ ಕಂಡು ಬರುವುದಿಲ್ಲ. ಎಲ್ಲ ದೇಶಗಳಲ್ಲಿಯೂ ಮೊದಮೊದಲು ಬೇರೆ ರೀತಿಯ ರಾಜ್ಯಾಂಗಗಳು ಕಾಣಿಸಿಕೊಂಡಿವೆ. ಆಮೇಲೆ ಕಾಲಾನುಕ್ರಮದಲ್ಲಿ ಅವು ಮಾರ್ಪಡುತ್ತ ಬಂದು ಹಲವು ರೂಪದ ರಾಜ್ಯಕ್ರಮಗಳು ಅವತರಿಸಿವೆ. ಪ್ರಜಾರಾಜ್ಯವು ಅವುಗಳಲ್ಲೊಂದು ರೂಪ.

ರಾಜ್ಯಾಂಗಗಳಲ್ಲಿ ಮುಖ್ಯವಾಗಿ ಎಷ್ಟು ರೂಪಗಳಿರುತ್ತವೆ. ಅವುಗಳ ಪರಸ್ಪರ ಸಂಬಂಧವೇನು, ಎಂಬ ವಿಷಯವಾಗಿ ಪ್ಲೇಟೋ ತೀಕ್ಷ್ಣದೃಷ್ಟಿಯಿಂದ ವಿಚಾರ ಮಾಡಿದ್ದಾನೆ. ಮೊದಲು ಸ್ವಾಭಾವಿಕವಾಗಿ ಯಾವ ರೀತಿಯ ರಾಜ್ಯಕ್ರಮ ಪ್ರಚಾರದಲ್ಲಿರುತ್ತದೆ. ತರುವಾಯ ಆಳುವವರ ಸ್ವಭಾವದಲ್ಲಿ ಉಂಟಾಗುವ ಬದಲಾವಣೆಯ ಫಲವಾಗಿ ಅದು ಹೇಗೆ ರೂಪಾಂತರ ಹೊಂದುತ್ತದೆ, ಆ ಹೊಸ ವ್ಯವಸ್ಥೆಯೂ ಕೂಡ ತನ್ನ ಆಂತರಿಕ ಕಾರಣಗಳ ಪ್ರಭಾವದಿಂದ ಮತ್ತೆ ಹೇಗೆ ರೂಪಾಂತರ ಹೊಂದುತ್ತದೆ, ಮಿಶ್ರರಾಜ್ಯಾಂಗಗಳನ್ನು ಬಿಟ್ಟರೆ ಮುಖ್ಯವಾಗಿ ಎಷ್ಟು ಮೂಲರೂಪಗಳನ್ನು ಚರಿತ್ರೆಯಲ್ಲಿ ನಾವು ಕಾಣಬಹುದು, ಈ ಮೂಲರೂಪಗಳನ್ನು ಯಾವ ಕಾರಣದಿಂದ ಪರಿವರ್ತನೆ ಹೊಂದಿ ರೂಪಾಂತರ ಪಡೆಯುತ್ತವೆ, – ಎಂಬ ವಿಷಯದಲ್ಲಿ ಏನಾದರೂ ನಿಯಮಗಳಿವೆಯೇ ಎಂದು ಪ್ಲೇಟೋ ವಿಚಾರ ಮಾಡಿದ್ದಾನೆ. ಅವನ ದೃಷ್ಟಿ ಮುಖ್ಯವಾಗಿ ಮನಶ್ಶಾಸ್ತ್ರದ ದೃಷ್ಟಿ. ಸಾಮಾಜಿಕನ ಮನೋವ್ಯಾಪಾರದ ತಂತ್ರಗಳು ಬದಲಾವಣೆ ಹೊಂದಿದ ಹಾಗೆಲ್ಲ ಹೊರಗಿನ ರಾಜ್ಯಾಂಗವಿಧಾನಗಳೂ ಪರಿವರ್ತನೆ ಹೊಂದುತ್ತವೆ–ಎಂಬುದೇ ಅವನ ಮುಖ್ಯ ಅಭಿಪ್ರಾಯ.

ಈ ಅಭಿಪ್ರಾಯವು ಪಾಶ್ಚಾತ್ಯರ ಇತಿಹಾಸದಲ್ಲಿ ಮುನ್ನಣೆಪಡೆದಿದೆ. ಚರಿತ್ರಕಾರರ, ರಾಷ್ಟ್ರನಿರ್ಮಾಪಕರ ನಿರೂಪಣೆ ಅಥವಾ ಕಾರ್ಯಕ್ರಮಗಳಲ್ಲಿ ಪ್ಲೇಟೋವಿನ

ಅಭಿಪ್ರಾಯದ ಪ್ರಭಾವವು ಆಗಿಂದಾಗ್ಗೆ ಹೊರಹೊಮ್ಮಿದೆ. ರಾಜ್ಯಾಂಗ ಪರಿವರ್ತನೆಯ ವಿಷಯವಾಗಿ ಪ್ಲೇಟೋ ಮಂಡಿಸಿದ ಸೂತ್ರಗಳು ಅರಿಸ್ಟಾಟಲಿಗೂ ಒಟ್ಟಿನಲ್ಲಿ ಸಮ್ಮತವಾಗಿದ್ದವು.

ರಾಜ್ಯಾಂಗ ರೂಪಾಂತರ ವಿಷಯದ ಪ್ರತಿಪಾದನೆಯಲ್ಲಿ ಮನುಷ್ಯ ಸ್ವಭಾವಕ್ಕೆ ಸೇರಿದ ಅಂಶಗಳು ಅಡಕವಾಗಿವೆ. ಮನುಷ್ಯನ ವ್ಯಕ್ತಿ ಜೀವನಕ್ಕೂ ಸಮಾಜ ಜೀವನಕ್ಕೂ ಇರುವ ನೈಜವಾದ ಪರಸ್ಪರ ಸಂಬಂಧವನ್ನು ಲಕ್ಷ್ಯದಲ್ಲಿಟ್ಟುಕೊಂಡು ಇವನ್ನು ನಿರೂಪಿಸಲಾಗಿದೆ. ಆದ್ದರಿಂದ, ಈಗಿನ ಪ್ರಪಂಚದಲ್ಲಿ ಕಾಣಬಹುದಾದ ರಾಜ್ಯಾಂಗಗಳು, ಅವುಗಳ ಪರಸ್ಪರ ಸಂಬಂಧ ಪರಿವರ್ತನೆಗಳು, ಅವುಗಳ ಸ್ವಭಾವದಿಂದ ತಲೆದೋರುವ ಸುಖದುಃಖರೂಪವಾದ ಫಲ, ಅವುಗಳಲ್ಲಿ ಪ್ರಚುರವಾಗಿರುವ ವಿಚಾರವಾಹಿನಿಗಳು, ಭಾವನಾ ಸಂಸ್ಕಾರಗಳು–ಇವುಗಳ ಮೇಲೆ ಈ ತತ್ತ್ವಗಳು ಅಪೂರ್ವವಾದ ಬೆಳಕನ್ನು ಬೀರುತ್ತವೆ.

ಪ್ಲೇಟೋ ತನ್ನ ಪ್ರಸಿದ್ಧವಾದ ರಿಪಬ್ಲಿಕ್ ಎಂಬ–ಉದ್ಗ್ರಂಥದಲ್ಲಿ ಆದರ್ಶ ರಾಜ್ಯದ ರೂಪು ರೇಖೆಗಳನ್ನು ನಿರೂಪಿಸುತ್ತಾನೆ. ಅಂಥ ಶ್ರೇಷ್ಠ ರಾಜ್ಯವು ಹಿಂದೆ ಯಾವಾಗಲಾದರೂ ಮೂರ್ತಿಮತ್ತಾಗಿ ಇತ್ತೆ?–ಎಂಬ ವಿಷಯದಲ್ಲಿ ಪ್ಲೇಟೋ ಖಚಿತವಾದ ಉತ್ತರ ಕೊಡುವುದಿಲ್ಲ. ಒಟ್ಟಿನಲ್ಲಿ ಅಂಥ ದೋಷರಹಿತವಾದ, ಕಲ್ಯಾಣ ಗುಣಪೂರ್ಣವಾದ ರಾಜ್ಯಕ್ರಮವು ಮನುಷ್ಯ ಜಾತಿಗೆ ಸುಲಭ ಸಾಧ್ಯವಲ್ಲ. ಅದು ಮನುಷ್ಯನ ಆತ್ಮಬುದ್ಧಿಗಳಿಗೇ ನಿಲುಕುವುದಿಲ್ಲವೆಂಬ ಮಾತನ್ನು ಪ್ಲೇಟೋ ಒಪ್ಪುವುದಿಲ್ಲ. ಅಷ್ಟೇಅಲ್ಲ, ಆ ಗುರಿಯನ್ನು ಜನರು ಬಹುಮಟ್ಟಿಗೆ ಸಾಧಿಸಬಹುದೆಂದು ಆತನ ದೃಢನಿಶ್ಚಯವಾಗಿತ್ತು.

ರಾಜ್ಯಾಂಗಗಳ ರೂಪಾಂತರವನ್ನು ವಿಚಾರಮಾಡುವ ಸಂದರ್ಭದಲ್ಲಿ ಆದರ್ಶಕ್ರಮವು ಒಂದು ಮೇಲ್ಪಂಕ್ತಿಯಾಗುತ್ತದೆಯೆಂದೂ ಅಂಥ ಆದರ್ಶ ರಾಜ್ಯವು ಕೂಡ ತನ್ನ ಶ್ರೇಷ್ಠತೆಯನ್ನು ಕಳೆದುಕೊಳ್ಳುವ ಸಂಭವವಿದೆಯೆಂದೂ ಪ್ಲೇಟೋವಿನ ಅಭಿಪ್ರಾಯ. ಈ ಬಗೆಯ ಶ್ರೇಷ್ಠ ರಾಜ್ಯಾಂಗ ಪದ್ಧತಿಗಳು ಒಂದು ಕಾಲದಲ್ಲಿ ಪ್ರಚಾರದಲ್ಲಿದ್ದವು. ಅವು ಒಂದು ಬಗೆಯ ಶ್ರೀಮಂತರಾಜ್ಯದ ಪದ್ಧತಿಗಳಾಗಿದ್ದವು. ಈ ಕ್ರಮದಲ್ಲಿ ರಾಜರೋ ರಾಜರಿಗೆ ಸಮಾನವಾದ ಸ್ವಭಾವವುಳ್ಳ ಶ್ರೀಮಂತರೋ ಪ್ರಭುಗಳಾಗಿದ್ದರು. ಇವರು ಶ್ರೇಷ್ಠ ರೀತಿಯಲ್ಲಿ ರಾಜ್ಯಭಾರ ಮಾಡುವುದಕ್ಕೆ ಅವಶ್ಯಕವಾದ ಗುಣವಿಶೇಷಗಳನ್ನು ಪಡೆದಿದ್ದರು. ಈ ಗುಣಸಮೂಹವನ್ನು ನಿರ್ದೇಶಿಸಲು ಭಾರತೀಯ ಪಾರಿಭಾಷಿಕ ಪದಗಳನ್ನು ಉಪಯೋಗಿಸುವುದಾದರೆ, ಅವು ಸಾತ್ವಿಕ ಪ್ರಧಾನ ಸಂವಿಧಾನಗಳೆಂದು ಹೇಳಬಹುದು. ಇಂಥ ಸರ್ವಶ್ರೇಷ್ಠವಾದ ಮೊದಲನೆಯ ದರ್ಜೆಯ ರಾಜ್ಯಾಂಗ ಪದ್ಧತಿಯಲ್ಲಿ ಪ್ರಭುತ್ವದವರು ಸಾಕಷ್ಟು ಮಟ್ಟಿಗೆ ತತ್ತ್ವ ಪ್ರೇಮಿಗಳೂ ಕ್ಷಾತ್ರಧರ್ಮಿಗಳೂ ಆಗಿರುತ್ತಾರೆಂಬುದು ಪ್ಲೇಟೋವಿನ ಅಭಿಪ್ರಾಯ, ಆದರೆ, ಪ್ರಪಂಚದ ಇತಿಹಾಸವು ಇಂಥ ಪ್ರಭುಗಳ ಆಡಳಿತದಲ್ಲಿ ಪ್ರಾರಂಭವಾಯಿತೇ – ಎನ್ನುವುದು ವಾದಗ್ರಸ್ತ ವಿಷಯ.

ಇಂಥ ಪ್ರಭುತ್ವವು ಮನುಷ್ಯ ಮಾತ್ರನಿಗೆ ಸಂಭಾವ್ಯವೆಂಬುದೇ ಸಂಶಯಾಸ್ಪದವಾಗಿದೆ. ಅದು ಸಂಪೂರ್ಣ ರೂಪದಲ್ಲಿ ಅಸಾಧ್ಯವೆನಿಸಿದರೂ ಅದು ನಿರ್ದೇಶಿಸುವ ಗುರಿಯ ಕಡೆಗೆ ರಾಜ್ಯಪದ್ಧತಿಗಳನ್ನು ಅದಷ್ಟು ಸಾಗಿಸುವುದೇ ರಾಷ್ಟ್ರಗಳ ಶ್ರೇಯಸ್ಸಿಗೆ ಕಾರಣವಾಗುವುದು ಯಾವ ವಾಹನವೂ ನಕ್ಷತ್ರವನ್ನು ಮುಟ್ಟಲಾರದು. ಆದರೆ ಹಾಗೆ ನಕ್ಷತ್ರವನ್ನು ಗುರಿಯಾಗಿಟ್ಟುಕೊಂಡು ಅದನ್ನು ನಡೆಸಿಕೊಂಡು ಹೋದರೆ ವಾಹನವು ಬಹುದೂರ ಆದರ್ಶದ ಕಡೆಗೆ ಸರಿಯುತ್ತದೆಯೆಂಬುದು ನಿರ್ವಿವಾದವಾಗಿದೆ. ಮನುಷ್ಯನು ಬ್ರಹ್ಮವಾಗುತ್ತಾನೋ ಇಲ್ಲವೋ ನಿಷ್ಕೃಷ್ಟವಾಗಿ ಸಿದ್ಧಾಂತ ಮಾಡುವುದೂ ಈ ಸಿದ್ಧಾಂತಕ್ಕೆ ಬಹುಮತ ಸಂಪಾದಿಸುವುದೂ ಕನಸೇ ಸರಿ. ಆದರೂ ಬ್ರಹ್ಮಸಾಮ್ಯ ಅಥವಾ ಸಾಧರ್ಮ್ಯವು ಜೀವಾತ್ಮನ ಗುರಿಯೆಂದು ನಾವು ಮನಗಂಡು ನಮ್ಮ ಜೀವನಪಥವು ಶ್ರೇಯೋಮಾರ್ಗವನ್ನು ಹಿಡಿಯುವುದು ಅಸಂಭವವಲ್ಲ. ಈ ದೃಷ್ಟಿಯಿಂದ ಪ್ಲೇಟೋವಿನ ಆದರ್ಶ ರಾಜ್ಯದ ಅವಶ್ಯಕತೆಯನ್ನೂ ಪ್ರಯೋಜನವನ್ನೂ ನಾವು ಒಪ್ಪಬಹುದು. ಅದು ಕಲ್ಪನೆಯಾದರೂ ಪ್ರಚಲಿತವಾದ ರಾಷ್ಟ್ರ ಪದ್ಧತಿಗಳನ್ನು ತತ್ತ್ವದೃಷ್ಟಿಯಿಂದ ಅಳೆಯುವುದಕ್ಕೆ ಸಹಕಾರಿಯಾಗುತ್ತದೆ. ನಮ್ಮ ಮನಸ್ಸಿನಲ್ಲಿ ಆದರ್ಶರಾಜ್ಯದ ರೇಖಾಚಿತ್ರವಿದ್ದರೆ ಅನುಭವದಲ್ಲಿ ಕಾಣಬರುವ ರಾಜ್ಯಾಂಗಗಳ ನ್ಯೂನತೆಗಳೂ ಗುಣಾವಗುಣಗಳೂ ಪರಾಮರ್ಶೆಯಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತವೆ.

'ಲಾಸ್'(Laws) ಶಾಸನಗಳು ಎಂಬ –ಇನ್ನೊಂದು ಗ್ರಂಥದಲ್ಲಿ ರಾಜ್ಯಾಂಗ ನಿರ್ಮಾಣ ವಿಷಯವಾಗಿ ಪ್ಲೇಟೋ ಅನುಭವ ಪೂರ್ವಕವಾದ ದೃಷ್ಟಿಯಿಂದ ವಿವೇಚಿಸಿದ್ದಾನೆ. ಈ ಗ್ರಂಥವನ್ನು ಆತನು ತನ್ನ ವೃದ್ಧಾಪ್ಯದಲ್ಲಿ ಬರೆದಂತೆ ತೋರುತ್ತದೆ. ಇದರಲ್ಲಿ ರಿಪಬ್ಲಿಕ್‌ಗಿಂತ ಹೆಚ್ಚು ಅನುಭವಪೂರಿತವಾದ ವಿಚಾರನಿರೂಪಣೆ ಕಂಡುಬರುತ್ತದೆ. ಒಂದು ಹೊಸ ರಾಜ್ಯವನ್ನು ಸ್ಥಾಪಿಸಬೇಕಾದರೆ ಯಾವ ಮುಖ್ಯ ತತ್ತ್ವಗಳನ್ನು ಗಮನದಲ್ಲಿಡಬೇಕೆಂಬ ವಿಷಯವನ್ನು ಪ್ಲೇಟೋ ಇದರಲ್ಲಿ ವರ್ಣಿಸುತ್ತಾನೆ: ಕ್ರೀಟ್ ದ್ವೀಪದಲ್ಲಿ ಒಂದು ಹೊಸ ನಗರರಾಜ್ಯವನ್ನು ಸ್ಥಾಪಿಸಿಸಲಿದ್ದಾರೆ. ಅದರ ರಾಜ್ಯಾಂಗವನ್ನು ರೂಪಿಸಲು ಒಬ್ಬ ಕ್ರೀಟ್ ನಾಗರಿಕನೂ ಒಬ್ಬ ಸ್ಪಾರ್ಟಾ ನಾಗರಿಕನೂ ನೇಮಿಸಲ್ಪಟ್ಟಿದ್ದಾರೆ. ಇವರು ರಾಜ್ಯಾಂಗ ಶಾಸ್ತ್ರದಲ್ಲಿ ನಿಪುಣನಾದ ಒಬ್ಬ ಅಥೆನ್ಸ್ ನಗರದ ವೃದ್ಧನನ್ನು ಸಲಹೆಗಾರನಾಗಿ ಅಂಗೀಕರಿಸುತ್ತಾರೆ. ಅಥೆನ್ಸ್ ನಾಗರಿಕನು ತನ್ನ ಸಲಹೆಗಳನ್ನು ಆ ಮೂಲಾಗ್ರವಾಗಿ ಮಂಡಿಸುತ್ತಾನೆ. ಇದು 'ಲಾಸ್' ಗ್ರಂಥದ ವಸ್ತು. ಇದರಲ್ಲಿ ಹೇಳಿರುವ ಸಿದ್ಧಾಂತಗಳು ಪ್ಲೇಟೋವಿನ ಸ್ವಂತ ಅಭಿಪ್ರಾಯವೆಂದೇ ಪರಿಗಣಿಸಲ್ಪಟ್ಟಿವೆ.

ಈ ಗ್ರಂಥದಲ್ಲಿ ಜನರಲ್ಲಿ ಮೊದಲು ರಾಜ್ಯವೆಂಬುದು ಹೇಗೆ ಉತ್ಪನ್ನವಾಯಿತು ಎಂಬ ವಿಷಯವಾಗಿ ಶಾಸ್ತ್ರೀಯವಾದ ಊಹೆಯಿದೆ. ಸಮಾಜ ಜೀವನದ ಮೊಟ್ಟಮೊದಲೆಂದರೆ ಕುಟುಂಬ ಜೀವನ. ಬೆಟ್ಟದಿಬ್ಬಗಳಲ್ಲಿಯೂ ಕಣಿವೆಗಳಲ್ಲಿಯೂ ಕುರುಬರೂ ದನ ಕಾಯುವವರೂ ವಾಸಿಸುವುದು ಇತಿಹಾಸದ ಆದಿಯಲ್ಲಿ

ಸಂಭಾವ್ಯವಾದ ಸಂಗತಿ. ಪ್ರತಿಯೊಂದು ಕುಟುಂಬಕ್ಕೂ ಒಬ್ಬ ವಯೋವೃದ್ಧನು ಯಜಮಾನನಾಗಿರುತ್ತಾನೆ. ಮಕ್ಕಳು ಮೊಮ್ಮಕ್ಕಳು, ಸೊಸೆಯರು, ತಮ್ಮಂದಿರು ಮತ್ತು ಅವರ ಸಂಸಾರ–ಇವರೆಲ್ಲ ಬಹುಶಃ ಒಬ್ಬ ಯಜಮಾನನ ಅಧೀನದಲ್ಲಿರುತ್ತಿದ್ದರು, ಇಂಥ ಕುಲಗಳ ಯಜಮಾನರು ಆಗಾಗ್ಗ ಕಲೆತು ತಮ್ಮೆಲ್ಲ ಕುಲಗಳಿಗೂ ಸಂಬಂಧಪಟ್ಟ ವಿಷಯಗಳನ್ನು ಕುರಿತು ಪರ್ಯಾಲೋಚಿಸಿ ಸಮಾಜದ ಪದ್ಧತಿಗಳನ್ನು ಏರ್ಪಡಿಸುತ್ತಿದ್ದರು.

ಕಾಲಕ್ರಮೇಣ ಭೂವ್ಯವಸಾಯ ತಲೆದೋರಿ, ಆದರಿಂದ ಉತ್ಪನ್ನವಾದ ದವಸಧಾನ್ಯಗಳ ರಕ್ಷಣೆಗಾಗಿ ಕದನಮಾಡಬೇಕಾಗಿ ಬಂತು ಈ ಕಾರಣದಿಂದ ಕುಲಪತಿಗಳೂ ಯುವಕರೂ ಯೋಧರಾಗಬೇಕಾದ ಅವಶ್ಯಕತೆಯುಂಟಾಯಿತು. ಯೋಧರಿಗೆ ನಾಯಕರು ಅನಿವಾರ್ಯ ಹಾಗೆ ನಾಯಕರು ಉದಿಸಿಮೇಲೆ ನಾಯಕವರ್ಗಕ್ಕೆ ಸಂಬಂಧಪಟ್ಟ ಪದ್ಧತಿಗಳೂ ಶಾಸನಗಳೂ ಕ್ರಮೇಣ ರೂಪಗೊಂಡವು. ಸಂತತವಾಗಿ ಯುದ್ಧಕ್ಕೆ ಸಿದ್ಧರಾದ ಕುಲಶ್ರೇಷ್ಠರು ಶ್ರೀಮಂತರಾದರು.

ಇತಿಹಾಸದಲ್ಲಿ ನಮಗೆ ಮೊದಲು ಕಾಣುವುದು ಇಂತಹ ಶ್ರೀಮಂತ ರಾಜ್ಯ. ಶ್ರೀಮಂತರು ತಮ್ಮದೇ ಆದ ಸಂಪ್ರದಾಯ ವಿಶೇಷಗಳನ್ನು ನಿರ್ಮಿಸಿಕೊಂಡು ಅನೇಕ ತಲಾಂತರಗಳ ಕಾಲ ಆಡಳಿತ ನಡೆಸಿದರು. ಈ ಪದ್ಧತಿಯು ಕೆಲವು ಮಾನ್ಯವಾದ ಅಂಶಗಳನ್ನೊಳಗೊಂಡಿದೆ. ಇಂತಹ ಶ್ರೀಮಂತ ರಾಜ್ಯವು ಯಾವರೀತಿಯಲ್ಲಿ, ಯಾವ ಸಂಸ್ಕೃತಿ ಸಾಧನಗಳ ಸಹಾಯದಿಂದ, ಯಾವರೀತಿಯ ಸಂಸ್ಥೆ ಸಂಪ್ರದಾಯಗಳ ಬಲದಿಂದ ಉನ್ನತಿಗೆ ಬಂತು–ಎಂಬ ವಿಷಯವಾಗಿ ಪ್ಲೇಟೋ ವಿಚಾರ ಮಾಡುವುದಿಲ್ಲ. ಅಂತೂ ಆದಿಯಲ್ಲಿ ಶ್ರೇಷ್ಠವಾದ ಶ್ರೀಮಂತ ರಾಜ್ಯವಿತ್ತು. ಅದು ಬಹುಮಟ್ಟಿಗೆ ಆದರ್ಶರಾಜ್ಯದ ತತ್ತ್ವಗಳನ್ನು ಅನುಸರಿಸುತ್ತಿದ್ದಿತು. ವೀರರು ಧರ್ಮನಿಷ್ಠೆಯುಳ್ಳವರಾಗಿದ್ದರು. ರಾಷ್ಟ್ರಪ್ರೇಮಿಗಳಾಗಿದ್ದರು; ಸಮಾಜದ ತೊಡಕುಗಳನ್ನು ಬಿಡಿಸುವುದಕ್ಕೆ ಸಮರ್ಥರಾಗಿದ್ದರು. ಇಂಥ ನಂಬಿಕೆಯು ಪ್ಲೇಟೋವಿನ ಮನಸ್ಸಿನಲ್ಲಿತ್ತೆಂದು ತೋರುತ್ತದೆ.

ಈ ವಿಚಾರಧಾರೆಯು ನಮ್ಮಲ್ಲಿಯೂ ಶಾಸ್ತ್ರಗ್ರಂಥಗಳಲ್ಲಿ ಕಂಡುಬರುತ್ತದೆ. ಭಾರತೀಯರೂ ಮಾನವನ ಇತಿಹಾಸದಲ್ಲಿ ಕೃತ, ತ್ರೇತ, ದ್ವಾಪರ, ಕಲಿ ಯುಗಗಳೆಂಬ ಕಾಲ ವಿಭಾಗಗಳನ್ನು ಒಪ್ಪಿಕೊಡಿದ್ದರು. ಕೃತಯುಗದಲ್ಲಿ ಧರ್ಮ ನಾಲ್ಕು ಪಾದಗಳಿಂದ ಕೂಡಿ ಸಂಪೂರ್ಣ ಬಲವನ್ನು ಹೊಂದಿತ್ತು. ಮನುಷ್ಯರಲ್ಲಿ ಸತ್ಯಸಂಧತೆ ನೆಲಸಿತ್ತು. ಮಾನವ ಧರ್ಮಕ್ಕೆ ಸೇರಿದ್ದ ಎಲ್ಲ ಶ್ರೇಷ್ಠಗುಣಗಳೂ ಸಂಪೂರ್ಣವಾಗಿ ಅವಿರ್ಭಾವವಾಗುತ್ತಿದ್ದವು. ತ್ರೇತಾಯುಗದಲ್ಲಿ ಧರ್ಮ ಮೂರುಪಾದವುಳ್ಳದ್ದಾಯಿತು. ಒಂದು ಪಾದವು ಕಡಮೆಯಾಯಿತು. ಸತ್ಯ, ಅಹಿಂಸೆ, ಮೊದಲಾದ ಸಾತ್ವಿಕ ಗುಣಗಳ ಜೊತೆಗೆ ಸ್ವಲ್ಪ ರಜೋಗುಣವೂ ಅಂಕುರಿಸಿತು. ಅಧರ್ಮಕ್ಕೆ ಸ್ವಲ್ಪ ಅವಕಾಶ ಸಿಕ್ಕಿತು. ದ್ವಾಪರದಲ್ಲಿ ಎರಡೇ ಪಾದಗಳುಳಿದು ಸಾತ್ವಿಕ ರಜೋಗುಣಗಳ ಸಮತೆಯುಂಟಾಯಿತು. ಧರ್ಮಾಧರ್ಮಗಳು ಸಮಬಲವುಳ್ಳವಾದವು. ಕಲಿಯುಗದಲ್ಲಿಯಾದರೋ

ರಜಸ್ತಮೋಗುಣಗಳಿಗೆ ಮೇಲ್ಗೈಯಾಯಿತು. ಧರ್ಮಕ್ಕೆ ಗ್ಲಾನಿ ಸಂಭವಿಸಿತು. ಮಾನವನ ಇತಿಹಾಸದಲ್ಲಿ ಧರ್ಮದ ಇಳಿದೆಸೆಯ ಸೋಪಾನಗಳೇ ಕಾಣಬರುತ್ತವೆ. ಈರೀತಿ ಸಂಸ್ಕೃತಿಯ ಅವರೋಹಣವೇ ಇತಿಹಾಸದಲ್ಲಿ ಕಾಣಬರುವ ಮುಖ್ಯ ಲಕ್ಷಣವೆಂಬ ದೃಷ್ಟಿಯು ಪ್ರಾಚೀನ ಗ್ರೀಕರಲ್ಲಿಯೂ ಇತ್ತೆಂದು ತೋರುತ್ತದೆ.

ಆದರೆ ಈ ದೃಷ್ಟಿಯು ಇತಿಹಾಸತತ್ತ್ವದ ಸಂಪೂರ್ಣ ಚಿತ್ರವಲ್ಲ; ಏಕದೇಶಮಾತ್ರ ಎನ್ನಬಹುದು. ಏಕೆಂದರೆ, ಕಲಿಯುಗದ ಕಾಲವಾದ ಅನಂತರ ಪುನಃ ಕೃತಯುಗದ ಅವಿರ್ಭಾವಕ್ಕೆ ಈಶ್ವರನು ಅವಕಾಶ ಕಲ್ಪಿಸುತ್ತಾನೆ; ಕಲಿಯುಗವೇ ಕೊನೆಯ ಮಾತಲ್ಲ. ಮಾನವನ ಇತಿಹಾಸ ಸಂಸ್ಕೃತಿಗಳು ಹೀಗೆ ಚಕ್ರಗತಿಯಿಂದ ಮೇಲಕ್ಕೂ ಕೆಳಕ್ಕೂ ಚಲಿಸುತ್ತಿರುತ್ತವೆಯೆಂಬ ಅಭಿಪ್ರಾಯವು ಪ್ಲೇಟೋ ಅರಿಸ್ಟಾಟಲ್ ಮುಂತಾದ ಗ್ರೀಕ್ ಶಾಸ್ತ್ರಕಾರರಿಗೂ ಇತ್ತೆಂದು ತೋರುತ್ತದೆ.

ಆದರೆ, ಇದು ಇತಿಹಾಸ ತತ್ತ್ವದ ಹೊರಮೈ ಮಾತ್ರ ಎಂದೆನ್ನಬೇಕು. ಸೂಕ್ಷ್ಮವಾಗಿ ಪರೀಕ್ಷಿಸಿದರೆ ಇದಕ್ಕೆ ವಿರುದ್ಧವಾದ ಬೇರೊಂದು ವಿಚಾರವಾಹಿನಿಯೂ ಭಾರತ ಸಂಸ್ಕೃತಿಯಲ್ಲಿ ಕಂಡುಬರುತ್ತದೆ. "ರಾಜನು ಕಾಲಕ್ಕೆ ಒಡೆಯ"(ರಾಜಾ ಕಾಲಸ್ಯ ಕಾರಣಂ) ಎಂಬುದೇ ಈ ವಿರುದ್ಧ ತತ್ತ್ವ. ಕೃತ, ತ್ರೇತ, ದ್ವಾಪರ, ಕಲಿಯುಗಗಳು ಮುಖ್ಯವಾಗಿ ಮಾನವಜಾತಿಯ ಮನೋರಾಜ್ಯಕ್ಕೆ ಅನ್ವಯಿಸತಕ್ಕ ಧರ್ಮ ವಿಶೇಷಗಳು. ಅವು, ಎಂದರೆ ಆ ಯುಗಭೇದಗಳು, ಬಾಹ್ಯ ಪ್ರಪಂಚಕ್ಕೆ ಸೇರಿದ ನಕ್ಷತ್ರರಾಶಿಗಳ ಮತ್ತು ಗ್ರಹ ಮಂಡಲಗಳ ಗತಿ ವಿಶೇಷಗಳೇ ಆಗಿದ್ದರೂ ಅವು ಮನುಷ್ಯನ ಧರ್ಮಜೀವನದ ಮೇಲೆ ಬೀರುವ ಪ್ರಭಾವವು ಅವನ ಮನಸ್ಸು ಬುದ್ಧಿ ಸಂಸ್ಕಾರಗಳ ಸ್ವಭಾವವನ್ನೇ ಮುಖ್ಯವಾಗಿ ಅನುಸರಿಸತಕ್ಕವಾಗಿವೆ. ಪ್ರಕೃತಿ ಗಮನವು ಹೊರಗಿನ ವಾತಾವರಣ, ಈ ಬಾಹ್ಯ ವಾತಾವರಣವನ್ನು ಸದುಪಯೋಗಪಡಿಸಿಕೊಂಡರೆ ಅದು ಮಾನಸಿಕ ವಾತಾವರಣವಾಗುವುದು. ಸಾಂಸ್ಕೃತಿಕ ವಾಯುಗುಣವಾಗುವುದು. ಈ ಮೂಲಕ ಮಾನವನ ಆತ್ಮಬುದ್ಧಿ ಮನಸ್ಸುಗಳ ಸಂಸ್ಕಾರ ಬಲದಿಂದ ಯುಗಧರ್ಮಗಳು ಉತ್ಪನ್ನವಾಗುತ್ತವೆ. ಸಾಧಾರಣ ಮನುಷ್ಯನು ಯುಗಧರ್ಮವನ್ನು ಬದಲಾಯಿಸುವುದು ಅಸಾಧ್ಯವೆನ್ನಿಸಬಹುದು. ಈಗಿನ ವಿಶಾಲ ರಾಜ್ಯಗಳಲ್ಲಿರುವ ಅಣುವಿನೋಪಾದಿಯಲ್ಲಿ ಅಲ್ಪಶಕ್ತಿಯುಳ್ಳ ಸಾಧಾರಣ ನಾಗರಿಕನಿಗೆ ರಾಷ್ಟ್ರ ಪರಿವರ್ತನೆ ಮಾಡುವುದೆಂಬುದು ಕೇವಲ ಕನಸೇ ಸರಿ. ಆದರೂ ತನ್ನ ಕಾಲವನ್ನು ಉತ್ತಮಗೊಳಿಸಲು ಪ್ರಯತ್ನ ಮಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ, ಹನಿಗೂಡಿದರೆ ಹಳ್ಳ, ಲಕ್ಷಾಂತರ ಪ್ರಜೆಗಳ ಸಮ್ಮತಿಯಿಂದಲೇ ಮಹಾರಾಷ್ಟ್ರಗಳು ತಮ್ಮ ಸೂತ್ರಗಳನ್ನು ನಡೆಸುತ್ತಿರುತ್ತವೆ. ಪ್ರಜಾಸಾಗರದಲ್ಲಿ ಸುಪ್ತವಾಗಿರುವ ಬಡಬಾಗ್ನಿಯು ಆವಿರ್ಭವಿಸಿದ್ದೇ ಆದರೆ, ಮೊದಲು ಅಸಾಧ್ಯ, ಅನಿರ್ವಚನೀಯ ಅದ್ಭುತ ಎನಿಸಿದ್ದ ಘಟನೆಗಳೂ ವಿಪ್ಲವಗಳೂ ಮಹಾ ಆರ್ಭಟದಿಂದ ತಲೆದೋರುತ್ತವೆ. ಸಾಧಾರಣ ಮನುಷ್ಯರ ಜವಾಬ್ದಾರಿಯು ಅನಿರ್ವಚನೀಯವಾದರೂ ಅನಿವಾರ್ಯವೇ ಆಗಿರುತ್ತದೆ. ಶ್ರೇಷ್ಠರ ಜವಾಬ್ದಾರಿಯಂತೂ ಸರ್ವವೇದ್ಯವಾಗಿಯೇ ಇದೆ. ಮನುಷ್ಯನ ವಿದ್ಯಾಕ್ರಿಯಾ

ಭಾವನಾಶಕ್ತಿಗಳಿಗೂ ಅವನ ಹೊಣೆಗಾರಿಕೆಗೂ ಯೋಗ್ಯ ಸಂಬಂಧವಿದ್ದೇ ಇರುತ್ತದೆ. ಹೀಗಾಗಿ ವ್ಯಕ್ತಿಜಾಗೃತಿ ಸಾಮರ್ಥ್ಯಗಳೂ ಸಾಮಾಜಿಕ ಮತ್ತು ರಾಷ್ಟ್ರೀಯ ಜಾಗೃತಿಧ್ಯೇಯಾವೇಶಗಳೂ ಸಮ್ಮೇಳನ ಹೊಂದಿ, ಯುಗಗಳ ಸ್ವಾಭಾವಿಕ ಗತಿಯನ್ನು ನಿರೋಧಮಾಡಿ, ಅಧೋಗತಿಯಿಂದ ಪುರೋಭಿವೃದ್ಧಿಯ ಅಭಿಮುಖವಾಗಿ ತಿರುಗಿಸಬಹುದು. ಇದು "ರಾಜನು ಯುಗದ ಒಡೆಯ" ಎಂಬ ನುಡಿಯಲ್ಲಿ ಅಡಕವಾಗಿರುವ ಗೂಢವಾದ ತತ್ತ್ವಾಂಶ.

ಈ ವಿಧವಾದ ಪ್ರಕೃತಿನಿಷ್ಠ ಯುಗಧರ್ಮಗಳ ಗತಿಯ ದಿಕ್ಕನ್ನು ಹಿಂದಿರುಗಿಸಿ, ಕೃತಯುಗದ ಧರ್ಮವನ್ನು ಜ್ಞಾನ ಭಾವನಾ ಕ್ರಿಯಾ ಬಲಗಳ ಸಹಾಯದಿಂದ ಸ್ಥಾಪಿಸಿ ಹೇಗೆ ಆದರ್ಶ ರಾಜ್ಯವನ್ನು ನೆಲೆಗೊಳಿಸಬಹುದೆಂಬುದೇ ಪ್ಲೇಟೋವಿನ ರಾಜಕೀಯ ತತ್ತ್ವಾನ್ವೇಷಣದ ಮುಖ್ಯ ಸಾರಾಂಶ.

ಇದನ್ನು ನಿರೂಪಿಸುವ ಮೊದಲು, ಸ್ವಾಭಾವಿಕವಾಗಿ ಉತ್ಪನ್ನವಾಗುವ ಸಮಾಜ ವಿಪ್ಲವದ ಧೋರಣೆಯನ್ನು ಪರಿಶೀಲಿಸುವುದು ಯುಕ್ತವಾಗಿದೆ. ಪ್ಲೇಟೋ ತನ್ನ 'ರಿಪಬ್ಲಿಕ್' ಗ್ರಂಥದಲ್ಲಿ ಆದರ್ಶರಾಜ್ಯದ ರೇಖಾರೂಪವನ್ನು ಬರೆದು ತೋರಿಸಿದಮೇಲೆ ಈ ವಿಷಯವನ್ನು ವಿಚಾರಕ್ಕೆ ತೆಗೆದುಕೊಳ್ಳುತ್ತಾನೆ. ಆದರೆ ನಾವು ಈ ಗ್ರಂಥದಲ್ಲಿ ರಾಷ್ಟ್ರಗಳ ರಾಜ್ಯಾಂಗವಿಧಾನಗಳ ಮಾದರಿಗಳನ್ನೂ ಅವು ಯಾವ ಕ್ರಮದಲ್ಲಿ ಒಂದರಿಂದ ಮತ್ತೊಂದು ಹುಟ್ಟಿಬರುತ್ತವೆಯೆಂಬ ವಿಷಯವನ್ನೂ ಮೊದಲು ಪರಿಶೀಲನೆಗೆ ತೆಗೆದುಕೊಂಡಿದ್ದೇವೆ. ಏಕೆಂದರೆ, ರಾಷ್ಟ್ರಗಳ ರಾಜ್ಯಾಂಗಗಳ ಸ್ವಭಾವಸಿದ್ಧವಾದ ಸೆಳೆತಗಳನ್ನು ತಿಳಿದಮೇಲೆ ಅವು ಮಾಡುವುದರಲ್ಲಿಯೂ ಒಂದು ಪ್ರಯೋಜನವಿದೆ. ಈಕ್ರಮದಲ್ಲಿ ವಿಚಾರವು ವಾಸ್ತವಸ್ಥಿತಿಯನ್ನು ಅನುಸರಿಸುತ್ತದೆ. ವಿಚಾರ ಮಂದಿರಕ್ಕೆ ಭದ್ರವಾದ ಅಡಿಗಲ್ಲು ಸಿಕ್ಕಿದಂತಾಗುತ್ತದೆ. ಹೀಗಲ್ಲದೆ ಆದರ್ಶರಾಜ್ಯ ನಿರೂಪಣೆಯಿಂದ ವಿಚಾರ ಪ್ರಾರಂಭವದರೆ, ಆಕಾಶದಲ್ಲಿ ಹಾರಾಡುತ್ತಿರುವ ಮೋಡಗಳ ಮೇಲೆ ಗಂಧರ್ವನಗರವನ್ನು ನಿರ್ಮಿಸಿ, ಆಮೇಲೆ ಅದಕ್ಕೆ ಭೂಮಿಯಲ್ಲಿ ಅಸ್ತಿವಾರವನ್ನು ಹಾಕಬೇಕಾಗುತ್ತದೆ. ಎರಡರಲ್ಲಿಯೂ ಬೇರೆಬೇರೆ ಪ್ರಯೋಜನಗಳಿವೆ. ಆದರೆ ಭೂಮಿಯಿಂದ ಸ್ವರ್ಗಕ್ಕೆ ಹತ್ತುವುದು, ಎಂದರೆ ಸಾಧಾರಣ ಸ್ವಭಾವದಿಂದ ಉತ್ತಮ ಸ್ಥಿತಿಗೆ ಏರುವುದು, ನಮ್ಮ ಈಗಿನ ಪರಿಸ್ಥಿತಿಗೂ ಅಭಿರುಚಿಗೂ ಅನುಗುಣವಾಗಿದೆ.

ಮಾನವನ ಇತಿಹಾಸವೆಂದರೆ ಅವನ ಸಂಸ್ಕೃತಿಯ ಇತಿಹಾಸ, ನಾಗರಿಕತೆಯು ಮಾನವನ ಬಾಹ್ಯರೂಪ, ಸಮಾಜ ಜೀವನದ ಮೂಲ ಜನತೆಯ ಮನಸ್ಸಿನ ಸಂಸ್ಕೃತಿ. ರಾಜ್ಯಾಂಗ ನಿಯಮ ಸಮೂಹವು ಈ ಸಂಸ್ಕೃತಿಯ, ಈ ಮನೋಧರ್ಮದ ಹೊರಗೆ ಕಾಣುವ ವ್ಯಾಪಾರ ಅಥವಾ ಆಕಾರವಿಶೇಷ, ಒಳಗಿನ ಅನುಭವ ಹೊರಗಿನ ವ್ಯವಹಾರ ರೂಪವನ್ನು ತಾಳುತ್ತದೆ. ಈ ಒಳಹೊರಗಿನ ಪರಸ್ಪರ ಸಂಬಂಧವು ಪ್ರಪಂಚದ ಚರಿತ್ರೆಯಲ್ಲಿ ಸ್ಪಷ್ಟವಾಗಿ ಕಾಣಬರುತ್ತದೆ.

ಸಂಸ್ಕೃತಿ ನಾಗರಿಕತೆಗಳಲ್ಲಿ ಉನ್ನತಸ್ಥಾನವನ್ನು ಗಳಿಸಿದ ಹತ್ತಾರು ಜನಾಂಗಗಳೆಲ್ಲ ಹಿಂದೆ ಒಂದಾನೊಂದು ಕಾಲದಲ್ಲಿ ತಾವು ಸ್ವರ್ಣಯುಗವನ್ನು

ರಚಿಸಿ ಅದರ ಹೊಂಬೆಳಕಿನಲ್ಲಿ ರಾರಾಜಿಸುತ್ತಿದ್ದುದಾಗಿ ಪ್ರತೀತಿಯಿದೆ. ಪ್ರಾಚೀನ ಈಜಿಪ್ಟ್ ಗ್ರೀಸ್ ರೋಂ ಯೆಹೂದಿ, ರಾಜ್ಯದವರು, ಇಸ್ಲಾಂ ರಾಷ್ಟ್ರಗಳವರು, ಭಾರತೀಯರು, ಚೀಣರು, ಇವರೆಲ್ಲ ತಮ್ಮ ಇತಿಹಾಸದಲ್ಲಿ ಮೊದಲು ಸರ್ವಶ್ರೇಷ್ಠ ಗುಣ ಪರಿಪೂರ್ಣವಾದ ಒಂದು ಸ್ವರ್ಣಯುಗವಿತ್ತು, ಅದರಲ್ಲಿ ಆದರ್ಶರಾಜ್ಯಾಂಗ ಬಹುಕಾಲ ಬಾಳಿಕೊಂಡು ಬಂತು, ಆಗಿನ ಸಂಸ್ಕೃತಿಯ ಅಂಶಗಳನ್ನೂ ತತ್ತ್ವಗಳನ್ನೂ ಪರಿಶೀಲಿಸಿದರೆ ಮಾನವನ ಶಾಶ್ವತಸುಖಕ್ಕೆ ಬೇಕಾದ ಸೂಚನೆಗಳೂ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಅನುಕೂಲಿಸುವ ಪರಮತತ್ತ್ವಗಳೂ ತೋರಿಬರುವುವು-ಎಂಬ ನಂಬಿಕೆಯಿಟ್ಟು ಕೊಂಡಿರುವವರೇ, ಇಂಥ ಸ್ವರ್ಣಯುಗದ ರಾಜ್ಯಪದ್ಧತಿ ಹಿಂದೆ ಒಂದಾನೊಂದು ಕಾಲದಲ್ಲಿ ಗ್ರೀಸ್ ದೇಶದಲ್ಲಿ ಆಚರಣೆಯಲ್ಲಿತ್ತೆಂದು ಪ್ಲೇಟೋ ಕೂಡ ನಂಬಿದ್ದನೆಂದು ಕಾಣುತ್ತದೆ.

ಸ್ವರ್ಣಯುಗದ ವಿಷಯ ಇತಿಹಾಸದ ದೃಷ್ಟಿಯಲ್ಲಿ ಸತ್ಯವೇ ಆಗಲಿ ಅಸತ್ಯವೇ ಆಗಲಿ, ಇಲ್ಲಿವಿಚಾರ ಸೌಲಭ್ಯಕ್ಕೋಸ್ಕರ ಮೊದಲು ಒಂದಾನೊಂದು ಕಾಲದಲ್ಲಿ ರಾಜವಂಶದವರ ಸಾತ್ವಿಕವಾದ ಆದರ್ಶ ರಾಜ್ಯಕ್ರಮವಿತ್ತೆಂದು ಒಪ್ಪಿಕೊಳ್ಳೋಣ.

ಮೊದಲನೆಯ ಪರಿವರ್ತಸೆಯೇನೆಂದರೆ-ಇಂಥ ಸಾತ್ವಿಕ ಶ್ರೀಮಂತರ ರಾಜ್ಯಾಂಗದಿಂದ ರಾಜಸಿಕ ಶ್ರೀಮಂತರ ರಾಜ್ಯವು ಏರ್ಪಡುವುದು, ಪ್ಲೇಟೋವಿನ ಗ್ರಂಥದಲ್ಲಿ ಸಾತ್ವಿಕ, ರಾಜಸಿಕ, ತಾಮಸಿಕ ಎಂಬ ಪದಗಳಿಲ್ಲ, ಆದರೆ ಅವನು ನಿರೂಪಿಸುವ ಲಕ್ಷಣಗಳು ಈ ಶಬ್ದಗಳ ಅರ್ಥಸೂಕ್ಷ್ಮಕ್ಕೆ ಬಹುಮಟ್ಟಿಗೆ ಹೊಂದುತ್ತವೆ.

ಆದರ್ಶರಾಜ್ಯದ ಪ್ರಭುಗಳ ಮನಸ್ಸಿನಲ್ಲಿ ತತ್ತ್ವಪ್ರೇಮ, ಕ್ಷಾತ್ರಬಲ ಇವೆರಡೂ ಸಮರಸವಾಗಿ ಹೊಂದಿಕೊಂಡಿರುತ್ತವೆ. ನಮ್ಮ ಸಂಸ್ಕೃತಿಯ ಪದಗಳ ಪ್ರಕಾರ ಇದನ್ನು ಬ್ರಹ್ಮತೇಜಸ್ಸು ಮತ್ತು ಕ್ಷಾತ್ರ ಬಲಗಳೆರಡೂ ಸಮ್ಮೇಳನ ಹೊಂದಿದ ಮನೋಧರ್ಮ ಎನ್ನಬಹುದು. ಬ್ರಹ್ಮತೇಜಸ್ಸಿನ ಲಕ್ಷಣ: ತತ್ತ್ವದಲ್ಲಿ ಅಭಿಮಾನ, ತತ್ತ್ವಾನ್ವೇಷಣದಲ್ಲಿ ಅಭಿರುಚಿ, ಸಾತ್ವಿಕಧರ್ಮ ಪ್ರಾಧಾನ್ಯ ಮತ್ತು ಧರ್ಮದಲ್ಲಿ ಅಭಿರುಚಿ, ಇವು ಶ್ರೇಷ್ಠ ಧರ್ಮಗಳಾದರೂ ಪ್ರಭುತ್ವಕ್ಕೆ ಇಷ್ಟು ಸಾಲದೆಂಬುದು ಪ್ಲೇಟೋವಿನ ಅಭಿಪ್ರಾಯ. ಇವುಗಳ ಜೊತೆಗೆ ಕ್ಷತ್ರಿಯ ಧರ್ಮವೂ ಸೇರಿರಬೇಕು, ತಾವು ಕಂಡ ಬ್ರಹ್ಮತತ್ತ್ವವನ್ನು ಸಮಾಜ ಜೀವನದಲ್ಲಿಯೂ ರಾಷ್ಟ್ರವಿಧಾನದ ತಂತ್ರಗಳಲ್ಲಿಯೂ ರೂಪುಗೊಳಿಸಲು ಈಶ್ವರಭಾವವೂ ಶಕ್ತಿಸಂಪತ್ತಿಯೂ ತಕ್ಕಷ್ಟಿರಬೇಕು. ನಮ್ಮ ಸಂಸ್ಕೃತಿಯಲ್ಲಿ ಸತ್ವಗುಣದ ಪರಮಾವಧಿಯನ್ನು ಹೊಂದಿದವರು ಬ್ರಾಹ್ಮಣರೆಂದೂ ಸಂನ್ಯಾಸಿಗಳೆಂದೂ ವಿಂಗಡಿಸಿದ್ದಾರೆ. ಅವರಿಗೆ ಕ್ಷತ್ರಿಯಬಲದ ಅವಶ್ಯಕತೆಯಿರುವುದಿಲ್ಲ. ರಾಜ್ಯಭಾರದ ಕರ್ತವ್ಯವನ್ನು ಅಂಗೀಕರಿಸುವವರಿಗೆ ಬ್ರಹ್ಮತೇಜಸ್ಸೇನೋ ಸಾಕಷ್ಟಿರಬೇಕಾದರೂ ಅವರಲ್ಲಿ ರಜೋಗುಣ ಪ್ರಾಧಾನ್ಯವಾದ ಕ್ಷತ್ರಿಯಧರ್ಮವೇ ಹೆಚ್ಚಾಗಿರಬೇಕಾದ್ದೆಂದು ವ್ಯವಸ್ಥೆ ಮಾಡಿದ್ದಾರೆ. ಆದರೆ ಪ್ಲೇಟೋವಿನ ದೃಷ್ಟಿಯಲ್ಲಿ ಇವು ಬೇರೆಬೇರೆ ವರ್ಗಗಳಲ್ಲಿದ್ದರೆ ರಾಷ್ಟ್ರನಿರ್ಮಾಣ ಮತ್ತು ರಾಜ್ಯಭಾರ ನಿರ್ವಹಣ ಕಾರ್ಯಗಳಿಗೆ ಸಾಲದೆಂದು ಸ್ಪಷ್ಟವಾಗುತ್ತದೆ.

ಇಂಥ ರಾಜ್ಯವು ಹಿಂದೆ ಎಂದೋ ಒಂದು ಕಾಲದಲ್ಲಿ ಇದ್ದದ್ದೇ ಆದರೆ, ಅದು ಏಕೆ ಕ್ಷೀಣಸ್ಥಿತಿಗೆ ಬಂತು ಎಂಬ ಸಮಸ್ಯೆಯೇಳುತ್ತದೆ. ಬೇರೆಬೇರೆಯ ರಾಜ್ಯಾಂಗಗಳು ಹೊರಬೀಳಬೇಕಾದರೆ ರಾಮರಾಜ್ಯಕ್ಕೆ ಸಮಾನವಾದ ಆದರ್ಶರಾಜ್ಯವು ಕೆಡಬೇಕು. ಸರ್ವವಿಷಯಗಳಲ್ಲಿಯೂ ಸಂಪೂರ್ಣ ಶ್ರೇಷ್ಠತೆಯನ್ನು ಹೊರಸೂಸುವ ಆದರ್ಶರಾಜ್ಯದಲ್ಲಿ ಹೇಗೆ ದೋಷ ಪ್ರವೇಶಿಸಿತೆಂಬ ಪ್ರಶ್ನೆಗೆ ಸರಿಯಾದ ಉತ್ತರ ದೊರಕುವುದು ಕಷ್ಟ.

ಈ ಪ್ರಶ್ನೆಗೆ ಉತ್ತರವಾಗಿ ಪ್ಲೇಟೋ ಒಂದು ಗಹನವಾದ ಸೂಚನೆಕೊಡುತ್ತಾನೆ. ಆದರ್ಶರಾಜ್ಯವು ಹಿಂದೆ ಇದ್ದಿರಲಿ, ಇಲ್ಲದಿರಲಿ, ಈ ಸೂಚನೆಯ ಹಿಂದಿರುವ ತತ್ತ್ವವು ಅಮೂಲ್ಯವಾದ್ದು, ಸರ್ವಕಾಲಗಳಿಗೂ ಅನ್ವಯಿಸಕ್ಕದ್ದು. ಅದೇನೆಂದರೆ, ಪ್ರತಿಜನಾಂಗದ ನಾಯಕರೂ ತಮ್ಮ ತಮ್ಮ ರಾಷ್ಟ್ರದ ಜನಸಂಖ್ಯೆಯನ್ನು ನಿಯತವಾದ ಮಿತಿಗಳಿಲ್ಲಿಡಲು ಶಕ್ತರಾಗಿರಬೇಕು. ಜೀವರುಗಳ ಸಂತಾನಶಕ್ತಿ ಅಪಾರವಾದ್ದು. ಇದನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ರಾಷ್ಟ್ರಮುಖಂಡರ ಮುಖ್ಯ ಕಾರ್ಯಗಳಲ್ಲೊಂದು. ಪ್ರಾಣಿಗಳೇ ಆಗಲಿ, ಮನುಷ್ಯರೇ ಆಗಲಿ, ಅವರ ಸಂತಾನಶಕ್ತಿಯನ್ನು ನಿಯಮನ ಮಾಡುವ ತತ್ತ್ವಗಳಿವೆ. ಈ ತತ್ತ್ವಗಳನ್ನು ಅಂಕಗಣಿತ ರೇಖಾಗಣಿತ ಶಾಸ್ತ್ರಗಳ ಸಹಾಯದಿಂದ ಪ್ಲೇಟೋ ನಿರೂಪಿಸುತ್ತಾನೆ. ಈ ನಿರೂಪಣೆಯನ್ನು ಸಮಗ್ರವಾಗಿ ತಿಳಿದವರು ಬಹಳ ವಿರಳ. ಈ ವಿಷಯದಲ್ಲಿ ಗಣಿತ ಶಾಸ್ತ್ರ ಪ್ರವೇಶಕ್ಕೆ ಸಂಭವವಿರುವಂತೆ ತೋರುವುದಿಲ್ಲ. ಒಂದುವೇಳೆ ಹಾಗಿರುವುದಾದರೂ ಇದು ಇನ್ನೂ ಶಾಸ್ತ್ರಕಾರರಿಂದ ನಿಷ್ಕೃಷ್ಟವಾದ ಸಿದ್ಧಾಂತ ರೂಪಕ್ಕೆ ಬಂದಿಲ್ಲ.

ಗಣಿತ ಪ್ರಕರಣವನ್ನು ಬಿಟ್ಟರೂ, ಪ್ಲೇಟೋವಿನ ಅಭಿಪ್ರಾಯದಲ್ಲಿ ತಿರುಳಿದೆಯೆಂಬುದು ಸ್ಪಷ್ಟವಾಗಿ ಎದ್ದುಕಾಣುತ್ತದೆ. ಒಂದು ದೃಷ್ಟಿಯಿಂದ ಇದು ಜನಸಂಖ್ಯೆಯ ವಿಚಾರ. ದೇಶದಲ್ಲಿ ಜನಸಂಖ್ಯೆ ಮಿತಿ ಮೀರಿದರೆ ಆಹಾರ ಪದಾರ್ಥಗಳು ಸಾಲದಾಗುತ್ತದೆ. ಇದರಿಂದ ಅನರ್ಥಪರಂಪರೆಗಳೇ ಹುಟ್ಟಿಕೊಳ್ಳುತ್ತವೆ. ರಾಷ್ಟ್ರವು ಪ್ರಬಲವಾಗಿದ್ದರೆ, ನೆರೆಹೊರೆಯವರ ಮೇಲೆ ಯುದ್ಧಪ್ರಾಪ್ತಿಯಾಗುವ ಸಂಭವವುಂಟಾಗುತ್ತದೆ. ರಾಷ್ಟ್ರವು ಬಲಹೀನವಾಗಿದ್ದರೆ, ಒಳಯುದ್ಧ ಪ್ರಾರಂಭವಾಗುವುದು ಸ್ವಾಭಾವಿಕವೇ ಆಗಿದೆ. ಈ ಸಂದರ್ಭವನ್ನೇ ನಮ್ಮ ಗ್ರಂಥಗಳಲ್ಲಿ 'ಭೂಭಾರ'ವೆಂದು ಕರೆದಿದ್ದಾರೆ. ಜನಸಂಖ್ಯೆ ಮಿತಿಮೀರಿದರೆ ಭೂಭಾರವಾಗುತ್ತದೆ. ಭೂಮಿಗೆ ಎಷ್ಟು ಪ್ರಾಣಿಗಳಿಗೆ ಅನ್ನಾಹಾರಗಳನ್ನೊದಗಿಸುವ ಶಕ್ತಿಯಿದೆಯೋ ಆ ಎಲ್ಲೆಯನ್ನು ಮೀರಿ ಜನಸಂಖ್ಯೆ ಬೆಳೆದದ್ದೇ ಆದರೆ, ದೇವತೆಗಳು ಅನಿಷ್ಟ ಪರಂಪರೆಗಳನ್ನು ಕಳಿಸುತ್ತಾರೆಯೆಂಬ ಪ್ರತೀತಿ ನಮ್ಮಲ್ಲಿಯೂ ಇದೆ. ಈ ಅಭಿಪ್ರಾಯವು ಮಹಾಭಾರತದಲ್ಲಿ ಅಲ್ಲಲ್ಲಿ ಕಾಣಬರುತ್ತವೆ.

ಸಂಖ್ಯಾಪರಿಮಿತಿಯ ವಿಷಯವಲ್ಲದೆ ಇಂಥ ಸಂದರ್ಭದಲ್ಲಿ ಬೇರೊಂದು ಪರಿಣಾಮವೂ ಕಂಡುಬರುತ್ತದೆ. ಅದೂ ಅನರ್ಥಕಾರಿಯೇ. ಅದೇನೆಂದರೆ: ಪ್ರತಿಯೊಂದು ನಾಗರಿಕತೆಯ ವ್ಯವಸ್ಥೆಗೂ ರಾಷ್ಟ್ರೋನ್ನತಿಗೂ ಸಮಾಜದ

ಪ್ರಗತಿಸಾಧನೆಗೂ ಅನುಕೂಲಿಸುವಂತೆ ಒಟ್ಟು ಜನತೆಯಲ್ಲಿ ಶ್ರೇಷ್ಠರ ಸಂಖ್ಯೆ ಒಂದು ಪ್ರಮಾಣದಲ್ಲಿರಬೇಕು. ಒಂದಲ್ಲ ಒಂದು ಅಂಶದಲ್ಲಿ – ದೇಹಬಲವಾಗಲಿ ಬುದ್ಧಿಬಲವಾಗಲಿ – ಊನವಾಗಿರುವ ಜನ ಒಂದು ರಾಷ್ಟ್ರದಲ್ಲಿ ಒಂದು ಮಿತಿಮೀರಿ ಹೆಚ್ಚಿಹೋದರೆ ಆ ರಾಷ್ಟ್ರದಲ್ಲಿ ಅವ್ಯವಸ್ಥೆ ತಲೆದೋರುತ್ತದೆ. ಹೆಚ್ಚು ಪರಿಶ್ರಮ, ದೇಹದಾರ್ಢ್ಯ, ಬುದ್ಧಿಕುಶಲತೆ, ಇವುಗಳು ಅವಶ್ಯಕವಾಗಿ ಬೇಕಾದ ಸ್ಥಾನಗಳಿಗೆ ಸಾಕಷ್ಟು ಅರ್ಹರು ಸಿಕ್ಕುವುದು ಕಷ್ಟವಾಗುತ್ತದೆ. ಇದರಿಂದ ದೇಶದ ಅವನತಿಯು ಸ್ವತಃ ಸಿದ್ಧವಾಗುತ್ತದೆ.

ಸಂಖ್ಯಾದೃಷ್ಟಿಯಿಂದಲೂ ಗುಣದೃಷ್ಟಿಯಿಂದಲೂ ರಾಷ್ಟ್ರದಲ್ಲಿ ಜನಸಂಖ್ಯೆಯು ಬಹಳ ಹೆಚ್ಚಾಗಿಯೂ ಇರಕೂಡದು; ಬಹಳ ಕಡಮೆಯಾಗಿಯೂ ಇರಕೂಡದು. ರಾಷ್ಟ್ರದ ಏಳಿಗೆಗೆ ಸಹಾಯಕವಾದ ಒಂದು ಸಂಖ್ಯಾನಿಯಮವು ಜೀವಸ್ವರೂಪದಲ್ಲಿ ಅಡಗಿದೆಯೆಂಬುದು ಪ್ಲೇಟೋವಿನ ಸೂಕ್ಷ್ಮವಾದ ತತ್ತ್ವ.

ಗುಣದೃಷ್ಟಿಯಿಂದ ನೋಡಿದರೆ, ಜನಸಮೂಹವನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು. ಅತ್ಯುತ್ಕೃಷ್ಟ ಜೀವಾತ್ಮರು ಬಂಗಾರದ ಆತ್ಮಸ್ವರೂಪವುಳ್ಳವರಂತೆ; ಅವರಿಗಿಂತ ಸ್ವಲ್ಪ ಕಡಮೆಯಾದವರು ಬೆಳ್ಳಿಯ ಆತ್ಮಗಳಂತೆ; ಮಿಕ್ಕವರು ಕೊನೆಯ ಗುಂಪಿನವರು. ಅವರ ಸ್ವಭಾವವನ್ನು ಹಿತ್ತಾಳೆ ತಾಮ್ರಗಳಿಗೆ ಹೋಲಿಸಬಹುದು. ಹೀಗೆ ವಿಂಗಡಿಸುವುದರಲ್ಲಿ ಪ್ಲೇಟೋವಿನ ಅಭಿಪ್ರಾಯವೇನೆಂದರೆ; ಮನುಷ್ಯರಲ್ಲಿ ಆಗರ್ಭಸಿದ್ಧವಾದ ಬೇದಗಳಿವೆ. ಕೆಲವರಲ್ಲಿ ಉತ್ತಮ ಗುಣಗಳಿವೆ; ಕೆಲವರಲ್ಲಿ ಮಧ್ಯಮ ಗುಣಗಳಿವೆ; ಜನಸಾಮನ್ಯರಲ್ಲಿ ಸಾಧಾರಣ ಶಕ್ತಿಗಳಿವೆ.

ಆಧುನಿಕ ಶಾಸ್ತ್ರಗಳಲ್ಲಿ ಈ ವಿಷಯವಾಗಿ ವಿಫುಲವಾಗಿ ಶೋಧನೆಗಳು ನಡೆಯುತ್ತಿವೆ. ಪ್ರಾಣಿಶಾಸ್ತ್ರದಲ್ಲಿಯೂ ಮನಶ್ಶಾಸ್ತ್ರದಲ್ಲಿಯೂ ಸಂಶೋಧನೆಗಳು ನಡೆಯುತ್ತಿವೆ. ಆದರೆ ಜೀವದಲ್ಲಿ ತೋರಿಬರುವ ಅನುವಂಶಿಕ ಗುಣಪರಂಪರೆಯಲ್ಲಿ ಅಡಗಿರುವ ತತ್ತ್ವಗಳು ಇನ್ನೂ ನಿರ್ವಿವಾದವಾಗಿ ಸ್ಥಾಪಿಸಲ್ಪಟ್ಟಿಲ್ಲ.

ಆದರೂ ಅನುವಂಶಿಕಗುಣಗಳ ಪ್ರಭಾವವನ್ನೇನೋ ಒಂದಲ್ಲ ಒಂದು ರೀತಿಯಲ್ಲಿ ಒಪ್ಪಿಕೊಂಡು ಅದನ್ನು ಉಪಯೋಗಿಸಿಕೊಂಡಿರುವ ಪ್ರಸಂಗಗಳೂ ಉಂಟು. ಒಂದು ಕಾಳು ಬೆಳೆಯುವ ಕಡೆ ನಾಲ್ಕು ಕಾಳು ಬೆಳೆದಿದ್ದಾರೆ. ಹಣ್ಣು ಹಂಪಲುಗಳನ್ನು ಹೆಚ್ಚುಹೆಚ್ಚಾಗಿ ಬಿಡುವ ಜಾತಿಯ ಬೀಜಗಳನ್ನು ಸಂಶೋಧನೆಯಿಂದ ಕಂಡು ಹಿಡಿದಿದ್ದಾರೆ. ರಷ್ಯಾದಲ್ಲಿ ಬಣ್ಣ ಬಣ್ಣದ ಹತ್ತಿ ಬಿಡುವ ಬೇರೆ ಬೇರೆ ಜಾತಿಯ ಹತ್ತಿ ಬೀಜಗಳನ್ನು ಸೇರಿಸಿ ಮಿಶ್ರಜಾತಿಯ ಹತ್ತಿ ಬೆಳೆಗಳನ್ನು ಕಂಡುಹಿಡಿದಿದ್ದಾರೆ.

ಹಾಗೆಯೇ, ಹಸುಗಳಲ್ಲಿ ಹೆಚ್ಚು ಕಾಲುಕೊಡುವ ತಳಿಗಳನ್ನು ನಿರ್ಮಿಸಿ ಹೊಸ ವಿಶ್ವಾಮಿತ್ರ ಸೃಷ್ಟಿಯನ್ನೇ ಮಾಡಿದ್ದಾರೆ, ಸ್ವಾಭಾವಿಕವಾಗಿ ಪ್ರತಿದಿನ ೩೦–೪೦ ಸೇರು ಹಾಲು ಕೊಡುವ ಹಸುಗಳಿಲ್ಲ. ಆದರೆ, ಇಂತಹ ರಾಸುಗಳನ್ನು ಪ್ರಾಣಿಶಾಸ್ತ್ರದ ಸಂಶೋಧನೆಗಳ ಆಧಾರದಮೇಲೆ ಸೃಷ್ಟಿಸಿದ್ದಾರೆ.

ಜೂಜು ಕುದುರೆಗಳೂ ಬೇಟೆನಾಯಿಗಳೂ ಅನುವಂಶಿಕಗುಣಗಳಿವೆಂಬುದಕ್ಕೆ ನಿದರ್ಶನಗಳು.

ತತ್ತ್ವವೇನೋ ನಿರ್ವಿವಾದವಾಗಿದೆ. ಈ ತತ್ತ್ವವನ್ನು ಮನುಷ್ಯ ಸಮಾಜಕ್ಕೆ ಹೇಗೆ ಉಪಯೋಗಿಸಿಕೊಳ್ಳಬೇಕೆಂಬ ವಿಷಯದಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿವೆ. ಮನುಷ್ಯರಲ್ಲಿ ಯಾವಯಾವ ಗುಣವಿಶೇಷಗಳು ವಂಶಪರಂಪರೆಯಾಗಿ ಸಂತಾನ ವಾಹಕಗಳಾಗಿವೆಯೆಂಬ ವಿಷಯದಲ್ಲಿ ಇನ್ನೂ ಸಾಕಾದಷ್ಟು ನಿಶ್ಚಯಾತ್ಮಕವಾದ ನಿರ್ವಿವಾದವಾದ ಜ್ಞಾನ ದೊರೆತಿಲ್ಲ.

ಸಂತಾನವಾಹಕವಾದ ಗುಣಸಂಪತ್ತಿಗಳನ್ನು ಏಕದೇಶಜ್ಞಾನ ಸಹಾಯದಿಂದ ಉಪಯೋಗಿಸಿಕೊಳ್ಳಲು ತವಕಪಟ್ಟರೆ, ಒಳ್ಳೆಯದಕ್ಕಿಂತ ಕೇಡೇ ಹೆಚ್ಚಾಗುವ ಸಂಭವವಿದೆ. ಹಿಟ್ಲರ್ ರಾಜ್ಯದ ನಾಯಕರಿಂದ ಉಂಟಾದ ಹಾನಿಯಿಂದ ಇದನ್ನು ತಿಳಿಯಬಹುದು. ಅಲ್ಪಜ್ಞಾನವನ್ನು ಮಾನವ ಸಮಾಜಕ್ಕೆ ಯಾವರೀತಿಯಲ್ಲಿಯೂ ಅನ್ವಯಿಸಬಾರದೆಂಬುದಕ್ಕೆ ಸರ್ವಾಧಿಕಾರಿ ಹಿಟ್ಲರನ ಅನರ್ಥಕಾರಿ ನೀತಿಗಳು ನಿದರ್ಶನಗಳಾಗಿವೆ. ಹಿಟ್ಲರ್ ಪಕ್ಷದವರು ಮಾನವ ಜಾತಿಗಳಲ್ಲೆಲ್ಲ ನಾರ್ಡಿಕ್ (Nordic) ಜಾತಿಯವರೇ ಸರ್ವಶ್ರೇಷ್ಠರೆಂದು ನಂಬಿ, ಜರ್ಮನ್ ಜನಾಂಗದಲ್ಲಿ ಇವರೇ ಹೆಚ್ಚುಜನ ಇರುವರೆಂದು ತಿಳಿದು, 'ನಾರ್ಡಿಕ್' ಬುಡಕಟ್ಟಿನವರನ್ನೇ ಜರ್ಮನ್ ಜನಾಂಗದ ಮೂಲಭೂತ ಸಮಾಜವನ್ನಾಗಿ ಮಾಡಬೇಕೆಂದು ಉಗ್ರಕಾರ್ಯಕ್ರಮಗಳನ್ನು ಕೈಕೊಂಡರು. ಮೊದಲನೆಯದಾಗಿ, ಬೇರೆ ಜಾತಿಯವರಾದ ಯೆಹೂದ್ಯರನ್ನು ಅತ್ಯಂತ ಕ್ರೂರವಾಗಿ ಹಿಂಸೆಮಾಡಿ ಅವರಲ್ಲಿ ಲಕ್ಷಾಂತರ ಪ್ರಜೆಗಳನ್ನು ಕೊಂದು ಮತ್ತೆ ಲಕ್ಷಾಂತರ ಮಂದಿಯನ್ನು ದೇಶೋಚ್ಚಾಟನೆ ಮಾಡಿ, ಅವರ ಆಸ್ತಿಪಾಸ್ತಿಗಳನ್ನು ಕಸಿದುಕೊಂಡರು. ಬಂಗಾರದ ಬಣ್ಣದ ಕೂದಲು, ಬೆಕ್ಕಿನಕಣ್ಣು, ಉದ್ದುದ್ದ ಮುಖ, ಎತ್ತರವಾದ ಆಳ್ತನ– ಈ ಲಕ್ಷಣಗಳುಳ್ಳವರು ನಾರ್ಡಿಕ್ ಬುಡಕಟ್ಟಿನವರು. "ನಾರ್ಡಿಕರು ಪ್ರಪಂಚದಲ್ಲೆಲ್ಲಾ ಅತ್ಯುತ್ತಮವಾದ ಜಾತಿ. ಆದ್ದರಿಂದ ಇವರಿಗೇ ಇಡೀ ಪ್ರಪಂಚದ ಪ್ರಭುತ್ವವು ಸೇರತಕ್ಕದ್ದು" ಎಂದು ವಾದಹೂಡಿ, ಪ್ರಪಂಚವನ್ನೇ ಗೆದ್ದು ಸಪ್ತಖಂಡಗಳನ್ನೂ ಒಳಕೊಂಡ ಪ್ರಪಂಚ ಸಾಮ್ರಾಜ್ಯವನ್ನು ಕಟ್ಟುವುದಕ್ಕೆ ಅದ್ಭುತ ಪ್ರಯತ್ನಮಾಡಿದರು. ಇದರಿಂದ ಅವರಿಗೂ ಇತರರಿಗೂ ಭೀಷಣವಾದ ಮಹಾವಿಪತ್ತು ಸಂಭವಿಸಿತು.

ಆದ್ದರಿಂದ ಸಂತಾನವಾಹಕ ಗುಣ ಸಂಪತ್ತಿಯ ವಿಷಯದಲ್ಲಿ ಸತ್ಯಾಂಶವಿದ್ದರೂ ಅದನ್ನು ಮನುಷ್ಯನ ಸಂಸ್ಕೃತಿಗೆ ಹೊಂದಿಸಿಕೊಂಡು ಅವನ ಶಾಶ್ವತಪುರೋಭಿವೃದ್ಧಿ ಮಾರ್ಗವನ್ನು ಹಿಡಿಯುವುದಕ್ಕೆ ಇನ್ನೂ ಜ್ಞಾನ ಸಂಪತ್ತು ಸಾಲದಾಗಿದೆಯೆನ್ನಬಹುದು. ಅಂತೂ ಈವಿಷಯವು ರಾಷ್ಟ್ರಹಿತಕ್ಕೆ ಎಷ್ಟು ನೈಜವಾದ ಸಮೀಪವಾದ ಸಂಬಂಧವುಳ್ಳದ್ದು ಎಂಬ ಅಂಶವನ್ನು ಮಾತ್ರ ನಾವು ಪ್ಲೇಟೋವಿನ ಆಲೋಚನಾ ತರಂಗದಿಂದ ಕಲಿಯಬಹುದು.

ರಾಷ್ಟ್ರದ ಜನಸಂಖ್ಯೆ ಮತ್ತು ಅದರಲ್ಲಿ ಇರಬೇಕಾದ ಉತ್ತಮ ಜೀವರ ಸಂಖ್ಯೆಗಳಲ್ಲಿನ ಸಮತೂಕದಲ್ಲಿ ವ್ಯತ್ಯಾಸವಾದರೆ ರಾಜ್ಯಾಂಗದ ಸ್ವಭಾವ

ವ್ಯತ್ಯಾಸಹೊಂದುತ್ತದೆ. ಈ ವಿಷಯದ ಸಂಪೂರ್ಣ ಜ್ಞಾನವು ಇಂದ್ರಿಯನಿಷ್ಠವಾದ ಜ್ಞಾನವ್ಯಾಸವುಳ್ಳ ಕೇವಲ ಮಾನವರಿಗೆ ಸಾಧ್ಯವಿಲ್ಲವೆಂದು ಪ್ಲೇಟೋ ಸ್ಪಷ್ಟವಾಗಿ ಹೇಳುತ್ತಾನೆ.

ಹಾಗಾದರೆ, ಇಂದ್ರಿಯಜನ್ಯಜ್ಞಾನದ ಸಹಾಯವನ್ನು ಕೋರದಿರುವ ಅಪರೋಕ್ಷಜ್ಞಾನಿಗಳಿಗೆ ಈ ವಿಷಯವು ಸಂಪೂರ್ಣವಾಗಿ ಗೋಚರವಾಗುವುದೇ ಎಂಬ ವಿಚಾರದಗೊಡವೆಗೆ ಪ್ಲೇಟೋ ಹೋಗುವುದಿಲ್ಲ. ಇದು ನಮ್ಮ ಕುತೂಹಲಕ್ಕೆ ಸೇರಿದ ವಿಷಯ. ಮತಸ್ಥಾಪಕರೂ ಯೋಗಿಗಳೂ ಅಂಥ ಅಪರೋಕ್ಷ ಜ್ಞಾನವುಳ್ಳವರಾಗಿದ್ದರೆಂಬ, ಮತ್ತು ಈಗಲೂ ಅದಕ್ಕೆ ತಕ್ಕಸಾಧನೆಯನ್ನು ಯಶಸ್ವಿಯಾಗಿ ನಡೆಸಿದರೆ ಅದಕ್ಕೆ ತಕ್ಕ ಅಧಿಕಾರ ಸಂಪತ್ತಿಯಿರುವವರು ಅಂಥ ಅಪರೋಕ್ಷಜ್ಞಾನ ಅಥವಾ ಕೇವಲ ಜ್ಞಾನವನ್ನು ಸಂಪಾದಿಸಬಹುದೆಂಬ ಶ್ರದ್ಧೆ ಭಾರತೀಯ ಸಂಸ್ಕೃತಿಯಲ್ಲಿ ರೂಢಮೂಲವಾಗಿದೆ.

ಇದು ಹೇಗೇ ಇರಲಿ, ಸಾತ್ವಿಕಶ್ರೀಮಂತರಾಜ್ಯವು ಕೆಟ್ಟು ಅದಕ್ಕಿಂತ ಕಡಮೆದರ್ಜೆಯ ರಾಜ್ಯಾಂಗಕ್ಕೆ ಹೇಗೆ ಕಾರಣವಾಯಿತು ಎಂಬ ಸಮಸ್ಯೆಗೆ ಪ್ಲೇಟೋವಿನ ಉತ್ತರ, ಅಂಥ ರಾಜ್ಯದ ನಾಯಕರಿಗೆ ಜನಸಂಖ್ಯೆಯನ್ನು ನಿಯಮನಮಾಡುವ ಜ್ಞಾನ ಸಾಲದಾಯಿತು. ಎಂಬುದೇ,ಈ ವಿಷಯವಾಗಿ ಇದ್ದ ಅಜ್ಞಾನದ ಫಲವಾಗಿ ಸ್ವೇಚ್ಛಾಸಂತಾನ ಪದ್ಧತಿ ಬೆಳೆಯುತ್ತ ಬಂದು ಜನಸಂಖ್ಯೆ ಮಿತಿಮೀರಿತ್ತ ಬಂತು. ಶ್ರೇಷ್ಠ ಗುಣಸಂಪತ್ತಿಯಿರುವವರ ಸಂಖ್ಯೆ ಕಡಮೆಯಾಗುತ್ತ ಬಂತು. ರಾಷ್ಟ್ರದಲ್ಲಿ ಆತ್ಮಜ್ಞಾನ ಶಕ್ತಿಗಳಿಗಿಂತ ಪ್ರಾಕೃತ ತಾಮಸ ಶಕ್ತಿಗಳೇ ಪ್ರಬಲವಾದವು.

ಹೀಗಾಗಿ ಪ್ರಭುತ್ವವರ್ಗಕ್ಕೆ ಅನರ್ಹರು ಸೇರಿಕೊಳ್ಳುವುದು ಹೆಚ್ಚಾಗುತ್ತ ಬಂತು. ಈ ಹೊಸ ಆಡಳಿತಗಾರರಿಗೆ ಹಿಂದಿನವರ ತತ್ತ್ವ ಸೂಕ್ಷ್ಮ ಕಡಮೆಯಾಯಿತು. ಅದರಲ್ಲಿ ತತ್ತ್ವಪ್ರೇಮವೂ ಕಡಮೆಯಾಯಿತು. ಜ್ಞಾನಾರ್ಜನೆಗೆ ಸಹಕಾರಿಯಾದ ಉತ್ಸಾಹವೂ ಸಾಧನವೂ ಕ್ಷೀಣವಾಗುತ್ತ ಬಂಧವು. ಹಿಂದಿನ ಪದ್ಧತಿಯಲ್ಲಿ ಶಾಸ್ತ್ರಕಲೆಗಳಿಗೆ ಇದ್ದ ಮರ್ಯಾದೆ ಕಡಮೆಯಾಯಿತು. ಆದರ್ಶರಾಜ್ಯದಲ್ಲಿದ್ದ ವರ್ಗ ವ್ಯವಸ್ಥೆ ಶಿಥಿಲವಾಗುವುದಕ್ಕೆ ಮಾರ್ಗವಾಯಿತು. ಚಿನ್ನ, ಬೆಳ್ಳಿ, ಹಿತ್ತಾಳೆ ತಾಮ್ರ ಪಂಗಡಗಳಿಗೆ ಸೇರಿದ ಪ್ರಜೆಗಳನ್ನು ಸೂಕ್ಷ್ಮದೃಷ್ಟಿಯಿಂದ ಗುರುತು ಹಿಡಿದು, ಅವರವರಿಗೆ ತಕ್ಕಸ್ಥಾನಮಾನಗಳನ್ನು ನಿರ್ದೇಶ ಮಾಡುವ ಬುದ್ಧಿಶಕ್ತಿಯೂ ಅಚಲವಾದ ಸಂಕಲ್ಪವೂ ರಾಜರಲ್ಲಿ ಕಡಮೆಯಾಯಿತು. ಇದರ ಪರಿಣಾಮವೇನೆಂದರೆ: ಅನರ್ಹರು ಉನ್ನತಪದವಿಗಳಿಗೆ ಏರುವುದು, ಅರ್ಹರು ಕೀಳುಸ್ಥಾಪನೆಗಳಿಗೆ ಇಳಿಯುವುದು; ಸಮಾನರಿಗೂ ಅಸಮಾನರಿಗೂ ಸಮಾನತೆಯು ಏರ್ಪಡುವುದು; ಸಮಾಜದ ಕರ್ಮಗುಣಗಳ ವ್ಯವಸ್ಥೆ ಕೆಡುವುದು. ಇದೇ ಎಲ್ಲ ವೈಮನಸ್ಯಕ್ಕೂ ಕಲಹಕ್ಕೂ ಕಾರಣ.

ಇಂಥ ಸನ್ನಿವೇಶದಲ್ಲಿ ಉತ್ತಮ ಸ್ವಭಾವದವರಿಗೂ ಮಿಕ್ಕವರಿಗೂ ಕದನಗಳಾಗಿ, ಪ್ರಭುತ್ವದವರಲ್ಲಿ ಕೆಲವರು ಹಿಂದಿನ ಪದ್ಧತಿಯ ವಾಸನಾಬಲದಿಂದ ಆಸೆ

ಧನಲೋಭಗಳಿಗೆ ತುತ್ತಾಗದೆ ಕ್ಷಾತ್ರಧರ್ಮವನ್ನು ಉಳಿಸಿಕೊಂಡು ಅಧಿಕಾರಸ್ಥಾನದಲ್ಲಿ ನಿಲ್ಲುತ್ತಾರೆ. ಮಿಕ್ಕವರು ಧನ ಸಂಪಾನೆಯಲ್ಲಿ ಮಗ್ನರಾಗಿ ಅವರ ಪ್ರಭುತ್ವವನ್ನು ಅರೆಮನಸ್ಸಿನಿಂದ ಮನ್ನಿಸಿ ಪ್ರಜೆಗಳಾಗಿ ನಿಲ್ಲುತ್ತಾರೆ.

ಇದೇ ಆದರ್ಶರಾಜ್ಯದಿಂದ ಉತ್ಪನ್ನವಾಗುವ ಎರಡನೆಯ ರೀತಿಯ ರಾಜ್ಯಾಂಗ, ಈ ಪದ್ಧತಿಯಲ್ಲಿ ನಾಯಕರಾಗುವವರು ತಮಗೆ ಅನುಗುಣವಾದ ಶಾಸನಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಅವರ ಸ್ವಭಾವ ಕ್ಷಾತ್ರಧರ್ಮಪ್ರಧಾನವಾದ್ದು. ಈಶ್ವರಭಾವವು ಇವರಲ್ಲಿ ರೂಢಮೂಲವಾಗಿರುತ್ತದೆ. ಇದಕ್ಕೆ ತಕ್ಕ ವಿದ್ಯಾಭ್ಯಾಸ ಕ್ರಮವನ್ನು ತಮ್ಮ ವರ್ಗದವರಿಗೆ ಏರ್ಪಡಿಸಿಕೊಳ್ಳುತ್ತಾರೆ. ಇವರ ಯುವಕರು ವೀರರಿಗೆ ಅನುಗುಣವಾದ ವಿದ್ಯೆಗಳಲ್ಲಿ ಪ್ರವೀಣರಾಗುತ್ತಾರೆ. ಕುದುರೆ ಸವಾರಿ, ಬಿಲ್ಲುಬಾಣಗಳ ಪ್ರಯೋಗದಲ್ಲಿ ಕುಶಲತೆ, ಯುದ್ಧಕ್ಕೆ ಸಂಬಂಧಪಟ್ಟ ಮಿಕ್ಕವಿದ್ಯೆಗಳಲ್ಲಿ ಪರಿಶ್ರಮ, ದೇಹದಾರ್ಢ್ಯ, ಮನಃಸ್ಥೈರ್ಯ, ಧೈರ್ಯ ಶೌರ್ಯಗಳೂ, ಕಷ್ಟಸಹಿಷ್ಣುತೆ, ಇವುಗಳಿಗೆಲ್ಲ ಅವಶ್ಯಕವಾದ ಇಂದ್ರಿಯ ನಿಗ್ರಹ–ಇವೇ ಇವರ ವಿದ್ಯಾಸಂಪತ್ತಿ. ಬಲಸಂಪಾದನೆ, ಒಗ್ಗಟ್ಟು, ಶಿಸ್ತು, ನಾಯಕರ ಮಾತಿನಲ್ಲಿ ಗೌರವ, ದೇಶಪ್ರೇಮ, ಆತ್ಮಗೌರವ ಇವುಗಳು ಇವರ ಸ್ವಭಾವದಲ್ಲಿ ಬೆಳೆದು ಬಂದ ಮುಖ್ಯ ಗುಣಗಳು.

ಈ ರಾಜವಂಶದವರು ದ್ರವ್ಯಾರ್ಜನೆಯ ಗೋಜಿಗೆ ಹೋಗುವುದಿಲ್ಲ. ಪ್ರಭುತ್ವದ ಬಲದಿಂದ ಸಾಕಾದಷ್ಟು ಐಶ್ವರ್ಯವನ್ನು ಗಳಿಸಿಟ್ಟು ಕೊಳ್ಳುತ್ತಾರೆ. ಸಾಧಾರಣ ಕಸಬುಗಳು ಇವರಿಗೆ ರುಚಿಸುವುದಿಲ್ಲ. ಯುದ್ಧಕ್ಕೆ ಸದಾಸಿದ್ಧವಾಗಿರುವುದು, ರಾಜ್ಯದ ಆಡಳಿತದಲ್ಲಿ ನಿರತರಾಗಿರುವುದು, ದೇಶದಲ್ಲಿ ನ್ಯಾಯ ಶಾಂತಿಗಳನ್ನು ಕಾಪಾಡುವುದು, ದುಷ್ಟರ ಶಿಕ್ಷೆ, ಶಿಷ್ಟರ ಪರಿಪಾಲನೆ – ಈ ಕರ್ತವ್ಯಗಳು ಇವರ ಪಾಲಿಗೆ ಅನುಮಂಶಿಕವಾಗಿ ಬಂದಿರುತ್ತವೆ.

ರಾಜ್ಯದ ಇತರ ವರ್ಗಗಳು ಈ ಪದ್ಧತಿಗೆ ಮನ್ನಣೆಕೊಟ್ಟುಕೊಂಡು ಬಂದು, ವಿದೇಶಗಳಿಂದ ಅಪಾಯ ಸಂಭವವಿಲ್ಲದಿದ್ದರೆ ಈ ಕ್ಷತ್ರಿಯ ಪ್ರಭುತ್ವ ಪದ್ಧತಿಯಿಂದ ದೀರ್ಘಕಾಲ ಲೋಕ ಸಂಗ್ರಹವಾಗುತ್ತದೆ. ರಾಜನೀತಿಯೂ ಶಾಸ್ತ್ರಕಲೆಗಳೂ ಬೆಳೆಯುತ್ತವೆ. ಆದರೆ, ಶಕ್ತಿಯೇ ಪ್ರಭುತ್ವದ ಆಧಾರವಾದ್ದರಿಂದ ಇಂಥ ರಾಜ್ಯಗಳಿಗೆ ಕದನಪ್ರಸಂಗಗಳು ಮೇಲೆ ಮೇಲೆ ಒದಗುವ ಸಂಭವವುಂಟು. ಪ್ರಭುತ್ವ ವರ್ಗದವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೆ ಸತತವಾಗಿ ಸಿದ್ಧರಾಗಿರಬೇಕಾಗುತ್ತದೆ. ಆದುದರಿಂದ ಅವರಲ್ಲಿ ಷಡ್ಯಂತ್ರ * ವಿದ್ಯೆಗಳು ಮಾನ್ಯವಾಗುತ್ತವೆ. ಧರ್ಮಬುದ್ಧಿ ಕ್ಷೀಣವಾಗುವ ಸಂಭವ ಹೆಚ್ಚಾಗುತ್ತದೆ. ಕೋಟೆ ಕೊತ್ತಲಗಳನ್ನು ಕಟ್ಟುವುದರಲ್ಲಿಯೂ ಚದುರಂಗ ಸೈನ್ಯಗಳನ್ನು ಬಲಪಡಿಸುವುದರಲ್ಲಿಯೂ ರಾಜವರ್ಗದವರು ಸದಾನಿರತರಾಗಿರಬೇಕಾಗುತ್ತದೆ. ಇವಕ್ಕೆಲ್ಲ. ಹೆಚ್ಚು ಹೆಚ್ಚಾಗಿ ಹಣ ಬೇಕಾಗುವುದರಿಂದ ಧನ ಸಂಗ್ರಹವೇ ಮುಖ್ಯ ಧರ್ಮವಾಗಿ ಅವರಿಗೆ ತೋರುತ್ತ ಬರುತ್ತದೆ. ಕ್ರಮಕ್ರಮವಾಗಿ

---

* ಒಳಸಂಚು, ಪಿತೂರಿ.

ಅವರ ಮನೋಧರ್ಮವು ಬದಲಾಯಿಸುತ್ತ ಬರುತ್ತದೆ. ಕ್ಷಾತ್ರಧರ್ಮಕ್ಕೆ ಅನುಗುಣವಾದ ಆರ್ಜವ (ಎಂದರೆ, ಕುಟಿಲತೆಯಿಲ್ಲದಿರುವ ಗುಣವು) ಬಲಗುಂದುತ್ತದೆ.

ಬಲಪ್ರಯೋಗದಲ್ಲಿ ನುರಿತ ಅದರಲ್ಲಿಯೇ ಮಗ್ನರಾಗಿರುವುದರಿಂದ ಈ ಪದ್ಧತಿಯ ಪ್ರಭುತ್ವದವರು ಮೊದಲಿನ ಸಾತ್ವಿಕ ಗುಣಗಳನ್ನು ಕ್ರಮೇಣ ಕಳೆದುಕೊಳ್ಳುತ್ತ ಬರುತ್ತಾರೆ. ಬಲಪ್ರಯೋಗವನ್ನು ಧರ್ಮ ರಕ್ಷಣೆಗೆ ಬದಲಾಗಿ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳವ ಚಾಪಲ್ಯ ಪ್ರಬಲವಾಗುತ್ತದೆ. ಇದೇ ಧರ್ಮಹಾನಿಗೆ ಮೂಲ.

ಶಕ್ತಿಪೂಜೆಯು ಫಲಿಸಬೇಕಾದರೆ ಅದಕ್ಕೆ ತಕ್ಕಷ್ಟು ಆತ್ಮನಿಗ್ರಹವಿರಬೇಕು. ಶ್ರಮದಮಾದಿಸಂಪತ್ತಿಯಿಲ್ಲದಿರುವ ಶಕ್ತಿ ಎಲ್ಲೆ ತಪ್ಪುವುದು. ಸ್ವತಃಸಿದ್ಧ. ಪ್ರಭುತ್ವದವರು ಕ್ರಮೇಣ ಭೋಗಜೀವನಕ್ಕೆ ಮನಸೋಲುತ್ತಾರೆ. ಇವರ ಕೋಟೆ ಕೊತ್ತಲಗಳೂ ಅರಮನೆಗಳೂ ಮನರಂಜನ ಸಾಮಗ್ರಿಗಳಿಂದ ತುಂಬುತ್ತಾ ಬರುತ್ತದೆ. ಸುಖಲಾಲಸೆಯು ರಾಜವರ್ಗದವರ ಮನಸ್ಸನ್ನಪಹರಿಸಿ ಅವರ ಹಿಂದಿನ ಮನೋಭಾವಕ್ಕೆ ಪೋಷಕವಾದ ಗುಣಗಳನ್ನು ಕುಗ್ಗಿಸುತ್ತದೆ.

ಬಲದಿಂದ ಸುಖಕ್ಕೆ ಪ್ರವಹಿಸುವುದು ಮನಸ್ಸಿನ ಸ್ವಭಾವಜನ್ಯವಾದ ಗುಣ. ಕ್ಷತ್ರಿಯ ರಾಜ್ಯದ ಅವನತಿಗೆ ಇದೇ ಕಾರಣ. ಇದರ ಪ್ರಭಾವದಿಂದ ತತ್ತ್ವಪ್ರೇಮ, ಜ್ಞಾನಬಲ, ವಿದ್ಯಾರ್ಜನೆಯಲ್ಲಿ ಉತ್ಸಾಹ ಇವುಗಳಿಗೂ ಧೈರ್ಯ, ಸ್ಥೈರ್ಯ, ಬಲ ಸಂಪಾದನೆಗೆ ಬೇಕಾದ ವಿದ್ಯೆಗಳಲ್ಲಿ ಆಸಕ್ತಿ, ಸಮಾಜದಲ್ಲಿ ತಮಗಿರುವ ಸ್ಥಾನಕ್ಕೆ ಅನುಗುಣವಾದ ಕರ್ತವ್ಯನಿಷ್ಠೆ – ಇವುಗಳಿಗೂ ಹಿಂದೆ ಇದ್ದ ಸಮರಸವು ಕ್ರಮೇಣ ಮಾಯವಾಗುತ್ತದೆ. ವೀರರ ರಾಜ್ಯವು ಕ್ಷೀಣದೆಸೆಗೆ ಬಂದು ಬೇರೆ ರಾಜ್ಯಪದ್ಧತಿಗೆ ದಾರಿ ಮಾಡಿಕೊಡುವುದಕ್ಕೆ ಇದೇ ಕಾರಣವಾಗುತ್ತದೆ.

ಹೀಗೆ ಉತ್ಪನ್ನವಾಗುವ ರಾಜ್ಯಾಂಗದಲ್ಲಿ ಧನಿಕರು ಪ್ರಭುತ್ವ ಪದವಿಗೆ ಏರುತ್ತಾರೆ. ಕ್ಷತ್ರಿಯ ರಾಜ್ಯದ ತರುವಾಯ ವೈಶ್ಯ ರಾಜ್ಯವು ಪ್ರಬಲವಾಗುವುದು. ಮನಶ್ಶಾಸ್ತ್ರದ ನಿಯಮಗಳಿಗೆ ಅನುರೂಪವಾಗಿರುವಂತೆ ತೋರುತ್ತದೆ. ಪ್ಲೇಟೋವಿನ ಪ್ರತಿಪಾದನೆಗೆ ಕೇವಲ ಶಾಸ್ತ್ರಾಧಾರ ಮಾತ್ರವಲ್ಲದೆ ಗ್ರೀಸ್ ದೇಶದಲ್ಲಿ ವಿಸ್ತಾರವಾದ ಅನುಭವ ಸಾಮಗ್ರಿಯೂ ಯಥೇಷ್ಟವಾಗಿ ಕಾಣುತ್ತಿತ್ತು. ಏಷಿಯಾ ಮೈನರಿನ ತೀರ ಪ್ರದೇಶಗಳಲ್ಲಿಯೂ ಗ್ರೀಸಿನ ದ್ವೀಪಗಳಲ್ಲಿಯೂ ಬೆಳೆದಿದ್ದ ಹೆಲೆನ್ ಜನರ (ಗ್ರೀಕರ)ನಗರ ರಾಜ್ಯಗಳಲ್ಲಿ ಪ್ಲೇಟೋವಿನ ಕಾಲದಲ್ಲಿಯೂ ಅವನ ಹಿಂದಿನ ಒಂದೆರಡು ಶತಮಾನಗಳಲ್ಲಿ (ನಡೆದು ಬಂದ ಇತಿಹಾಸದಲ್ಲಿಯೂ ಅನೇಕ ರಾಜ್ಯಪದ್ಧತಿಗಳು ಬಂದು ಹೋದವು.) ಪ್ಲೇಟೋ ಅವುಗಳ ಇತಿಹಾಸ ಸರ್ವಸ್ವವನ್ನೆಲ್ಲ ಮನನಮಾಡಿ ಹೊರಗೆ ತೋರಿಬರುವ ಕದನ, ಕ್ರಾಂತಿ, ವ್ಯಕ್ತಿಗಳ ಪ್ರಭಾವ, ವರ್ಗಗಳ ಹೋರಾಟ, ಇವುಗಳನ್ನು ಅವುಗಳ ಹಿಂದೆ ಮಾನವ ಸ್ವಭಾವದಲ್ಲಿ ಮೂಡಿ ತಾಂಡವಾಡುವ ಮನೋಧರ್ಮಗಳಿಗೆ ಅನ್ವಯಿಸಿ, ರಾಜ್ಯ ಪರಿವರ್ತನೆಯ ವಿಷಯವಾಗಿ ಒಂದು ಶಾಸ್ತ್ರವನ್ನೇ ನಿರ್ಮಿಸಿದ್ದಾನೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು !

ಪರಂಪರೆ ಮತ್ತು ಸಂಪ್ರದಾಯ ಬಲದಿಂದ ಬಹುಕಾಲ ನಡೆದು ಬಂದ ರಾಜವಂಶದವರ ಪ್ರಭುತ್ವ ಪದ್ಧತಿಯ ಕ್ಷೀಣಹೊಂದಿ ಬೇರೆ ವರ್ಗದವರು ಪ್ರಭುತ್ವಕ್ಕೆ ಬರುವ ರೀತಿಯನ್ನು ಪ್ಲೇಟೋ ವರ್ಣಿಸಿರುವುದರಲ್ಲಿ ಶಾಶ್ವತ ತತ್ತ್ವಾಂಶವಿದೆ. ಅವನು ಸೂಚಿಸಿರುವ ಮನಶ್ಶಾಸ್ತ್ರ ನಿಯಮಗಳು ಆಧುನಿಕ ಯೂರೋಪಿನ ಚರಿತ್ರೆಯಲ್ಲಿ ಅಭಿವ್ಯಕ್ತವಾಗಿರುವುದನ್ನು ನಾವು ಸ್ಪಷ್ಟವಾಗಿ ಮನಗಾಣಬಹುದು.

ಆತ್ಮತತ್ತ್ವದಮೇಲೆ ಅಭಿಮಾನ ಕಡಮೆಯಾದರೆ ಧೈರ್ಯ, ಸ್ಥೈರ್ಯ ಮುಂತಾದ ವೀರಾಗ್ರಣಿಗೆ ಸಹಜವಾದ ಸದ್ಗುಣಗಳು ಬಹಳ ಕಾಲ ನಿಲ್ಲಲಾರವು ಎಂಬುದೇ ಇಲ್ಲಿ ಪ್ಲೇಟೋವಿನ ಸೂಕ್ಷ್ಮಸೂಚನೆ. ಶಕ್ತಿಸಂಪಾದನೆ ಮತ್ತು ಬಲಪ್ರಯೋಗಗಳು ರಾಜ್ಯಪರಿಪಾಲನೆಗೆ ಅಗತ್ಯವಾದವುಗಳೇ ಆದರೂ ಅವನ್ನು ಉಪಾಸನೆ ಮಾಡುವ ವರ್ಗಗಳು ಅವನ್ನು ಮೀರಿಸಿದ ತತ್ತ್ವಗಳನ್ನು ಮರೆಯಬಾರದು. ಬುದ್ಧಿ ಮನಸ್ಸುಗಳಿಗಿಂತ ಆತ್ಮತತ್ತ್ವವೇ ಶ್ರೇಷ್ಠ. ಕೊನೆಯ ಮಾತೇನೆಂದರೆ. ಲೋಕ ಕಲ್ಯಾಣಕ್ಕೂ ಜೀವನ ಶ್ರೇಯಸ್ಸಿಗೂ ಮಾರ್ಗ ಆತ್ಮನನ್ನು ಪ್ರಭತ್ವ ಸ್ಥಾನದಲ್ಲಿ ದೃಢವಾಗಿ ಕೂಡಿಸುವುದು. ಪ್ಲೇಟೋ ತತ್ತ್ವ ಪ್ರೇಮಕ್ಕೆ ಕೊಡುವ ಪ್ರಶಸ್ತಿಯಲ್ಲಿ ಈ ಅಂಶ ಸೂಚಿತವಾಗುತ್ತದೆ. ತತ್ತ್ವ ಪ್ರೇಮವು ಜೀವಾತ್ಮನಲ್ಲಿ ನೆಲಸಿದರೆ ಮಾತ್ರವೇ ಅದು ಧರ್ಮ ಬುದ್ಧಿಯನ್ನು ಕಾಪಾಡುತ್ತದೆ. ಧರ್ಮರಕ್ಷಕವಾದ ಗುಣ ತತ್ತ್ವ ಪ್ರೇಮಕ್ಕಿಂತ ಬೇರೊಂದಿಲ್ಲ ಎಂಬುದು ಪ್ಲೇಟೋವಿನ ತತ್ತ್ವದ ಸಾರ.

ಪ್ರತಿಯೊಂದು ರಾಜ್ಯಪದ್ಧತಿಯೂ ಒಂದೊಂದು ರೀತಿಯ ಮನೋಭಾವವನ್ನು ಮುಂದಕ್ಕೆ ತರುತ್ತದೆಯೆಂಬ ವಿಷಯವನ್ನು ಹಿಂದಿನ ಅಧ್ಯಾಯದಲ್ಲಿ ಪ್ರಜಾರಾಜ್ಯದ ವಿಮರ್ಶೆಯ ಸಂದರ್ಭದಲ್ಲಿ ಸೂಚಿಸಿದೆ. ಇದರಂತೆ ಕ್ಷತ್ರಿಯ ರಾಜ್ಯದಲ್ಲಿಯೂ ಕೂಡ ಅದಕ್ಕೆ ಅನುಗುಣವಾದ ಮನೋಧರ್ಮವುಳ್ಳ ವ್ಯಕ್ತಿಗಳು ಕಾಣಬರುತ್ತಾರೆ. ರಾಜ್ಯದ ಗುಣ ಅದರ ಸಂವಿಧಾನ ಸ್ವರೂಪವನ್ನು ಅನುಸರಿಸುತ್ತದೆ. ಸಂವಿಧಾನದಲ್ಲಿ ಮುಖ್ಯವಾದ್ದು ಪ್ರಭುತ್ವವರ್ಗದವರ ನಿರ್ದೇಶ. ಯಾವ ವರ್ಗದವರು ಯಾವ ನಿರ್ದಿಷ್ಟವಾದ ಮಾರ್ಗಗಳಲ್ಲಿ ಜನಸಮ್ಮತಿಯೊಡನೆ ಅಧಿಕಾರಕ್ಕೆ ಬಂದು ರಾಜ್ಯಸೂತ್ರಗಳನ್ನು ನಡೆಸಬಹುದು ಎಂಬುದನ್ನು ಸಂವಿಧಾನವು ನಿರ್ದೇಶಮಾಡುತ್ತದೆ. ರಾಜವಂಶದವರ ಆಡಳಿತ ಕ್ರಮದಲ್ಲಿ ಅವರ ಮನೋಭಾವವೇ ರಾಜ್ಯದ ಸ್ವಭಾವವನ್ನು ರೂಪಿಸತಕ್ಕದ್ದು.

ಈ ಮನೋಭಾವ ಎಂತಹುದು? ಇಂಥ ರಾಜ್ಯಾಂಗದಲ್ಲಿ ಅಧಿಕಾರಕ್ಕೆ ಬರತಕ್ಕ ವ್ಯಕ್ತಿಗಳ ಸ್ವಭಾವವೇನು? ಅವರ ನಡೆನುಡಿ ಎಂಥದು? – ಎಂಬ ವಿಷಯದಲ್ಲಿ ಪ್ಲೇಟೋ ಖಚಿತವಾದ ಸೂಚನೆ ಕೊಟ್ಟಿದ್ದಾನೆ.

ಈ ವ್ಯಕ್ತಿ ಅಭಿಮಾನಧನ. ಅವನ ಮಾನಸರ್ವಸ್ವವು ಅಧಿಕಾರ ದರ್ಪಗಳಲ್ಲಿ ಅಡಗಿರುತ್ತದೆಯೆನ್ನಬಹುದು. ಇದಕ್ಕೆ ಸಂಬಂಧಪಟ್ಟದ್ದಾಗಿ, ಇತರರನ್ನು ಮೀರಿಸಬೇಕೆಂಬ ಕುತೂಹಲವೂ ಸೇರಿಕೊಂಡಿರುತ್ತದೆ. ಪೈಪೋಟಿಯಲ್ಲಿ ಹುರುಪು

ಮಾನವ್ಯಾಮೋಹಕ್ಕೆ ಸೇರಿರುವಂತೆ ಕಾಣುತ್ತದೆ. ಈ ಹುರುಪು ಬಲಪ್ರದರ್ಶನದಲ್ಲಿ ವ್ಯಕ್ತವಾಗುತ್ತದೆ. ತಾನು ಬೇರೆಯವನನ್ನು ಮೀರಿಸಬೇಕೆಂಬ ಛಲ ಇತರರಲ್ಲಿ ವಿದ್ಯಾರ್ಜನೆಯಲ್ಲಿಯೋ ಧನಸಂಪಾದನೆಯಲ್ಲಿಯೋ ಹೊರತೋರಬಹುದು. ಈ ರಾಜ್ಯರೀತಿಯ ಆದರ್ಶ ವ್ಯಕ್ತಿಯಲ್ಲಿ ಇದು ಶಕ್ತಿ ಪ್ರಯೋಗ, ಕದನಪ್ರಿಯತೆ, ಇತರರಮೇಲೆ ದಬ್ಬಾಳಿಕೆ ಇವುಗಳ ಮೂಲಕ ಹೊರಬೀಳುತ್ತದೆ. ಇವನಲ್ಲಿ ಸ್ವಾಭಿಮಾನವೇ ಮುಖ್ಯಗುಣ. ಆದರೂ ಇವನು ಶಾಸ್ತ್ರಕಲೆಗಳಿಗೆ ತಲೆಬಾಗಿಸುವ ಸ್ವಭಾವವನ್ನು ಮರೆತಿರುವುದಿಲ್ಲ. ಒಟ್ಟಿನಲ್ಲಿ ಉನ್ನತ ಸಂಸ್ಕೃತಿ ಸಂಪ್ರದಾಯಗಳಿಗೆ ಮಾನಸಲ್ಲಿಸುತ್ತಾನೆ. ತನ್ನ ಧ್ಯೇಯವನ್ನು ಸಾಧಿಸಲು ಬೇಕಾದ ಶಕ್ತಿಸಂಪಾದನೆಯ ಕಾಲದಲ್ಲಿ ತಕ್ಕಷ್ಟು ಇಂದ್ರಿಯನಿಗ್ರಹ ಮತ್ತು ವಿದ್ಯಾರ್ಜನೆಗೆ ಬೇಕಾದಷ್ಟು ಸಂಯಮಗಳು ಇವನ ಸ್ವಭಾವದಲ್ಲಿ ಸೇರಿರುತ್ತವೆ. ಆದ್ದರಿಂದ ಇವನು ಶಾಸ್ತ್ರಕಲೆಗಳನ್ನೂ, ಸಾತ್ವಿಕ ಜೀವನದ ಆಶಯಗಳನ್ನೂ ಪ್ರವೃತ್ತಿಗಳನ್ನೂ ಸ್ವಲ್ಪಮಟ್ಟಿಗೆ ತಿಳಿದಿರುತ್ತಾನೆ. ಅವುಗಳ ವಿಷಯದಲ್ಲಿ ಗೌರಭಾವವನ್ನು ಹೊಂದಿರುತ್ತಾನೆ.

ಅಂಥ ಮನುಷ್ಯನು ಸಭೆಗಳ ಮುಂದೆ ನಿಂತು ವಾಗ್ಝರಿಯನ್ನು ಹರಿಸುವ ಶಕ್ತಿಯನ್ನು ಸಂಪಾದಿಸಿರುವುದಿಲ್ಲ; ಸಂಭಾಷಣ ಕೌಶಲ್ಯಕ್ಕೆ ಮನಕೊಟ್ಟು ಅದನ್ನು ಬೆಳಸಿರುವುದಿಲ್ಲ. ಅವನು ಸೇವಕರ ವಿಷಯದಲ್ಲಿ ಕಾಠಿಣ್ಯವನ್ನು ತೋರಬಹುದು. ಆದರೆ, ನಾಗರಿಕರಲ್ಲಿ ಗೌರವದಿಂದ ವರ್ತಿಸುತ್ತಾನೆ. ಮೇಲಿನವರಿಗೆ ವಿಧೇಯನಾಗಿರುತ್ತಾನೆ. ಆದರೆ ಅವನು ಬಲಪ್ರಿಯ, ಮಾನಧನ–ಎಂಬುದರಲ್ಲಿ ಸಂಶಯವಿಲ್ಲ. ಇವೇ ಇವನ ಸ್ವಭಾವದ ಮೂಲಪ್ರವೃತಿಗಳು. ಈಶ್ವರಭಾವವು ಇದರ ಜೀವಾಳ, ಇತರರಮೇಲೆ ಅಧಿಕಾರ ಮಾಡುವುದಕ್ಕೆ ತನಗೆ ಹಕ್ಕಿದೆಯೆಂಬ ದೃಢವಾದ ನಂಬಿಕೆ ಇವನಿಗಿರುತ್ತದೆ. ಈ ಹಕ್ಕನ್ನು ಇವನು ವಾಕ್ಚಾತುರ್ಯ, ಧನಬಲ ಮುಂತಾದ ವ್ಯಾಜದಿಂದ ಸಾಧಿಸಿಕೊಳ್ಳುವುದಿಲ್ಲ. ಪ್ರಭುತ್ವಕ್ಕೆ ಅಧಿಕಾರವು ತನ್ನ ವೀರಸ್ವಭಾವದಿಂದ ನೈಜವಾಗಿ ಹರಿಯುತ್ತದೆಯೆಂಬುದು ಇವನ ನಂಬಿಕೆ, ಯೋಧನಿಗೆ ಅಧಿಕಾರ ಸಲ್ಲತಕ್ಕದ್ದು ಎಂಬುದು ಇವನ ರಾಜಕೀಯ ತತ್ತ್ವ. ಯೋಧನಿಗೆ ಅನುಗುಣವಾದ ಶರೀರವ್ಯಾಯಾಮಗಳಲ್ಲಿಯೂ, ಬೇಟೆಯಲ್ಲಿಯೂ ಇವನಿಗೆ ಆಸಕ್ತಿಯಿರುವುದು ನ್ಯಾಯವೇ ಆಗಿದೆ. ಇಂಥವನಿಗೆ ಯೌವನಾವಸ್ಥೆಯಲ್ಲಿ ಧನಸಂಪಾದನೆಯಮೇಲೆ ಗಮನ ಹೋಗುವುದಿಲ್ಲ. ಆದರೆ ವಯಸ್ಸು ಮುಂದುರಿಯುತ್ತ ಬಂದಹಾಗೆಲ್ಲ ಐಶ್ವರ್ಯದ ಮಹಿಮೆಯು ಇವನಿಗೆ ಮನದಟ್ಟಾಗುತ್ತ ಬರುತ್ತದೆ.

ಈ ತೆರದ ವ್ಯಕ್ತಿಗಳು ಪ್ರಭುತ್ವ ಸ್ಥಾನದಲ್ಲಿರುವ ರಾಜ್ಯಪದ್ಧತಿಯು ಕ್ರಮೇಣ ಶಿಥಲವಾಗಿ ಬೇರೊಂದು ಪದ್ಧತಿಗೆ ಸ್ಥಳಕೊಡುವುದು ಸಮಂಜಸವಾಗಿಯೆ ಇದೆ. ರಾಜವಂಶದರ ಅಥವಾ ಯೋಧ ಶ್ರೀಮಂತರ ಸ್ವಭಾವದಲ್ಲಿಯೇ ಅವರ ನ್ಯೂನತೆಯು ಅಡಗಿರುವುದನ್ನು ಪ್ಲೇಟೋ ಸೂಚಿಸಿದ್ದಾನೆ. ಇವರ ಮುಖ್ಯಧ್ಯೇಯ ಪ್ರಭುತ್ವ, ಇವರು ಪ್ರಭುತ್ತಕ್ಕೆ ಅನುಕೂಲಿಸುವ ವ್ಯಾಯಾಮ ಅಸ್ತ್ರವಿದ್ಯಾದಿ ಕಲಾಪಗಳಲ್ಲಿ ಮಗ್ನರಾಗಿರುವಾಗ ದೇಶದಲ್ಲಿ ಇತರ ವರ್ಗದವರು ಹಣ ಸಂಪಾದನೆಯನ್ನೇ ಮುಖ್ಯವೃತ್ತಿಯಾಗಿ

ಮಾಡಿಕೊಳ್ಳುತ್ತಾರೆ; ಆಸ್ತಿಪಾಸ್ತಿಗಳನ್ನು ಶೇಖರಿಸುತ್ತ ಹೋಗುತ್ತಾರೆ. ಅವುಗಳಿಂದ ಹೊಂದಬಹುದಾದ ಸುಖಸೌಕರ್ಯಗಳನ್ನು ಅನುಭವಿಸುತ್ತಾರೆ.

ಇವರ ಸೌಧಗಳನ್ನೂ ಸುಖಜೀವನವನ್ನೂ ನೋಡಿ ಪ್ರಭುತ್ವ ವರ್ಗದವರು ಅಸೂಯೆಪಡುವುದು ಆಶ್ಚರ್ಯವಲ್ಲ ತಮ್ಮ ಕೈಯಲ್ಲಿ ಅಧಿಕಾರವಿರುವಾಗ ಅದನ್ನು ಪ್ರಯೋಗಿಸಿ ಧನಿಕರಿಂದ ಹಣವನ್ನು ಸುಲಿಗೆ ಮಾಡುವ ದುರ್ಬುದ್ಧಿ ಅವರಲ್ಲಿ ಹುಟ್ಟುವುದು ಸ್ವಾಭಾವಿಕವಾಗಿಯೇ ಇದೆ. ಮೊದಮೊದಲು ಇಂಥ ಅನ್ಯಾಯಗಳಿಗೆ ಮನಗೊಂಡದವರೇ ಅಧಿಕಾರವರ್ಗದಲ್ಲಿರುತ್ತಾರೆ. ಕ್ರಮೇಣ ಅನ್ಯಾಯಮಾರ್ಗಗಳಲ್ಲಿ ಹಣ ಸಂಪಾದಿಸುವ ಮನೋಧರ್ಮ ಹೆಚ್ಚಾಗುತ್ತ ಬರುತ್ತದೆ.

ರಾಜವಂಶದವರ ಆಸ್ತಿ ಭೂಮಿ, ಕೃಷಿಯಿಂದ ಉತ್ಪನ್ನವಾಗುವ ಹಣ ಕ್ಲುಪ್ತವಾದ್ದು. ಕಾಲಕಾಲಕ್ಕೆ ಮಳೆಯಾಗದಿದ್ದರೆ ನಿರೀಕ್ಷಿಸಿದ ವರವಮಾನ ಕಡಮೆಯಾಗುತ್ತದೆ. ವ್ಯಾಪಾರ ಕೈಗಾರಿಕೆಗಳಲ್ಲಿಯಾದರೋ ವರಮಾನ ಕ್ಲುಪ್ತವಾದದ್ದಲ್ಲ. ಈ ಉದ್ಯಮಗಳಲ್ಲಿ ಧನಸಂಗ್ರಹವು ಕಾಲ ಅನುಕೂಲಿಸಿದಾಗ ಬಹಳ ಹೆಚ್ಚಾಗುವುದು. ಇದರ ಫಲವಾಗಿ ಪ್ರಭುತ್ವದವರಿಗಿಂತ ವೈಶ್ಯವೃತ್ತಿಯಲ್ಲಿ ನಿರತರಾಗಿರುವ ವರ್ಗದವರು ಹೆಚ್ಚು ಐಶ್ವರ್ಯವಂತರಾಗುತ್ತಾರೆ. ಕಾಲಕ್ರಮೇಣ ಈ ವರ್ಗಗಳಿಗಿರುವ ಅಂತರವು ಹೆಚ್ಚುತ್ತ ಹೋಗುತ್ತದೆ.

ಯೋಧ ವೃತ್ತಿಯವರಿಗೆ ಇದು ಅನ್ಯಾಯವೆಂದು ತೋರುವುದು ಸಹಜವೇ ಆಗಿದೆ. ಏಕೆಂದರೆ, ಸದಾ ವಿಪತ್ತಿಗೆ ಗುರಿಯಾಗಿರುವವರು ತಾವು. ಸದಾ ಮರಣಭಯಕ್ಕೆ ಗುರಿಯಾಗಿರುವ ರಾಜವರ್ಗದವರಿಗೆ ಬೇರೆಯವರು ಸುಖವಾಗಿ ದೇಹಶ್ರಮವಿಲ್ಲದೆ, ಪ್ರಾಣಭಯವಿಲ್ಲದೆ, ಕೈಕಾಲುಗಳನ್ನು ಕದನದಲ್ಲಿ ಕಳೆದುಕೊಳ್ಳುವ ಆಪತ್ತಗಳಿಲ್ಲದೆ, ನೆರಳಿನಲ್ಲಿ ಕುಳಿತು ಹಣ ಶೇಖರಿಸಿ ತಮಗಿಂತ ಅನುಕೂಲಸ್ಥರಾಗಿರುವುದನ್ನು ನೋಡಿ ಸಹಿಸುವುದು ಕಷ್ಟವಾಗುತ್ತದೆ.

ಈ ವ್ಯಥೆಗೆ ಧೂಪಹಾಕುವವರು ಹೆಂಗಸರು, ಶ್ರೀಮಂತರ ಹೆಂಡತಿಯರು ತಮಗಿಂತ ಕೆಳಗಿನ ಅಂತಸ್ತಿನಲ್ಲಿರುವ ಜನರು ಧನಧಾನ್ಯ ಸಮೃದ್ಧಿ, ವಸ್ತ್ರಾಲಂಕಾರ, ಸೌಧಾರಾಮ ವಾಹನಾದಿ ಸುಖಸಾಮಗ್ರಿಗಳಲ್ಲಿ ಓಲಾಡುತ್ತಿರಲು, ಅವರಿಗಿಂತ ಮೇಲಿನ ವರ್ಗದವರಾದ ತಮ್ಮ ಪತಿಗಳು ಈ ವಿಷಯದಲ್ಲಿ ಅವರಿಗಿಂತ ಕಡಮೆಯಾಗಿರುವುದನ್ನು ಸಹಿಸಲಾರರು. ತಾವೂ ಧನಸಂಗ್ರಹ ಮಾಡಬೇಕೆಂದು ತಮ್ಮ ಗಂಡಂದಿರನ್ನು ಪ್ರೋತ್ಸಾಹಗೊಳಿಸುತ್ತಾರೆ. ಅವರು ಹಾಗೆ ಮಾಡದಿದ್ದರೆ. ಅವರ ವಿಷಯದಲ್ಲಿ ತಿರಸ್ಕಾರಭಾವನೆಯನ್ನು ತಾಳುತ್ತ ಬರುತ್ತಾರೆ. ತಮ್ಮ ಮಕ್ಕಳ ಮುಂದೆ ತಮ್ಮ ವ್ಯಥೆಯನ್ನು ತೋಡಿಕೊಳ್ಳುತ್ತ ಧನಸಂಪತ್ತಿಯ ಮಹಾತ್ಮ್ಯದ ಬೀಜವನ್ನು ಅವರ ಮನಸ್ಸಿನಲ್ಲಿ ಬಿತ್ತುತ್ತಾರೆ.

ಮುಂದಿನ ತಲೆಮಾರಿನಲ್ಲಿ ರಾಜವಂಶದ ಕೆಲವರು ವ್ಯಾಪಾರೋದ್ಯಮಗಳಿಗೆ ಇಳಿಯುತ್ತಾರೆ. ಇನ್ನುಕೆಲವರು ಧನಿಕರಿಂದ ಲಂಚ ತೆಗೆದುಕೊಳ್ಳುವ ಪದ್ಧತಿಯನ್ನು

ಪ್ರಾರಂಭಿಸುತ್ತಾರೆ. ಮತ್ತೆ ಕೆಲವರು ಅವರನ್ನು ಅನ್ಯಾಯವಾಗಿ ಪೀಡಿಸಿ ಹೆದರಿಸಿ ಹಿಂಸಿಸಿ ಹಣ ಸುಲಿಯುತ್ತಾರೆ.

ಈ ರೀತಿಯಲ್ಲಿ ಕ್ಷಾತ್ರಧರ್ಮವು ಮಲಿನವಾಗಿ ಪ್ರಭುತ್ವದವರ ಮನಸ್ಸಿನಲ್ಲಿ ಹಣದ ಪ್ರಭಾವ ಮನೆಮಾಡುತ್ತದೆ, ಧರ್ಮಕ್ಕೆ ಇದ್ದ ಶ್ರೇಷ್ಠಸ್ಥಾನವು ಮಾಯವಾಗುತ್ತದೆ.

ಸಮಾಜದಲ್ಲಿ ಯಾವುದು ಮಾನ್ಯವೋ ಅದೇ ಜನಸಾಮಾನ್ಯರ ಮನಸ್ಸನ್ನು ಅಪಹರಿಸುತ್ತದೆ, ವೀರ್ಯಕೀರ್ತಿಗಳಿಗೆ ವಿಶೇಷ ಗೌರವವಿರುವ ಸಮಾಜದಲ್ಲಿ ವೀರರೂ ಧರ್ಮಪ್ರೇಮಿಗಳೂ ಮುಂದಕ್ಕೆ ಬರುತ್ತಾರೆ. ಐಶ್ವರ್ಯ ಸುಖಲಾಲಸೆಗಳೇ ದೇಶದಲ್ಲಿ ಇಲ್ಲಕ್ಕಿಂತ ಹೆಚ್ಚು ಮನ್ನಣೆ ಪಡೆಯುವುದಾದರೆ ಜನರ ಮನಸ್ಸು ಈ ಧ್ಯೇಯಗಳಿಗೇ ಸೂರೆ ಹೋಗುತ್ತದೆ. ಪ್ಲೇಟೋ ಈ ತತ್ತ್ವವನ್ನೇ ಹಲವಾರು ಸಾರಿ ಅನೇಕ ಸಂಧರ್ಭಗಳಲ್ಲಿ ಮಂಡಿಸುತ್ತಾರೆ.

ಈ ರೀತಿಯಾಗಿ ಕ್ಷಾತ್ರಧರ್ಮವು ಮಲಿನವಾಗಿ ಹಿಂದಿನ ರಾಜವರ್ಗದವರ ಪ್ರಭುತ್ವವು ಮಾಯಾವಾಗುತ್ತಿರುವುದನ್ನು ಆಧುನಿಕ ಯೂರೋಪಿನ ಇತಿಹಾಸದಲ್ಲಿಯೂ ಕಾಣಬಹುದು. ರಾಜ್ಯಲಕ್ಷ್ಮಿಯು ಪುರಾತನಕಾಲದಿಂದ ಇತಿಹಾಸ ಪ್ರಸಿದ್ಧವಾಗಿ ಬಹುಕಾಲ ವೈಭವದಿಂದಾಳಿದ ರಾಜವಂಶಗಳವರ ನೆರೆಯನ್ನು ಬಿಟ್ಟು ಕಳೆದ ನೂರೈವತ್ತು ವರ್ಷಗಳಿಂದ ಹಣವಂತ ವರ್ಗದವರ ಆಶ್ರಯಕ್ಕೆ ತೆರಳುತ್ತಿರುವುದನ್ನು ನಮ್ಮ ಕಣ್ಣ ಮುಂದೆಯೇ ನೋಡುತ್ತಿದ್ದೇವೆ. ಫ್ರಾನ್ಸಿನ ಮಹಾಕ್ರಾಂತಿಯ(ಕ್ರಿ.ಶ.೧೭೮೯) ಗುಟ್ಟೇ ಇದು. ಆದರ ತರುವಾಯ ಎಲ್ಲೆಲ್ಲಿಯೂ ಪ್ರಜಾಪ್ರಭುತ್ವದ ವ್ಯಾಜದಿಂದ ವ್ಯಾಪಾರ ಕೈಗಾರಿಕೆಗಳ ಯಜಮಾನ ವರ್ಗದವರಿಗೆ ರಾಜ್ಯಧಿಕಾರ ದೊರೆಯುತ್ತ ಬಂತು. ೧೯೧೪ ನೆಯ ಇಸವಿಯ ವೇಳೆಗೆ ಈ ವೈಶ್ಯ ಅಥವಾ 'ಕುಬೇರ' ರಾಜ್ಯ ಪದ್ಧತಿಯು ಯೂರೋಪ್ ಅಮೆರಿಕ ರಾಷ್ಟ್ರಗಳಲ್ಲಿ ನೆಲೆಗೊಂಡು ಶಿಖರಕ್ಕೇರಿದ್ದವು. ಭಾರತದಲ್ಲಿ ಕೂಡ ಸ್ವಾತಂತ್ರ್ಯಯುಗವು ೧೯೪೭ರಲ್ಲಿ ಪ್ರಾರಂಭವಾದೊಡನೆಯೇ ದೇಶದಲ್ಲಿ ನೂರಾರುವರ್ಷಗಳಿಂದ ಆಳುತ್ತಿದ್ದ ರಾಜಮಹಾರಾಜರುಗಳು ಪದಚ್ಯುತರಾದರು. ಪ್ರಜಾಪ್ರಭುತ್ವದ ಆಕಾರವುಳ್ಳ ವಿಧಾನವನ್ನೇನೋ ಭಾರತವು ರಚಿಸಿಕೊಂಡಿದೆ. ಆದರೂ ಪ್ರಜಾಸಮುದಾಯಕ್ಕೆ ರಾಜಕೀಯ ಪ್ರಭುತ್ವ ಹರಡಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಹಾಗಾಗುವುದಕ್ಕೆ ಇನ್ನೂ ಕೆಲವುಕಾಲ ಬೇಕು. ಸದ್ಯದಲ್ಲಿ ಐಶ್ವರ್ಯವಂತರ ಪ್ರಭಾವ ಒಂದಲ್ಲ ಒಂದು ರೀತಿಯಲ್ಲಿ ಮೇಲ್ಗೈಯಾಗಿಯೇ ಉಳಿದಿದೆ. ಒಟ್ಟಿನಲ್ಲಿ ರಾಜವಂಶದವರಿಂದ ಮತ್ತು ಪರಕೀಯ ಪ್ರಭುತ್ವದಿಂದ ರಾಜಲಕ್ಷ್ಮಿಯು ಧನಿಕವರ್ಗದವರ ಹತ್ತಿರಕ್ಕೆ ಬಂದಿದ್ದಾಳೆಯೆನ್ನಬಹುದು. ಮುಂದಿನ ಹೆಜ್ಜೆ ಜನಸಾಮಾನ್ಯರಿಗೆ ರಾಜ್ಯಾಧಿಕಾರವನ್ನು ತಲುಪಿಸುವುದು.

ಅಂತೂ, ರಾಜವಂಶದವರ ರಾಜ್ಯಭಾರ ಪದ್ಧತಿಯ ತರುವಾಯ ಸ್ವಾಭಾವಿಕವಾಗಿ ಉದ್ಭವಿಸುವುದು ವೈಶ್ಯವರ್ಗ ಪ್ರಧಾನವಾದ ರಾಜ್ಯಾಂಗ. ಈ ಪದ್ಧತಿಯನ್ನು 'ಕುಬೇರ ರಾಜ್ಯ' (Plutocracy) ಎನ್ನಬಹುದು. ಹಿಟ್ಲರನು ಇಗ್ಲೇಂಡ್, ಫ್ರಾನ್ಸ್, ಅಮೇರಿಕದೇಶಗಳನ್ನು ಕುಬೇರರಾಜ್ಯಗಳೆಂದು ಮೂದಲಿಸುವ

ವಾಡಿಕೆಯಿಟ್ಟುಕೊಂಡಿದ್ದನು. ಈ ಖಂಡನೆಯಲ್ಲಿ ಸತ್ಯಾಂಶವು ಸಾಕಾದಷ್ಟಿರುವಂತೆ ತೋರುತ್ತದೆ.

ಅಧಿಕಾರವು ಹೀಗೆ ಯುದ್ಧಶಕ್ತಿಯಿಂದ ಧನಶಕ್ತಿಗೆ ಹೊರಳುತ್ತದೆ; ಇದಕ್ಕೆ ಮೊದಲನೆಯ ಕುರುಹೇನೆಂದರೆ, ನಾಗರಿಕ ಹಕ್ಕು ಪಡೆಯುವುದಕ್ಕೆ ಇಂತಿಷ್ಟು ಆಸ್ತಿಯಿರಬೇಕೆಂಬ ಶಾಸನ. ಸಾಕಾದಷ್ಟು ಧನವಿಲ್ಲದವರಿಗೆ ರಾಜ್ಯದಲ್ಲಿ ನಾಗರಿಕ ಸ್ಥಾನವಿಲ್ಲ, ಈ ಸುಧಾರಣೆಯು ಕೆಲವುಕಡೆ ಬಲಪ್ರಯೋಗದಿಂದಲೂ ಕೆಲವುಕಡೆ ಸಾಮ ದಾನ ಭೇದಗಳಿಂದಲೂ ಜಾರಿಗೆ ಬರುತ್ತದೆ. ಫ್ರಾನ್ಸಿನ ಕ್ರಾಂತಿಯನ್ನೂ ಇಂಗ್ಲೇಂಡಿನಲ್ಲಿ ಕಳೆದ ಶತಮಾನದಲ್ಲಿ ಕ್ರಮವಾಗಿ ನಡೆದ ಪರಿವರ್ತನೆಯನ್ನೂ ಇದಕ್ಕೆ ನಿದರ್ಶನವಾಗಿ ಕಾಣಬಹುದು. ಪ್ಲೇಟೋವಿನ ಕಾಲಕ್ಕೆ ಪೂರ್ವದಲ್ಲಿಯೂ ಈ ರೀತಿಯಲ್ಲಿ ಎಷ್ಟೋ ಗ್ರೀಕ್ ನಗರಗಳಲ್ಲಿ ಅಧಿಕಾರವು ರಾಜರಿಂದ, ರಾಜವರ್ಗದವರಿಂದ ಧನಿಕಶ್ರೇಣಿಗಳಿಗೆ ಬಂದುಹೋಗಿತ್ತು.

ಕಾಲಕ್ರಮದಲ್ಲಿ ಈ ತೆರನಾದ ವೈಶ್ಯರಾಜ್ಯದಲ್ಲಿಯೂ ಅದಕ್ಕೆ ಸಹಜವಾದ ಗುಣದೋಷಗಳು ಕಾಣಬರುತ್ತವೆ. ದೋಷಗಳಲ್ಲಿ ಮುಖ್ಯವಾದ್ದು ಕೆಲಸಕ್ಕೆ ಅನುಗುಣವಾದ ಯೋಗ್ಯತೆಯನ್ನು ಗಳಿಸಿರುವವರಿಗೆ ಆಯಾ ಕೆಲಸಗಳನ್ನು ಕೊಡುವ ಪದ್ಧತಿ ಸಡಿಲವಾಗುವುದು. ಇದಕ್ಕೆ ಬದಲಾಗಿ ಧನಿಕರು ತಮ್ಮ ಧನಬಲ ಮತ್ತು ಸ್ವಜನಸಹಾಯಗಳಿಂದ ತಮ್ಮವರಿಗೇ ಅಧಿಕಾರ ಸ್ಥಾನಗಳನ್ನು ಕೊಡಿಸುತ್ತ ಬರುತ್ತಾರೆ. ಅನರ್ಹರಿಗೆ ಪದವಿ ದೊರೆತರೆ ದೇಶ ಹಾಳು–ಎಂಬುದೇ ಮುಖ್ಯತತ್ತ್ವ. ಇದನ್ನು ಪ್ಲೇಟೋ ಅನೇಕ ಸಂದರ್ಭಗಳಲ್ಲಿ ಸಮಯೋಜಿತವಾಗಿ ಹೃದಯಂಗಮವಾಗುವಂತೆ ಮಂಡಿಸುತ್ತಾನೆ.

ಈ ನೀತಿಯು ಬೆಳೆದಹಾಗೆಲ್ಲ ಈ ಧನಿಕರ ರಾಜ್ಯದಲ್ಲಿ ಮತ್ತೊಂದು ದೋಷ ತಲೆಯೆತ್ತುತ್ತದೆ. ಅದೇನೆಂದರೆ, ಸಮಾಜವೂ ರಾಷ್ಟ್ರವೂ ಇಬ್ಭಾಗವಾಗುವ ಸಂಭವ, ರಾಷ್ಟ್ರದ ಐಕ್ಯತೆ ಒಡೆದುಹೋಗಿ ಎರಡು ರಾಷ್ಟ್ರವಾಗುತ್ತವೆ. ಒಂದು ಹಣವಂತರ ರಾಜ್ಯ; ಇನ್ನೊಂದು ಬಡವರ ರಾಜ್ಯ. ಈ ಎರಡು ರಾಜ್ಯದವರೂ ಒಂದೇ ಸ್ಥಳದಲ್ಲಿ ವಾಸವಾಗಿದ್ದು ಒಬ್ಬರ ಮೇಲೊಬ್ಬರು ಸತತ ಕುತಂತ್ರ ಮಾಡುತ್ತಿರುತ್ತಾರೆ.

ಹೀಗಿರಲು, ಈ ಪದ್ಧತಿಯಲ್ಲಿ ಮತ್ತೊಂದು ದೋಷ ತಲೆಯೆತ್ತುವುದು ಆಶ್ಚರ್ಯವಲ್ಲ. ಅದೇನೆಂದರೆ, ಯಶಸ್ವಿಯಾಗಿ ಯುದ್ಧ ಕಾರ್ಯಗಳನ್ನು ಜರುಗಿಸಲು ಅಸಮರ್ಥತೆ, ದೇಶದ ರಕ್ಷಣೆಗೆ ಪ್ರಭುತ್ವದವರು ಸೈನ್ಯಾಧಿಕಾರಿಗಳನ್ನು ನಂಬಿ ಅವರಿಗೆ ಉನ್ನತಸ್ಥಾನಗಳನ್ನು ಕೊಡಬೇಕಾಗುತ್ತದೆ. ಜನ ಸಾಮಾನ್ಯರಿಗೆ ಆಯುಧಗಳನ್ನು ಕೊಟ್ಟು ಅವರಲ್ಲಿ ಕದನ ಕೌಶಲವನ್ನು ಪ್ರೇರಣೆಮಾಡಬೇಕಾಗುತ್ತದೆ. ಈ ಪರಿಣಾಮಗಳು ಧನಿಕವರ್ಗದವರಿಗೆ ರುಚಿಕರವಾಗುವುದಿಲ್ಲ. ಸೈನ್ಯಾಧಿಕಾರಿಗಳೂ ಯುದ್ಧವಿದ್ಯೆಯಲ್ಲಿ ತರಪೇತಾದ ಸಾಮಾನ್ಯ ಜನರೂ ಹೆಚ್ಚು ಸಂಬಳ ಸಾರಿಗೆಗಳನ್ನೂ ನಾಗರಿಕ ಹಕ್ಕುಗಳನ್ನೂ ಕೇಳತೊಡಗಬಹುದು. ಹಾಗೆಯೇ, ಸಂದರ್ಭಾನುಸಾರವಾಗಿ

ಕ್ರಾಂತಿಸನ್ನಾಹವನ್ನೂ ಯೋಜಿಸಬಹುದು ; ಬಲಪ್ರಯೋಗಮಾಡಿ ಬಲಾತ್ಕಾರವಾಗಿ ಪ್ರಭುತ್ವ ಸ್ಥಾನಗಳನ್ನು ಆಕ್ರಮಿಸಿ ತಮ್ಮದೇ ಆದ ಹೊಸ ಆಡಳಿತವನ್ನು ಏರ್ಪಡಿಸಿಕೊಳ್ಳಬಹುದು. ಆದುದರಿಂದ ಪ್ರಭುತ್ವವರ್ಗದವರು ಶತ್ರುಗಳಿಗಿಂತ ತಮ್ಮ ಜನರ ವಿಷಯದಲ್ಲಿಯೇ ಶಂಕೆಪಡುವ ಸಂದರ್ಭವಿರುತ್ತದೆ. ಅಲ್ಲದೆ, ಸೈನ್ಯಬಲವನ್ನು ಹೆಚ್ಚಿಸಬೇಕಾದರೆ ಅಪಾರ ಹಣ ವ್ಯಯವಾಗುವುದು ಅನಿವಾರ್ಯ. ಧನಿಕವರ್ಗದವರಿಗೆ ಇದು ರುಚಿಸುವುದಿಲ್ಲ. ಏಕೆಂದರೆ, ಯುದ್ಧದ ಖರ್ಚಿಗಾಗಿ ಅವರು ಹೆಚ್ಚಿನ ಕಂದಾಯಗಳ ಹೊರೆಯನ್ನು ಹೊರಬೇಕಾಗಿತ್ತದೆ. ಜನರಿಗೆ ಆಯುಧಗಳನ್ನು ಸರಬರಾಜು ಮಾಡಿ ಅವರಲ್ಲಿ ಧೈರ್ಯ ಸಂಘಟನ ಶಕ್ತಿಗಳನ್ನು ಅಭಿವೃದ್ಧಿಗೊಳಿಸುವುದು ಒಂದು ಅಪಾಯ. ಹಾಗೆ ರಕ್ಷಣಕಾರ್ಯಗಳನ್ನು ಮುಂದುವರಿಸಿದರೆ ಹೆಚ್ಚು ಕಂದಾಯ ತೆರಬೇಕಾಗುವುದು ಮತ್ತೊಂದು ಅನಿಷ್ಟ. ಈ ಉಭಯ ಸಂಕಟಕ್ಕೆ ಸಿಕ್ಕಿ ವೈಶ್ಯರಾಜ್ಯದ ಮುಖಂಡರು ನರಳುತ್ತಾರೆ.

ಇವೆಲ್ಲ ಕೊರತೆಗಳಿಗಿಂತ ಹೆಚ್ಚಾದ ದೋಷವು ಮತ್ತೊಂದಿದೆ. ಇದೇನೆಂದರೆ, ಧನಿಕರ ಆಡಳಿತದಲ್ಲಿ ಕೆಲವರು ಅನೇಕ ಕಾರಣಗಳಿಂದ ತಮ್ಮ ಆಸ್ತಿಯನ್ನು ಕಳೆದುಕೊಳ್ಳುವ ಸಂದರ್ಭಗಳು ಬರುತ್ತವೆ. ವ್ಯಾಪಾರದಲ್ಲಿ ನಷ್ಟಹೊಂದಿ ದಿವಾಳಿಯಾಗಬಹುದು. ವ್ಯಾಪಾರ ಕೈಗಾರಿಕೆಗಳಲ್ಲಿ ಉನ್ನತಿಗೆ ಬರಬೇಕಾದರೆ ಅವಶ್ಯವಾದ ಗುಣಗಳು ಕೆಲವರಿಗೆ ಇಲ್ಲದಿರಬಹುದು. ಇದ್ದರೂ, ಅವರು ಇತರರಿಂದ ಮೋಸಹೋಗಬಹುದು. ಇಲ್ಲವೆ, ದುಂದುಗಾರಿಕೆಯಿಂದ ತನ್ನ ಹಣ ನೀರಾಗಿ ಕರಗಿ ಹೋಗಿ ನಾಗರಿಕನು ಕೇವಲ ಬಡವನಾಗವಹುದು.

ಅಧಿಕಾರಿವರ್ಗದವರಲ್ಲಿ ಸೇರಿದ್ದರೂ ಅನೇಕರು ರಾಜಕೀಯದಲ್ಲಿ ಭಾಗವಹಿಸುವುದಿಲ್ಲ. ಕೇವಲ ಸ್ವಾರ್ಥದಲ್ಲಿಯೇ ಮಗ್ನರಾಗಿರುತ್ತಾರೆ. ಜೇನಗೂಡಿನಲ್ಲಿ ಜೇನುತಂದುಹಾಕದ ಕೆಲವು ಜೇನುಗಳಿರುತ್ತವೆ. ಅವು ಯಾವ ಫಲಕಾರಿಯಾದ ಕೆಲಸವನ್ನೂ ಮಾಡುವುದಿಲ್ಲ. ಇತರರು ತಂದ ರಸವನ್ನು ತಿಂದುಕೊಂಡು ಸೋಮಾರಿಗಳಾಗಿ ಇದ್ದು ಬಿಡುತ್ತವೆ. ಏನೂ ಕೆಲಸಮಾಡದೆ ಸಮಾಜಕ್ಕೆ ಯಾವ ರೀತಿಯಾದ ಸೇವೆಯನ್ನೂ ಸಲ್ಲಿಸದೆ ಕೆಲವು ನಾಗರಿಕರು ಕಾಲಹಾಕುತ್ತಿರುತ್ತಾರೆ. ಅಂಥವರು ನಿರ್ಗತಿಕರಾದರೆ ಅಂಥವರಿಂದ ದೇಶಕ್ಕೆ ಹಾನಿತಟ್ಟುವ ಸಂಭವವೊದಗುತ್ತದೆ. ಸೋಮಾರಿ ಜೇನುಗಳಲ್ಲಿ ಎರಡು ವಿಧ, ಕೆಲವಕ್ಕೆ ಕೊಂಡಿಯಿರುವುದಿಲ್ಲ, ಕೆಲವಕ್ಕೆ ಕೊಂಡಿಯಿರುತ್ತದೆ. ಅದರಂತಯೇ ಸೋಮರಿ ನಾಗರಿಕರಲ್ಲಿಯೂ ಎರಡು ವಿಧ. ಒಂದು ವಿಧದವರು ನಿರ್ಗತಿಕರಾಗಿ ಕೊನೆಗಾಣುತ್ತಾರೆ. ಇನ್ನೊಂದು ಪಂಗಡದವರು ಕಳ್ಳಕಾಕರಾಗುತ್ತಾರೆ.

ಇಂಥ ಧನಿಕರಾಜ್ಯದಲ್ಲಿ ಆ ವರ್ಗಕ್ಕೆ ಸೇರದ ಉಳಿದವರೆಲ್ಲ ನಿರ್ಗತಿಕರಾಗುವ ಸಂಭವವಿದೆ. ಅವರಲ್ಲಿ ಕೆಲವರು ಕೆಟ್ಟ ಹಾದಿ ಹಿಡಿಯುತ್ತಾರೆ. ಬಾಲ್ಯದಲ್ಲಿ ಸರಿಯಾದ ವಿದ್ಯಾಭ್ಯಾಸವಿಲ್ಲದೆಯೇ ಕೆಟ್ಟ ಸಹವಾಸದಿಂದಲೋ ದೇಶದ ಅವ್ಯವಸ್ಥೆಯ ಕಾರಣದಿಂದಲೋ ಪುಂಡ ಜನರ ಸಂಖ್ಯೆ ಹೆಚ್ಚುತ್ತ ಬರುತ್ತದೆ. ಈ ಜನರು

ಪ್ರಭುತ್ವದವರ ಸುಖಸಂಪತ್ತುಗಳನ್ನೂ ಅಧಿಕಾರ ದರ್ಪಗಳನ್ನೂ ನೋಡಿ ಅಸೂಯೆ ಪಡುತ್ತಾರೆ. ಇವರಲ್ಲಿ ಮುಖಂಡರಾಗಿ ನಿಂತು ಪ್ರಭುತ್ವದವರನ್ನು ಪ್ರತಿಭಟಿಸಲು ಉದ್ಯುಕ್ತರಾಗುತ್ತಾರೆ. ಜನರನ್ನು ಎತ್ತಿ ಕಟ್ಟಿ ಸರ್ಕಾರಕ್ಕೆ ಭಯಹುಟ್ಟಿಸಿ ಹೆಚ್ಚು ಅನುಕೂಲಗಳನ್ನಾಗಲಿ ಹಣ ವಿನಿಮಯವನ್ನಾಗಲಿ ಅವರಿಗೆ ಕೊಡಿಸಿಕೊಡುತ್ತಾರೆ. ಈ ಅಭಿರುಚಿಯು ಜನರಲ್ಲಿ ಬೆಳೆಯುತ್ತ ಹೋಗುತ್ತದೆ. ಯುದ್ಧಕಾಲದಲ್ಲಿ ಜನಸ್ತೋಮವನ್ನು ತೃಪ್ತಿಪಡಿಸಬೇಕಾದ್ದು ಅನಿವಾರ್ಯವಾಗುತ್ತದೆ. ಶಾಂತಿಕಾಲ ಮತ್ತೆ ಬಂದ ಮೇಲೆ ಜನರಿಗೆ ಆಸೆ ದ್ವಿಗುಣವಾಗುತ್ತದೆ. ಪ್ರಭುತ್ವದವರನ್ನು ತೀವ್ರವಾಗಿ ಖಂಡಿಸುವ ಮುಖಂಡರು ಹೊರಬೀಳುತ್ತಾರೆ. ಜನರ ಸಹಾಯದಿಂದ ಒಂದು ದೊಡ್ಡ ಕ್ರಾಂತಿಯೇ ಸಂಭವಿಸಬಹುದು. ಹೀಗೆ ಕ್ರಾಂತಿಯ ಮೂಲಕವೋ ಕೇವಲ ಕ್ರಾಂತಿಭೀತಿಯ ಪ್ರಭಾವದಿಂದಲೋ ಪ್ರಜೆಗಳಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕಾಗುತ್ತದೆ. ಈ ಸನ್ನಿವೇಶವು ಪರಿಪುಷ್ಟವಾದರೆ ಅಲ್ಪಸಂಖಾತರಾದ ಧನಿಕರ ಕುಬೇರ ರಾಜ್ಯವು ಕುಸಿದುಬಿದ್ದು ಪ್ರಜಾರಾಜ್ಯವು ಏರ್ಪಡುತ್ತದೆ.

ಕ್ಷತ್ರಿಯರ ಆಡಳಿತಕ್ರಮದಲ್ಲಿ ಬೆಳೆಯುವ ಮನೋವೃತ್ತಿಯಂತೆಯೇ ವೈಶ್ಯವರ್ಗದವರ ರಾಜ್ಯದಲ್ಲಿಯೂ ಅದಕ್ಕನುಗುಣವಾದ ಮನೋವೃತ್ತಿ ಬೆಳೆಯುತ್ತದೆ. ಧನಿಕರ ರಾಜ್ಯದಲ್ಲಿ ಪುಷ್ಟಿ ಹೊಂದುವ ಮನೋಧರ್ಮ ದ್ರವ್ಯ ಸಂಪಾದನೆಗೆ ಸಹಾಯಕವಾದ ಗುಣ. ಇಲ್ಲಿ ಜನರ ಮುಖ್ಯ ಗುರಿ ಧನಸಂಗ್ರಹ. ಆದಕಾರಣ ಧನವ್ಯಯ ಮಾಡುವುದು ಇದಕ್ಕೆ ಪ್ರತಿಯಾದ ಅವಗುಣವೆನ್ನಿಸುತ್ತದೆ. ಧನಸಂಗ್ರಹಕ್ಕಾಗಿ ಹಗಲಿರುಳೂ ದುಡಿಯುವುದು, ಕಾಸಿಗೆ ಕಾಸು ಗಂಟುಹಾಕುವುದು, ಮಿತವ್ಯಯ, ಇಂದ್ರಿಯನಿಗ್ರಹ, ಸುಖಸಂತೋಷಗಳಲ್ಲಿ ಮಿತಿ, ಆರ್ಥಿಕ ದೃಷ್ಟಿಯಲ್ಲಿ ಯಾವುದು ಪ್ರಯೋನಜಕಾರಿಯಲ್ಲವೋ ಅದರ ಬಹಿಷ್ಕಾರ–ಇವು ಈ ಮನೋಧರ್ಮದ ಮುಖ್ಯಾಂಶಗಳು. ಧರ್ಮ ಕಾರ್ಯಕ್ಕೂ ಧಾರಾಳವಾಗಿ ಕೊಡಲು ಇವರಿಗೆ ಕೈ ಬರುವುದಿಲ್ಲ. ವೇಷಭೂಷಣಗಳಲ್ಲಿ ಅಭಿರುಚಿಯಿರದಿರುವುದು ಮಾತ್ರವಲ್ಲ ಅವುಗಳಲ್ಲಿಯೂ ಜಿಪುಣತನ ಕಂಡುಬರುತ್ತದೆ, ವಿದ್ಯೆಗಾಗಲಿ ಕಲಾ ಕೌಶಲ್ಯಕ್ಕಾಗಲಿ ವಿಹಾರ ವಿನೋದಗಳಿಗಾಗಲಿ ಶಾಸ್ತ್ರ ಜ್ಞಾನ ಸಂಪಾದನೆಗಾಗಲಿ ಈ ಪದ್ಧತಿಯವರ ಮನಸ್ಸು ಓಡುವುದಿಲ್ಲ. ಅವಕ್ಕಾಗಿ ಖರ್ಚು ಮಾಡಲು ಸಮ್ಮತಿಸುವುದಿಲ್ಲ.

ದುರಾಸೆಯೂ ಮೋಸವೂ ಅವರ ಮನಸ್ಸಿನಲ್ಲಿ ಅಂಕುರಿಸುವುದು ಸಹಜವಾಗಿದೆ. ಸಮಾಜದಲ್ಲಿ ಮರ್ಯಾದೆಯ ಸ್ಥಾನದಲ್ಲಿರುವವರೆಗೆ ಇವು ಹದ್ದಿನಲ್ಲಿರುತ್ತವೆ. ಧನ ಸಂಗ್ರಹ ಕಾರ್ಯದಲ್ಲಿ ಹಲವಾರು ಧರ್ಮಗಳನ್ನೂ ಸಂಪ್ರದಾಯಬದ್ಧ ನೀತಿ ನಿಗ್ರಹಗಳನ್ನೂ ನಡಸಿಕೊಂಡು ಬರುವುದು ಆವಶ್ಯಕವಾದ್ದರಿಂದ, ಈ ಮನೋವೃತ್ತಿಯಲ್ಲಡಗಿರುವ ಅವಗುಣಗಳು ತಲೆದೋರಲು ಅವಕಾಶವಿರುವುದಿಲ್ಲ. ಅಕಸ್ಮಾತ್ತಾಗಿ ಅಂಥ ಅವಕಾಶಗಳು ಒದಗಿದ್ದೇ ಆದರೆ, ಆಗ ಇಂಥ ನಾಗರಿಕನು ದಾರಿ ತಪ್ಪುತ್ತಾನೆ. ಬೇರೆಯವರ ಸ್ವತ್ತನ್ನು ಖರ್ಚುಮಾಡುವ ಸಂದರ್ಭವೋದಿಕ್ಕಿಲ್ಲದ ಚಿಕ್ಕವರ ಆಸ್ತಿಯನ್ನು ನೋಡಿಕೊಳ್ಳುವ ಸಂದರ್ಭವೋ

ಬಂತೆಂದರೆ, ಈ ನಾಗರಿಕನು ಎಡುವುತ್ತಾನೆ; ಪರರ ಸ್ವತ್ತನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಹೇಸುವುದಿಲ್ಲ. ಇವನ ಧರ್ಮ ಬುದ್ಧಿ ಸಮಾಜದ ಇದಿರಿನಲ್ಲಿ ತೋರಿಕೆ, ಬೂಟಾಟಿಕೆ ಮಾತ್ರ; ಆತ್ಮ ಸಂಸ್ಕಾರದ ತಳಹದಿಯ ಮೇಲೆ ಭದ್ರವಾಗಿ ನಿಂತಿರುವುದಿಲ್ಲ.

ದೇಶಪ್ರೇಮವಾಗಲಿ ದೈವಭಕ್ತಿಯಾಗಲಿ ಸ್ವಜನಬಾಂಧವ್ಯವಾಗಲಿ ಈ ನಾಗರಿಕನ ಆತ್ಮವನ್ನು ಪ್ರವೇಶಿಸಿ ಪ್ರಬಲವಾದ ಸಂಸ್ಕಾರವನ್ನುಂಟುಮಾಡಿರುವುದಿಲ್ಲ. ಆದ್ದರಿಂದ ನಿರ್ಗತಿಕರು ಧೈರ್ಯಶಾಲಿಗಳಾದ ಮುಖಂಡರ ಚೋದನೆಯಿಂದ ದಂಗೆಯೆದ್ದರೆ, ಅವರೊಡನೆ ಭ್ರಾತೃಭಾವದಿಂದ ಸಂಧಿಮಾಡಿಕೊಳ್ಳುವುದಕ್ಕಾಗಲಿ ಹಾಗಲ್ಲದಿದ್ದರೆ ಧೈರ್ಯದಿಂದ ಕಾದಾಡಿ ಅವರ ಪುಂಡನ್ನು ಅಡಗಿಸುವುದಕ್ಕಾಗಲಿ ದೃಢಸಂಕಲ್ಪವೂ ಆತ್ಮವಿಶ್ವಾಸವೂ ಧೈರ್ಯವೂ ಜನಾನುರಾಗವೂ ಇವರ ಪಾಲಿಗೆ ಲಭಿಸುವುದಿಲ್ಲ.

ಧನಿಕರ ಆಸ್ತಿಯನ್ನು ಗೆದ್ದು ಜನ ಸಾಮಾನ್ಯರಲ್ಲಿ ಹಂಚಿಬಿಡುತ್ತೇವೆಂಬ ಕೂಗನ್ನೆಬ್ಬಿಸಿ ದಂಗೆಕೋರರು ಜನರನ್ನು ಹುರಿದುಂಬಿಸಿ ಪ್ರತಿಭಟನೆಗೆ ಸಿದ್ಧಮಾಡಿ ಕ್ರಾಂತಿಯೆಬ್ಬಿಸಿದರೆ, ಧನಿಕರಾಜ್ಯದ ಕೋಟೆ ಕೊತ್ತಲಗಳು ಕುಸಿದು ಬೀಳುವುದು. ಇದರ ಫಲ ಪ್ರಜಾರಾಜ್ಯ.

ಪ್ರಜಾರಾಜ್ಯದ ರೇಖಾರೂಪವನ್ನು ಹಿಂದಿನ ಅಧ್ಯಾಯದಲ್ಲಿ ತೋರಿಸಿದ್ದೇವೆ.

ಸ್ವಾತಂತ್ರ್ಯವೂ ರಾಜ್ಯಾಧಿಕಾರವೂ ಹಂತಹಂತವಾಗಿ ಸಮಾಜದಲ್ಲಿ ಹರಡುತ್ತ ಬರುತ್ತದೆ. ರಾಜಪ್ರಭುತ್ವ ಪದ್ಧತಿಯಲ್ಲಿ ಸರ್ವಾಧಿಕಾರವನ್ನೂ ಅನುವಂಶಿಕವಾಗಿ ಪಡೆದು ಅನುಭವಿಸುವ ಒಬ್ಬನೇ ವ್ಯಕ್ತಿಯಲ್ಲಿ ಇವೆರಡೂ ನೆಲೆಗೊಂಡಿರುತ್ತವೆ. ಅದೇ ಮನೋವೃತ್ತಿಯುಳ್ಳ ರಾಜವಂಶದವರ ರಾಜ್ಯಾಂಗದಲ್ಲಿ ಇವು ಹಲವಾರು ಸಂಸಾರಗಳಿಗೆ ಪ್ರಸರಿಸುತ್ತವೆ. ಈ ಬಗೆಯ ರಾಜವಂಶದವರ ರಾಜ್ಯಾಂಗವು ಶ್ರೇಷ್ಠ ತಮವಾಗಿರಬಹುದು; ಇಲ್ಲವೆ, ಪಾಮರ ಪಂಕ್ತಿಗೆ ಸೇರಿದ ಪದ್ಧತಿಯಾದರೂ ಆಗಿರಬಹುದು. ಎರಡರಲ್ಲಿಯೂ ಪ್ರಾಯಶಃ ಪ್ರಭುತ್ವದವರ ಸಂಖ್ಯೆ ಒಂದೇ ತೆರನಾಗಿರುತ್ತದೆಯೆಂದು ಹೇಳಬಹುದು. ಎಂದರೆ, ಪ್ರಭುತ್ವದವರ ಸಂಖ್ಯೆ ಬಹಳ ಕಡಮೆ, ಜನ ಸಾಮಾನ್ಯರದು ಬಹಳ ಹೆಚ್ಚು. ಮುಂದೆ ಈ ಪದ್ಧತಿಯಿಂದ ಮಾಡಿ ಬರುವ ಧನಿಕ ರಾಜ್ಯದಲ್ಲಿ ಪ್ರಾಯಶಃ ಪ್ರಭುವರ್ಗದವರ ಸಂಖ್ಯೆ ಸ್ವಲ್ಪ ಹೆಚ್ಚಾಗಬಹುದು. ಆದರೂ ಅಧಿಕಾರದಲ್ಲಿ ಭಾಗವಿಲ್ಲದ ಪ್ರಜಾ ಸಾಮಾನ್ಯರೇ ಇದರಲ್ಲಿಯೂ ಅಧಿಕ ಸಂಖ್ಯೆಯವರಾಗಿರುತ್ತಾರೆ. ಪ್ರಜಾರಾಜ್ಯದಲ್ಲಾದರೋ ಅಧಿಕಾರವು ಸಮಾಜದ ಎಲ್ಲೆಗಳನ್ನು ಮುಟ್ಟುತ್ತದೆ. ಪ್ರತಿಯೊಬ್ಬ ಪ್ರಜೆಯೂ ನಾಗರಿಕನಾಗುತ್ತಾನೆ. ಪ್ರತಿಯೊಬ್ಬನಿಗೂ ಅಧಿಕಾರವರ್ಗದವರನ್ನು ಆಯುವುದರಲ್ಲಿ ಸಮಾನವಾದ ಹಕ್ಕಿರುತ್ತದೆ.

ಹೀಗೆ ರಾಜ್ಯಪದ್ಧತಿಗಳನ್ನು ವಿಂಗಡಿಸುವ ದೃಷ್ಟಿ ಸಂಖ್ಯಾದೃಷ್ಟಿ. ರಾಜ್ಯಪದ್ಧತಿಗಳ ವ್ಯತ್ಯಾಸವು ಈ ದೃಷ್ಟಿಯ ಪ್ರಕಾರ ಅಧಿಕಾರ ಸ್ಥಾನವು ಎಷ್ಟು ಜನರಲ್ಲಿ ಹಂಚಿಕೆಯಾಗಿದೆಯೆಂಬುದನ್ನು ಅನುಸರಿಸುತ್ತದೆ. ಇದು ಅರಿಸ್ಟಾಟಲನ ಪ್ರಕಾರ

ಒಬ್ಬ ರಾಜನ ಆಳಿಕೆ, (Monarchy) ಬಹುರಾಜರ ಅಥವಾ ಶ್ರೀಮಂತರ ಆಳಿಕೆ, (Aristocracy) ಮತ್ತು ಸರ್ವಪ್ರಜೆಗಳ ಆಳಿಕೆ (Democracy) ಎಂದು ಮೂರು ಬಗೆಯಾಗುತ್ತದೆ. ಸಂಖ್ಯಾ ದೃಷ್ಟಿಯಿಂದ ಈ ಮೂರು ವಿಧವಾದ ರಾಜ್ಯಪದ್ಧತಿಗಳ ವಿಚಾರಪರರಲ್ಲಿ ಚಿರಪರಿಚಿತವಾಗಿವೆ.

ಆದರೆ, ಮೇಲೆ ನಿರೂಪಣೆಮಾಡಿರುವ ಪ್ಲೇಟೋವಿನ ದೃಷ್ಟಿಯ ಪ್ರಕಾರ ಅಧಿಕಾರ ಸ್ಥಾನದ ಸಂಖ್ಯಾ ವಿಶೇಷವು ಮುಖ್ಯವೆಂದು ಪರಿಗಣಿಸಲಾಗಿಲ್ಲ.

ರಾಜರ ಆಳ್ವಿಕೆಯನ್ನು ಬಿಟ್ಟು ರಾಜವಂಶದವರ ಆಳ್ವಿಕೆಗಳು ಶ್ರೇಷ್ಠತಮವಾಗಿಯೂ ಇರಬಹುದು, ಸಾಧಾರಣವಾಗಿಯೂ ಇರಬಹುದು. ಇವುಗಳ ಗುಣ ಇವುಗಳ ಪ್ರಭುಗಳ ಸ್ವಭಾವವನ್ನು ಅನುಸರಿಸುತ್ತದೆ. ಪ್ರಭುಗಳು ತತ್ತ್ವಪ್ರೇಮಿಗಳೂ ತತ್ತ್ವನಿಷ್ಠವಾದ ಧೈರ್ಯ ಸ್ಥೈರ್ಯ ಇಂದ್ರಿಯನಿಗ್ರಹ ವೊದಲಾದ ಧರ್ಮಸಂಪತ್ತುಳ್ಳವರೂ ಆಗಿದ್ದರೆ, ಅವರು ಆದರ್ಶ ರಾಜ್ಯವನ್ನು ಕಟ್ಟಿ ಇಡೀ ಸಮಾಜದ ಶ್ರೇಯೋಭಿವೃದ್ಧಿಗೆ ಸಹಾಯಕರಾಗಬಹುದು.

ಸಂಖ್ಯೆಯಲ್ಲಿ ಕಡಮೆಯಾದರೂ ಪ್ರಭುತ್ವ ಸ್ಥಾನದಲ್ಲಿರುವವರು ತಮ್ಮ ಸ್ವಾರ್ಥವನ್ನು ಬದಿಗಿಟ್ಟು ಸರ್ವಜನಹಿತವನ್ನು ಸಾಧಿಸಲು ಯಾವ ಅಡ್ಡಿಯೂ ಇಲ್ಲ. ಇದಕ್ಕಿರುವ ಅಡಚಣೆ ಹೊರಗಿನ ಪ್ರಪಂಚದಿಂದ ಬರುವುದಿಲ್ಲ; ಆಂತರಿಕ ಸ್ವಭಾವದಿಂದ ಹೊರಹೊಮ್ಮುತ್ತದೆ. ಅಧಿಕಾರವು ಸಮಾಜವನ್ನೆಲ್ಲ ಆವರಿಸಿ ಸರ್ವಜನ ಭಾಗಿಯಾದರೂ ಕೂಡ – ಪ್ರಜಾರಾಜ್ಯವೆಂದೆನ್ನಿಸಿಕೊಂಡರೂ ಕೂಡ – ಆ ರಾಜ್ಯಾಂಗದಿಂದ ಲೋಕಸಂಗ್ರಹವಾಗಲಿ ಪ್ರಜೆಗಳ ಶಾಶ್ವತ ಹಿತವಾಗಲಿ ನೆರವೇರುತ್ತದೆಯೆಂಬ ನಿಯಮವೇನೂ ಇಲ್ಲ. ಹೀಗೆಂಬುದು ಪ್ಲೇಟೋವಿನ ಅಭಿಪ್ರಾಯ.

ಆದ್ದರಿಂದ ಪ್ಲೇಟೋವಿನವಿಚಾರ ದೃಷ್ಟಿಬಾಹ್ಯಗೋಚರವಾದ ಸಂಖ್ಯೆಯ ಪ್ರಭಾವವನ್ನು ದಾಟಿ ಹೋಗಿ ಮಾನವ ಸ್ವಭಾವದ ಅಂತರಂಗವನ್ನು ಭೇದಿಸುತ್ತದೆ.

ರಾಜ್ಯಪದ್ಧತಿಗಳು ಪರಿವರ್ತನ ಹೊಂದುವುದಕ್ಕೆ ಮುಖ್ಯಕಾರಣ ಅವುಗಳಲ್ಲಿ ಕಾಲಾನುಕಾಲದಲ್ಲಿ ಕಾಣಬರುವ ಧರ್ಮಚ್ಯುತಿ. ಇಂಥ ಧರ್ಮಗ್ಲಾನಿಯು ಉಂಟಾಗುವುದಕ್ಕೆ ಜನರಲ್ಲಿ ತೋರಿಬರುವ ಮನೋದೌರ್ಬಲ್ಯ ಕಾರಣವಾಗುತ್ತದೆ. ತತ್ತ್ವಪ್ರೇಮವೂ ತತ್ತ್ವದೃಷ್ಟಿಯಿಂದ ಪುಷ್ಟಿಗೊಂಡ ಧರ್ಮಸಂಪ್ರದಾಯಗಳೂ ಅಧಿಕಾರಸ್ಥರ ಮನಸ್ಸಿನಲ್ಲಿ ಮಲಿನವಾದರೆ, ಅವರಲ್ಲಿ ರಾಗದ್ವೇಷಗಳು ಬಲಗೊಳ್ಳುತ್ತವೆ. ವ್ಯಕ್ತಿಯ–ಅದರಲ್ಲೂ ಅಧಿಕಾರಸ್ಥಾನದಲ್ಲಿರುವ ವ್ಯಕ್ತಿಯ ಅನಾಯಕತ್ವ ತಲೆದೋರಿದರೆ ಅದು ರಾಷ್ಟ್ರದಲ್ಲಿಯೂ ಅನಾಯಕತ್ವವನ್ನು ತಂದೊಡ್ಡುತ್ತದೆಯೆಂಬುದು ಪ್ಲೇಟೋವಿನ ಸೂಕ್ಷ್ಮತತ್ತ್ವ

ಈ ತತ್ತ್ವನಿರೂಪಣೆಯಲ್ಲಿ ಪ್ಲೇಟೋ ಆತ್ಮನಿಗೂ ಇಂದ್ರಿಯ ಜನ್ಯವಾದ ಮತ್ತು ಭಾವನಾಕಾರವಾದ ರಾಗದ್ವೇಷಗಳಿಗೂ ಇರಬೇಕಾದ ಸಂಬಂಧವನ್ನು ವಿವೇಚಿಸುತ್ತಾನೆ. ಈ ವಿವೇಚನೆಯ ಪ್ರಕಾರ ಆತ್ಮನಿಗೆ ತನ್ನಲ್ಲಿ ದೇಹಸಂಬಂಧದಿಂದ

ಹುಟ್ಟುವ ರಾಗದ್ವೇಷಗಳನ್ನು ನಿಗ್ರಹಮಾಡಿ ಅವುಗಳ ಶಕ್ತಿಯನ್ನೂ ವೇಗವನ್ನೂ ಆತ್ಮೋದ್ಧಾರದ ಕಡೆಗೆ ನಡೆಸಿಕೊಳ್ಳಬಹುದೆಂಬ ಅಭಿಪ್ರಾಯವು ಸ್ಪಷ್ಟವಾಗುತ್ತದೆ.

ರಾಜಕೀಯ ವಿಷಯಗಳನ್ನು ಆರ್ಥಿಕದೃಷ್ಟಿಯಿಂದ ವಿವೇಚಿಸುವುದು ಈಗಿನಕಾಲದಲ್ಲಿ ಹೆಚ್ಚು ಪ್ರಶಸ್ತಿ ಪಡೆದಿದೆ. ಇದಕ್ಕೆ ಮೂಲಕಾರಣ ಕಾರ್ಲ್‌ಮಾರ್ಕ್ಸ್‌ನ ಸಂಶೋಧನಮಾರ್ಗ. ಮಾರ್ಕ್ಸ್‌ವಾದವು ಈಗ ಎಲ್ಲೆಲ್ಲಿಯೂ ಪ್ರಬಲವಾಗಿದೆ. ಇದರ ಮೂಲತತ್ತ್ವವೇನೆಂದರೆ, ರಾಜ್ಯಪದ್ಧತಿಗಳು ಸಮಾಜದಲ್ಲಿ ಆಚರಣೆಯಲ್ಲಿರುವ ಆರ್ಥಿಕವ್ಯವಸ್ಥೆಯನ್ನು ಅನುಸರಿಸುತ್ತವೆ. ಪ್ರಭುತ್ವಶಾಸನಗಳು ಅಧಿಕಾರಿಗಳ ಆರ್ಥಿಕಸಂಪತ್ತಿಯನ್ನು ಕಾಪಾಡಿಕೊಳ್ಳುವ ಮಾರ್ಗ. ಪ್ರಭುತ್ವ ಅಥವಾ ರಾಷ್ಟ್ರ ಎಂದರೆ ಸರ್ವಾಧಿಕಾರ ಮಾಡುವ ಜನರ ಗುಂಪು. ಸರ್ವಾಧಿಕಾರದ ಗುರಿ ತಮ್ಮ ಸ್ವಾರ್ಥ, ಭೂವ್ಯವಸಾಯವೇ ಸಂಪತ್ತಿಗೆ ಮೂಲವಾಗಿರುವ ಕಾಲದಲ್ಲಿ ಭೂಮಿಗೆ ಒಡೆಯರಾದವರೇ ಸರಕಾರದವರಾಗುತ್ತಾರೆ. ವ್ಯಾಪಾರ ಕೈಗಾರಿಕೆಗಳು ವರಮಾನಕ್ಕೆ ಮುಖ್ಯವಾಗಿರುವ ಕಾಲದಲ್ಲಿ ಇವುಗಳ ವಿಷಯವಾದ ಅಧಿಕಾರವೆಲ್ಲ ವ್ಯಾಪಾರಿಗಳ ಮತ್ತು ಕೈಗಾರಿಕೆಯ ಮಾಲೀಕರ ಕೈಯಲ್ಲಿರುತ್ತದೆ.

ಅಂತೂ ಸಮಾಜದಲ್ಲಿ ಸದಾಕಾಲದಲ್ಲೂ ಎರಡು ವರ್ಗಗಳು ಒಂದನ್ನೊಂದು ಪ್ರತಿಭಟಿಸುತ್ತಾ ಇರುತ್ತವೆ. ಮೊದಲು ಪ್ರಭುಗಳಲ್ಲದವರೆಲ್ಲ ಗುಲಾಮರಾಗಿದ್ದರು. ತರುವಾಯ ಗುಲಾಮರಿಗೆ ಸ್ವಲ್ಪ ಸ್ವಾತಂತ್ರ್ಯ ಲಭಿಸಿತು. ದನಗಳಂತೆ ಮನುಷ್ಯರನ್ನು ಮಾರಾಟ ಮಾಡುವ ಪದ್ಧತಿ ತಪ್ಪಿತು. ಆದರೂ ಕೃಷಿಗಾರರು ಭೂಮಿಯ ಸ್ವಾಮಿಗೆ ಅಧೀನರಾಗಿರಬೇಕಾದ ಶಾಸನವು ಬಹುಕಾಲ ನೆಲಸಿತ್ತು. ಯಂತ್ರ ಯುಗವು ಪ್ರಾರಂಭವಾದಮೇಲೆ ಸಂಚಾರಸ್ವಾತಂತ್ರ್ಯ ಲಭಿಸಿದರೂ ಕೆಲಸಗಾರರು ದಿನಗೂಲಿಗೆ ಅಧೀನರಾಗಿ ತಮಗೆ ಯಂತ್ರಾಲಯಗಳಲ್ಲಿ ಕೆಲಸ ಕೊಡುವ ಮಾಲೀಕರ ಆಳುಗಳಾಗಿ ಜೀವನ ನಡಸಬೇಕಾದ ಪರಿಸ್ಥಿತಿಯು ಈಗ ಆಚರಣೆಯಲ್ಲಿದೆ.

ಮುಂದಿನ ಹೆಜ್ಜೆಯೇನೆಂದರೆ, ಕೆಲಸಗಾರರು ಜೀವನೋಪಾಯದ ಸರ್ವಸಲಕರಣೆಗಳಿಗೂ ಸ್ವತ್ತುಗಳಿಗೂ – ಏಕೆ, ಇಡೀ ರಾಷ್ಟ್ರಕ್ಕೇ – ಸ್ವಾಮಿಗಳಾಗುವುದು. ಸ್ವಾಮಿಗಳಿಗೂ ಆಳುಗಳಿಗೂ ಇರುವ ವರ್ಗ ತಾರತಮ್ಯವು ಅಳಿದುಹೋಗಿ ಸಮಾಜದಲ್ಲಿ ವರ್ಗಬೇದಗಳ ಸುಳಿವೇ ಇಲ್ಲದಂತಾಗಿ, ಎಲ್ಲರೂ ಒಂದೇ ವರ್ಗದವರಾಗಿ ಹೊಸ ಸಮಾಜವನ್ನೂ ಹೊಸ ರಾಷ್ಟ್ರವಿಧಾನವನ್ನು ಸ್ಥಾಪಿಸುವುದು ಈಗಿನ ಯುಗಧರ್ಮ. ಇದು ಮಾರ್ಕ್ಸ್‌ನ ಸಾಮ್ಯವಾದದ ತಿರುಳು.

ಪ್ಲೇಟೋ ರಾಜ್ಯಪದ್ಧತಿಗಳ ಪರಿವರ್ತನೆಯನ್ನು ನಿರ್ದೇಶಿಸುವಾಗ ಈ ತತ್ತ್ವವನ್ನು ಬಹುಮಟ್ಟಿಗೆ ಅನುಮೋದಿಸುತ್ತಾನೆ. ಆದರೆ, ಆರ್ಥಿಕವ್ಯವಸ್ಥೆಯೇ ರಾಜ್ಯರಚನೆಯ ವಿಷಯದಲ್ಲಿ ಕೊನೆಯ ಮಾತೆಂದು ಅವನು ಒಪ್ಪುವುದಿಲ್ಲ, ಆರ್ಥಿಕವ್ಯವಸ್ಥೆಯು ಹತೋಟಿ ತಪ್ಪಿದರೆ ಅದು ಅನಾಯಕತ್ವವನ್ನು ತಂದೊಡ್ಡುವುದೆಂದೂ, ಆರ್ಥಿಕ ವ್ಯವಸ್ಥೆಯು ಧರ್ಮದೃಷ್ಟಿಗೆ ಅಧೀನವಾಗಿರಬೇಕೆಂದೂ,

ಹೀಗೆ ಧರ್ಮ ಬುದ್ಧಿಯು ಮಾನವನ ಸ್ವಾರ್ಥದ ವೇಗವನ್ನು ತಡೆದು ಸನ್ಮಾರ್ಗದಲ್ಲಿ ನಿಲ್ಲಿಸಿ ಲೋಕಸಂಗ್ರಹವನ್ನೂ ಸರ್ವಜನ ಹಿತವನ್ನೂ ಸಾಧಿಸಲು ಶಕ್ತಿಯುಳ್ಳದ್ದಾಗಿರಬೇಕೆಂಬುದೂ ಪ್ಲೇಟೋನ ಅಭಿಪ್ರಾಯ.

ಈ ವಿಷಯದಲ್ಲಿ ಈಗ ಎಲ್ಲೆಲ್ಲಿಯೂ ವಾದ ನಡೆಯುತ್ತಿದೆ. ಸಾಮ್ಯವಾದಕ್ಕೂ ಅದರ ಆಶಯವನ್ನು ಅನುಮೋದಿಸಿ ಅದರ ಮಾರ್ಗವನ್ನು ಮಾತ್ರ ಖಂಡಿಸುವ ಆದರ್ಶವಾದಕ್ಕೂ ವಾದಹೂಡಿದೆ. ಈ ವಾದದಲ್ಲಡಗಿರುವ ತತ್ತ್ವಸೂಕ್ಷ್ಮಗಳ ಪರಿಶೀಲನೆಯು ಈಗ ಅಗತ್ಯವಾಗಿದೆ. ಇಂಥ ಪರಿಶೀಲನೆಯ ಕಾರ್ಯದಲ್ಲಿ ಪ್ಲೇಟೋವಿನ ವಿಚಾರ ತರಂಗಗಳೂ ಸಮಷ್ಟಿದೃಷ್ಟಿಯೂ ಸಿದ್ಧಾಂತಸೂಚನೆಯೂ ಸಹಾಯಕವಾಗುವುವು. ಆದರ್ಶರಾಜ್ಯವನ್ನು ಬಿಟ್ಟರೆ ಪ್ರಚಲಿಯರಾಜ್ಯಗಳು ನಾಲ್ಕು ಎಂದು ಹೇಳಿದಂತಾಯಿತು, ಅವು ಯಾವುವೆಂದರೆ, ಕ್ಷತ್ರಿಯ ಶ್ರೀಮಂತರಾಜ್ಯ ಐಶ್ವರ್ಯವಂತರ ರಾಜ್ಯ, ಪ್ರಜಾರಾಜ್ಯ ಮತ್ತು ಸರ್ವಾಧಿಕಾರಿ ರಾಜ್ಯ. ಇವುಗಳು ಒಂದರಿಂದ ಮತ್ತೊಂದು ಉತ್ಪತ್ತಿಯಾಗುವ ರೀತಿಯನ್ನು ಪ್ಲೇಟೋ ನಿರೂಪಣೆ ಮಾಡಿದ್ದಾನೆ. ಅದರ ಸಾರಾಂಶವನ್ನು ಇಲ್ಲಿ ಹೇಳಿದ್ದೇವೆ.

ಪ್ರಜಾರಾಜ್ಯದಿಂದ ಸರ್ವಾಧಿಕಾರಿರಾಜ್ಯವು ಉತ್ಪನ್ನವಾಗುವುದು ಸಹಜವೇ ಆಗಿದೆ. ಏಕೆಂದರೆ, ಒಂದು ಅತಿಯಿಂದ ಇನ್ನೊಂದು ಅತಿಗೆ ಹೋಗುವುದು ಮಾನವ ಸ್ವಭಾವ ಸ್ವಾತಂತ್ರ್ಯ ಮಿತಿಮೀರಿದರೆ ಅದಕ್ಕೆ ಸ್ವರೂಪ ಹಾನಿಯುಂಟಾಗುತ್ತದೆ. ಸ್ವಾತಂತ್ರ್ಯಕ್ಕೆ ನೇರವಾದ ವಿರೋಧಿ ಅಸ್ವಾತಂತ್ರ್ಯ ಅಥವಾ ಪರಾಧೀನತೆ. ಪ್ರಜೆಗಳು ಸ್ವಾತಂತ್ರ್ಯಪರರಾಗಿ ಧರ್ಮಪೋಷಕವಾದ ಶಾಸನ ಸಂಪ್ರದಾಯಗಳಿಗೆ ಅಧೀನರಾಗಿ ನಡೆದುಕೊಳ್ಳಲು ಇಷ್ಟಪಡದಿದ್ದರೆ, ಅವರು ಕ್ರಮೇಣ ಒಬ್ಬ ಸರ್ವಾಧಿಕಾರಿಯ ಅಧೀನದಲ್ಲಿ ಕಟ್ಟುಬಿದ್ದು ರಾಷ್ಟ್ರವನ್ನೇ ಸೆರೆಮನೆಯ ದೆಸೆಗೆ ತಂದುಬಿಡುತ್ತಾರೆ.

ಪ್ರಜಾರಾಜ್ಯದಲ್ಲಿ ಸೋಮಾರಿ ಜೇನುಗಳಂತೆ ನಿರ್ದಿಷ್ಟ ಕೆಲಸವಿಲ್ಲದ ಅನೇಕ ನಿರ್ಗತಿಕರು ಕಾಣಿಸಿಕೊಳ್ಳುತ್ತಾರೆ. ಇವರಲ್ಲಿ ಬಹುಮಂದಿ ಅನುಯಾಯಿಗಳು, ಕೆಲವರು ನಾಯಕರು. ನಾಯಕರು ನಿರ್ಗತಿಕರಿಗೆ ಆಸೆತೋರಿಸಿ ಅವರ ಬೆಂಬಲದಿಂದ ಗೊಂದಲವನ್ನೆಬ್ಬಿಸುತ್ತಾರೆ. ಎಲ್ಲರಿಗೂ ಅಧಿಕಾರದಲ್ಲಿ ಭಾಗವಿರುವುದರಿಂದ ಅಧಿಕಾರಿಗಳಿಗೆ ಈ ಗೊಂದಲವನ್ನು ನ್ಯಾಯಸಮ್ಮತವಾಗಿ ಅಡಗಿಸುವುದಕ್ಕಾಗುವುದಿಲ್ಲ. ಇವರೇ, ಎಂದರೆ ಗೊಂದಲದ ಮುಂದಾಳುಗಳೇ, ಪ್ರಜಾನಾಯಕರಾಗಿ ಪ್ರಬಲರಾಗುತ್ತಾರೆ. ಐಶ್ವರ್ಯವಂತರ ಆಸ್ತಿಪಾಸ್ತಿಗಳು ಕ್ರಮೇಣ ಜನಸಾಮಾನ್ಯರಲ್ಲಿ ಹಂಚಿಕೆಯಾಗುತ್ತದೆ. ವ್ಯಾಪಾರೋದ್ಯಮಗಳಲ್ಲಿ ಹಣ ಸಂಪಾದಿಸುವವರ ಮೇಲೆ ತೆರಿಗೆಗಳು ಹೆಚ್ಚುತ್ತ ಹೋಗುತ್ತವೆ. ಪ್ರಜಾಹಿತವನ್ನು ಸಾಧಿಸುತ್ತೇವೆಂದು ಆಸೆತೋರಿಸಿ ಕೊಂಡಿಯುಳ್ಳ ಜೇನುಗಳಂತಿರುವ ಮತ್ತು ಆಸ್ತಿ ಸಂಪಾದನೆಗೆ ಅಥವಾ ವಿದ್ಯಾಸಂಪಾದನೆಗೆ ಬೇಕಾದ ಆತ್ಮಸಂಸ್ಕಾರ ಮನೋದಾರ್ಢ್ಯ ನಿಶ್ಚಿತ ಬುದ್ಧಿಗಳಿಲ್ಲದಿರುವ ನಾಯಕರೇ ಮುಂದಕ್ಕೆ ಬಂದು ಅಧಿಕಾರ ಸ್ಥಾನಗಳನ್ನು ಆಕ್ರಮಿಸುತ್ತಾರೆ. ಜನಸಾಮಾನ್ಯರಲ್ಲಿ ಅಜ್ಞಾನಿಗಳೇ ಹೆಚ್ಚು, ಅವರಿಗೆ ನಾಯಕರ ಯೋಗ್ಯತೆಯನ್ನು

ಪರಿಶೀಲಿಸುವುದಕ್ಕೂ ರಾಷ್ಟ್ರದ ಶಾಶ್ವತಹಿತವನ್ನು ಸಾಧಿಸುವಂಥ ಕಾರ್ಯಕ್ರಮಗಳಲ್ಲಿ ವಿಶ್ವಾಸವಿಡುವುದಕ್ಕೂ ಸಾಕಾದಷ್ಟು ಸಂಸ್ಕಾರವಿರುವುದಿಲ್ಲ.

ಇಂಥ ಸಮಯಗಳಲ್ಲಿ ಆಸ್ತಿವಂತರು ತಮ್ಮ ಹಿತವನ್ನು ಸಂರಕ್ಷಿಸಿ ಕೊಳ್ಳುವುದಕ್ಕೆ ಪಕ್ಷವನ್ನು ಕಟ್ಟಿಕೊಳ್ಳುವ ಯೋಚನೆ ಮಾಡುತ್ತಾರೆ. ನ್ಯಾಯಸ್ಥಾನಗಳು ಇವರ ಸಂರಕ್ಷಣೆಗೆ ಸಹಾಯಕವಾಗುವುದಿಲ್ಲ. ಏಕೆಂದರೆ, ಆಸ್ತಿವಂತರಿಗೆ ವಿರೋಧವಾದ ಶಾಸನಗಳು ಜನ ಸಮ್ಮತಿಯಿಂದ ಹೊರಟಿರುತ್ತವೆ. ನ್ಯಾಯಮೂರ್ತಿಗಳು ಕೂಡ ಹೊಸಯುಗದ ಧರ್ಮವನ್ನೇ ಮನಸ್ಸಿನಲ್ಲಿಟ್ಟು ಬಡವರ ಪರವಾಗಿ ತೀರ್ಪುಕೊಡುವ ಸಂಭವಗಳೇ ಪ್ರಬಲವಾಗುತ್ತವೆ. ಇಂಥ ಸಮಯದಲ್ಲಿ ಐಶ್ವರ್ಯವಂತರ ವರ್ಗಕ್ಕೆ ಬಲಪ್ರಯೋಗವಲ್ಲದೆ ಬೇರೆ ಯಾವೊಂದು ಉಪಾಯವೂ ತೋರುವುದಿಲ್ಲ. ಆದುದರಿಂದ, ಅವರ ಕಡೆಯೂ ನಾಯಕರು ಹೊರಬಂದು ಅವರಿಗೂ ಪ್ರಜಾನಾಯಕರಿಗೂ ಘರ್ಷಣೆಗಳಾಗುತ್ತವೆ. ಕೊನೆಗೆ ರಾಷ್ಟ್ರವು ಬಹಿರಂಗವಾಗಿ ಇಬ್ಭಾಗವಾಗಿ ಒಳಯುದ್ಧ ನಡೆಯುತ್ತದೆ. ಪ್ರಜಾಪಕ್ಷದ ಕಡೆ ಪ್ರಜೆಗಳ ರಕ್ಷಣೆಗಾಗಿ ಸರ್ವಾಧಿಕಾರವನ್ನು ಹೊಂದಿದ ನಾಯಕನು ಮುಂದೆಬರುತ್ತಾನೆ. ಪ್ರಜೆಗಳಿಗೆ ಜಯವಾದರೆ ಅವರ ನಾಯಕನಿಗೆ ಸರ್ವಾಧಿಕಾರ ದೊರೆಯುತ್ತದೆ. ಅಂಥ ಸರ್ವಾಧಿಕಾರಿಯು ತನ್ನ ರಕ್ಷಣೆಗೆ ಅಂಗರಕ್ಷಕರನ್ನು ನೇಮಿಸಿಕೊಳ್ಳುತ್ತಾನೆ. ಆಮೇಲೆ ಪ್ರಜೆಗಳ ಹೆಸರಿನಲ್ಲಿ ಹಿಂದಿನ ರಾಜರಿಗಿಂತ ಮಿಗಿಲಾದ ಅಧಿಕಾರವನ್ನು ಪಡೆಯುತ್ತಾನೆ. ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಎಲ್ಲ ಶಾಸನ ಸಂಪ್ರದಾಯಗಳನ್ನೂ ರದ್ದುಗೊಳಿಸಿ ತನ್ನದೇ ಆದ ಹೊಸ ಶಾಸನಗಳನ್ನು ಘೋಷಿಸುತ್ತಾನೆ. ಹೀಗಾಗಿ ಪ್ರಜೆಗಳು ತಮ್ಮ ಸ್ವಾತಂತ್ರ್ಯಸರ್ವಸ್ವವನ್ನೂ ಈ ಹೊಸ ಸರ್ವಾಧಿಕಾರಿಗೆ ಒಪ್ಪಿಸಿ ಪುನಃ ಪರಾಧೀನಸ್ಥಿತಿಗೆ ಬರುತ್ತಾರೆ. ಪ್ರಜಾರಾಜ್ಯದಿಂದ ಸರ್ವಾಧಿಕಾರತಂತ್ರವು ಉತ್ಪನ್ನವಾಗುವ ರೀತಿಯನ್ನು ಈ ತಲೆಮಾರಿನವರು ಜರ್ಮನಿಯ ನಾಟ್ಸಿ ಮತ್ತು ಇಟಲಿಯ ಫಾಸಿಸ್ಟ್ ಪದ್ಧತಿಗಳಲ್ಲಿಯೂ, ಈಗ ಅಧಿಕಾರದಲ್ಲಿರುವ ಸೋವಿಯಟ್ ರಷ್ಯದ ರಾಜ್ಯದ ಪದ್ಧತಿಯಲ್ಲಿಯೂ ಮನಗಂಡಿದ್ದಾರೆ. ಪ್ಲೇಟೋವಿನ ರಾಜ್ಯಪರಿವರ್ತನ ಸೂತ್ರಗಳು ಈಚಿನ ಕ್ರಾಂತಿಗಳಲ್ಲಿ ಬಹುಮಟ್ಟಿಗೆ ಸಮರ್ಥನೆ ಹೊಂದಿವೆ.

ಎಲ್ಲ ಬಗೆಯ ರಾಜ್ಯಗಳಲ್ಲಿಯೂ ಸರ್ಕಾರಕ್ಕೆ ಸರ್ವಾಧಿಕಾರವಿರುತ್ತದೆ. ಸಮಾಜದಲ್ಲಿರುವ ಮಿಕ್ಕೆಲ್ಲ ಸಂಸ್ಥೆಗಳಿಗಿಂತಲೂ ಮಿಗಿಲಾದ ಅಧಿಕಾರವು ಪ್ರಭುತ್ವಕ್ಕೆ ನ್ಯಾಯವಾಗಿ ಸಲ್ಲತಕ್ಕದ್ದೆಂಬುದು ಸರ್ವರೂ ಒಪ್ಪಿರುವ ವಿಷಯ. ಹೀಗಿರಲಾಗಿ ಮಿಕ್ಕಪ್ರಭುತ್ವಕ್ರಮಗಳಿಗೂ ಸರ್ವಾಧಿಕಾರಿಯ ಪ್ರಭುತ್ವಕ್ಕೂ ಏನು ವ್ಯತ್ಯಾಸ ? – ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಗ್ರೀಸಿನ ನಗರರಾಜ್ಯಗಳ ಚರಿತ್ರೆಯಲ್ಲಿ ಎರಡುಬಗೆಯ ಸರ್ವಾಧಿಕಾರಿಗಳು ಕಾಣಬರುತ್ತಾರೆ. ಒಂದು ಬಗೆಯವರು ಪ್ರಜೆಗಳ ಆಹ್ವಾನದಿಂದ ಅಧಿಕಾರಕ್ಕೆ ಬಂದು ನಿಯಮಿತ ಕಾಲದವರೆಗೆ ಪ್ರಭುತ್ವನಡಸಿ, ದೇಶದಲ್ಲಿ ತಾತ್ಕಾಲಿಕವಾಗಿ ಸಂಭವಿಸಿದ್ದ ಅರಾಜಕತೆಯನ್ನು ಹೋಗಲಾಡಿಸಿ, ಹೊಸ ಶಾಸನಗಳನ್ನು ನಿರ್ಮಿಸಿ, ಶಾಂತಿ ಸುವ್ಯವಸ್ಥೆಗಳನ್ನು ಪುನಃ ನೆಲೆಗೊಳಿಸಿ ಜನತೆಯ ಮನ್ನಣೆಯನ್ನು

ಸಂಪಾದಿಸುತ್ತಾರೆ. ಇನ್ನೊಂದು ಬಗೆಯ ಸರ್ವಾಧಿಕಾರಿಗಳು ಸರ್ವಾನುಮತದಿಂದ ಆಹ್ವಾನಿತರಾಗಿ ಬಂದವರಲ್ಲ, ಐಶ್ವರ್ಯವಂತರ ಶೋಷಣೆಯನ್ನು ನಿಲ್ಲಿಸಿ, ಪ್ರಭುತ್ವದವರ ದಬ್ಬಾಳಿಕೆಯನ್ನೆದುರಿಸಿ, ದೀನದರಿದ್ರರನ್ನು ಸಂರಂಕ್ಷಣೆ ಮಾಡುತ್ತೇವೆಂದು ಬದ್ಧ ಕಂಕಣರಾಗಿ ಬಂದವರು. ಈ ಎರಡನೆಯ ವಿಧದ ಸರ್ವಾಧಿಕಾರಿಗಳ ವಿಚಾರವನ್ನೇ ಪ್ಲೇಟೋ ಇಲ್ಲಿ ಗಮನಕ್ಕೆ ತೆಗೆದುಕೊಂಡಿರುವುದು. ಇವರ ಅಧಿಕಾರಕ್ಕೂ ಮಿಕ್ಕ ರಾಜ್ಯಪದ್ಧತಿಗಳಿಗೂ ಮುಖ್ಯ ವ್ಯತ್ಯಾಸವೇನೆಂದರೆ, ಇವರಲಿ ಸರ್ವಪಕ್ಷ ಸಮ್ಮತವಾದ ಸಮಗ್ರ ರಾಷ್ಟ್ರೋನ್ನತಿಗೆ ಪೋಷಕವಾದ ಶಾಸನಗಳಿಗೆ ಮರ್ಯಾದೆ ಮನ್ನಣೆಗಳಿರುವುದಿಲ್ಲ. ಇವರು ಜನರ ಹೆಸರಿನಲ್ಲಿ ಕ್ರೂರಕೃತ್ಯಗಳನ್ನೆ ಸಗಿ ಹಿಂಸಾಮಾರ್ಗದಿಂದ ಅಧಿಕಾರಕ್ಕೆ ಬಂದಿರುತ್ತಾರೆ. ಈ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ಲೇಟೋ ಅವರನ್ನು ತೋಳಗಳೆಂದು ಕರೆದಿದ್ದಾನೆ. ಮೊದಲು ಜನರ ರಕ್ಷಕರೆಂಬ ಹೆಸರಿನಿಂದ ಮುಂದೆ ಬಂದು ಕೊನೆಗೆ ಪ್ರಜೆಗಳನ್ನೇ ಭಕ್ಷಿಸುವ ತೋಳಗಳಾಗುತ್ತಾರೆ – ಎಂದು ಇವರ ಚರಿತ್ರೆಯನ್ನು ಚಿತ್ರಿಸಿದ್ದಾನೆ. ಈ ಸಂದರ್ಭದಲ್ಲಿ ಗ್ರೀಸ್‌ದೇಶದ ಒಂದು ಗುಡಿಯ ಸ್ಥಳ ಪುರಾಣದಲ್ಲಿ ಉಕ್ತವಾಗಿರುವ ನುಡಿಯನ್ನು ಓದುಗರಿಗೆ ಜ್ಞಾಪಕ ಮಾಡಿಕೊಡುತ್ತಾನೆ. ಅದೇನೆಂದರೆ – ದೇವತೆಗೆ ಆಹುತಿ ಕೊಟ್ಟ ಪ್ರಾಣಿಯ ಮಾಂಸದೊಡನೆ ನರದ್ಮಾಂಸವು ಮಿಶ್ರವಾಗಿದ್ದು, ಅದನ್ನು ತಿಳಿಯದೆ ದೇವರ ಪ್ರಸಾದವೆಂದು ತಿಂದವರು ತೋಳಗಳಾಗುತ್ತಾರೆ ಎಂಬುದು.

ಹಾಗೆಯೇ, ರೌದ್ರಾವೇಶ ಪೂರಿತರಾದ ದೀನದರಿದ್ರ ಜನಸ್ತೋಮದ ಬೆಂಬಲದಿಂದ ಸ್ವದೇಶಬಾಂಧವರನ್ನು ಕೊಲೆ ಮಾಡಿಸುವುದಕ್ಕೂ ಅವರ ಹೊಸ ನಾಯಕನು ಹೇಸುವುದಿಲ್ಲ. ಸುಳ್ಳು ಆಪಾದನೆಗಳನ್ನು ಹೊರಿಸಿ ಪ್ರತಿಪ್ರಕ್ಷದವರನ್ನು ನ್ಯಾಯಸ್ಥಾನಕ್ಕೆಳೆದು, ಅನ್ಯಾಯವಾಗಿ ಅವರನ್ನು ದೇಶೋಚ್ಚಾಟನೆಗೋ ಇಲ್ಲವೆ ಮರಣದಂಡನೆಗೋ ಗುರಿಮಾಡುತ್ತಾನೆ. ರಕ್ತಪಾತಕ್ಕೆ ಪ್ರಾರಂಭವಾದ ಮೇಲೆ ಅದರ ದಾಹ ಹೆಚ್ಚಾಗುತ್ತ ಹೋಗುತ್ತದೆ. ದೇಶದಲ್ಲಿ ಭಯ ಭೀತಿಗಳ ವಾತಾವರಣವು ಏರ್ಪಡುತ್ತದೆ. ಜನರ ಬೆಂಬಲವನ್ನು ಉಳಿಸಿಕೊಳ್ಳಲು ಸಾಲಸೋಲಗಳನ್ನು ತೊಡೆದುಹಾಕಿಬಿಡುವ ಮತ್ತು ಭೂಮಿಯನ್ನು ಪುನರ್ವಿಭಾಗಮಾಡುವ ಆಸೆಯನ್ನು ಹುಟ್ಟಿಸುತ್ತಾನೆ. ಕೊನೆಗೆ ರಾಜ್ಯದ ಸರ್ವ ಅಧಿಕಾರ ಸೂತ್ರಗಳನ್ನೂ ತನ್ನ ಕೈಗೆ ಸೇರಿಸಿ ಕೊಂಡು ಸ್ವೇಚ್ಛಾವೃತ್ತಿಯಿಂದ ಆಡಳಿತ ನಡಸುವುದಕ್ಕೆ ಪ್ರಾರಂಭಮಾಡುತ್ತಾನೆ, ಇವನ ಇಷ್ಟವೇ ಹೊಸ ಶಾಸನದ ಮೂಲವಾಗುತ್ತದೆ. ಇಂಥ ಹಿಂಸಾಪ್ರವೃತ್ತಿಯುಳ್ಳ ಶಾಸನವಿರುದ್ಧವಾದ ಒಬ್ಬ ವ್ಯಕ್ತಿಯ ಸ್ವೇಚ್ಛಾನಿಷ್ಠವಾದ ನಿರಂಕುಶ ಪ್ರಭುತ್ವವನ್ನೇ ಇಲ್ಲಿ ಪ್ಲೇಟೋ 'ಸರ್ವಾಧಿಕಾರ' ಎಂದು ಹೇಳಿರುವುದು. ಸರ್ವ ಪ್ರಜಾಹಿತಸಾಧಕವಾದ ಶಾಸನಬದ್ಧತೆ ಇಲ್ಲದಿರುವುದೇ ಇದರ ವಿಶೇಷ ಲಕ್ಷಣ.

* * *

೪ನೆಯ ಅಧ್ಯಾಯ

ರಾಷ್ಟ್ರಪ್ರೇಮ

ಇದುವರೆಗೆ ಪ್ರಾಚೀನ ಕಾಲದಲ್ಲಿಯೂ ಈಗಿನ ಕಾಲದಲ್ಲಿಯೂ ನಮ್ಮ ಅನುಭವಕ್ಕೆ ಗೋಚರವಾದ ರಾಜ್ಯಪದ್ಧತಿಗಳಲ್ಲಿ ಮುಖ್ಯ ವಾದವನ್ನು ನಿರೂಪಿಸಿದ್ದಾಯಿತು. ಇವು ಐದು. ಮೊದಲನೆಯದು ಪ್ಲೇಟೋವಿನ ಅಭಿಪ್ರಾಯದಲ್ಲಿ ಅತ್ಯುತ್ತಮವಾದ್ದು. ಅದನ್ನು ನಾವು ಸಾತ್ವಿಕ ರಾಜ್ಯಪದ್ಧತಿಯೆಂದು ಕರೆದಿದ್ದೇವೆ. ಪ್ಲೇಟೋವಿನ ಪರಿಭಾಷೆಯಲ್ಲಿ ಅದು ಶ್ರೇಷ್ಠ ಶ್ರೀಮಂತರ ಪ್ರಭುತ್ವ (Monarchy) ಅಥವಾ (Aristocracy) ಎಂದು ಹೆಸರು. ಇದರ ಲಕ್ಷಣಗಳೇನೆಂದರೆ, ಉತ್ತಮ ಶಾಸನ ಸಮ್ಮತವಾದ ಆಡಳಿತ, ಜ್ಞಾನಬಲಗಳ ಸಮ್ಮೇಳನ, ಸತ್ಯ ಧರ್ಮ ಪ್ರಜಾಹಿತಗಳ ಸಾಮರಸ್ಯ. ಇಂಥ ಉತ್ತಮ ರಾಜ್ಯಪದ್ಧತಿಯು ಹದಗೆಟ್ಟರೆ ಇತರ ಬಗೆಯ ಪದ್ಧತಿಗಳು ಕ್ರಮವಾಗಿ ಉತ್ಪನ್ನವಾಗುತ್ತವೆ. ವೀರಯೋಧರ ಆಡಳಿತ, ಐಶ್ವರ್ಯವಂತರ ರಾಷ್ಟ್ರ, ಪ್ರಜಾರಾಜ್ಯ, ಸರ್ವಾಧಿಕಾರ ಪ್ರಭುತ್ವ – ಇವು ನಾಲ್ಕು ಮಾದರಿಗಳು ಸ್ಪಷ್ಟವಾಗಿ ಕ್ರಮೇಣ ರೂಪುಗೊಳ್ಳುವುವು. ಇವುಗಳ ಪರಸ್ಪರ ಸಂಬಂಧವನ್ನು ಮನಶ್ಶಾಸ್ತ್ರದ ದೃಷ್ಟಿಯಿಂದ ಪ್ಲೇಟೋವರ್ಣಿಸಿರುವ ರೀತಿಯನ್ನು ಇದುವರೆಗೆ ಸೂಚಿಸಿದ್ದೇವೆ. ಈ ಅನುಭವ ಸಂಗ್ರಹ ತತ್ತ್ವಮನನಗಳ ಆಧಾರದ ಮೇಲೆ ಪ್ಲೇಟೋ ಆದರ್ಶ ರಾಜ್ಯದ ರೂಪುರೇಖೆಗಳನ್ನು ವಿಶದಪಡಿಸುತ್ತಾನೆ.

ಈ ನಾಲ್ಕು ರಾಜ್ಯಪದ್ಧತಿಗಳೂ ಒಂದಲ್ಲ ಒಂದುರೀತಿಯಲ್ಲಿ ದೋಷವುಳ್ಳವೇ ಆಗಿವೆ. ಹಾಗಾದರೆ, ಸರ್ವಜನ ಹಿತಕಾರಿಯಾದ, ಶಾಶ್ವತವಾಗಿ ನಡೆಯಬಹುದಾದ ರಾಷ್ಟ್ರ ಸಂವಿಧಾನವನ್ನು ರಚಿಸಿಕೊಳ್ಳಲು ಮನುಷ್ಯನಿಗೆ ಸಾಧ್ಯವಿಲ್ಲವೇ ? – ಎಂದು ಸಂಶಯ ತೋರಿಬರುವುದು ಸಹಜ. ಈ ಸಂಶಯ ನಿವಾರಣೆಯೇ ಪ್ಲೇಟೋವಿನ ಗಹನವಾದ ತತ್ತ್ವಾನ್ವೇಷಣಕ್ಕೆ ಸ್ಫೂರ್ತಿದಾಯಕವಾದ ಪ್ರೇರಣೆಯೆನ್ನಬಹುದು.

ಪ್ಲೇಟೋವಿನ ಯೌವನಕಾಲದಲ್ಲಿ ಅಥೆನ್ಸ್ ನಗರಕ್ಕೂ ಸ್ಪಾರ್ಟಾ ನಗರಕ್ಕೂ ದೀರ್ಘಕಾಲ (೨೦–೨೫ ವರ್ಷಗಳು) ನಡೆದ ಯುದ್ಧದಲ್ಲಿ ಕೊನೆಗೆ ಅಥೆನ್ಸ್ ನಗರಕ್ಕೇ ಸೋಲುಂಟಾಯಿತು. ಇದರ ಫಲವಾಗಿ ಸ್ಪಾರ್ಟಾ ನಗರದ ನಾಯಕರ ಅಧೀನದಲ್ಲಿ ನಿಂತು ಅಥೆನ್ಸ್ ನಗರದ ಆಡಳಿತ ನಡಸಲು ಪ್ಲೇಟೋವಿನ ನೆಂಟನಾದ

ಕ್ರಿಟಿಯಸ್ ಮೊದಲಾದ ಮೂವತ್ತು ಮುಖಂಡರು ಸರ್ವಾಧಿಕಾರವನ್ನು ವಹಿಸಿದರು. ಇವರ ಕಾಲದಲ್ಲಿ ಪ್ಲೇಟೋರಾಜಕೀಯದಲ್ಲಿ ಭಾಗವಹಿಸಬಹುದಾಗಿತ್ತು. ಆದರ ಮೂಲಕ ದೇಶಸೇವೆ ಮಾಡಬಹುದಾಗಿತ್ತು. ರಾಜಕೀಯ ಇವನ ಮನೆತನಕ್ಕೆ ಬಂದದ್ದು. ಇವನ ಮನೆತನ ಅಥೆನ್ಸ್ ನಗರದ ರಾಜವಂಶಗಳಲ್ಲಿ ಒಂದು. ಹಿಂದೆ ಇವನ ಪೂರ್ವಿಕರು ರಾಜರಾಗಿದ್ದರೆಂಬ ಐತಿಹ್ಯವಿದೆ, ತನ್ನ ನಗರದ ರಾಜಕೀಯ ಕಾರ್ಯಭಾರದಲ್ಲಿ ಪ್ಲೇಟೋ ತನ್ನ ಸಂಬಂಧಿಗಳೊಡನೆ ಪಾತ್ರವಹಿಸುತ್ತಾನೆಂಬ ನಿರೀಕ್ಷಣೆ ಇವನ ನೆಂಟರಿಷ್ಟರಿಗೆಲ್ಲ ಇದ್ದದ್ದು ಸ್ವಾಭಾವಿಕವಾಗಿದೆ. ಆದರೆ, ಪ್ಲೇಟೋ ತನ್ನ ಅಣ್ಣಂದಿರೊಡನೆ ಸಾಕ್ರಟೀಸನ ಶಿಷ್ಯನಾಗಿದ್ದನು. ಅನೇಕ ಪ್ರತಿಭಾಶಾಲಿಗಳಾದ ಯುವಕರು ಸಾಕ್ರಟೀಸನ ತತ್ತ್ವಪ್ರೇಮಕ್ಕೂ ತತ್ತ್ವಾನ್ವೇಷಣಕ್ರಮಕ್ಕೂ ತತ್ತ್ವ ಸಂಶೋಧನೆಯಲ್ಲಿ ಅವನು ತೋರಿದ ಅಸದೃಶಕೌಶಲಕ್ಕೂ ಮತ್ತು ಅವನ ಸರಳಜೀವನಕ್ಕೂ ಮನಸೋತಿದ್ದರು. ಇವರಲ್ಲಿ ಪ್ಲೇಟೋ ಅಗ್ರಗಣ್ಯನಾದವನು. ಸಾಕ್ರಟೀಸನ ಜೀವನ ಸಂದೇಶವನ್ನು ಮುಂದುವರಿಸಿ ಉತ್ತಮ ಜೀವನಪಥಕ್ಕೆ ಸಹಕಾರಿಯಾದ ಜ್ಞಾನವನ್ನು ಸಂಪಾದಿಸಿ ತನ್ನದೇಶದ ಸಂಸ್ಕೃತಿ ನಾಗರಿಕತೆಗಳನ್ನು ಉದ್ಧಾರ ಮಾಡಬೇಕೆಂಬ ಪ್ರಬಲವಾದ ಇಚ್ಛೆ ಪ್ಲೇಟೋವಿನ ಮನಸ್ಸನ್ನು ಆವರಿಸಿತು. ಅಲ್ಲದೆ, ತನ್ನ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತಿದ್ದ ಮುಖಂಡರು ಅವನಿಗೆ ಸರಿಬೀಳಲಿಲ್ಲ. ಅವರಲ್ಲಿ ರಾಷ್ಟ್ರಪ್ರೇಮಕ್ಕಿಂತ ಸ್ವಾರ್ಥವೇ ಮೇಲ್ಗೈಯಾಗಿತ್ತು. ದೇಶ ಅಧೋಗತಿಗಿಳಿಯುತ್ತಿರುವುದನ್ನು ತಡೆದು ಪುನಃ ಅದರ ಏಳಿಗೆಯನ್ನು ಸಾಧಿಸುವ ಛಲವೂ ಅವರಲ್ಲಿ ಅಷ್ಟಾಗಿರಲಿಲ್ಲ. ಅಲ್ಲದೆ, ರಾಗದ್ವೇಷಗಳಿಂದ ಕೂಡಿದವರಾಗಿ ತಮ್ಮ ಪ್ರತಿಪಕ್ಷದವರನ್ನು ಹಿಂಸಿಸುವುದಕ್ಕೆ ತೊಡಗಿದರು. ಶಾಸನಸಂಪ್ರದಾಯಗಳಿಗೆ ಇರಬೇಕಾದ ಮನ್ನಣೆ ವಿಶ್ವಾಸಗಳು ಇವರ ಪಾಲಿಗೆ ಮಾಯವಾದುವು. ದೇಶದಲ್ಲಿ ಅವ್ಯವಸ್ಥೆ ಬೇರೂರುತ್ತ ಬಂತು. ಈ "ಮೂವತ್ತು ನಾಯಕರ ಪ್ರಭುತ್ವವು" ಕೊನೆಗೊಂಡು ಮತ್ತೆ ಪ್ರಜಾರಾಜ್ಯ ನಿರ್ಮಾಣವಾಯಿತು. ಇದರ ನಾಯಕರು ಕೂಡ ಉದಾತ್ತ ಧ್ಯೇಯಗಳನ್ನಿಟ್ಟುಕೊಂಡಿದ್ದವರಲ್ಲ. ಇವರ ಆಡಳಿತದಲ್ಲಿ ಸಭ್ಯರಿಗೂ ಅನುಭವಸ್ಥರಿಗೂ ವಿದ್ಯಾವಿನಯ ಸಂಪನ್ನರಿಗೂ ಸಲ್ಲಬೇಕಾದ ಗೌರವ ಸಲ್ಲುತ್ತಿರಲಿಲ್ಲ. ಅನ್ಯಾಯ, ದೂರದೃಷ್ಟಿಯಿಲ್ಲದಿರುವುದು, ವ್ಯಕ್ತಿ ಪಕ್ಷಗಳ ಸ್ವಾರ್ಥಪರತೆ – ಇವೆಲ್ಲ ತಾವೇತಾವಾಗಿ ತಾಂಡವಾಡುವುದಕ್ಕೆ ಪ್ರಾರಂಭವಾಯಿತು. ಅಲ್ಲದೆ, ಈ ಹೊಸ ನಾಯಕರು ತನಗೂ ತನ್ನ ಸರಿಸಮಾನರಾದ ಅನೇಕರಿಗೂ ಪರಮ ಗುರುಸ್ಥಾನದಲ್ಲಿದ್ದ, ತತ್ತ್ವಾನ್ವೇಷಣದಲ್ಲಿ ಅಪೂರ್ವ ಪ್ರತಿಭಾವಂತನಾದ ಸಾಕ್ರಟೀಸನಿಗೆ ಅನ್ಯಾಯವಾಗಿ ಮರಣದಂಡನೆ ವಿಧಿಸಿದರು. ಈ ಘಟನೆಯು ಪ್ಲೇಟೋವಿಗೆ ತೀರ ಅಸಹ್ಯವಾಯಿತು. ಪ್ರಜಾರಾಜ್ಯದ ವಿಷಯದಲ್ಲಿ ಅವನಿಗಿದ್ದ ಅಪನಂಬಿಕೆಯೂ ಅಗೌರವವೂ ರೂಢಮೂಲವಾಯಿತು. ರಾಜಕೀಯದಲ್ಲಿ ತನ್ನಂಥವರು ಭಾಗವಹಿಸುವುದರಲ್ಲಿ ಪ್ರಯೋಜನವಿಲ್ಲವೆಂಬ ಅಭಿಪ್ರಾಯ ಅವನ ಮನಸ್ಸಿನಲ್ಲಿ ದೃಢವಾಯಿತು.

ಎಲ್ಲ ಏಳಿಗೆಯೂ ಜ್ಞಾನದ ಮೂಲಕವೇ ಸಾಧಿತವಾಗಬೇಕೆಂಬ ಸಾಕ್ರಟೀಸನ ಉಪದೇಶವು ಪ್ಲೇಟೋವಿನ ಮನಸ್ಸಿನಲ್ಲಿ ಬೇರೂರಿತು. ನಾಗರಿಕರ ಮನೋರಾಜ್ಯದಲ್ಲಿ

ಮೊದಲು ರಾಷ್ಟ್ರದ ಪುನುರುಜ್ಜೀವನ ಪುನನಿರ್ಮಾಣಗಳಾದ ಹೊರತು ಬಾಹ್ಯಪ್ರಪಂಚದಲ್ಲಿ ರಾಷ್ಟ್ರದ ಪುರೋಭಿವೃದ್ಧಿ ಮಾರ್ಗವನ್ನು ಹಿಡಿಯಲಾರದು ಎಂಬ ಯೋಚನೆ ಪ್ಲೇಟೋವಿನ ಮನಸ್ಸನ್ನು ಆಕ್ರಮಿಸಿತು. ಇದರ ಫಲವಾಗಿ ಹತ್ತೂ ಜನರಲ್ಲಿ ತಾನೂ ಒಬ್ಬನಾಗಿ, ರಾಷ್ಟ್ರದ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಅಸಮರ್ಥನಾಗಿ, ಪ್ರಚಲಿತವಾದ ಅಸಾಧು ಮಾರ್ಗಗಳಲ್ಲಿಯೇ ಅರೆಮನಸ್ಸಿನಿಂದ ನಡೆಯುತ್ತ, ಒಳಗಿನ ಆಶಯಗಳಿಗೂ ಹೊರಗಿನ ಕೃತ್ಯಗಳಿಗೂ ಸಂಬಂಧವಿಲ್ಲದೆ, ಹೃದಯವೇದನೆಯನ್ನು ಸಹಿಸಿಕೊಂಡು, ನಿರರ್ಥಕವಾದ ನಿಷ್ಫಲವಾದ ಜೀವನವನ್ನು ನಡಸುವುದಕ್ಕಿಂತ ರಾಜಕೀಯ ಜೀವನವನ್ನು ತೊರೆದು ಶಾಸ್ತ್ರರಂಗದಲ್ಲಿ ಮೊದಲು ರಾಷ್ಟ್ರಸಂಸ್ಕರಣ ಮಾರ್ಗವನ್ನು ಕಂಡುಹಿಡಿದು ಜನರಲ್ಲಿ ಪ್ರಸಾರ ಮಾಡುವುದೇ ಮುಖ್ಯವೆಂದೂ ಅದೇ ತನ್ನ ಜೀವನಗುರಿಯೆಂದೂ ಅವನು ನಿರ್ಧರಿಸಿದನು. ಹಾಗೆ ನಿರ್ಧರಿಸಿ ತತ್ತ್ವಾನ್ವೇಷಣಕ್ಕೂ ತತ್ತ್ವದ ಅಧ್ಯಾಪನಕ್ಕೂ ಟೊಂಕಕಟ್ಟಿ ನಿಂತನು. ತನ್ನ ನಲವತ್ತನೆಯ ವಯಸ್ಸಿನಲ್ಲಿ ಒಂದು ವಿದ್ಯಾನಿಲಯವನ್ನು ಸ್ಥಾಪಿಸಿದನು. ಇದು ಸುಮಾರು ಒಂದು ಸಾವಿರ ವರ್ಷಕಾಲ ಗ್ರಿಸ್ ಮತ್ತು ರೋಮ್ ರಾಜ್ಯಗಳಲ್ಲಿ ಯೂರೋಪಿನ ಸಂಸ್ಕೃತಿಗೆ ಕೇಂದ್ರಸ್ಥಾನವಾಗಿ ಪ್ರಸಿದ್ಧಿ ಪಡೆಯಿತು.

ಪ್ಲೇಟೋವಿನ 'ಅಕಾಡೆಮಿ' (Academy) ಯಲ್ಲಿ ರಾಜಕೀಯ ವಿಧಾನಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸಂಶೋಧನೆ ಮಾಡುವ ಸಂಪ್ರದಾಯವೇರ್ಪಟ್ಟಿತು. ಪ್ಲೇಟೋ ಒಂದೆರಡು ಸಾರಿ 'ಸಿರಾಕ್ಯೂಸ್' (Syracuse) ನಗರಕ್ಕೆ ರಾಜಕೀಯ ವಿಷಯಗಳಲ್ಲಿ ಸಲಹೆಗಾರನಾಗಿ ಹೋಗಿದ್ದನು. ಆದರೆ ಕೆಲಸ ಫಲಕಾರಿ ಯಾಗಲಿಲ್ಲವೆಂದು ತೋರುತ್ತದೆ. ಗ್ರೀಸ್, ಏಷಿಯ ಮೈನರ್, ಸಿಸಿಲಿ, ದಕ್ಷಿಣ ಇಟಲಿ– ಈ ಪ್ರದೇಶಗಳಲ್ಲಿದ್ದ ಗ್ರೀಕ್ ಜನರ ನೂರಾರು ನಗರ ರಾಷ್ಟ್ರಗಳಿಂದ ರಾಜ್ಯಾಂಗ ಸುಧಾರಣೆಯ ಕಾರ್ಯದಲ್ಲಿ ಸಲಹೆ ಸಹಾಯಗಳನ್ನಪೇಕ್ಷಿಸಿ ರಾಜಕಾರಣಿಗಳೂ ಅಧ್ಯಾಪಕರೂ ಅಥೆನ್ಸ್ ನಗರದ ಪ್ಲೇಟೋವಿನ ಅಕಾಡೆಮಿಗೆ ಬರುವ ವಾಡಿಕೆ ಯುಂಟಾಯಿತು. ರಾಜಕೀಯ ವಿಷಯದಲ್ಲಿ ಪ್ಲೇಟೋ ಸಿದ್ಧಾಂತ ರೂಪಕ್ಕೆ ತಂದ ಅಂಶಗಳು ಅವನ ರಿಪಬ್ಲಿಕ್ (Republic), ಪೊಲಿಟಿಕಸ್ (Ploiticus) ಮತ್ತು ಲಾಸ್ (Laws) ಎಂಬ ಗ್ರಂಥಗಳಲ್ಲಿ ಪ್ರತಿಪಾದನೆಯಾಗಿವೆ. ಈ ಮೂರು ಗ್ರಂಥಗಳಲ್ಲಿ ಹೇಳಿರುವ ಅಭಿಪ್ರಾಯಗಳನ್ನು ಇಲ್ಲಿ ಸ್ಥೂಲವಾಗಿ ಸೂಚಿಸುತ್ತೇವೆ.

ಪ್ಲೇಟೋವಿನದು ಸಮಗ್ರದೃಷ್ಟಿ. ವ್ಯಕ್ತಿಯನ್ನು ಸಮಾಜದ ಆವರಣದಲ್ಲಿಯೂ ಸಮಾಜವನ್ನು ರಾಜ್ಯಾಂಗದ ಹಿನ್ನೆಲೆಯ ಮೇಲೂ ನೋಡಿ ವಿವೇಚಿಸುವುದು ಅವನ ವಿಚಾರಕ್ರಮ. ವ್ಯಕ್ತಿಯಂತೆ ಸಮಾಜ, ಸಮಾಜದಂತೆ ರಾಷ್ಟ್ರ, ಅಂತೆಯೇ ರಾಷ್ಟ್ರದಂತೆ ಸಮಾಜ, ಸಮಾಜದಂತೆ ವ್ಯಕ್ತಿ ಸಮಾಜ ರಾಷ್ಟ್ರಗಳಲ್ಲಿ ಪರಸ್ಪರ ಕಾರ್ಯಕಾರಣ ಸಂಬಂಧವಿದೆ. ಅವು ಪರಸ್ಪರ ಕಾರಣವೂ ಹೌದು, ಕಾರ್ಯವೂ ಹೌದು.

ರಾಜ್ಯಾಂಗಕ್ಕೆ ತಳಹದಿ ಸಮಾಜ ಜೀವನ. ದೇಹದಲ್ಲಿ ಪ್ರಾಣವೂ ಸಸ್ಯಗಳಲ್ಲಿ ರಸವೂ ಇರುವಂತೆ ಸಾಮಾಜಿಕ ಸಂಸ್ಥೆಗಳಲ್ಲಿ ರಾಷ್ಟ್ರಪ್ರೇಮವೂ ಸಂಚರಿಸದಿದ್ದರೆ

ರಾಜ್ಯಾಂಗವು ಬಲಿಷ್ಠವಾಗಲಾರದು. ಅದು ಬೇಗನೆ ಮೃತಪ್ರಾಯವಾಗಿ ನಶಿಸಿಹೋಗುವುದು. ಸಾಮಾಜಿಕ ಜೀವನದಲ್ಲಿ ರಾಷ್ಟ್ರಪ್ರೇಮವು ತೋರಬೇಕಾದರೆ ಅದು ವ್ಯಕ್ತಿಯ ಮನಸ್ಸಿನಲ್ಲಿ ಚಿಲುಮೆಯಂತೆ ಹೊರಹೊಮ್ಮುತ್ತಿರಬೇಕು.

ಹಾಗೆಯೇ ಸ್ವಾತಂತ್ರ್ಯ ಪ್ರೇಮ ಕೂಡ, ಜನರ ಸ್ವಾತಂತ್ರ್ಯ ಪ್ರೇಮ, ಪರಾಧೀನತೆಯಲ್ಲಿ ಅಸಹ್ಯ ಅಸಹಿಷ್ಣುತೆಗಳು ಅವರ ನಿತ್ಯ ಜೀವನದ ಕಾರ್ಯ ಕಲಾಪಗಳಲ್ಲಿ ಅಭಿವ್ಯಕ್ತಿ ಹೊಂದದಿದ್ದರೆ, ಸ್ವಾತಂತ್ರ್ಯದ ತಳಹದಿಯ ಮೇಲೆ ನಿರ್ಮಾಣವಾದ ರಾಜ್ಯಾಂಗವು ಕುಸಿದು ಬೀಳುತ್ತದೆ. ಪ್ರಜಾಸ್ವಾತಂತ್ರ್ಯವನ್ನು ರೂಪುಗೊಳಿಸುವ ಮೂಲಭೂತ ಹಕ್ಕುಬಾಧ್ಯತೆಗಳ ರಕ್ಷಣೆ ಕೇವಲ ಶಾಸನದಿಂದ ನಿರ್ವಾಹವಾಗುವುದಿಲ್ಲ ; ಸಾಮಾಜಿಕರ ಮನಸ್ಸಂಕಲ್ಪರೂಪವಾದ ಕೋಟೆಕೊತ್ತಳಗಳಿಂದ ಅವುಗಳ ರಕ್ಷಣೆಯಾಗಬೇಕು. ಎಲ್ಲ ಇಷ್ಟಸಾಧನೆಗೂ ಪರರ ಕೈಕಾಯುತ್ತ, ಪರರ ಇಂಗಿತವನ್ನು ಯೋಚಿಸುತ್ತ, ಸ್ವಾವಲಂಬನವನ್ನು ತ್ಯಜಿಸಿ ಪ್ರಭುತ್ವದವರ ದಾರಿ ನೋಡುತ್ತ ಕಾಲ ಕಳೆಯುವ ಜನರಿಗೆ ರಾಜಕೀಯ ಸ್ವಾತಂತ್ರ್ಯದ ಫಲ ದೊರೆಯುವುದು ಅಸಂಭವ.

ಮೊಟ್ಟಮೊದಲು ನಾಗರಿಕರಲ್ಲಿ ದೇಶಪ್ರೇಮವಿರಬೇಕು, ಸ್ವಜನರಲ್ಲಿ ಅಭಿಮಾನವಿರಬೇಕು. ನಾಗರಿಕರೆಲ್ಲ ದೇಶದ ಹಿತಚಿಂತಕರಾಗಿರಬೇಕು. ದೇಶದ ಹಿತದಲ್ಲಿ ತಮ್ಮ ಹಿತವನ್ನು ಕಂಡುಕೊಳ್ಳುವ ಮನೋವೃತ್ತಿ ರಾಷ್ಟ್ರದ ಏಳಿಗೆಗೆ ಅತ್ಯಾವಶ್ಯಕ. ಇದು ಸಾಕಷ್ಟು ಪ್ರಮಾಣದಲ್ಲಿ ಜನರಲ್ಲಿಲ್ಲದಿದ್ದರೆ ಯಾವ ರಾಜ್ಯಾಂಗವೂ ಫಲಕಾರಿ ಯಾಗಲಾರದು. ಒಂದು ಕುಟುಂಬದಲ್ಲಿ ತಂದೆ, ತಾಯಿ, ಮಕ್ಕಳು, ಅಣ್ಣ ತಮ್ಮಂದಿರು, ಅಕ್ಕ ತಂಗಿಯರು – ಇವರಲ್ಲಿ ಸಹಜವಾಗಿ ಹುಟ್ಟಿಬೆಳೆಯತಕ್ಕ ಪರಸ್ಪರ ಪ್ರೀತಿಯ ಛಾಯೆಯು ರಾಜ್ಯದ ವಿಷಯದಲ್ಲಿ ಸಮಸ್ತ ನಾಗರಿಕರಿಗೂ ತಕ್ಕಷ್ಟಿರಬೇಕು. ಇದು ಅತ್ಯಂತ ಅವಶ್ಯಕವಾಗಿದೆ.

ಗ್ರೀಕರ ರಾಜಕೀಯ ಅನುಭವವೆಲ್ಲ ಸಣ್ಣ ಸಣ್ಣ ನಗರರಾಜ್ಯ (City States) ಗಳಲ್ಲಿ ಬೆಳೆಯಿತು. ಆದರೂ ಅವರ ಅನುಭವದ ಸಾರವನ್ನೊಳಗೊಂಡ ಸಿದ್ಧಾಂತಗಳು ಈಗಿನ ವಿಶಾಲ ರಾಷ್ಟ್ರಗಳಿಗೂ ಬಹುಮಟ್ಟಿಗೆ ಅನ್ವಯಿಸುತ್ತವೆ. ಗ್ರೀಕರ ಪ್ರಜಾರಾಜ್ಯಗಳ ರಾಜಕೀಯದಲ್ಲಿ ಎಲ್ಲ ನಾಗರಿಕರಿಗೂ ಭಾಗವಹಿಸುವ ಹಕ್ಕಿದ್ದಿತು. ಎಲ್ಲರೂ ಸಭೆಸೇರಿ ರಾಷ್ಟ್ರದ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದರು. ಮುಖ್ಯ ತೀರ್ಮಾನಗಳೆಲ್ಲ ಸಾರ್ವಜನಿಕ ಸಭೆಗಳಲ್ಲಿಯೇ ಆಗುತ್ತಿದ್ದವು, ಅವುಗಳನ್ನು ಕಾರ್ಯತಃ ನಡಸುವುದಕ್ಕೆ ನ್ಯಾಯಾಧಿಕಾರಿಗಳನ್ನೂ, ಸೇನಾಧಿಪತಿಗಳನ್ನೂ, ಕೋಶಾಧಿಕಾರಿಗಳನ್ನೂ, ಸಣ್ಣ ಸಣ್ಣ ಸಮಿತಿಗಳನ್ನೂ ಲೋಕಸಭೆಯೇ ನೇಮಿಸುವ ವಾಡಿಕೆಯಿತ್ತು. ದೇಶದ ಪರಮ ಪ್ರಭುತ್ವವು ಲೋಕಸಭೆಗೇ ಸೇರಿತ್ತು. ಆದರೂ ಅದರಲ್ಲಿ ಮುಖ್ಯಪಾತ್ರ ವಹಿಸುವವರೂ ನಾಯಕರಾಗಿ ಮುಂದೆ ಬಂದು ಕಾರ್ಯಭಾರಕ್ಕೆ ರೂಪುಕೊಟ್ಟು ನಡಸಿಕೊಂಡು ಬರುವವರೂ ಅಲ್ಪ ಸಂಖ್ಯಾತರೇ ಆಗಿರುತ್ತಿದ್ದರು.

ಈ ಪದ್ಧತಿ ಯಶಸ್ವಿಯಾಗಬೇಕಾದರೆ ಜನ ಸಾಮಾನ್ಯರಿಗೆ ಪ್ರತಿಯೊಬ್ಬ ಮುಖಂಡನ ಪರಿಚಯವೂ ಸಾಕಾದಷ್ಟಿರಬೇಕು. ಜನ ಸಂಖ್ಯೆ ಮಿತಿಮೀರಿ ಬೆಳೆದರೆ ನಾಗರಿಕರಲ್ಲಿ ಪರಸ್ಪರ ಪರಿಚಯಕ್ಕೆ ಅವಕಾಶವೇ ಇಲ್ಲದಂತಾಗುವುದು. ಹಾಗೆ ಸ್ವಂತ ಪರಿಚಯವಿಲ್ಲದಿದ್ದರೆ ಸರಿಯಾದ ಅಧಿಕಾರಿಗಳನ್ನು ಚುನಾವಣೆ ಮಾಡುವುದು ಸುಲಭ ಸಾಧ್ಯವಾಗುವುದಿಲ್ಲ. ಮತ್ತು ಪರಸ್ಪರ ಅನುರಾಗಕ್ಕೆ ಕೂಡ ಪರಿಚಯ ಅವಶ್ಯಕ. ಕಾಣದೆ ಕೇಳದೆ ಬರಿ ಹೆಸರು ಮಾತ್ರ ಗೊತ್ತಿರುವ ಜನರಲ್ಲಿ ಪ್ರೀತಿ ಗೌರವಗಳನ್ನಿಡುವುದಕ್ಕಾಗಲಿ ಅವರಲ್ಲಿ ಯೋಗ್ಯರನ್ನು ಆಯ್ದು ರಾಷ್ಟ್ರದ ಅಧಿಕಾರ ಸ್ಥಾನಗಳಿಗೆ ನೇಮಿಸುವುದಕ್ಕಾಗಲಿ ಅವಕಾಶವಿರುವುದಿಲ್ಲ.

ಪ್ಲೇಟೋ ಅರಿಸ್ಟಾಟಲರ ಕಾಲದಲ್ಲಿ ಪ್ರಜಾಪ್ರತಿನಿಧಿ ಪ್ರಭುತ್ವ ಪದ್ಧತಿಯಿರಲಿಲ್ಲ. ಆದ್ದರಿಂದ ಅವರ ಊಹೆಯಲ್ಲಿ ರಾಷ್ಟ್ರಗಳು ಕೇವಲ ನಗರಗಳಾಗಿಯೇ ಇರಬೇಕಾಗಿತ್ತು, ಪರ್ಷಿಯಾ, ಈಜಿಪ್ಟುಗಳಂಥ ವಿಶಾಲ ರಾಷ್ಟ್ರಗಳ ಪರಿಚಯವೂ ಅವರಿಗೆ ತಕ್ಕಮಟ್ಟಿಗೆ ಇತ್ತು. ಆದರೆ, ಅಂಥ ವಿಶಾಲ ರಾಷ್ಟ್ರಗಳಲ್ಲಿ ನಾಗರಿಕರಿಗೆ ಸ್ವಾತಂತ್ರ್ಯವಾಗಲಿ ಶಾಸನಪ್ರಧಾನವಾದ ರಾಜ್ಯಾಂಗವಾಗಲಿ ಲಭಿಸುವುದು ದುರ್ಲಭವೆಂಬುದು ಗ್ರೀಕ್ ಪ್ರಾಜ್ಞರ ಅಭಿಪ್ರಾಯವಾಗಿತ್ತು.

ಆದರೆ ಈಗಿನ ಕಾಲದಲ್ಲಿ ಪ್ರಯಾಣ ಮತ್ತು ಸಮಾಚಾರ ಸೌಕರ್ಯಗಳು ಅಗಾಧಾವಾಗಿ ಬೆಳೆದಿವೆ. ರೈಲು ಮಾರ್ಗಗಳೂ ಟೆಲಿಗ್ರಾಫ್ ವೈರ್ಲೆಸ್‌ಗಳೂ (ತಂತಿ ಸಮಾಚಾರ ಮತ್ತು ನಿಸ್ತಂತಿ ಸಮಾಚಾರಗಳು) ದೈನಂದಿನ ಸಮಾಚಾರ ಪತ್ರಿಕೆಗಳೂ ಫೋಟೋಗ್ರಾಫ್ (ಛಾಯಾಚಿತ್ರ) ರೇಡಿಯೋ (ಆಕಾಶವಾಣಿ) ಗಳೂ ಸಾರ್ವಜನಿಕರ ಬಳಕೆಗೆ ಬಂದಿವೆ. ಇವುಗಳ ಪರಿಣಾಮವಾಗಿ ವಿಶಾಲ ರಾಷ್ಟ್ರಗಳಲ್ಲಿ ಪರಸ್ಪರ ಪರಿಚಯ ಅಭಿಮಾನಗಳು ಬೆಳೆದು ರಾಷ್ಟ್ರದಲ್ಲಿ ಐಕ್ಯಭಾವನೆಯು ಸಾಕಾದಷ್ಟು ಪ್ರಮಾಣದಲ್ಲಿ ಪ್ರಬಲವಾಗುವ ಸಂಭವವಿದೆ. ಈ ಸೌಕರ್ಯಗಳನ್ನು ಸರಿಯಾಗಿ ಉಪಯೋಗಿಸಿಕೊಂಡರೆ ಪ್ರತಿನಿಧಿ ಕ್ರಮದ ಮೂಲಕವೂ ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ನಡಸಬಹುದೆಂದೂ ಪ್ರಜಾಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬಹುದೆಂದೂ ಈಗಿನವರ ಅಭಿಪ್ರಾಯ.

ರಾಷ್ಟ್ರಪ್ರೇಮವೇ ರಾಜ್ಯಾಂಗದ ತಳಹದಿ ಅಥವಾ ಸಾರಸರ್ವಸ್ವ ಎಂದು ಹೇಳುವುದರಲ್ಲಿ ನಮ್ಮ ಕಾಲದಲ್ಲಿ ನಾವು ಕಂಡ ನಾಟ್ಸೆ ಫಾಸಿಸ್ಟ್ ಎಂಬ ವಿಪರೀತ ತತ್ತ್ವಗಳ ವಾಸನೆಯೇನೂ ಇರಬೇಕಾಗಿಲ್ಲ. ಪ್ಲೇಟೋವಿನ ಅಭಿಪ್ರಾಯದಲ್ಲಿ ಸೂಚಿತವಾಗಿರವುದು ಮನಸ್ಸಿನ ವಾತಾವರಣ, ನಾಗರಿಕರ ಮನೋಭಾವ. ಇವು ಕುದಿಕುದಿಯುತ್ತಿರುವ ಯಾವುದೋ ಒಂದುಬಗೆಯ ಜ್ವರದಂತೆ ಸದಾಕಾಲವೂ ಜನರನ್ನು ಉದ್ವೇಗಗೊಳಿಸುತ್ತಿರುವ ಆವೇಗವಲ್ಲ. ಶಾಂತವಾಗಿ ಸ್ವಾಭಾವಿಕವಾಗಿ ಜನರಲ್ಲಿ ಅವರ ದಿನಚರಿಯ ಕಾರ್ಯಕಲಾಪಗಳಲ್ಲಿ ಉತ್ಪನ್ನವಾಗುವ ಪರಸ್ಪರ ವಿಶ್ವಾಸ. ಇದು ಪರಿಚಯದಿಂದ ಹುಟ್ಟುತ್ತದೆ; ತಮ್ಮತಮ್ಮ ಅರ್ಥಸಾಧನೆಯ ಉದ್ಯಮಗಳಲ್ಲಿ ಜನರನ್ನು ಒಟ್ಟುಗೂಡಿಸಿ ಒಮ್ಮನಸ್ಸನ್ನು ಬೆಳಸುತ್ತದೆ. ಪರಸ್ಪರ ಅಸೂಯೆ

ಪೈಪೋಟಿಯ ಕಷಾಯಗಳು ಅಡ್ಡಿಬಂದರೂ ಒಟ್ಟು ಜನಾಂಗದಲ್ಲಿ ಮೈತ್ರಿಯೇ ಮೇಲುಗೈಯಾಗುತ್ತದೆ ; ಜನರ ಮನಸ್ಸಿನಲ್ಲಿ ಅಸ್ಪಷ್ಟವೇದ್ಯವಾಗಿಯಾದರೂ ರಾಷ್ಟ್ರಪ್ರೇಮಭಾವನೆ ಬೇರೂರಿ ಬೆಳೆದುಬರುತ್ತದೆ.

ಇಂಥ ಮೈತ್ರಿಯ ಸಹಾಯದಿಂದಲೇ ದೇಶದ ಸಾರ್ವಜನಿಕ ಕಾರ್ಯ ಕಲಾಪಗಳು ನಡೆಯಬೇಕಾಗಿದೆ. ಅದು, ಕಣ್ಣಿಗೆ 'ಕಾಣದಿದ್ದರೂ ನಮ್ಮನ್ನು ಅವರಿಸಿಕೊಂಡು ನಮ್ಮ ಪ್ರಾಣಧಾರಣೆಗೆ ಅತ್ಯಾವಶ್ಯಕವಾದ ವಾಯುವಿನಂತೆ. ಹೊರಗಿನ ಗಾಳಿ ಮನುಷ್ಯನ ಜೀವದ ಉಸಿರು. ಹಾಗೆಯೇ ಜನತೆಯ ಮನಸ್ಸಿನಲ್ಲಿ ಮೂಡಿರುವ ಸ್ವದೇಶ ಸ್ವಜನ ಪ್ರೇಮವು ರಾಜ್ಯಾಂಗದ ಪ್ರಾಣ.

ರಾಷ್ಟ್ರಪ್ರೇಮ ದೇಶದಲ್ಲಿ ಎಲ್ಲರಲ್ಲಿಯೂ ಇರಬೇಕಾದರೂ ಮುಖ್ಯವಾಗಿ ನಾಯಕರಾಗಿ ಮುಂದೆ ಬರುವವರಲ್ಲಿ ಕಾರ್ಯರಂಗದಲ್ಲಿ ಫಲಕಾರಿಯಾಗುವಷ್ಟು ತೀವ್ರವಾಗಿರಬೇಕಾದ್ದು ಅತ್ಯಾವಶ್ಯಕ – ಎಂದು ಪ್ಲೇಟೋವಿನ ಅಭಿಪ್ರಾಯ.

ದೇಶದ ಹಿತಸಾಧನೆಗಳ ವಿಷಯದಲ್ಲಿ ಜನರೆಲ್ಲ ಒಮ್ಮನಸ್ಸುಳ್ಳವರಾಗಿರಬೇಕು. ದೇಶಕ್ಕೆ ಹಾನಿ ಸಂಭವಿಸುವ ವಿಷಯದಲ್ಲಿ ಸರ್ವರಿಗೂ ಒಂದೇಸಮನಾಗಿ ದುಃಖಾನುಭವವಾಗಬೇಕು. ದೇಶಕ್ಕೆ ಲಭಿಸಿದ ಸೌಕರ್ಯ, ಜಯ ಮುಂತಾದುವುಗಳಲ್ಲಿ ಎಲ್ಲರಿಗೂ ಸಮಾನವಾದ ಸಂತೋಷವುಂಟಾಗಬೇಕು. ವ್ಯಕ್ತಿಗತವಾದ ಬೇರೆ ಹಿತಾಹಿತಗಳ ವಿಷಯದಲ್ಲಿ ಭಿನ್ನ ಭಿನ್ನ ರಾಗದ್ವೇಷಗಳಿರಬಹುದು. ಆದರೆ ರಾಜ್ಯದ ಏಳಿಗೆ, ಸ್ಥಿತಿ, ವಿಪತ್ತು – ಈ ವಿಷಯದಲ್ಲಿ ಎಲ್ಲ ನಾಗರಿಕರಿಗೂ ಒಂದೇ ರೀತಿಯಿಂದ ರಸಾನುಭವವು ಅವಶ್ಯಕ. ದೇಶದಲ್ಲಿ ಒಡಕನ್ನು ಬೆಳೆಸುವ ಸಂಗತಿಗಳನ್ನೂ ಸನ್ನಿವೇಶಗಳನ್ನೂ ಕಂಡು ವಿಷಾದಪಟ್ಟು ಅವುಗಳನ್ನು ತಡೆಯುವುದಕ್ಕೆ ಪ್ರಯತ್ನ ಮಾಡುವ ಬದಲು ಅದನ್ನು ಕಂಡು ಸಂತೋಷಪಡುವ ಪಕ್ಷಗಳೂ ಜನರೂ ದೇಶದಲ್ಲಿ ಕಂಡುಬಂದರೆ' ಅಂಥ ರಾಜ್ಯದಲ್ಲಿ ಎಂಥ ಒಳ್ಳೆಯ ರಾಜ್ಯಾಂಗವೂ ಫಲಕಾರಿ ಯಾಗುವುದಿಲ್ಲ. ಈ ತಲೆಮಾರಿನಲ್ಲಿಯೇ ನಡೆದ ಎರಡು ಮಹಾಯುದ್ಧಗಳಲ್ಲಿ ಇಂಥ ಸನ್ನಿವೇಶಗಳ ವಿಷಮ ಪ್ರಭಾವವು ಅನೇಕ ರಾಷ್ಟ್ರಗಳಲ್ಲಿ ಕಂಡು ಬಂದು ಅಲ್ಲಿನ ನಾಯಕರ ಮನಸ್ಸನ್ನು ಕದಡಿತು. ಮೊದಲನೆಯ ಮಹಾಯುದ್ಧದಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ನೆಲಸಿದ್ದ ಜರ್ಮನಿಯ ಜನರೂ ಜರ್ಮನ್ ಸಂತತಿಯವರೂ ತಾವು ವರಿಸಿ ಸೇರಿಕೊಂಡ ರಾಷ್ಟ್ರವಾದ ಅಮೆರಿಕದ ಮೇಲಿನ ಅಭಿಮಾನ ವಿಶ್ವಾಸಗಳಿಗಿಂತ ತಮ್ಮ ಹಿಂದಿನ ಮಾತೃಭೂಮಿಯಾಗಿದ್ದ ಜರ್ಮನಿಯ ಯೋಗಕ್ಷೇಮಕ್ಕೆ ಹೆಚ್ಚು ಮನಸೋತಿದ್ದದ್ದು ಅಮೆರಿಕದ ಮುಖಂಡರಿಗೆ ಗಾಬರಿಯುಂಟುಮಾಡಿತು. ಯುದ್ಧ ಮುಗಿದಮೇಲೆ, ಯೂರೋಪಿನ ರಾಷ್ಟ್ರಗಳಿಂದ ವಲಸೆ ಬರುವವರ ಸಂಖ್ಯೆಯನ್ನು ಕಡಮೆ ಮಾಡುವ ಶಾಸನವನ್ನು ಅಲ್ಲಿ ಜಾರಿಗೆ ತಂದರು. ಕಳೆದ ಯುದ್ಧದಲ್ಲಿ ಜರ್ಮನಿಯ ನಾಯಕರು ಬೇರೆ ರಾಷ್ಟ್ರಗಳಲ್ಲಿ ನೆಲಸಿದ್ದ ಜರ್ಮನರೆಲ್ಲ ತಾವು ಜರ್ಮನಿಯ ಪ್ರಜೆಗಳೆಂದೇ ಭಾವಿಸಬೇಕೆಂದೂ, ತಮ್ಮ ಸಾಕುರಾಷ್ಟ್ರಕ್ಕೆ ದ್ರೋಹವೆಣಿಸಿಯಾದರೂ ಜರ್ಮನಿಯ ಜಯಸಾಧನೆಗೆ

ನೆರವಾಗಬೇಕೆಂದೂ ಒತ್ತಾಯಪಡಿಸಿದರು.

ಈ ರೀತಿಯ ಅನುಭವಗಳು ಪ್ಲೇಟೋ ಅರಿಸ್ಟಾಟಲರಿಗೆ ಹೊಸದಾಗಿರಲಿಲ್ಲ. ಅಸಮಾಧಾನ ಹೊಂದಿದ ಪಕ್ಷಗಳು ಹೊರಗಿನ ರಾಷ್ಟ್ರದವರ ಸಹಾಯ ಹೊಂದಿ ಸ್ವದೇಶಕ್ಕೆ ಎರಡು ಬಗೆಯುವುದೂ, ಪರರಾಷ್ಟ್ರದವರು ಇತರ ರಾಷ್ಟ್ರಗಳಲ್ಲಿ ಅಲ್ಲಿಯ ಪ್ರಜೆಗಳನ್ನು ಪ್ರೋತ್ಸಾಹಿಸಿ ಅವರ ದೇಶದ್ರೋಹವನ್ನು ಪುಷ್ಟೀಕರಿಸಿ ಅವರ ನಗರಗಳನ್ನೇ ಸ್ವಾಧೀನಪಡಿಸಿಕೊಳ್ಳುವುದೂ ಗ್ರೀಸಿನ ಅನೇಕ ಕಡೆಗಳಲ್ಲಿ ಆಗಾಗ ಕಂಡುಬರುತ್ತಿತ್ತು. ಇದನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ಪ್ಲೇಟೋ ರಾಷ್ಟ್ರಪ್ರೇಮವನ್ನು ವಿದ್ಯಾಭ್ಯಾಸ ಕ್ರಮದಲ್ಲಿಯೂ ರಾಜಕೀಯ ಸಂಸ್ಥೆಗಳಲ್ಲಿಯೂ ರೂಢಮೂಲವಾಗುವ ಹಾಗೆ ಮಾಡಬೇಕೆಂದು ಸೂಚಿಸುತ್ತಾನೆ. ವಿದ್ಯಾಭ್ಯಾಸದಲ್ಲಿ ರಾಷ್ಟ್ರಭಾವನೆಯನ್ನು ಬೆಳಸುವುದರ ಜೊತೆಗೆ ಅಧಿಕಾರಿವರ್ಗದವರನ್ನು ಆಯುವುದರಲ್ಲಿಯೂ ಈ ತತ್ತ್ವವನ್ನು ಗಮನದಲ್ಲಿಟ್ಟುಕೊಳ್ಳುವುದು ಅತ್ಯಾವಶ್ಯಕ.

ದೇಶಪ್ರೇಮವಾಗಲಿ ತತ್ತ್ವದಲ್ಲಿನ ವಿಶ್ವಾಸವಾಗಲಿ ಧರ್ಮಶ್ರದ್ಧೆಯಾಗಲಿ ಎರಡು ವಿಧದಲ್ಲಿ ಕರಗಿಹೋಗಬಹುದು. ಒಂದು, ಅನಿಷ್ಟಪ್ರಾಪ್ತಿಯ ಭಯದಿಂದ; ಮತ್ತೊಂದು, ಸುಖಸಾಧನೆಯ ಆಸೆಯಿಂದ. ಸಾಮಾನ್ಯನಾಗರಿಕರಾಗಲಿ ಅಧಿಕಾರಿಗಳಾಗಲಿ ಭಯದಿಂದಲೋ ಆಸೆಯಿಂದಲೋ ರಾಷ್ಟ್ರಪ್ರೇಮವನ್ನೂ ರಾಷ್ಟ್ರಹಿತವನ್ನೂ ತೊರೆಯಬಾರದು. ಅವರು ಭಯ ಮತ್ತು ಸುಖಲಾಲಸೆಗಳಿಗೆ ತುತ್ತಾಗದಂತೆ ವಿದ್ಯಾಭ್ಯಾಸಕಾಲದಲ್ಲಿ ಉಪದೇಶವಾಗಿರಬೇಕು. ಅವರ ಮನೋದಾರ್ಢ್ಯವನ್ನು ಪರೀಕ್ಷಿಸುವ ಸಂದರ್ಭಗಳನ್ನು ಬೇಕೆಂದೇ ಅವರಿಗೆ ಒದಗಿಸಿ ಅವರ ಸ್ವಭಾವವನ್ನು ಒರೆಹಚ್ಚಿ ನೋಡಬೇಕು. ಚಿನ್ನವನ್ನು ಪುಟಕ್ಕೆ ಹಾಕುವಂತೆ ವಿದ್ಯಾರ್ಥಿಗಳನ್ನೂ ಅಧಿಕಾರಿಗಳನ್ನೂ ಅವರ ಸ್ಥೈರ್ಯವನ್ನು ಪರೀಕ್ಷಿಸುವಂಥ ಸನ್ನಿವೇಶಗಳಿಗೆ ಆಗಾಗ ಒಳಪಡಿಸಬೇಕು. ಇಂಥ ಪರೀಕ್ಷೆಯಲ್ಲಿ ಯಶಸ್ವಿಯಾಗಿ ತೇರ್ಗಡೆಯಾದವರನ್ನೇ ಅಧಿಕಾರ ಸ್ಥಾನಗಳಲ್ಲಿ ಉಳಿಸಬೇಕು. ಮಿಕ್ಕವರನ್ನು ನಿರ್ದಾಕ್ಷಿಣ್ಯವಾಗಿ ಪದಚ್ಯುತಗೊಳಿಸಬೇಕು.

ಇಂಥ ನಿಷ್ಠೆಯು ರಾಜಕೀಯದಲ್ಲಿ ಮಾತ್ರ ಕಾಣಬಹುದಾದ ಅಪೂರ್ವ ಗುಣವಲ್ಲ ; ನಿತ್ಯಜೀವನದ ಎಲ್ಲ ಸಂಬಂಧಗಳಲ್ಲಿಯೂ ಸ್ವಾಭಾವಿಕವಾಗಿ ತೋರಿಬರುವ ಗುಣ. ಇದು ಕುಟುಂಬದಲ್ಲಿಯೂ ಅಕ್ಕಪಕ್ಕದವರಲ್ಲಿಯೂ ಸಹಪಾಠಿಗಳಲ್ಲಿಯೂ ಅಧಿಕಾರದಲ್ಲಿಯೋ ವೃತ್ತಿಯಲ್ಲಿಯೋ ಇರುವ ಒಡನಾಡಿಗಳಲ್ಲಿಯೂ ಅನುಭವಕ್ಕೆ ಬರುವ ವಿಶ್ವಾಸ, ಪರಸ್ಪರ ಸ್ನೇಹ, ಸಹಾನುಭೂತಿ. ಈ ಸ್ವಾಭಾವಿಕ ಅನುರಾಗವು ಜನರ ಚಿತ್ತವೃತ್ತಿಯಲ್ಲಿ ಬೆಳೆದು ದೃಢವಾಗುವಂತೆ ಪ್ರಯತ್ನ ಪೂರ್ವಕವಾಗಿ ನೋಡಿಕೊಳ್ಳುವುದು ರಾಷ್ಟ್ರನಿರ್ಮಾಪಕನ ಪ್ರಥಮ ಕರ್ತವ್ಯ.

ಹೀಗಿಲ್ಲದಿದ್ದರೆ ಸರ್ವವಿಧದಲ್ಲಿಯೂ ದೇಶಕ್ಕೆ ವಿಪತ್ತೊದಗುವ ಸಂಭವಗಳು ಹೆಚ್ಚಾಗುತ್ತ ಹೋಗುತ್ತವೆ. ಪರರಾಷ್ಟ್ರಕ್ಕೆ ಕಳಿಸಿದ ರಾಯಭಾರಿಗಳು ತಮ್ಮ ರಾಷ್ಟ್ರದ

ಪೈಪೋಟಿಯ ಕಷಾಯಗಳು ಅಡ್ಡಿಬಂದರೂ ಒಟ್ಟು ಜನಾಂಗದಲ್ಲಿ ಮೈತ್ರಿಯೇ ಮೇಲುಗೈಯಾಗುತ್ತದೆ; ಜನರ ಮನಸ್ಸಿನಲ್ಲಿ ಅಸ್ಪಷ್ಟವೇದ್ಯವಾಗಿಯಾದರೂ ರಾಷ್ಟ್ರಪ್ರೇಮಭಾವನೆ ಬೇರೂರಿ ಬೆಳೆದುಬರುತ್ತದೆ.

ಇಂಥ ಮೈತ್ರಿಯ ಸಹಾಯದಿಂದಲೇ ದೇಶದ ಸಾರ್ವಜನಿಕ ಕಾರ್ಯ ಕಲಾಪಗಳು ನಡೆಯಬೇಕಾಗಿದೆ. ಅದು, ಕಣ್ಣಿಗೆ ಕಾಣದಿದ್ದರೂ ನಮ್ಮನ್ನು ಅವರಿಸಿಕೊಂಡು ನಮ್ಮ ಪ್ರಾಣಧಾರಣೆಗೆ ಅತ್ಯಾವಶ್ಯಕವಾದ ವಾಯುವಿನಂತೆ. ಹೊರಗಿನ ಗಾಳಿ ಮನುಷ್ಯನ ಜೀವದ ಉಸಿರು. ಹಾಗೆಯೇ ಜನತೆಯ ಮನಸ್ಸಿನಲ್ಲಿ ಮೂಡಿರುವ ಸ್ವದೇಶ ಸ್ವಜನ ಪ್ರೇಮವು ರಾಜ್ಯಾಂಗದ ಪ್ರಾಣ.

ರಾಷ್ಟ್ರಪ್ರೇಮ ದೇಶದಲ್ಲಿ ಎಲ್ಲರಲ್ಲಿಯೂ ಇರಬೇಕಾದರೂ ಮುಖ್ಯವಾಗಿ ನಾಯಕರಾಗಿ ಮುಂದೆ ಬರುವವರಲ್ಲಿ ಕಾರ್ಯರಂಗದಲ್ಲಿ ಫಲಕಾರಿಯಾಗುವಷ್ಟು ತೀವ್ರವಾಗಿರಬೇಕಾದ್ದು ಅತ್ಯಾವಶ್ಯಕ – ಎಂದು ಪ್ಲೇಟೋವಿನ ಅಭಿಪ್ರಾಯ.

ದೇಶದ ಹಿತಸಾಧನೆಗಳ ವಿಷಯದಲ್ಲಿ ಜನರೆಲ್ಲ ಒಮ್ಮನಸ್ಸುಳ್ಳವರಾಗಿರಬೇಕು. ದೇಶಕ್ಕೆ ಹಾನಿ ಸಂಭವಿಸುವ ವಿಷಯದಲ್ಲಿ ಸರ್ವರಿಗೂ ಒಂದೇಸಮನಾಗಿ ದುಃಖಾನುಭವವಾಗಬೇಕು. ದೇಶಕ್ಕೆ ಲಭಿಸಿದ ಸೌಕರ್ಯ, ಜಯ ಮುಂತಾದುವುಗಳಲ್ಲಿ ಎಲ್ಲರಿಗೂ ಸಮಾನವಾದ ಸಂತೋಷವುಂಟಾಗಬೇಕು. ವ್ಯಕ್ತಿಗತವಾದ ಬೇರೆ ಹಿತಾಹಿತಗಳ ವಿಷಯದಲ್ಲಿ ಭಿನ್ನ ಭಿನ್ನ ರಾಗದ್ವೇಷಗಳಿರಬಹುದು. ಆದರೆ ರಾಜ್ಯದ ಏಳಿಗೆ, ಸ್ಥಿತಿ, ವಿಪತ್ತು – ಈ ವಿಷಯದಲ್ಲಿ ಎಲ್ಲ ನಾಗರಿಕರಿಗೂ ಒಂದೇ ರೀತಿಯಿಂದ ರಸಾನುಭವವು ಅವಶ್ಯಕ. ದೇಶದಲ್ಲಿ ಒಡಕನ್ನು ಬೆಳೆಸುವ ಸಂಗತಿಗಳನ್ನೂ ಸನ್ನಿವೇಶಗಳನ್ನೂ ಕಂಡು ವಿಷಾದಪಟ್ಟು ಅವುಗಳನ್ನು ತಡೆಯುವುದಕ್ಕೆ ಪ್ರಯತ್ನ ಮಾಡುವ ಬದಲು ಅದನ್ನು ಕಂಡು ಸಂತೋಷಪಡುವ ಪಕ್ಷಗಳೂ ಜನರೂ ದೇಶದಲ್ಲಿ ಕಂಡುಬಂದರೆ' ಅಂಥ ರಾಜ್ಯದಲ್ಲಿ ಎಂಥ ಒಳ್ಳೆಯ ರಾಜ್ಯಾಂಗವೂ ಫಲಕಾರಿ ಯಾಗುವುದಿಲ್ಲ. ಈ ತಲೆಮಾರಿನಲ್ಲಿಯೇ ನಡೆದ ಎರಡು ಮಹಾಯುದ್ಧಗಳಲ್ಲಿ ಇಂಥ ಸನ್ನಿವೇಶಗಳ ವಿಷಮ ಪ್ರಭಾವವು ಅನೇಕ ರಾಷ್ಟ್ರಗಳಲ್ಲಿ ಕಂಡು ಬಂದು ಅಲ್ಲಿನ ನಾಯಕರ ಮನಸ್ಸನ್ನು ಕದಡಿತು. ಮೊದಲನೆಯ ಮಹಾಯುದ್ಧದಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ನೆಲಸಿದ್ದ ಜರ್ಮನಿಯ ಜನರೂ ಜರ್ಮನ್ ಸಂತತಿಯವರೂ ತಾವು ವರಿಸಿ ಸೇರಿಕೊಂಡ ರಾಷ್ಟ್ರವಾದ ಅಮೆರಿಕದ ಮೇಲಿನ ಅಭಿಮಾನ ವಿಶ್ವಾಸಗಳಿಗಿಂತ ತಮ್ಮ ಹಿಂದಿನ ಮಾತೃಭೂಮಿಯಾಗಿದ್ದ ಜರ್ಮನಿಯ ಯೋಗಕ್ಷೇಮಕ್ಕೆ ಹೆಚ್ಚು ಮನಸೋತಿದ್ದದ್ದು ಅಮೆರಿಕದ ಮುಖಂಡರಿಗೆ ಗಾಬರಿಯುಂಟುಮಾಡಿತು. ಯುದ್ಧ ಮುಗಿದಮೇಲೆ, ಯೂರೋಪಿನ ರಾಷ್ಟ್ರಗಳಿಂದ ವಲಸೆ ಬರುವವರ ಸಂಖ್ಯೆಯನ್ನು ಕಡಮೆ ಮಾಡುವ ಶಾಸನವನ್ನು ಅಲ್ಲಿ ಜಾರಿಗೆ ತಂದರು. ಕಳೆದ ಯುದ್ಧದಲ್ಲಿ ಜರ್ಮನಿಯ ನಾಯಕರು ಬೇರೆ ರಾಷ್ಟ್ರಗಳಲ್ಲಿ ನೆಲಸಿದ್ದ ಜರ್ಮನರೆಲ್ಲ ತಾವು ಜರ್ಮನಿಯ ಪ್ರಜೆಗಳೆಂದೇ ಭಾವಿಸಬೇಕೆಂದೂ, ತಮ್ಮ ಸಾಕುರಾಷ್ಟ್ರಕ್ಕೆ ದ್ರೋಹವೆಣಿಸಿಯಾದರೂ ಜರ್ಮನಿಯ ಜಯಸಾಧನೆಗೆ

ನೆರವಾಗಬೇಕೆಂದೂ ಒತ್ತಾಯಪಡಿಸಿದರು.

ಈ ರೀತಿಯ ಅನುಭವಗಳು ಪ್ಲೇಟೋ ಅರಿಸ್ಟಾಟಲರಿಗೆ ಹೊಸದಾಗಿರಲಿಲ್ಲ. ಅಸಮಾಧಾನ ಹೊಂದಿದ ಪಕ್ಷಗಳು ಹೊರಗಿನ ರಾಷ್ಟ್ರದವರ ಸಹಾಯ ಹೊಂದಿ ಸ್ವದೇಶಕ್ಕೆ ಎರಡು ಬಗೆಯುವುದೂ, ಪರರಾಷ್ಟ್ರದವರು ಇತರ ರಾಷ್ಟ್ರಗಳಲ್ಲಿ ಅಲ್ಲಿಯ ಪ್ರಜೆಗಳನ್ನು ಪ್ರೋತ್ಸಾಹಿಸಿ ಅವರ ದೇಶದ್ರೋಹವನ್ನು ಪುಷ್ಟೀಕರಿಸಿ ಅವರ ನಗರಗಳನ್ನೇ ಸ್ವಾಧೀನಪಡಿಸಿಕೊಳ್ಳುವುದೂ ಗ್ರೀಸಿನ ಅನೇಕ ಕಡೆಗಳಲ್ಲಿ ಆಗಾಗ ಕಂಡುಬರುತ್ತಿತ್ತು. ಇದನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ಪ್ಲೇಟೋ ರಾಷ್ಟ್ರಪ್ರೇಮವನ್ನು ವಿದ್ಯಾಭ್ಯಾಸ ಕ್ರಮದಲ್ಲಿಯೂ ರಾಜಕೀಯ ಸಂಸ್ಥೆಗಳಲ್ಲಿಯೂ ರೂಢಮೂಲವಾಗುವ ಹಾಗೆ ಮಾಡಬೇಕೆಂದು ಸೂಚಿಸುತ್ತಾನೆ. ವಿದ್ಯಾಭ್ಯಾಸದಲ್ಲಿ ರಾಷ್ಟ್ರಭಾವನೆಯನ್ನು ಬೆಳಸುವುದರ ಜೊತೆಗೆ ಅಧಿಕಾರಿವರ್ಗದವರನ್ನು ಆಯುವುದರಲ್ಲಿಯೂ ಈ ತತ್ತ್ವವನ್ನು ಗಮನದಲ್ಲಿಟ್ಟುಕೊಳ್ಳುವುದು ಅತ್ಯಾವಶ್ಯಕ.

ದೇಶಪ್ರೇಮವಾಗಲಿ ತತ್ತ್ವದಲ್ಲಿನ ವಿಶ್ವಾಸವಾಗಲಿ ಧರ್ಮಶ್ರದ್ಧೆಯಾಗಲಿ ಎರಡು ವಿಧದಲ್ಲಿ ಕರಗಿಹೋಗಬಹುದು. ಒಂದು, ಅನಿಷ್ಟಪ್ರಾಪ್ತಿಯ ಭಯದಿಂದ; ಮತ್ತೊಂದು, ಸುಖಸಾಧನೆಯ ಆಸೆಯಿಂದ. ಸಾಮಾನ್ಯನಾಗರಿಕರಾಗಲಿ ಅಧಿಕಾರಿಗಳಾಗಲಿ ಭಯದಿಂದಲೋ ಆಸೆಯಿಂದಲೋ ರಾಷ್ಟ್ರಪ್ರೇಮವನ್ನೂ ರಾಷ್ಟ್ರಹಿತವನ್ನೂ ತೊರೆಯಬಾರದು. ಅವರು ಭಯ ಮತ್ತು ಸುಖಲಾಲಸೆಗಳಿಗೆ ತುತ್ತಾಗದಂತೆ ವಿದ್ಯಾಭ್ಯಾಸಕಾಲದಲ್ಲಿ ಉಪದೇಶವಾಗಿರಬೇಕು. ಅವರ ಮನೋದಾರ್ಢ್ಯವನ್ನು ಪರೀಕ್ಷಿಸುವ ಸಂದರ್ಭಗಳನ್ನು ಬೇಕೆಂದೇ ಅವರಿಗೆ ಒದಗಿಸಿ ಅವರ ಸ್ವಭಾವವನ್ನು ಒರೆಹಚ್ಚಿ ನೋಡಬೇಕು. ಚಿನ್ನವನ್ನು ಪುಟಕ್ಕೆ ಹಾಕುವಂತೆ ವಿದ್ಯಾರ್ಥಿಗಳನ್ನೂ ಅಧಿಕಾರಿಗಳನ್ನೂ ಅವರ ಸ್ಥೈರ್ಯವನ್ನು ಪರೀಕ್ಷಿಸುವಂಥ ಸನ್ನಿವೇಶಗಳಿಗೆ ಆಗಾಗ ಒಳಪಡಿಸಬೇಕು. ಇಂಥ ಪರೀಕ್ಷೆಯಲ್ಲಿ ಯಶಸ್ವಿಯಾಗಿ ತೇರ್ಗಡೆಯಾದವರನ್ನೇ ಅಧಿಕಾರ ಸ್ಥಾನಗಳಲ್ಲಿ ಉಳಿಸಬೇಕು. ಮಿಕ್ಕವರನ್ನು ನಿರ್ದಾಕ್ಷಿಣ್ಯವಾಗಿ ಪದಚ್ಯುತಗೊಳಿಸಬೇಕು.

ಇಂಥ ನಿಷ್ಠೆಯು ರಾಜಕೀಯದಲ್ಲಿ ಮಾತ್ರ ಕಾಣಬಹುದಾದ ಅಪೂರ್ವ ಗುಣವಲ್ಲ; ನಿತ್ಯಜೀವನದ ಎಲ್ಲ ಸಂಬಂಧಗಳಲ್ಲಿಯೂ ಸ್ವಾಭಾವಿಕವಾಗಿ ತೋರಿಬರುವ ಗುಣ. ಇದು ಕುಟುಂಬದಲ್ಲಿಯೂ ಅಕ್ಕಪಕ್ಕದವರಲ್ಲಿಯೂ ಸಹಪಾಠಿಗಳಲ್ಲಿಯೂ ಅಧಿಕಾರದಲ್ಲಿಯೋ ವೃತ್ತಿಯಲ್ಲಿಯೋ ಇರುವ ಒಡನಾಡಿಗಳಲ್ಲಿಯೂ ಅನುಭವಕ್ಕೆ ಬರುವ ವಿಶ್ವಾಸ, ಪರಸ್ಪರ ಸ್ನೇಹ, ಸಹಾನುಭೂತಿ. ಈ ಸ್ವಾಭಾವಿಕ ಅನುರಾಗವು ಜನರ ಚಿತ್ತವೃತ್ತಿಯಲ್ಲಿ ಬೆಳೆದು ದೃಢವಾಗುವಂತೆ ಪ್ರಯತ್ನ ಪೂರ್ವಕವಾಗಿ ನೋಡಿಕೊಳ್ಳುವುದು ರಾಷ್ಟ್ರನಿರ್ಮಾಪಕನ ಪ್ರಥಮ ಕರ್ತವ್ಯ.

ಹೀಗಿಲ್ಲದಿದ್ದರೆ ಸರ್ವವಿಧದಲ್ಲಿಯೂ ದೇಶಕ್ಕೆ ವಿಪತ್ತೊದಗುವ ಸಂಭವಗಳು ಹೆಚ್ಚಾಗುತ್ತ ಹೋಗುತ್ತವೆ. ಪರರಾಷ್ಟ್ರಕ್ಕೆ ಕಳಿಸಿದ ರಾಯಭಾರಿಗಳು ತಮ್ಮ ರಾಷ್ಟ್ರದ

ಹಿತಸಾಧನೆ ಮಾಡುವುದಕ್ಕೆ ಪ್ರತಿಯಾಗಿ ಧನದ ಆಸೆಯಿಂದಲೋ ಮತ್ತೆ ಯಾವ ಕಾರಣದಿಂದಲೋ ಪರರಾಷ್ಟ್ರದವರ ತಂತ್ರಕ್ಕೆ ಒಳಗಾದರೆ ದೇಶಹಿತ ಹೇಗೆತಾನೆ ನಿರ್ವಾಹವಾದೀತು? ಸೈನ್ಯಾಧಿಕಾರಿ ದಂಡೆತ್ತಿ ಬಂದ ರಾಷ್ಟ್ರದವರ ಮೇಲೆ ಅಭಿಮಾನವಿಟ್ಟರೆ ದೇಶದ ರಕ್ಷಣೆಗೆ ಗತಿಯೇನು ? ಕಳೆದ ಮಹಾಯುದ್ಧದಲ್ಲಿ ಫ್ರಾನ್ಸಿನ ನಾಯಕರಲ್ಲಿ ಕೆಲವರೂ ಪತ್ರಿಕಾಕರ್ತರಲ್ಲಿ ಕೆಲವರೂ ಶತ್ರುಗಳಾದ ಜರ್ಮನರ ತಂತ್ರಕ್ಕೆ ಒಳಗಾಗಿ ದೇಶದ್ರೋಹಿಗಳಾದರೆಂಬ ಅಪಾದನೆಯಿತ್ತು.

ಒಟ್ಟಿನಲ್ಲಿ ಗ್ರೀಕರ ಅನುಭವದಲ್ಲಿ, ರಾಷ್ಟ್ರದ ಹಿತಸಾಧನೆಗೆ ಅನುಕೂಲಿಸುವಷ್ಟು ಒಮ್ಮನಸ್ಸೂ ಐಕ್ಯಭಾವನೆಯೂ! ನಾಗರಿಕರಲ್ಲಿ ಪರಸ್ಪರ ವಿಶ್ವಾಸವೂ ಸಾಕಷ್ಟು ಆವಿರ್ಭಾವವಾಗಿ ಅನೇಕ ನಗರಗಳು ಕೀರ್ತಿಯನ್ನು ಸಂಪಾದಿಸಿದ್ದವು.

ಈಗಿನ ಪ್ರಪಂಚದಲ್ಲಿ ವಿಶಾಲರಾಷ್ಟ್ರಗಳಿಗೆ ಪರಸ್ಪರ ಯುದ್ಧಭಯವಿದ್ದರೂ ರಾಷ್ಟ್ರಭಾವನೆ ಮುಂದುವರಿದು ಬೆಳೆದು ವಿಶ್ವಪ್ರೇಮವಾಗಿ ಪರಿಣಮಿಸುವುದು ಕಷ್ಟಸಾಧ್ಯವಾಗಿದೆ. ಹಾಗೆಯೇ ಗ್ರೀಕರ ಕಾಲದಲ್ಲಿ ಹೆಲೆನರ ನಗರರಾಜ್ಯಗಳಿಗೆ ಪರಸ್ಪರ ವೈಮನಸ್ಯವಿದ್ದು, ಸರ್ವ ಯವನ ಜನರ ಐಕ್ಯತೆಯ ರಾಜಕೀಯದಲ್ಲಿ ಸಾಧ್ಯವಾಗಲಿಲ್ಲ. ಪರ್ಷಿಯಾ ರಾಜರ ದಂಡಯಾತ್ರೆಯನ್ನೆದುರಿಸಿ ಸೋಲಿಸುವ ಸಂದರ್ಭದಲ್ಲಿ ಮಾತ್ರ ಗ್ರೀಸಿನ ಎಲ್ಲ ನಗರಗಳೂ ಅಥೆನ್ಸಿನ ಮುಖಂಡತ್ವದಲ್ಲಿ ಒಟ್ಟುಗೂಡಿ ಏಕೀಭಾವದ ಉದಾತ್ತ ಅನುಭವವನ್ನು ಸವಿದರು. ಯುದ್ಧದಲ್ಲಿ ಜಯವಾಗಿ ಪರ್ಷಿಯದ ಭಯ ಪರಿಹಾರವಾದಮೇಲೆ ಈ ನಗರರಾಜ್ಯಗಳ ವ್ಯಕ್ತಿತ್ವವೂ ಸ್ವಾತಂತ್ರ್ಯ ಪ್ರೇಮವೂ ಪುನಃ ಪ್ರಾಬಲ್ಯಹೊಂದಿ, ಹೆಲೆನರೆಲ್ಲ ಸೇರಿ ಏಕರಾಷ್ಟ್ರಭಾವವನ್ನು ಬೆಳೆಸಲು ಅವಕಾಶವಾಗದೆ ಹೋಯಿತು. ಗ್ರೀಕ್ ರಾಜ್ಯಗಳಲ್ಲಿ ಪರ್ಷಿಯನರ ಭಯ ತಪ್ಪಿದಮೇಲೆ ಅಥೆನ್ಸ್ ಮತ್ತು ಸ್ಪಾರ್ಟಾನಗರಗಳ ಮುಂದಾಳುಗಳಲ್ಲಿ ಪರಸ್ಪರ ವಿರೋಧವಾದ ಎರಡು ಪಕ್ಷಗಳು ಏರ್ಪಟ್ಟುವು. ಎಲ್ಲ ನಗರಗಳೂ ಒಂದಲ್ಲ ಒಂದುಪಕ್ಷಕ್ಕೆ ಸೇರದೆ ಬೇರೆ ಗತಿಯಿರಲಿಲ್ಲ. ಮೂವತ್ತು ವರ್ಷಕಾಲ ಯುದ್ಧ ನಡೆದು ಎರಡು ಪಕ್ಷಗಳವರೂ ಬಲಗುಂದುತ್ತಾ ಬಂದರು. ಕೊನೆಗೆ ಸ್ಪಾರ್ಟಾ ನಗರಕ್ಕೇ ಜಯವಾದರೂ ಆಮೇಲೆ ಅದು ಬಹುಕಾಲ ಸ್ವತಂತ್ರವಾಗಿ ಬಾಳಲಿಲ್ಲ. ಕೊನೆಗೆ ಫಿಲಿಪ್ ಅಲೆಕ್ಸಾಂಡರುಗಳು ಗ್ರೀಸಿನ ನಗರರಾಜ್ಯಗಳನ್ನೆಲ್ಲ ಸೋಲಿಸಿ, ಅವೆಲ್ಲದರ ಸ್ವಾತಂತ್ರ್ಯ ಜೀವನವನ್ನೂ ಕೊನೆಗಾಣಿಸಿ ವಿಶಾಲರಾಜ್ಯವನ್ನೂ ಚಕ್ರಾಧಿಪತ್ಯವನ್ನೂ ಕಟ್ಟಿದರು. ಪೂರ್ವ ಮೆಡಿಟರೇನಿಯನ್ ಅಂತಸ್ಸಮುದ್ರದ ಸರ್ವನಗರಗಳೂ ಮಾಸಿಡೋನಿಯನರಿಗೆ ಅಧೀನವಾಗಿ ಅನೇಕ ದೊಡ್ಡ ರಾಷ್ಟ್ರಗಳಲ್ಲಿ ಐಕ್ಯಹೊಂದಿದವು. ಈಜಿಪ್ಟ್ ದೇಶವೂ ಮಾಸಿಡೋನಿಯರಿಗೇ ಸೇರಿತು.

ನಗರರಾಜ್ಯಗಳ ಕಾಲ ಕಳೆದುಹೋಗಿತ್ತು. ಆದರೂ ಅವುಗಳ ರಾಜಕೀಯದ ಸಾರಸರ್ವಸ್ವವನ್ನು ಪ್ಲೇಟೋ ಅರಿಸ್ಟಾಟಲರು ಶಾಸ್ತ್ರ ರೀತಿಯಲ್ಲಿ ವಿಮರ್ಶಿಸಿ ರೂಪುಗೊಳಿಸಿದ್ದಾರೆ.

ಭಾರತದಲ್ಲಿಯೂ ಸುಮಾರು ಅದೇ ಸಮಯದಲ್ಲಿ ಅನೇಕ ಸಣ್ಣ ಸಣ್ಣ ಗಣರಾಜ್ಯಗಳೂ ರಾಜಮಹಾರಾಜರ ಆಳಿಕೆಯಲ್ಲಿದ್ದ ರಾಜ್ಯಗಳೂ ತುಂಬಿದ್ದವು; ಸಿಂಧೂನದಿಯಿಂದ ಮಗಧ ರಾಜ್ಯದವರೆಗೆ ಮತ್ತು ಹಿಮಾಲಯದಿಂದ ವಿಂಧ್ಯ ಪರ್ವತದವರೆಗೆ – ಈ ನಡುವಣ ವಿಶಾಲವಾದ ಉತ್ತರ ಹಿಂದೂಸ್ಥಾನದಲ್ಲೆಲ್ಲ ಇಂಥ ಸಣ್ಣ ಸಣ್ಣ ರಾಜ್ಯಗಳೇ ತುಂಬಿದ್ದವು. ಅಲೆಕ್ಸಾಂಡರನ ದಂಡಯಾತ್ರೆಯ ಸಮಯದಲ್ಲಿ ಈ ಸಣ್ಣ ರಾಜ್ಯಗಳು ವಿದೇಶಿಗಳ ಸೈನ್ಯವನ್ನು ಎದುರಿಸಲು ಸಮರ್ಥವಾಗಲಿಲ್ಲ. ಅಟಕ್ಕಿನ ಹಿಂದೂ ರಾಜನು ಕದನವಿಲ್ಲದೆಯೇ ಅಲೆಕ್ಸಾಂಡರನಿಗೆ ತಲೆಬಾಗಿ ತನ್ನ ದೇಶವನ್ನೊಪ್ಪಿಸಿದನು. ಪುರೂರವಸ್ಸೇನೋ ಧೈರ್ಯದಿಂದ ಕಾದಿದನು; ಕಾದಿದರೂ ಪ್ರಯೋಜನವಾಗಲಿಲ್ಲ. ಹತ್ತಾರು ರಾಜರು ಯವನರಿಗೆ ಶರಣಾಗತರಾದರು. ಆ ಕಾಲದಲ್ಲಿ ತಕ್ಷಶಿಲಾನಗರದ ವಿಶ್ವವಿದ್ಯಾನಿಲಯವು ಉಚ್ಚ್ರಾಯ ಸ್ಥಿತಿಯಲ್ಲಿತ್ತು. ಚಾಣಕ್ಯನು ಅಲ್ಲಿ ವ್ಯಾಸಂಗಮಾಡಿ ಆಮೇಲೆ ಅಧ್ಯಾಪಕನಾಗಿದ್ದಂತೆ ತೋರಿಬರುತ್ತದೆ. ಚಾಣಕ್ಯನಿಗೂ ಪ್ಲೇಟೋವಿನಂತೆ ಸಣ್ಣ ರಾಜ್ಯಗಳ ವಿವಿಧ ಅನುಭವಗಳು ಗೋಚರವಾಗಿದ್ದವು: ಈ ಅನುಭವಸಂಪತ್ತಿ ಸೂಕ್ಷ್ಮ ವಿಚಾರಕ್ಕೆ ಕಾರಣವೂ ಆಧಾರವೂ ಆಗಿತ್ತು. ಆದರೆ ಚಾಣಕ್ಯನು ಪ್ಲೇಟೋವಿಗಿಂತ ಅದೃಷ್ಟಶಾಲಿಯಾದನು. ಪ್ಲೇಟೋವಿನ ಗುರುತ್ವವನ್ನೊಪ್ಪಿ ಯಾವ ಗ್ರೀಕ್ ಪ್ರಭುವೂ ತನ್ನ ರಾಷ್ಟ್ರವನ್ನು ಪರಿಷ್ಕಾರ ಮಾಡಿಕೊಂಡು ಕೀರ್ತಿಯನ್ನು ಸಂಪಾದಿಸಲಿಲ್ಲ. ಯಾವ ರೀತಿಯಲ್ಲಿ ಹೆಲೆನರು ತಮ್ಮತಮ್ಮ ಸಂಕುಚಿತ ಸ್ವಾತಂತ್ರ್ಯ ಪ್ರೇಮವನ್ನು ಹದ್ದಿನಲ್ಲಿಟ್ಟು, ವಿಶಾಲವಾದ ಗ್ರೀಕ್ ರಾಷ್ಟ್ರವನ್ನು ನಿರ್ಮಾಣಮಾಡಿ ಒಟ್ಟು ಯವನ ಸಂಸ್ಕೃತಿ ನಾಗರಿಕತೆಗಳನ್ನು ಕಾಪಾಡಿ ಕೊಳ್ಳಬಹುದೆಂಬ ವಿಚಾರಕ್ಕೆ ಪ್ಲೇಟೋ ಕೈಹಾಕಿದಂತೆ ತೋರುವುದಿಲ್ಲ. ಹಳೆಯ ಸಂಪ್ರದಾಯದ ಸಣ್ಣ ಸಣ್ಣ ನಗರರಾಜ್ಯಗಳು ಯಾವ ರೀತಿಯಲ್ಲಿ ಹತ್ತಿಪ್ಪತ್ತು ಸಾವಿರ ಜನಸಂಖ್ಯೆಗೆ ಮೀರದೆ ಸಮಾಜ ಜೀವನವನ್ನೂ ರಾಜಕೀಯ ಶಾಂತಿಯನ್ನೂ ಕಾಪಾಡಿಕೊಂಡು ಬರಬಹುದು ಎಂಬ ವಿಚಾರವೇ ಪ್ಲೇಟೋವಿನ ಮನಸ್ಸನ್ನೆಲ್ಲ ಆಕ್ರಮಿಸಿತ್ತು.

ಚಾಣಕ್ಯನಾದರೋ ನೂರಾರು ಗಣರಾಜ್ಯಗಳೂ ರಾಜಪಾಲಿತವಾದ ಸಣ್ಣ ಸಣ್ಣ ರಾಜ್ಯಗಳೂ ಹೊಸಯುಗದ ಸಮಸ್ಯೆಗಳನ್ನೂ ಬಗೆಹರಿಸಲಾರವೆಂದು ಮನಗಂಡನು. ಪ್ಲೇಟೋ ಸಮಸ್ತ ಹೆಲೆನರೂ ಏಕರಾಷ್ಟ್ರ ಭಾವನೆಯಿಲ್ಲದಿದ್ದರೂ ಏಕ ಸಂಸ್ಕೃತಿಭಾವನೆಯನ್ನಾದರೂ ಮನ್ನಿಸಬೇಕೆಂದು ಮಾತ್ರ ಸೂಚಿಸಿ ತೃಪ್ತನಾದನು. ಚಾಣಕ್ಯನು ಈ ಸಣ್ಣ ಪುಟ್ಟ ರಾಜ್ಯಗಳನ್ನೆಲ್ಲ ಒಂದುಗೂಡಿಸಿ ಉತ್ತರ ಹಿಂದೂಸ್ಥಾನವನ್ನೆಲ್ಲಾ ಚಂದ್ರಗುಪ್ತ ಮೌರ್ಯನ ಅಧೀನಕ್ಕೆ ತಂದು ಚಕ್ರಾಧಿಪತ್ಯವನ್ನು ನಿರ್ಮಾಣ ಮಾಡಿದನು. ಚಾಣಕ್ಯನು ಪ್ರಪಂಚದ ಇತಿಹಾಸದಲ್ಲಿಯೇ ಹಿರಿಯನಾದ, ರಾಷ್ಟ್ರನಿರ್ಮಾಪಕನೆಂದರೆ ಅತಿಶಯೋಕ್ತಿಯಾಗಲಾರದು. ಆದರೆ, ಈ ಭಾರತಚಕ್ರಾಧಿಪತ್ಯದಲ್ಲಿ ವ್ಯಕ್ತಿಸ್ವಾತಂತ್ರ್ಯವು ಎಷ್ಟರಮಟ್ಟಿಗೆ ಉಳಿಯಿತು, ಜನಸ್ತೋಮದಲ್ಲಿ ಅರ್ಹರಾದವರಿಗೆ ಪುರೋಭಿವೃದ್ಧಿಗೆ ಬರಲು ಎಷ್ಟರಮಟ್ಟಿಗೆ ಶಕ್ತಿ ಸಾಮರ್ಥ್ಯಗಳನ್ನು ಗಳಿಸಿಕೊಟ್ಟಿತ್ತು, ಅವನ್ನು ಪ್ರಯೋಗ ಮಾಡಲು ಮೌರ್ಯರ ವಿಶಾಲರಾಜ್ಯದಲ್ಲಿ

ಎಷ್ಟರಮಟ್ಟಿಗೆ ಅವಕಾಶ ದೊರೆಯಿತು ಎಂಬುದು ವಿಚಾರಾರ್ಹವಾದ ವಿಷಯ.

ಇಲ್ಲಿ ಪ್ರಕೃತವೇನೆಂದರೆ, ಪ್ಲೇಟೋವಿನ ವಿಚಾರ ಸಾಮ್ರಾಜ್ಯಕ್ಕೆ ವಿಷಯವಾದ ಗ್ರೀಕ್ ನಗರಗಳ ರಾಜ್ಯಾಂಗ ಪದ್ಧತಿಗಳು ಯಾವರೀತಿ ಉತ್ತಮ ಧ್ಯೇಯಗಳಿಗೆ ರೂಪುಕೊಟ್ಟು ಶ್ರೇಷ್ಠ ರಾಜಕೀಯ ತತ್ತ್ವಗಳನ್ನು ಪ್ರಕಾಶಿಸಿದವು ? – ಎಂಬುದು.

* * *

೫ನೆಯ ಅಧ್ಯಾಯ

ರಾಷ್ಟ್ರದ ಮೂಲ ಕರ್ತವ್ಯ

ಸಮಾಜವೆಂಬುದು ಒಂದು ಜನ ಸಮುದಾಯ. ಅನೇಕ ಸಣ್ಣ ಗುಂಪುಗಳನ್ನೊಳಗೊಂಡ ಒಂದು ದೊಡ್ಡ ಜನಸ್ತೋಮ. ಈ ಸಮಾಜವು ಸಾರ್ವಜನಿಕ ಹಿತವನ್ನು ಸಾಧಿಸುವುದಕ್ಕಾಗಿ ಒಂದು ಸಂಸ್ಥೆಗೆ ಸರ್ವಾಧಿಕಾರವನ್ನು ಒಪ್ಪಿಸಿರುತ್ತದೆ. ಎಂದರೆ, ಒಂದಾನೊಂದು ದಿನ ಎಲ್ಲರೂ ಉದ್ದೇಶಪೂರ್ವಕವಾಗಿ ಸಭೆಸೇರಿ ಕೆಲವರನ್ನು ಆರಿಸಿ ಅವರಿಗೆ ಸರ್ವಾಧಿಕಾರವನ್ನು ಒಪ್ಪಿಸಿರಬೇಕಾಗಿಲ್ಲ. ಆದರೆ, ಅಂಥ ಪ್ರಭುತ್ವವು ಅದರ ಹೊಣೆಯನ್ನು ಹೊತ್ತು ಅದರ ಸವಿಯನ್ನು ಅನುಭವಿಸುತ್ತಿರುವ ಜನರಿಗೆ ಸಂಪ್ರದಾಯ ಪರಂಪರೆಯಿಂದ ಬಂದಿರುತ್ತದೆ. ಅಂತೂ ಅವರದು ಅಂತಿಮ ಅಧಿಕಾರ. ತಂದೆ ತಾಯಿಗಳಿಗೆ ಮಕ್ಕಳ ಮೇಲಿನ ಅಧಿಕಾರಕ್ಕಿಂತ, ಯಜಮಾನರಿಗೆ ಸೇವಕರ ಮೇಲಿನ ಅಧಿಕಾರಕ್ಕಿಂತ, ಉಪಾಧ್ಯಾಯರಿಗೆ ವಿದ್ಯಾರ್ಥಿಗಳ ಮೇಲಿನ ಅಧಿಕಾರಕ್ಕಿಂತ, ಪುರೋಹಿತರಿಗೂ ಗುರುಗಳಿಗೂ ಅವರ ಶಿಷ್ಯರ ಮೇಲಿರುವ ಅಧಿಕಾರಕ್ಕಿಂತ ಹೆಚ್ಚಿನ ಅಧಿಕಾರವು ಪ್ರಭುತ್ವ ವರ್ಗದವರಿಗೆ ಸಂಪ್ರದಾಯಬದ್ಧವಾಗಿ ಆಯಾ ದೇಶಗಳ ಶಾಸನಪದ್ಧತಿಗಳ ಸಮ್ಮತದಿಂದ ಸೇರಿರುತ್ತದೆ. ಆಸ್ತಿಪಾಸ್ತಿಗಳ ವಿಷಯದಲ್ಲಿ ಏಳಬಹುದಾದ ವಾದಗಳನ್ನು ಕಡ್ಡಾಯವಾಗಿ ತೀರ್ಮಾನಿಸುವುದಕ್ಕೂ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯನ್ನು – ಮರಣದಂಡನೆಯವರೆಗೂ – ವಿಧಿಸುವುದಕ್ಕೂ, ರಾಜರಿಗಾಗಲಿ ರಾಜರ ಸ್ಥಾನದಲ್ಲಿ ಅಧಿಕಾರ ಮಾಡುವ ಬೇರೆ ಜನರಿಗಾಗಲಿ ಸರ್ವಸಮ್ಮತವಾದ ಅಧಿಕಾರವಿರುತ್ತದೆ. ಸಮಾಜದ ಕಟ್ಟನ್ನು ಈ ರಾಜಕೀಯ ದೃಷ್ಟಿಯಿಂದ ನೋಡಿದರೆ, ಸಮಾಜವೇ ರಾಜ್ಯವೆನ್ನಿಸಿಕೊಳ್ಳುತ್ತವೆ. ಸಮಾಜದ ಎಲ್ಲ ವ್ಯವಹಾರಗಳನ್ನೂ ಮೇಲ್ವಿಚಾರಣೆಗೆ ಒಳಪಡಿಸಿಕೊಂಡು ಮುಖ್ಯವಾಗಿ ನ್ಯಾಯಪಾಲನೆ, ಶತ್ರುಭಯಪರಿಹಾರಗಳನ್ನು ಮುಖ್ಯಕರ್ತವ್ಯಗಳೆಂದು ಅಂಗೀಕರಿಸಿ, ಸಂತತವೂ ಕಾರ್ಯನಿರ್ವಾಹದಲ್ಲಿ ನಿರತವಾಗಿರುವ ಸಂಸ್ಥೆಯನ್ನೇ ರಾಜ್ಯವೆಂದು ಕರೆಯುತ್ತೇವೆ. ಒಂದುಷ್ಟವಾದ ಭೂಪ್ರದೇಶದಲ್ಲಿ ನೆಲಸಿ ಅದನ್ನು ಮಾತೃಭೂಮಿಯೆಂದು ಭಾವಿಸಿ, ಅಲ್ಲಿ ಹಾಗೆ ನೆಲಿಸಿದವರೆಲ್ಲ ಅನ್ಯೋನ್ಯ ಸ್ನೇಹಭಾವನೆಯಿಂದ ಕೂಡಿ ತಲೆತಲಾಂತರಗಳಿಂದ ಬಾಳಿ, ಮುಂದೆಯೂ ಅದೇ ಮೇರೆಗೆ ಒಂದೇ ಸಮಾಜ ಜೀವನದಲ್ಲಿ ಭಾಗಿಗಳಾಗಿ ಆಚಂದ್ರಾರ್ಕವಾಗಿ ಬಾಳುತ್ತೇವೆಂಬ ಬರವಸೆಯೂ ಬಾಳಬೇಕೆಂಬ ಆಕಾಂಕ್ಷೆಯೂ ಬಲವಾಗಿರುವ ಜನಸ್ತೋಮಕ್ಕೆ ಜನಾಂಗ (Nation)

ಎಂದು ಹೆಸರು. ಈ ಜನಾಂಗ ಭಾವನೆಯಲ್ಲಿ ದೇಶಪ್ರೇಮವೂ ಸೇರಿಕೊಂಡಿರುತ್ತದೆ.

ಇಂಥ ಸಮಾಜಜೀವನ, ರಾಷ್ಟ್ರೀಯಭಾವ, ದೇಶಪ್ರೇಮಗಳ ಸಂಮೇಳನದಿಂದ ಪೋಷಕವಾದ ರಾಜ್ಯಾಂಗವು ತನ್ನ ಉದ್ದೇಶವನ್ನು ಉಜ್ಜ್ವಲರೀತಿಯಲ್ಲಿ ನೆರವೇರಿಸುವುದು. ಅಂಥ ಸಮಾಜ ಅಥವಾ ಜನಾಂಗದಲ್ಲಿ ಜನರು ಉತ್ಸಾಹಭರಿತರಾಗಿರುತ್ತಾರೆ, ಒಬ್ಬರಿಗೊಬ್ಬರು ಸಹಾಯಕರಾಗಿರುತ್ತಾರೆ. ನಿತ್ಯಜೀವನದಲ್ಲಿ ಸಹಕಾರ ಬುದ್ಧಿಯನ್ನವಲಂಬಿಸುತ್ತಾರೆ. ತಮ್ಮ ಸ್ವಾರ್ಥವನ್ನು ರಾಜ್ಯದ ಪುರೋಭಿವೃದ್ಧಿಗೆ ಅಧೀನಮಾಡಿ ನಡೆದುಕೊಳ್ಳುವ ಮನೋವೃತ್ತಿ ಇವರಿಗೆ ಸುಲಭವಾಗಿ ಬರುತ್ತದೆ. ತಾತ್ಕಾಲಿಕವಾದ ಸ್ವಾರ್ಥಲಾಭವನ್ನು ಬದಿಗಿಟ್ಟು ಶಾಶ್ವತವಾದ ಅಥವಾ ದೀರ್ಘಕಾಲ ನಡೆಯತಕ್ಕ ನೀತಿಗಳನ್ನು ಅಂಗೀಕರಿಸಿ ಕಾರ್ಯರೂಪದಲ್ಲಿ ತೋರಿಸುತ್ತಾರೆ. ಜನಾಂಗದಲ್ಲಿ ಅನೇಕ ಗುಂಪುಗಳಿವೆ, ಸಂಸ್ಥೆಗಳಿವೆ, ಕುಟುಂಬ, ಜಾತಿ, ಕುಲಗಳು, ಕಸಬಿಗೆ ಸಂಬಂಧ ಪಟ್ಟ ವರ್ಗಗಳು ಮತ್ತು ಶ್ರೇಣಿಗಳು; ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಗುರುಶಿಷ್ಯರ ಗುಂಪುಗಳು, ಮತಕ್ಕೆ ಸಂಬಂಧಪಟ್ಟ ಗುರುಶಿಷ್ಯರ ಗುಂಪುಗಳು, ಮತಕ್ಕೆ ಸಂಬಂಧಪಟ್ಟ ಗುರುಶಿಷ್ಯರ ಗುಂಪುಗಳಲ್ಲಿ ಮಠಗಳು; ವಿದ್ಯಾಬಲದಿಂದ ಜೀವನ ಮಾಡುವ ನ್ಯಾಯವಾದಿಗಳು, ವೈದ್ಯರು; ಸರಕಾರದ ಶಾಖೆಗಳಲ್ಲಿರುವ ಉದ್ಯೋಗಸ್ಥರು, ಭೂವ್ಯವಸಾಯದಲ್ಲಿ ನಿರತವಾದ ರೈತರು, ಜೀತಗಾರರು; ಲಲಿತಕಲೆಗಳ ಸಹಾಯದಿಂದ ಜನರ ಮನರಂಜನೆ ಮಾಡಿ ಜೀವನ ಮಾಡುವ ನಾಟಕದವರು, ನೃತ್ಯಗಾರರು, ಚಿತ್ರಕಾರರು, ಶಿಲ್ಪಿಗಳು; ಕೈಗಾರಿಕೆಗಳ ಮೂಲಕ ಹಣ ಸಂಪಾದಿಸುವ ಯಂತ್ರೋಪಕರಣಗಳ ಮಾಲೀಕರು; ಹೊಲ ತೋಟ ಯಂತ್ರಾಗಾರಗಳಲ್ಲಿ ದುಡಿದು ಕೂಲಿಯಿಂದ ಜೀವನ ಮಾಡುವವರು; ವಾಹನ ಸೌಕರ್ಯಗಳನ್ನು ಒದಗಿಸುವವರು – ಇವೇ ಮುಂತಾಗಿ ಅನೇಕ ಗುಂಪುಗಳೂ ಶ್ರೇಣಿಗಳೂ ವರ್ಗಗಳೂ ಸಮಾಜದಲ್ಲಿ ಇರುತ್ತವೆ. ಹೀಗಾಗಿ ಸಮಾಜ ಜೀವನವು ವಿವಿಧ ಶಾಖೆಗಳನ್ನೊಳಗೊಂಡು ಸರ್ವತೋಮುಖವಾಗಿ ಸಂತತವಾಗಿ ಹರಿಯುತ್ತಿರುತ್ತದೆ.

ಇವುಗಳಲ್ಲಿ ಪ್ರತಿಯೊಂದು ಗುಂಪಿನಲ್ಲಿಯೂ ಅದರ ಹಿತಸಾಧನೆಗೆ ಅನುಕೂಲಿಸುವ ಕಟ್ಟಳೆಗಳೂ ಸಂಪ್ರದಾಯಗಳೂ ತಲೆತಲಾಂತರದಿಂದ ನಡೆದುಕೊಂಡು ಬಂದಿರುತ್ತವೆ. ಇವೆಲ್ಲ ಕಟ್ಟಳೆಗಳಿಗೂ ಬೆಂಬಲಕೊಟ್ಟು ನಡಿಸಿಕೊಂಡು ಬರುವುದು ರಾಜಶಾಸನ. ಈ ಗುಂಪುಗಳ ನೀತಿಗಳಲ್ಲಿ ಅಸಾಧುವಾದವುಗಳನ್ನು ತಿದ್ದಿ ಸರಿಪಡಿಸುವ ಕರ್ತವ್ಯವೂ ರಾಜ್ಯಕ್ಕೆ ಸೇರಿದೆ.

ಎಲ್ಲ ಶ್ರೇಣಿಗಳ ಸಾಮರಸ್ಯವನ್ನೂ ಕಾಪಾಡಬೇಕಾದ್ದು ರಾಜ್ಯದ ಮುಖ್ಯಕರ್ತವ್ಯ. ಈ ಕರ್ತವ್ಯವನ್ನು ನಿರ್ವಹಿಸಲು ಅಗತ್ಯವಾಗಿ ಬೇಕಾದ ಅಧಿಕಾರ ಅದಕ್ಕಿದೆ. ಇದು ಸಮಾಜದಲ್ಲಿಯೂ ವ್ಯಕ್ತಿ ಜೀವನದಲ್ಲಿಯೂ ಇರುವ ರಾಜ್ಯಾಂಗದ ಸ್ಥಾನ. ರಾಜ್ಯಾಂಗವು ಸಮಾಜ ಜೀವನವನ್ನೂ, ವ್ಯಕ್ತಿ ಜೀವನವನ್ನೂ ಪರಿಶುದ್ಧಗೊಳಿಸಿ ಉತ್ತಮ ಮಾರ್ಗಕ್ಕೆ ಸೆಳೆಯುವ ಅಧಿಕಾರವುಳ್ಳ ಶಾಸನ ಸಮೂಹ.

* * *

೬ನೆಯ ಅಧ್ಯಾಯ

ಅಧ್ಯಾತ್ಮ ವಿಚಾರ

ಸಮಾಜ, ಜನಾಂಗ, ರಾಜ್ಯಗಳ ವಿಷಯದಲ್ಲಿ ಕಂಡುಬರುವುದು ಎರಡು ಬಗೆಯ ದೃಷ್ಟಿ. ಒಂದು ಪ್ರಕ್ರತಿವಾದ ಅಥವಾ ಜಡವಾದಕ್ಕೆ ಸಂಬಂಧಪಟ್ಟದ್ದು; ಇನ್ನೊಂದು ತತ್ತ್ವದೃಷ್ಟಿ. ಮೊದಲನೆಯ ದೃಷ್ಟಿಯ ಪ್ರಕಾರ ಸಮಾಜ ಜನಾಂಗ ರಾಜ್ಯಗಳು ಸ್ವತಂತ್ರ ಜೀವರ ಬಾಹ್ಯಸಮೂಹ. ವ್ಯಕ್ತಿಗೂ ಸಮಾಜಕ್ಕೂ ಇರುವ ಸಂಬಂಧ ಆಂತರಿಕವಲ್ಲ; ಬಾಹ್ಯವಾದ್ದು, ಆಕಸ್ಮಿಕವಾದ್ದು. ವ್ಯಕ್ತಿಗಳು ಸ್ವಾರ್ಥಪರರು. ಇವರ ಸ್ವಭಾವದಲ್ಲಿ ಸ್ವಾರ್ಥವನ್ನಡಗಿಸಿ ಬೇರೆಯವರ ಹಿತದಲ್ಲಿ ಭಾಗವಹಿಸಿ ಆತ್ಮವಿಕಾಸದ ಅನುಭವವನ್ನು ಪಡೆಯುವ ಗುಣ ಇರುವುದೇ ಇಲ್ಲ. ಸಮಾಜವು ಗಾಜಿನ ಗೋಲಿಗಳ ಚೀಲದಂತೆ. ಅವಕ್ಕೆ ಒಂದು ಆಕಾರ ಬರಬೇಕಾದರೆ ಅವನ್ನು ತುಂಬಿರುವ ಪಾತ್ರೆಯ ನಿರ್ಬಂಧದಿಂದ, ಆ ಪಾತ್ರೆಯ ನಿರ್ಬಂಧ ಹೋದ ಕೂಡಲೆ ಅವುಗಳ ಪರಸ್ಪರ ಸಂಬಂಧ ಮಾಯವಾಗಿ ಪ್ರತಿಯೊಂದು ಬೇರೆಬೇರೆಯ ಆಕಾರ ಸ್ವಭಾವವುಳ್ಳವುಗಳಾಗಿ ತಮ್ಮ ತಮ್ಮ ಭೇದವನ್ನು ಸ್ಪಷ್ಟಗೊಳಿಸುತ್ತವೆ.

ಈ ದೃಷ್ಟಿಯಿಂದ ಮನುಷ್ಯರು ಸಹಕಾರ ಮಾಡುವುದು ಶಾಸನ ಭಯದಿಂದ, ಶಿಕ್ಷೆಯ ಭಯವಿಲ್ಲದಿದ್ದರೆ ಪ್ರತಿಯೊಬ್ಬನೂ ಶಾಸನೋಲ್ಲಂಘನೆಗೆ ಸಿದ್ಧನಾಗಿರುತ್ತಾನೆ. ರಾಜ್ಯಾಂಗವೆಂಬುದು ಮನುಷ್ಯ ನಿರ್ಮಿತವಾದ ಕೃತಕಬಂಧನ. ಸಮಾಜದಲ್ಲಿ ಸಂಭವಿಸುವ ಕಲಹವನ್ನು ನಿಲ್ಲಿಸುವುದಕ್ಕೆ ರಾಜಶಾಸನವಿಲ್ಲದಿದ್ದರೆ, ಅದನ್ನು ನಡಸಿಕೊಡುವ ಪ್ರಭುತ್ವದವರಿಲ್ಲದಿದ್ದರೆ, ಜನರು ತಮ್ಮ ತಮ್ಮಲ್ಲಿ ಹೋರಾಡಿ ಬಲಿಷ್ಠರು ಬಲಹೀನರನ್ನು ಹಿಂಸಿಸಿ ಅವರ ಸ್ವತ್ತನ್ನು ಕಸಿದುಕೊಂಡು, ಕೆಲವುವೇಳೆ ಅವರನ್ನು ಗುಲಾಮಗಿರಿಗಿಳಿಸಿ ಅವರಿಂದ ಕೆಲಸ ಮಾಡಿಸಿಕೊಳ್ಳುತ್ತ ತಾವು ಅನುಕೂಲಸ್ಥರಾಗಿ ಬಾಳಲು ಪ್ರಯತ್ನ ಪಡುತ್ತಾರೆ. ಇತರ ಬಲಿಷ್ಠರು ಇಂಥವರನ್ನೂ ಎದುರಿಸಿ ಅವರ ಅನುಕೂಲಗಳನ್ನು ಅಪಹರಿಸುವುದಕ್ಕೆ ಪ್ರಯತ್ನಪಡುತ್ತಾರೆ. ಹೀಗೆ ಕದನ ಕಲಹಗಳು ಸತತವಾಗಿ ನಡೆಯುತ್ತಿದ್ದು ಮನುಷ್ಯನ ಜೀವನವು ದಾರಿದ್ರ್ಯ ಭಯಗಳಿಂದ ಪೀಡಿತವಾಗಿ ಕೀಳು ಪ್ರಾಣಿಗಳ ಜೀವನಕ್ಕಿಂತ ಅಸಹ್ಯವಾಗುವ ಪ್ರಸಂಗ ಬರುತ್ತದೆ. ಇದನ್ನು ಮತ್ಸ್ಯನ್ಯಾಯವೆಂದು ನಮ್ಮ ಶಾಸ್ತ್ರ ಗ್ರಂಥಗಳಲ್ಲಿ ಕರೆದಿದ್ದಾರೆ. ಸಮುದ್ರದಲ್ಲಿ ದೊಡ್ಡಮೀನು

ಸಣ್ಣ ಮೀನನ್ನು ತಿನ್ನುತ್ತದೆಯಂತೆ. ಇದರಂತೆ ರಾಜ್ಯದಲ್ಲಿ ಅವ್ಯವಸ್ಥೆ ತಲೆ ದೋರಿದರೆ, ದೊಡ್ಡವರು ಸಣ್ಣವರನ್ನು ಪೀಡಿಸುವುದು ವಾಡಿಕೆಯಾಗಿ ಹೋಗುತ್ತದೆ.

ಈ ದುರವಸ್ಥೆಯನ್ನು ತಪ್ಪಿಸಿಕೊಳ್ಳಲು ಜನರು ರಾಜ್ಯವ್ಯವಸ್ಥೆ ಮಾಡಿಕೊಳ್ಳುತ್ತಾರೆ. ರಾಜನನ್ನೋ ಸಭೆಯನ್ನೋ ರಾಜವಂಶದವರನ್ನೊ ಪ್ರಭುತ್ವಸ್ಥಾನದಲ್ಲಿ ಕೂರಿಸಿ ಅವರಿಗೆ ವಿಧೇಯರಾಗಿ ನಡೆದುಕೊಳ್ಳುತ್ತಾರೆ.

ಈ ಸಂದರ್ಭವನ್ನು ಒಪ್ಪಿದರೂ ಇದರ ಹಿಂದಿರುವ ತತ್ತ್ವ ಪ್ರತಿಪಾದನೆಯನ್ನು ಒಪ್ಪಬೇಕಾಗಿಲ್ಲ

ಎರಡನೆಯ ತತ್ತ್ವದೃಷ್ಟಿಯೇನೆಂದರೆ : ಈ ರೀತಿಯಾಗಿ ಸಮಾಜವು ದುರವಸ್ಥೆಗೆ ಬರುವುದೂ ಕಡೆಗೆ ಜನ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಪ್ರಭುತ್ವಕ್ಕೆ ಸರ್ವಾಧಿಕಾರವನ್ನು ಧಾರೆಯೆರೆದು ಅವರ ಅಧೀನದಲ್ಲಿ ಜೀವನ ನಡಸುವುದೂ ಸ್ಥೂಲವಾಗಿ ನೋಡಿದರೆ ವಾಸ್ತವವಾದ ಸನ್ನಿವೇಶವೇ ಸರಿ, ಆದರೆ ಈ ಚಿತ್ರವು ಮಾನವನ ಆಂತರಿಕ ಮನೋಧರ್ಮವನ್ನು ಸಂಪೂರ್ಣವಾಗಿ ನಿರೂಪಿಸುವುದಿಲ್ಲ. ಹೀಗಾಗುವುದು ಮೊದಲನೆಯ ಮನೋವೃತ್ತಿ. ಕಾಲಾನುಕಾಲದಲ್ಲಿ ಸಂಸ್ಕೃತಿ ಬೆಳೆದು ಸೂಕ್ಷ್ಮದೃಷ್ಟಿ ಕುದುರಿ, ಜನರಲ್ಲಿ ಇನ್ನೂ ಗೂಢವಾದ ಮತ್ತು ಶ್ರೇಷ್ಠವಾದ ಮನೋವೃತ್ತಿಯಿರುವುದೆಂಬ ನಂಬಿಕೆ ಹುಟ್ಟುತ್ತದೆ. ಈ ಎರಡನೆಯ ದೃಷ್ಟಿಯ ಪ್ರಕಾರ ಸಮಾಜವು ಗೋಲಿಯ ಚೀಲದಂತಲ್ಲ. ಒಂದು ದೊಡ್ಡ ಮರದಲ್ಲಿ ಒಂದೇ ಜೀವರಸವು ಉತ್ಪನ್ನವಾಗಿ ಬೇರಿನಿಂದ ಕೊಂಬೆಗಳಿಗೂ ಎಲೆಗಳಿಗೂ ಹರಿದು, ಹೂವು ಹಣ್ಣುಗಳನ್ನು ಬಿಡುವಹಾಗೆ, ಒಟ್ಟು ಜನಾಂಗದ ಜನರಲ್ಲಿ ಸರ್ವರಿಗೂ ಸಾಮಾನ್ಯವಾದ ಮನೋಭಾವ ಉತ್ಪತ್ತಿಯಾಗಿ ಎಲ್ಲರ ಮನಸ್ಸು ಹೃದಯಗಳನ್ನೂ ಹೊಕ್ಕು ಎಲ್ಲರಲ್ಲೂ ಒಮ್ಮನಸ್ಸನ್ನು ಹುಟ್ಟಿಸುತ್ತದೆ. ಎಲ್ಲರ ಮನಸ್ಸಿನಲ್ಲಿಯೂ ಪ್ರವಹಿಸಿ ಅದನ್ನು ಪ್ರೇರಿಸುವ ಅಂತರ್ಯಾಮಿಯಾದ ಒಂದು ಆತ್ಮ ತತ್ತ್ವವಿದೆ. ಇದು ಮೊದಲು ಸುಪ್ತವಾಗಿದ್ದು ಕ್ರಮೇಣ ವಿದ್ಯೆ, ಬುದ್ಧಿ, ಧರ್ಮಭಾವನೆ – ಇವುಗಳು ಸಂಸ್ಕೃತವಾದ ಹಾಗೆಲ್ಲ ಪ್ರಬಲವಾಗುತ್ತ ಬರುತ್ತವೆ. ಇದರಿಂದ ಜನರಲ್ಲಿ ಐಕ್ಯಭಾವನೆ ಹುಟ್ಟುತ್ತದೆ. ಇದರಿಂದ ಅವರಲ್ಲಿ ಸಹಕಾರ ಬುದ್ಧಿಯು ಅಂಕುರಿಸುತ್ತದೆ. ಇದೇ ಮಾನವನ ಎಲ್ಲ ಅನುಭವಗಳಲ್ಲಿಯೂ ತೋರಿಬರುವ ಉದಾರಬುದ್ಧಿ, ಪ್ರೇಮಿ, ವಿಶ್ವಾಸ ಸ್ನೇಹಗಳಿಗೆ ಪ್ರೇರಕವಾದ ಅಂತರಿಕವಾದ ತತ್ತ್ವ

ಮನುಷ್ಯನು ತನ್ನ ವ್ಯಕ್ತಿತ್ವದ ಎಲ್ಲೆಯನ್ನು ಮೀರಿ, ಇತರರೊಡನೆ ಸೇರಿ, ಸರ್ವರ ಹಿತದಲ್ಲಿ ಮಗ್ನನಾಗುವುದರಲ್ಲಿ ಅವನ ಏಳಿಗೆಯಿರುತ್ತದೆ. ಅಲ್ಲದೆ, ಕೇವಲ ಸ್ವಾರ್ಥದಲ್ಲಿ ಮಗ್ನನಾಗಿದ್ದರೆ, ಕೊನೆಗೆ ಆತನ ಸ್ವಾರ್ಥಕ್ಕೂ ವಂಚನೆಯಾಗುತ್ತದೆ.

ಸಮಾಜ ರಾಷ್ಟ್ರಗಳಲ್ಲಿರುವ ಜನರ ಸ್ವಭಾವಕ್ಕೂ ಅವರ ಸಮಾಜ ರಾಷ್ಟ್ರಗಳಿಗೂ ಇರುವ ವಾಸ್ತವವಾದ ಸಂಬಂಧವೆಂದರೆ, ಅಂಗಾಂಗೀಭಾವ. ಜೀವನದ ಎಲ್ಲ ಸಂಸ್ಥೆಗಳೂ ಜೀವನ ಆತ್ಮವಿಸ್ತಾರಕ್ಕಾಗಿ ಹುಟ್ಟಿದವು. ಎಲ್ಲ ಧರ್ಮಗಳೂ ಅಂಥ

ಆತ್ಮವಿಸ್ತಾರಕ್ಕೆ ಸಾಧಕಗಳಾದ ನಿಯಮವಿಶೇಷಗಳು. ಇವುಗಳು ಜನರ ಅನುಭವಬಲದಿಂದಲೂ ಜ್ಞಾನಿಗಳ ಪರಿಷ್ಕಾರಬಲದಿಂದಲೂ ರೂಪುಗೊಂಡು ಸಂಪ್ರದಾಯಗಳಾಗಿ ಬೆಳೆದುಬಂದು, ಜನರಿಗೆ ಮಾನಸಿಕ ವಾತಾವರಣವಾಗಿಯೂ ಅಂತಃಸ್ಫೂರ್ತಿಗೆ ಕಾರಣವಾಗಿಯೂ ಕೆಲಸಮಾಡುತ್ತವೆ. ರಾಜ್ಯಾಂಗನಿಯಮಗಳು ಈ ಧರ್ಮಸಂಪ್ರದಾಯಗಳನ್ನೂ ನೀತಿಗಳನ್ನೂ ಪುಷ್ಟೀಕರಿಸಿ ಅವುಗಳು ಅಳಿದುಹೋಗದಂತೆ ತಡೆದು ಆತ್ಮೋದ್ಧಾರಕ್ಕೆ ಸಹಾಯ ಮಾಡುತ್ತವೆ.

ಸಸ್ಯಾದಿಗಳಲ್ಲಿಯೂ ಪ್ರಾಣಿಶರೀರದಲ್ಲಿಯೂ ಕಾಣಬರುವುದು ಕೇವಲ ಪಂಚಭೂತಮೂಲವಾದ ಅಂಗಾಂಗಿಸಂಬಂಧವಾದ್ದರಿಂದ ಮಾನವ ಸಮಾಜದಲ್ಲಿ ವ್ಯಕ್ತಿಗೂ ಜನಾಂಗ ರಾಜ್ಯಗಳಿಗೂ ಇರುವ ಸಂಬಂಧಕ್ಕೆ ಇದು ಸರಿಯಾದ ಸಾಮ್ಯವಲ್ಲವೆಂಬ ಆಕ್ಷೇಪಣೆ ಉದ್ಭವಿಸಬಹುದು. ಇಂಥ ಆಕ್ಷೇಪಣೆಯನ್ನು ಪ್ರತಿವಾದಿಗಳ ಶಾಸ್ತ್ರದ ಇತಿಹಾಸದಲ್ಲಿ ಮೊದಲಿನಿಂದಲೂ ಮಂಡಿಸುತ್ತ ಬಂದಿದ್ದಾರೆ. ಇದಕ್ಕೆ ಉತ್ತರವನ್ನೂ ಇತರರು ಕೊಡುತ್ತ ಬಂದಿದ್ದಾರೆ.

ಮಾನಸಿಕ ಪ್ರಪಂಚದಲ್ಲಿ ಕೂಡ ಅಂಗಾಂಗಿಭಾವವಿರಬಹುದು. ವ್ಯಕ್ತಿಗೂ ಸಮಾಜಕ್ಕೂ ಇರುವ ಸಂಬಂಧವನ್ನು ಇದು ಸರಿಯಾಗಿ ನಿರ್ದೇಶ ಮಾಡುತ್ತದೆ. ಈ ಸಾಮ್ಯವು ಕೇವಲ ಸಾಮ್ಯವಲ್ಲ. ಅಕ್ಷರಶಃ ವಾಸ್ತವವಾದ ಆತ್ಮತತ್ತ್ವ ಎಂಬುದೇ ಪ್ಲೇಟೋವಿನ ಅಭಿಪ್ರಾಯ. ಇದೇ ಅಭಿಪ್ರಾಯವೇ ನಮ್ಮ ವೇದಾಂತದ ಸಾರ.

ಈ ದೃಷ್ಟಿಯನ್ನು ಆತ್ಮವಾದ ಅಥವಾ ಆತ್ಮಪ್ರಧಾನ ವಾದ ಎನ್ನಬಹುದು. ಇದನ್ನು ಯೂರೋಪಿನ ತತ್ತ್ವಶಾಸ್ತ್ರದ ಇತಿಹಾಸದಲ್ಲಿ 'ಐಡಿಯಲಿಜ಼್ಮ್' (Idealism) ಎಂದು ಕರೆದಿದ್ದಾರೆ. ಸಮಾಜವೂ ರಾಷ್ಟ್ರವೂ ರಾಜ್ಯಾಂಗವೂ ಮಾನವಸ್ವಭಾವದಲ್ಲಿ ಅಡಗಿರುವ ಸರ್ವಾಂತರ್ಯಾಮಿಯಾದ ಆತ್ಮಸ್ವರೂಪವನ್ನು ಅಭಿವ್ಯಕ್ತಿಗೊಳಿಸುವುದಕ್ಕೆ ಅನುಕೂಲಿಸುವ ಸಂಬಂಧ ವಿಶೇಷಗಳನ್ನೂ ಶಾಸನಗಳನ್ನೂ ರಚಿಸಿಕೊಟ್ಟು ಸತತವಾಗಿ ಸತ್ಪ್ರೇರಣೆ ಮಾಡುವ ಸಂಸ್ಥೆಗಳು – ಎಂಬುದೇ ಆತ್ಮವಾದದ ಮೂಲತತ್ತ್ವ

ಈ ದೃಷ್ಟಿಯಲ್ಲಿ ರಾಜ್ಯಾಂಗದ ಶಾಸನ ಸಮೂಹಗಳೂ ಸಂಪ್ರದಾಯಗಳೂ ಧರ್ಮಮೂಲವಾಗಿ ಕಂಡುಬರುವುದು ನ್ಯಾಯವೇ ಆಗಿದೆ. ರಾಜ್ಯಾಂಗಕ್ಕೂ ನೀತಿಧರ್ಮಗಳಿಗೂ ಹೀಗೆ ಆಂತರಿಕವಾದ ಸಂಬಂಧವು ಏರ್ಪಡುತ್ತದೆ. ಕೇವಲ ಮತ್ಸ್ಯನ್ಯಾಯವು ವಿಜೃಂಭಿಸುವುದು ಅವಿದ್ಯಾವಸ್ಥೆಯಲ್ಲಿ ಮಾತ್ರ. ಜ್ಞಾನೋದಯವಾದ ಹಾಗೆಲ್ಲ ಮತ್ಸ್ಯನ್ಯಾಯದ ಬಲ ಕುಗ್ಗುತ್ತ ಬಂದು ಆತ್ಮಬಲದ ಪ್ರಭಾವ ಹೆಚ್ಚಾಗುತ್ತ ಬರುತ್ತದೆ. ಭೇದವನ್ನು ಪೋಷಿಸತಕ್ಕದ್ದು – ಸ್ಥೂಲವಾಗಿ ಹೇಳುವುದಾದರೆ – ಪ್ರಾಣಿ ಸಾಮಾನ್ಯಕ್ಕೆ ಅನ್ವಯಿಸುವ ಗುಣ. ಅಭೇದ ಪ್ರವೃತ್ತಿಯನ್ನು ಹೆಚ್ಚಿಸುವ ಪ್ರೇರಣೆಯಾದರೋ ಆತ್ಮಮೂಲವಾದ ಪ್ರತೀತಿಯಿಂದ ಉಂಟಾಗುತ್ತದೆ. ಈ ಪ್ರತೀತಿಯು ಮಾನವನ ಜೀವನದಲ್ಲಿ ಹೆಜ್ಜೆ ಹೆಜ್ಜೆಯಲ್ಲಿಯೂ ತಲೆದೋರುತ್ತದೆ. ಅದು ಎಷ್ಟರಮಟ್ಟಿಗೆ ಅವಿರ್ಭಾವವಾಗುವುದೋ ಅಷ್ಟರಮಟ್ಟಿಗೆ ಅವನ ಜೀವನವು

ಪ್ರಾಣಿ ಜೀವನದ ಮಟ್ಟದಿಂದ ಮೇಲಕ್ಕೇರಿದ ಹಾಗಾಗುತ್ತದೆ. ಈ ಪ್ರತೀಯು ತಾಯಿಗೆ ತಾನು ಹೆತ್ತು ಸಲಹಿದ ಮಕ್ಕಳ ಮೇಲಿನ ಪ್ರೇಮದಲ್ಲಿಯೂ, ಒಂದೇ ಕುಟುಂಬದ ಬಾಂಧವರಿಗೆ ಪರಸ್ಪರವಾಗಿ ಇರುವ ಅಭಿಮಾನ ಅನುರಾಗಗಳಲ್ಲಿಯೂ, ನೆರೆಹೊರೆಯವರಲ್ಲಿ ಉತ್ಪನ್ನವಾಗುವ ಸೌಹಾರ್ದ ವಿಶೇಷಗಳಲ್ಲಿಯೂ, ಮಿತ್ರರ ಮೈತ್ರಿಯಲ್ಲಿಯೂ, ಜಾತಿ ಕುಲಗಳಲ್ಲಿ ತೋರಿಬರುವ ಸ್ವಜನ ಪ್ರೀತಿಯಲ್ಲಿಯೂ ಅಂತರಾತ್ಮನಿಂದ ಉಕ್ಕಿ ಹರಿದು ಬರುತ್ತದೆ.

ಪ್ರಾಣಿ ಪರಿಣಾಮವಾದ ಪ್ರಕಾರ ಈ ಚಿತ್ರವು ಆಧಾರವಿಲ್ಲದ ಗಂಧರ್ವ ನಗರವೆಂದು ಆಪಾತತಃ ತೋರಬಹುದು. ಆದರೆ ಮಾನವನ ಸ್ವಭಾವನ್ನೂ ಅವನ ಅನುಭವ ಕ್ಷೇತ್ರಗಳನ್ನೂ ಇತಿಹಾಸವನ್ನೂ ವಿಶಾಲದೃಷ್ಟಿಯಿಂದಲೂ ಸೂಕ್ಷ್ಮ ದೃಷ್ಟಿಯಿಂದಲೂ ಪರಿಶೀಲಿಸಿದರೆ ಪ್ಲೇಟೋವಿನ, ವೇದಾಂತಿಗಳ ಮತ್ತು ಇತರ ಆತ್ಮವಾದಿಗಳ ವಾದವು ಆಧಾರಸಹಿತವಾದದ್ದೆಂದೂ ಸಮಂಜಸವಾದದ್ದೆಂದೂ ಅನೇಕ ಮೇಧಾವಿಗಳಾದ ತತ್ತ್ವ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಅಲ್ಲದೆ, ಪ್ರಾಣಿ ಜೀವನದ ಪರಿಣಾಮ ಚರಿತ್ರೆಯಲ್ಲಿಯೂ ಕೂಡ ಮತ್ಸ್ಯನ್ಯಾಯದೊಂದಿಗೆ ಪರಸ್ಪರ ಸಹಕಾರ ನ್ಯಾಯವೂ ಕೂಡ ಸೋಪಾನಕ್ರಮ. ಕ್ರಮೇಣ ಯುಗ ಯುಗಾಂತರಗಳು ಹೊರಳುತ್ತ ಹೋದಹಾಗೆಲ್ಲ ಈ ಕ್ರಮ ಪ್ರಬಲವಾಗುತ್ತ ಬಂದಿರುವುದು ಕಾಣಬರುತ್ತದೆ. ಈ ಸಹಕಾರ ಬುದ್ಧಿಯ ಅವಿರ್ಭಾವವನ್ನು ಪ್ರಿನ್ಸ್ ಕ್ರೊಪಾಟ್ಕಿನ್ ಆದಿಯಾಗಿ ಅನೇಕರು ವಿಸ್ತಾರವಾಗಿ ಚಿತ್ರಿಸಿದ್ದಾರೆ. ಈ ಚಿತ್ರವು ಡಾರ್ವಿನನ ಪ್ರತಿಪಾದನೆಗೆ ಸರಿಸಮಾನವಾಗಿದ್ದು, ಪ್ರಾಣಿಗಳು ಪರಿಣಾಮಹೊಂದುವ ಪ್ರಮೇಯವು ಅವರಲ್ಲಿ ಧರ್ಮ ಬುದ್ಧಿಯನ್ನು ಚೋದನೆಮಾಡಿ ಬೆಳಸುವ ಆವಿಷ್ಕಾರ ಮಾರ್ಗವೇ ಎಂಬ ಭಾವನೆಯನ್ನು ಪುಷ್ಟೀಕರಿಸುತ್ತದೆ.

* * *

೭ನೆಯ ಅಧ್ಯಾಯ

ಧರ್ಮದ ಆಧಾರ

ಮನುಷ್ಯನ ಯೋಚನೆಗಳಲ್ಲಿಯೂ ಭಾವನೆಗಳಲ್ಲಿಯೂ ಕೆಲಸಗಳಲ್ಲಿಯೂ ಕೆಲವನ್ನು ಒಳ್ಳೆಯವೆಂದೂ ಕೆಲವನ್ನು ಕೆಟ್ಟವೆಂದೂ ಕರೆಯುತ್ತೇವೆ. ಈ ವ್ಯತ್ಯಾಸಕ್ಕೆ ಆಧಾರವೇನು? ಒಳ್ಳೆಯದಕ್ಕೆಲ್ಲ ಸಾಧಾರಣವಾದ ಗುಣ ಯಾವುದು? ಕೆಟ್ಟದಕ್ಕೆಲ್ಲ ಅನ್ವಯಿಸತಕ್ಕ ಅವಗುಣ ಯಾವುದು? ಪ್ಲೇಟೋ 'ರಿಪಬ್ಲಿಕ್' ಎಂಬ ಪ್ರಸಿದ್ಧವಾದ ತನ್ನ ಗ್ರಂಥದಲ್ಲಿ ಈ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಸಾಕ್ರಟೀಸನಿಗೂ ಇತರರಿಗೂ ನಡೆಯುವ ಸಂವಾದರೂಪದಲ್ಲಿ ತನ್ನ ವಿಚಾರ ಮಥನವನ್ನು ಮಂಡಿಸಿದ್ದಾನೆ.

ಒಳ್ಳೆಯ ವ್ಯಾಪಾರಕ್ಕೆಲ್ಲ ಅನ್ವಯಿಸುವ ಗುಣಸಮೂಹವನ್ನು ಧರ್ಮ, ನೀತಿ ಎಂದು ಕರೆಯುತ್ತೇವೆ. ಇಂಥ ಧರ್ಮ ಅಥವಾ ನೀತಿಯ ಸ್ವರೂಪವೇನು? – ಎಂಬ ಸಮಸ್ಯೆಯನ್ನು ಬಿಡಿಸಲು ರಿಪಬ್ಲಿಕ್ಕಿನಲ್ಲಿ ವಿಚಾರತರಂಗಗಳನ್ನೆಬ್ಬಿಸುತ್ತಾನೆ.

ಮೊದಲನೆಯದಾಗಿ, ಈ ವಿಷಯವಾಗಿ ಜನರಲ್ಲಿ ರೂಢಿಯಿಂದ ಬಂದ ಅಭಿಪ್ರಾಯಗಳನ್ನು ಕುರಿತು ವಿಮರ್ಶೆ ನಡೆಯುತ್ತದೆ. ಸತ್ಯವನ್ನು ನುಡಿಯುವುದು, ಸಾಲ ತೆಗೆದುಕೊಂಡಿದ್ದರೆ ಅದನ್ನು ತೀರಿಸಿ ಋಣಮುಕ್ತನಾಗುವುದು, ಇದೇ ಧರ್ಮ ಎಂಬ ಸಾಧಾರಣ ಭಾವನೆಯು ಸಾಲದೆಂದು ಸಂವಾದದಲ್ಲಿ ನಿರ್ಣಯವಾಗುತ್ತದೆ.

ನಮ್ಮ ಕಾಲದಂತೆಯೇ ಪ್ಲೇಟೋವಿನ ಕಾಲವೂ ವಿಚಾರ ಮಥನ ವಿಚಾರವಿಪ್ಲವಗಳ ಕಾಲ. ಅನಾದಿಯಾಗಿ ನಡೆದು ಬಂದಿದ್ದ ಸಂಪ್ರದಾಯಗಳೂ ಸಂಸ್ಕಾರಗಳೂ ಧರ್ಮವ್ಯವಸ್ಥೆಗಳೂ ಜನರ ಮನಸ್ಸಿನಲ್ಲಿ ಸಡಿಲವಾಗುತ್ತಿದ್ದವು. ಪರ್ಷಿಯನರೊಡನೆ ಯುದ್ಧವಾದಮೇಲೆ ಹೆಲೆನರಲ್ಲಿ ಪರಸ್ಪರ ಸಂಪರ್ಕ ಹೆಚ್ಚಾಗುತ್ತ ಬಂದಿತ್ತು. ವ್ಯಾಪಾರವೂ ಶಾಸ್ತ್ರಸಂಶೋಧನೆಗಳೂ ಅಭಿವೃದ್ಧಿ ಹೊಂದಿದವು. ಎಲ್ಲೆಲ್ಲಿಯೂ ಪ್ರಜಾರಾಜ್ಯದ ಪ್ರಭಾವ ಬೆಳೆಯಿತು. ಮೊದಲೇ ಗ್ರೀಕರು ವಾಚಾಳಿಗಳು; ಸಂಭಾಷಣ ಪ್ರಿಯರು, ಈ ಸಮಯದಲ್ಲಿ ಸಭೆಗಳಲ್ಲಿ ನಿಂತು ಮಾತಾಡಿ ಜನರ

ಮನಸ್ಸನ್ನು ಸೆಳೆಯುವ ಅಗತ್ಯವೂ ಅವಕಾಶವೂ ವಿಸ್ತಾರವಾಯಿತು. ಗ್ರೀಕರಲ್ಲಿ ನ್ಯಾಯವಾದಿಯೆಂಬ ಪ್ರತ್ಯೇಕ ವೃತ್ತಿಯಿರಲಿಲ್ಲ. ಪ್ರತಿಯೊಬ್ಬನೂ ತನ್ನ ಆಸ್ತಿಪಾಸ್ತಿಗಳ ವಿಷಯದಲ್ಲಿ ಸಂಭವಿಸಬಹುದಾದ ವಿವಾದಗಳಲ್ಲಿ ನ್ಯಾಯಾಸ್ಥಾನದಲ್ಲಿ ನಿಂತು ತನ್ನ ಹಿತಸಂರಕ್ಷಣೆ ಮಾಡಿಕೊಳ್ಳಬೇಕಾಗಿತ್ತು. ರಾಜಕೀಯದಲ್ಲಿ ಮುಂದಕ್ಕೆ ಬರಬೇಕೆಂಬ ಕುತೂಹಲವುಳ್ಳವರು ಅಸಾಧಾರಣ ವಾಕ್ಪಟುತ್ವವನ್ನು ಸಂಪಾದಿಸಬೇಕಾಗಿತ್ತು. ಅಲ್ಲದೆ. ಗ್ರೀಕರಲ್ಲಿ ಎಲ್ಲಮನೆತನಗಳಿಗೂ ಸಾಕಾದಷ್ಟು ಭೂಮಿಯಿತ್ತು. ವ್ಯವಸಾಯದ ಕೆಲಸಕ್ಕೆ ಗುಲಾಮರು ಹೇರಳವಾಗಿದ್ದರು. ಇದರಿಂದ ಗ್ರೀಕ್ ನಗರಗಳಲ್ಲಿ ಹೆಚ್ಚು ಕೆಲಸವಿಲ್ಲದೆ ಬಿಡುವಿದ್ದ ಮನೆತನಗಳೇ ಹೆಚ್ಚಾಗಿದ್ದವು. ಇಂಥವರಲ್ಲಿ ವಿಚಾರ ಕುತೂಹಲವೂ ಕಾವ್ಯ, ನಾಟಕ, ಸಂಗೀತ, ನೃತ್ಯ, ಶಿಲ್ಪ ಮುಂತಾದ ಕಲೆಗಳೂ ಬೆಳೆದು ಬಂದದ್ದು ಆಶ್ಚರ್ಯವೇನೂ ಅಲ್ಲ.

ಈ ಕಾಲದಲ್ಲಿ ವಾಕ್ಚಾತುರ್ಯವನ್ನೂ ಸಭೆಗಳನ್ನೂ ವಶಮಾಡಿಕೊಳ್ಳುವ ರೀತಿನೀತಿಗಳನ್ನೂ ಒಟ್ಟಿನಲ್ಲಿ ಏಳಿಗೆ ಪಡೆದು ಜೀವನ ಸಾರ್ಥಕ ಮಾಡಿಕೊಳ್ಳುವ ಮಾರ್ಗಗಳನ್ನೂ ಶಾಸ್ತ್ರರೀತಿಯಲ್ಲಿ ಹೇಳಿಕೊಡಲು ಸೋಫಿಸ್ಟರೆಂಬ ಅಧ್ಯಾಪಕರು ಗ್ರೀಕ್ ನಗರಗಳಲ್ಲಿ ಮುಂದೆ ಬಂದರು. ಇವರಲ್ಲಿ ಹೊಸ ವಿಚಾರಸಂಭ್ರಮವೂ ಬುದ್ಧಿವಿಕಾಶ ಕೌಶಲವೂ ಆದರಣೀಯವಾಗಿತ್ತು. ಇವರು ಗ್ರೀಕ್ ಯುವಕರ ಮನಸ್ಸನ್ನು ಆಕರ್ಷಿಸಿದರು. ಭಾಷಾಶಾಸ್ತ್ರ, ಭಾಷಾಪ್ರಯೋಗಗಳಲ್ಲಿ ಪ್ರವೀಣರಾಗಿ ಜನರಿಗೆ ಬೇಕಾದ ವ್ಯವಹಾರಕೌಶಲವನ್ನು ಕೂಡ ಬೋಧಿಸುವ ವೃತ್ತಿಯನ್ನು ಇವರು ಕಲ್ಪಿಸಿಕೊಂಡರು. ಇವರಿಗಿಂತ ಮುಂಚೆ ವಿದ್ಯೆ ಕಲಿಸುವುದು ಜೀವನೋಪಾಯವಾಗಿರಲಿಲ್ಲ. ಆದ್ದರಿಂದ ಇವರು ಪ್ರಾರಂಭಿಸಿದ ಪದ್ಧತಿಗೆ ಅಷ್ಟು ಗೌರವವಿರಲಿಲ್ಲ. ಪ್ಲೇಟೋವಿನ ಗ್ರಂಥಗಳಲ್ಲಿ ಈ ಸೋಫಿಸ್ಟರ ವಿಷಯವಾಗಿ ಅಗೌರವವೂ ಖಂಡನೆಯೂ ಸೂಚಿತವಾಗಿದೆ. ಪ್ಲೇಟೋವಿನ ಗುರುವಾದ ಸಾಕ್ರಟೀಸನು ವಿಚಾರಮಥನಕ್ಕೆ ತನ್ನ ಜೀವವನ್ನೆಲ್ಲ ಧಾರೆಯೆರೆದು ತನ್ನ ಸ್ವಂತ ವೃತ್ತಿಯಾದ ಶಿಲ್ಪವನ್ನು ಸಾಕಷ್ಟು ಅನುಸರಿಸದೆ ದರಿದ್ರಾವಸ್ಥೆಯಲ್ಲಿಯೇ ಕಾಲಕಳೆದನು. ಇವನ ಕಾಲವೆಲ್ಲ ಸೋಫಿಸ್ಟರೊಡನೆಯೂ ಇತರ ಸಂಗಾತಿಗಳೊಡನೆಯೂ ವಿಚಾರ ನಡೆಸುವುದರಲ್ಲಿ ಕಳೆದರೂ, ಸಾಕ್ರಟೀಸನು ತನ್ನ ಶ್ರಮಕ್ಕೆ ಪ್ರತಿಫಲವಾಗಿ ಹಣ ತೆಗೆದುಕೊಳ್ಳುತ್ತಿರಲಿಲ್ಲ. ಪಾಠಹೇಳಿ ಹಣ ಸಂಪಾದಿಸುವುದು ಇವನಿಗೆ ಮುಖ್ಯವಾಗಿರಲಿಲ್ಲ. ತತ್ತ್ವಾನ್ವೇಷಣೆಯೇ ಇವನ ಜೀವನದ ಸಾರಸರ್ವಸ್ವವಾಗಿತ್ತು.

ಹಿಂದೆ ಧರ್ಮಕ್ಕೆ ಆಧಾರವಾಗಿದ್ದದ್ದು. ಆಸ್ತಿಕ್ಯಬುದ್ಧಿ, ದೇವರಲ್ಲಿ ಭಯಭಕ್ತಿ, ಇದು ಈ ಹೊಸ ಯುಗದಲ್ಲಿ ಸ್ವತಂತ್ರ ಬುದ್ಧಿವ್ಯಾಪಾರಕ್ಕೆ ವಿಷಯವಾಗಿ ಸಂಶಯಗ್ರಸ್ತವಾಯಿತು. ದೇವರು ಇದ್ದಾನೆಯೋ ಇಲ್ಲವೋ ಎಂಬುದೇ ಮುಖ್ಯ ಪ್ರಶ್ನೆಯಾಗಿಹೋಯಿತು. ಒಂದುವೇಳೆ ಇದ್ದರೂ ಅಂಥ ಸರ್ವಪ್ರಪಂಚಗಳ ನಾಯಕನಾದ ಈಶ್ವರನಿಗೆ ಕೇವಲ ಅಲ್ಪಪ್ರಾಣಿಗಳಾದ ಮಾನವ ವರ್ಗದವರ ಸುಖದುಃಖಗಳಲ್ಲಿ ಆಸಕ್ತಿ ಕುತೂಹಲಗಳಿರುವುದು ಅಸಂಭವ ಎಂಬ ಭಾವನೆ

ಎಲ್ಲೆಲ್ಲಿಯೂ ಹರಡಿತ್ತು. ನಮ್ಮಲ್ಲಿ ವೇದಗಳಿದ್ದ ಹಾಗೆ ಗ್ರೀಕರಲ್ಲಿ ಹೋಮರ್ ಮಹಾಕವಿ ರಚಿಸಿದ ಮಹಾಕಾವ್ಯವು ಧರ್ಮಪ್ರತಿಪಾದನೆಗೂ ಆಚಾರಶೀಲಗಳ ಸಮರ್ಥನೆಗೂ ಮುಖ್ಯಾಧಾರವಾಗಿತ್ತು. 'ಇಲಿಯಡ್' ಮಹಾ ಕಾವ್ಯದ ಕಥಾವಸ್ತು ಪುರಾತನ ಗ್ರೀಕರಿಗೂ ಟ್ರೋಜನರಿಗೂ ನಡೆದ ಯುದ್ಧ, ನಮ್ಮಲ್ಲಿ ರಾಮಾಯಣ ಮಹಾಭಾರತಗಳಂತೆ ಗ್ರೀಕರಲ್ಲಿ ಈ ಗ್ರಂಥಕ್ಕೆ ಮನ್ನಣೆಯಿತ್ತು ಈ ಕಾವ್ಯದಲ್ಲಿಯೂ 'ಹೆಸಿಯಡ್' ಎಂಬ ಮತ್ತೊಬ್ಬ ಪೌರಾಣಿಕ ಕವಿ ರಚಿಸಿದ ಗ್ರಂಥದಲ್ಲಿಯೂ ದೇವತಾ ವಿಚಾರವಾಗಿ ಗ್ರೀಕರಲ್ಲಿ ಅನೂಚಾನವಾಗಿ ಪ್ರಚಲಿತವಾಗಿದ್ದ ಅಭಿಪ್ರಾಯಗಳು ಚಿತ್ರಿತವಾಗಿವೆ. ಇವುಗಳಲ್ಲಿ ಪ್ರಸ್ತಾಪವಾಗಿರುವ ಒಲಂಪಸ್ ಪರ್ವತವಾಸಿಗಳಾದ ಝ್ಯೂಸ್, ಅಪಾಲೊ, ಅಥೀನಾ ಮೊದಲಾದ ದೇವತೆಗಳ ಪುರಾಣವೇ ಗ್ರೀಕರಿಗೆ ವೇದ ಸಮಾನವಾದ ಅಧಿಕಾರ ಗ್ರಂಥವಾಗಿತ್ತು. ಇದರಲ್ಲಿ ಪ್ರತಿಪಾದನೆ ಮಾಡಿರುವ ಆದರ್ಶಗಳೂ ಉಪದೇಶಗಳೂ ಗ್ರೀಕರಲ್ಲಿ ಧರ್ಮಬೋಧನೆಗೆ ಆಧಾರವಾಗಿತ್ತು. ಆ ದೇವತೆಗಳ ವಿಷಯದಲ್ಲಿ ಸಂಶಯವು ವಿಚಾರಪರರಲ್ಲಿಯೂ ಮೇಧಾವಿಗಳಲ್ಲಿಯೂ ಹರಡಿದರೆ, ಸಾಮಾನ್ಯ ಜನರ ಧರ್ಮಬುದ್ಧಿಯು ಕೆಡುವುದೇನು ಅಸಂಭವವಲ್ಲ, ಆಶ್ಚರ್ಯಕರವಲ್ಲ. ಎತ್ತುಗಳಿಗೂ ಕುದುರೆಗಳಿಗೂ ಕೈಯಿದ್ದು ಚಿತ್ರ ಬರೆಯುವ ಶಕ್ತಿಯಿದ್ದಿದ್ದರೆ, ದೇವತೆಗಳ ಆಕಾಶವನ್ನು ಎತ್ತುಗಳು ಎತ್ತುಗಳಂತೆಯೂ ಕುದುರೆಗಳು ಕುದುರೆಗಳಂತೆಯೂ ಚಿತ್ರಿಸುತ್ತಿದ್ದವು – ಎಂದು ಸೆನೊಫೇನ್ಸ್ ಎಂಬವನು ಹೇಳಿದ್ದಾನೆ. ಈ ದೃಷ್ಟಿಯಿಂದ ಝ್ಯೂಸ್, ಅಪಾಲೋ, ಅಥೀನಾ ಮುಂತಾದ ದೇವತೆಗಳು ಜನತೆಯ ಮನೋರಾಜ್ಯದಲ್ಲಿ ಕರಗಿ ಮಾಯವಾಗುವುದು ನ್ಯಾಯವಾಗಿಯೇ ಇದೆ.

ಧರ್ಮಭಾವನೆಗೆ ದೇವತೆಗಳ ಆಧಾರವಿಲ್ಲದಿದ್ದರೆ 'ಧರ್ಮ ಎಂಬುದು ದೇವತೆಗಳ ಅಜ್ಞೆ' ಎಂಬ ನಂಬಿಕೆ ನಶಿಸಿಹೋಗುವುದು ಸಹಜವೇ ಆಗಿದೆ. ಇಂಥ ಸಂದರ್ಭದಲ್ಲಿ ವಿಚಾರವಾಹಿನಿಯೂ ಎರಡು ಕವಲುಗಳಾಗಿ ಬೇರ್ಪಟ್ಟು ಭಿನ್ನದಿಕ್ಕುಗಳಲ್ಲಿ ಹರಿಯುತ್ತದೆ. ಒಂದು ಕವಲು ವಿಚಾರವನ್ನು ಮುಂದೆ ಸಾಗಿಸಿ, "ಸಮಸ್ತ ದೇವತೆಗಳ ಹಿಂದೆ, ಸಮಸ್ತ ಪ್ರಪಂಚಗಳ ಹಿಂದೆ, ಸರ್ವಾಂತರ್ಯಾಮಿಯಾದರೂ ಸರ್ವದೃಶ್ಯಪ್ರಪಂಚಗಳನ್ನೂ ಮೀರಿದ ಒಂದು ಪರವಸ್ತುವಿದೆ. ಆ ವಸ್ತು ಚೈತನ್ಯಸ್ವರೂಪವುಳ್ಳದ್ದು, ಧರ್ಮಾಚರಣೆಯೆಂಬ ವ್ಯಾಪಾರ ಆ ಪರವಸ್ತುವು ನಮ್ಮ ಜೀವನದಲ್ಲಿ ಆವಿಷ್ಕಾರ ಮಾಡತಕ್ಕ ಮಾರ್ಗ ವಿಶೇಷ" ಎಂದು ನಿರೂಪಿಸುತ್ತದೆ. ಈ ಧೋರಣೆಯ ಪ್ರಕಾರ ಹೋಮರನ ದೇವತೆಗಳು ಬಲಹೀನರಾದರೂ ಅವರಿಗಿಂತ ಪ್ರಬಲನಾದ ಈಶ್ವರನೊಬ್ಬನು ಗ್ರೀಕರ ಮನೋರಾಜ್ಯದಲ್ಲಿ ಕಾಣಿಸಿಕೊಳ್ಳುತ್ತಾನೆ, ಹೋಮರನನ್ನು ಸಭಾಮಂಟದಿಂದ ಹೊರಡಿಸಿ ಅವನಿಗೆ ಚಾವಟಿಯೇಟು ಕೊಡಬೇಕು–ಎಂದು ಹೆರಾಕ್ಲೈಟಸ್ ಎಂಬ ವಿಚಾರಕನು ಬರೆದಿದ್ದಾನೆ. ಹೋಮರನ ದೇವತೆಗಳು ಕಲ್ಪಿತವ್ಯಕ್ತಿಗಳಾದರೂ ಎಲ್ಲ ಪದಾರ್ಥಗಳಲ್ಲಿಯೂ ಇದ್ದು ಪ್ರೇರಣೆ ಮಾಡುವ ದೈವಸ್ವರೂಪವಾದ ವಸ್ತುವೊಂದಿದೆಯೆಂದು ಹೆರಾಕ್ಲೈಟಸನೇ ಮತ್ತೊಂದು ಕಡೆ ಹೇಳಿದ್ದಾನೆ. ಅಂಥ ಅತೀಂದ್ರಿಯ ಚೈತನ್ಯವಸ್ತುವನ್ನು ತಿಳಿಯುವುದೇ ಜ್ಞಾನವೆಂದೂ, ಮಾನವರಲ್ಲಿ ಸನ್ಮಾನಹೊಂದಿದ ಎಲ್ಲ ಧರ್ಮಶಾಸನಗಳೂ ಆ

ವಸ್ತುವಿನಿಂದ ಪುಷ್ಟಿಹೊಂದುವುವೆಂದೂ, ಇಂಥ ಜ್ಞಾನವನ್ನು ನಾಗರಿಕರು ತಮ್ಮ ನಗರದ ಕೋಟೆ ಕೊತ್ತಲಗಳನ್ನು ರಕ್ಷಣೆಮಾಡಿ ಕೊಳ್ಳುವಂತೆ ರಕ್ಷಣೆ ಮಾಡಿಕೊಳ್ಳಬೇಕೆಂದೂ, ಇಂಥ ಜ್ಞಾನನಿಷ್ಠವಾದ ಶಾಸನವು ಜನರ ರಕ್ಷಣೆಗೆ ಅವರ ಕೋಟೆಗಳಿಗಿಂತ ಹೆಚ್ಚು ಸಹಕಾರಿಯಾದದ್ದೆಂದೂ ಮುಂತಾಗಿ ಹೆರಾಕ್ಲೈಟಸನೇ ಪ್ರತಿಪಾದಿಸುತ್ತಾನೆ.

ಹೀಗೆಯೇ ನಮ್ಮಲ್ಲಿಯೂ ಇಂದ್ರ, ಅಗ್ನಿ, ವರುಣ ಮೊದಲಾದ ದೇವತೆಗಳ ಪ್ರಭಾವವು ಕಡಮೆಯಾಗಿ, ಸಮಸ್ತ ಪ್ರಪಂಚಗಳಲ್ಲಿಯೂ ಸಮಸ್ತ ದೇವಗಣಗಳಲ್ಲಿಯೂ ಜೀವರಾಶಿಗಳಲ್ಲಿಯೂ ಅಂತರ್ಯಾಮಿಯಾಗಿ ನಿಂತು, ಅವನ್ನೆಲ್ಲ ಮೀರಿಸಿ, ಸೃಷ್ಟಿಸ್ಥಿತಿಲಯ ಬಂಧ ಮೋಕ್ಷಗಳಿಗೆ ಕಾರಣವಾದ ಬ್ರಹ್ಮವೆಂಬ ಪರವಸ್ತುವು ವೇದಾಂತಶಾಸ್ತ್ರದ ವಿಚಾರ ಪ್ರಪಂಚದಲ್ಲಿ ಪ್ರತಿಪಾದಿತವಾಗಿದೆ.

ಇದಕ್ಕೆ ಪ್ರತಿಯಾಗಿ ಧರ್ಮಾನುಭವಕ್ಕೆ ಆಧಾರವು ಪ್ರಕೃತಿ ಸ್ವಭಾವದಲ್ಲಿಯೇ ಅಡಗಿದೆ ಎಂಬುದು ಎರಡನೆಯ ಕವಲು. ಮೊದಲನೆಯದು ಆತ್ಮವಾದ ಅಥವಾ ಆತ್ಮಪ್ರಧಾನವಾದವಾದರೆ, ಎರಡನೆಯದು ಪ್ರಕೃತಿವಾದವೆನ್ನಿಸಿಕೊಳ್ಳುತ್ತದೆ. ಪಂಚಭೂತಗಳು ಪ್ರಕೃತಿಯ ರೂಪಾಂತರವಾದ್ದರಿಂದ ಈ ವಿಚಾರವಾಹಿನಿಯನ್ನು ಭೌತವಾದವೆಂದೂ ಕರೆಯಬಹುದು.

ಸೋಫಿಸ್ಟ್ ಅಧ್ಯಾಪಕರಲ್ಲಿ ಈ ಎರಡನೆಯ ತತ್ತ್ವವೇ ಮೇಲುಗೈಯಾಗಿತ್ತು. ಏಕೆಂದರೆ, ಎಲ್ಲೆಲ್ಲಿಯೂ ತತ್ತ್ವವಿಷಯದಲ್ಲಿ ತೊಡಗಿದ ಬುದ್ಧಿವ್ಯಾಪಾರದ ಮೊದಲನೆಯ ಪರಿಣಾಮವೆಂದರೆ, ನಾಸ್ತಿಕ್ಯ. ಅತೀಂದ್ರಿಯವಾದ ಅಲ್ಲದೇ ಬುದ್ಧಿಪ್ರಯೋಗಕ್ಕೆ ನಿಲುಕದ ವಸ್ತುವು ಇರಲಾರದೆಂಬ ಪ್ರತೀತಿಯು ಆಲೋಚನಾಕ್ರಮದಲ್ಲಿ ಮೊದಲು ಕಾಣಬರುವುದು ಸಹಜ. "ನನಗೆ ಕುದುರೆ ಎಂಬುದು ಕಾಣುತ್ತದೆ; ಕುದುರೆತನ ಎಂಬ ತತ್ತ್ವ ಕಾಣುವುದಿಲ್ಲ" ಎಂದ ಒಬ್ಬ ವಾದಿಗೆ, ಪ್ಲೇಟೋ, "ಅದು ಏಕೆಂದರೆ, ನಿನಗೆ ಕಣ್ಣೆಂಬ ಇಂದ್ರಿಯವೇನೋ ಇದೆ; ಆದರ ಹಿಂದೆ ಬುದ್ಧಿ ಎಂಬುದು ಇಲ್ಲ" ಎಂದು ಉತ್ತರ ಕೊಡುತ್ತಾನೆ.

ಸಾಕ್ರಟೀಸನ, ಕಾಲಕ್ಕೆ ಪೂರ್ವದಲ್ಲಿ ಪ್ರಬಲವಾಗಿದ್ದ ವಿಚಾರ ಲಹರಿಯು ಬಾಹ್ಯಪ್ರಪಂಚವನ್ನು ಕುರಿತದ್ದು; ಪ್ರಕೃತಿಯ ಸ್ವರೂಪ ಲಕ್ಷಣವನ್ನು ಶೋಧಿಸುವುದರಲ್ಲಿ ಆಸಕ್ತಿ ಹೊಂದಿದ್ದದ್ದು. ಪ್ರಕೃತಿಯ ಸಾರಭೂತವಾದ ದ್ರವ್ಯವನ್ನು ನೀರೆಂದೂ ವಾಯುವೆಂದೂ ಅಗ್ನಿಯೆಂದೂ ಆಕಾಶವೆಂದೂ ಪ್ರತಿಪಾದಿಸುವ ನಾನಾವಿಧವಾದ ವಾದಗಳು ಹೊರಟಿದ್ದವು. ಪ್ರಕೃತಿ ಸ್ವರೂಪವು ಕ್ಷಣಿಕ ಸ್ವಭಾವವುಳ್ಳ ಪ್ರವಾಹವೆಂದು ಕೆಲವರೂ ಸ್ಥಾಯಿಯಾದ ಅತೀಂದ್ರಿಯ ವಸ್ತುವೆಂದು ಕೆಲವರೂ ವಾದಿಸುತ್ತಿದ್ದರು.

ಇವೆಲ್ಲ ನೀರಸವೆಂದೂ ಅಪ್ರಯೋಜಕವೆಂದೂ ಮನುಷ್ಯನ ಏಳಿಗೆಗೆ ಉಪಯೋಗವಾಗುವ ಸಿದ್ಧಾಂತಗಳಲ್ಲವೆಂದೂ ಸಾಕ್ರಟೀಸನಿಗೆ ಭಾಸವಾಯಿತು. ಮನುಷ್ಯನು ಹೇಗೆ ತನ್ನ ಜೀವನಪಥವನ್ನು ನಿರ್ಮಿಸಿಕೊಂಡು ಧರ್ಮಾಧರ್ಮಗಳ

ಸೂಕ್ಷ್ಮವನ್ನರಿತು ತನ್ನ ಜನ್ಮ ಸಾರ್ಥಕ್ಯವನ್ನು ಹೊಂದಬಹುದು?–ಎಂಬುದೇ ಶಾಸ್ತ್ರವಿಚಾರಕ್ಕೆ ಮುಖ್ಯವಾಗಿರಬೇಕಾದ ಧ್ಯೇಯವೆಂಬುದು ಸಾಕ್ರಟೀಸನ ದೃಷ್ಟಿ. ಇವನಿಗೆ ಪ್ರಕೃತಿವಾದವು ರುಚಿಸಲಿಲ್ಲ. ಪ್ಲೇಟೋ ಸಾಕ್ರಟೀಸನ ಶಿಷ್ಯ.

ಭಾರತದಲ್ಲಿ ವಿಚಾರವಾಹಿನಿಯು ವೇದಕಾಲದ ದೇವತೆಗಳು, ಭೂರ್ಭುವಸ್ಸ್ವರ್ಲೋಕಗಳಲ್ಲಿ ತೋರುವ ಋತ–ಇವುಗಳ ದೃಶ್ಯದಿಂದ ಜೀವಾತ್ಮತತ್ತ್ವದ ಜಿಜ್ಞಾಸೆಯ ಕಡೆಗೆ ಹೇಗೆ ತಿರುಗಿತೋ ಹಾಗೆಯೇ ಸಾಕ್ರಟೀಸ್ ಪ್ಲೇಟೋಗಳ ವಿಚಾರವಾಹಿನಿಯು ಪಂಚಭೂತಗಳ ದೃಶ್ಯದಿಂದ ಜೀವಾತ್ಮನ ತತ್ತ್ವಶೋಧನೆಯ ಕಡೆಗೆ ಹರಿಯಿತು.

ಸೋಫಿಸ್ಟರು ಪ್ರಕೃತಿವಾದಿಗಳೆಂದು ಸೂಚಿಸಿದ್ದೇವಷ್ಟೆ. ರಿಪಬ್ಲಿಕ್ ಗ್ರಂಥದಲ್ಲಿ ಥ್ರಾಸಿಮಾಕಸ್ ಎಂಬ ಸೋಫಿಸ್ಟನು ಸಂವಾದದ ಆರಂಭದಲ್ಲಿ ಧರ್ಮಸ್ವರೂಪವೇನೆಂಬ ಪ್ರಶ್ನೆಗೆ ಪೂರ್ವಪಕ್ಷವನ್ನು ಮಂಡಿಸುತ್ತಾನೆ. ಧರ್ಮವೆಂದರೆ, 'ಬಲಿಷ್ಠರ ಇಷ್ಟಸಾಧನ' ಎಂದು ಘೋಷಿಸುತ್ತಾನೆ. ಧರ್ಮವೆಂದರೆ 'ಈಶ್ವರನ ಅಜ್ಞೆ, ಇಲ್ಲವೆ ಜೀವನ ಆತ್ಮಸ್ವರೂಪದ ಆವಿರ್ಭಾವ ಮಾರ್ಗ, ಮೋಕ್ಷಕ್ಕೆ ಸೋಪಾನ' –ಈ ಮೊದಲಾದ ಅಭಿಪ್ರಾಯಗಳಿಗೆ ಥ್ರಾಸಿಮಾಕಸನ ಧೋರಣೆಯಲ್ಲಿ ಆಧಾರ ಸಿಕ್ಕುವುದಿಲ್ಲ. 'ಧರ್ಮವೆನ್ನುವುದು ಒಂದಿದೆ, ಅದನ್ನು ನಾವು ಜೀವನದಲ್ಲಿ ಅನುಸರಿಸಿದರೆ ಶ್ರೇಯಸ್ಸುಂಟಾಗುವುದು' ಎಂಬ ತತ್ತ್ವವನ್ನು ನಾವು ಸಮರ್ಥಿಸಬೇಕಾದರೆ ಥ್ರಾಸಿಮಾಕಸನ ಪ್ರಕೃತಿವಾದಕ್ಕನುಗುಣವಾದ ಮಂಡನೆಗೆ ಉತ್ತರ ಕೊಡಬೇಕು.

ರಾಜ್ಯದ ಶಾಸನಗಳೆಲ್ಲ ಬಲಿಷ್ಠರ ಅನುಕೂಲಕ್ಕೆ ಹೊರಟ ವಿಧಿಗಳಾದರೆ ಅವುಗಳಿಗೆ ವಿಧೇಯರಾಗಿ ನಿಂತ ಸಾಮಾನ್ಯ ಜನರಿಗೇನು ಪ್ರಯೋಜನ? – ಎಂಬ ಪ್ರಶ್ನೆಯೇಳುತ್ತದೆ. ಅಲ್ಲದೆ ಜನರು ತನ್ನ ತಮ್ಮೊಳಗೆ ಮಾಡಿಕೊಂಡಿರುವ ಅನ್ಯೋನ್ಯ ಸಂಬಂಧ ನಿಯಮಗಳು ಕೂಡ ಬಲಿಷ್ಠರ ರಾಜಶಾಸನಕ್ಕೆ ಒಳಪಟ್ಟೆ ಇರಬೇಕಾಗುವುದು. ಮಾತಾಪಿತೃಗಳಿಗೂ ಗುರುಹಿರಿಯರಿಗೂ ವಿಧೇಯರಾಗಿರಬೇಕೆಂಬ ಧರ್ಮವೂ ಕೂಡ, ರಾಜನಿಗೆ ವಿಧೇಯರಾಗಿ ಅವನಿಗೆ ಅನುಕೂಲರಾಗಿರಬೇಕು – ಎಂದು ಸಾರುವ ಧರ್ಮಕ್ಕೆ ಅಂಗವಾಗಿ ಸಾರ್ಥಕ್ಯ ಹೊಂದಬೇಕಾಗುತ್ತದೆ.

ಈ ವಾದವೇನೋ ಈಗಿನವರಿಗೆ ಹೊಸದಲ್ಲ. ಈಗ ಪ್ರಬಲವಾಗಿರುವ ಕಾರ್ಲ್‌ಮಾರ್ಕ್ಸನ ಸಾಮ್ಯವಾದದ ತತ್ತ್ವವೂ ಈ ರೀತಿಯದೇ: ಹಿಂದಿನ ಧರ್ಮಗಳೆಲ್ಲ ಬಲಿಷ್ಠರ ಅಥವಾ ಆಳುವ ಜನರ, ರಾಜವರ್ಗದವರ, ಬಂಡವಾಳಗಾರರ ಅನುಕೂಲಕ್ಕಾಗಿ ಹೊರಟ ಕಟ್ಟಳೆಗಳು. ಆಳುವವರು ತಮ್ಮ ಸ್ವಾಸ್ಥ್ಯಕ್ಕೂ ಏಳಿಗೆಗೂ ಸಾಧಕಗಳಾದ ಶಾಸನ ಪದ್ಧತಿಗಳನ್ನೂ ಆರ್ಥಿಕರಂಗದಲ್ಲಿಯೂ ರಾಜಕೀಯ ರಂಗದಲ್ಲಿಯೂ ಮತ ವಿದ್ಯಾಭ್ಯಾಸ ಆಚಾರ ವ್ಯವಹಾರಗಳಲ್ಲಿಯೂ ಪ್ರಚಾರ ಮಾಡುತ್ತಾರೆ. ಮಿಕ್ಕವರು ಮನಸ್ಸೊಪ್ಪಿಯೋ ಒಪ್ಪದೆಯೋ ಅವನ್ನು ಮನ್ನಿಸಿ ನಡೆಸಿಕೊಂಡು ಬರುತ್ತಾರೆ.

ಶಾಸನಗಳ ವಿಚಾರವಲ್ಲದೆ ಜನರ ಯೋಚನೆಯ ಸ್ವಭಾವವು ಕೂಡ ಅವರವರ ಇಷ್ಟಸಾಧನಕ್ಕೇ ಅಧೀನವಾಗಿರುತ್ತದೆ. ಮನಸ್ಸಿನ ಓಟವೂ ಅವನ ವರ್ಗಾಧೀನವಾಗಿಯೇ ಇರುತ್ತದೆ. ಐಶ್ವರ್ಯವಂತನಾಗಿ ಇತರರ ಸೇವೆಯ ಮುಲಕ ಜೀವನ ನಡಸುವ ವರ್ಗದವರ ಆಲೋಚನಾಪರಂಪರೆಗಳೇ ಬೇರೆ, ಅವರ ಮುಂದೆ ಸುಳಿಯುವ ತತ್ತ್ವತರಂಗಗಳೇ ಬೇರೆ; ಸೇವಾವೃತ್ತಿಯಿಂದ ಜೀವಿಸುವವರ ಯೋಚನೆಗಳೇ ಬೇರೆ, ಅವರೆನ್ನು ಪ್ರೇರಿಸುವ ಚಿತ್ತವೃತ್ತಿಯೇ ಬೇರೆ.

ಧರ್ಮ ಹೇಗೆ ಇಷ್ಟಸಾಧನ ಮಾರ್ಗವೋ ಹಾಗೆಯೇ ಸತ್ಯವೂ ಇಷ್ಟಸಾಧನ ಮಾರ್ಗ. ಧರ್ಮವೇ ಆಗಲಿ ಸತ್ಯವೇ ಅಗಲಿ ಮನಷ್ಯನ ಅನುಭವದಲ್ಲಿ ಅಧಿಕಾರ ರೂಪದಿಂದ ತೋರಿಬಂದರೂ, ಅವು ಮನುಷ್ಯನ ಸ್ವಭಾವಕ್ಕೆ ಅಧೀನವಲ್ಲದ ಸ್ವತಂತ್ರವಾದ ವಸ್ತುಗಳಲ್ಲ–ಎಂಬುದೇ ಈ ದೃಷ್ಟಿಯ ಪರ್ಯವಸಾನ.

ಆದ್ದರಿಂದ ಥ್ರಾಸಿಮಾಕನ ವಾದವನ್ನು ಸಾಕ್ರಟೀಸನು (ಅರ್ಥಾತ್ ಪ್ಲೇಟೋ) ಖಂಡಿಸಿ ನಿರಾಸಮಾಡಿದ ಹೊರತು ಧರ್ಮಕ್ಕೆ ಅಚಲವಾದ ಅಡಿಗಲ್ಲನ್ನು ಸ್ಥಾಪಿಸುವ ಸಂಭವವಿಲ್ಲ. ಹಾಗೆಯೇ ಈಗಿನ ಕಾಲದವರಾದ ನಾವು ಕಾರ್ಲ್‌ಮಾರ್ಕ್ಸನ ಪ್ರಕೃತಿವಾದದ ನೆರಳಿನಲ್ಲಿ ನಿರ್ಮಿತವಾದ ಧರ್ಮಸಾಪೇಕ್ಷಾವಾದವನ್ನು ಖಂಡನೆ ಮಾಡಿದ ಹೊರತು ಧರ್ಮಕ್ಕೆ ಶಾಶ್ವತ್ವವಾದ ಅಸ್ತಿವಾರವನ್ನು ಹಾಕಲಾರೆವು. ಧರ್ಮವೆಂಬುದು ಸತತವಾಗಿ ವಿಷಯಪ್ರಾಧಾನ್ಯವಾದ ಇಂದ್ರಿಯಸುಖಗಳಲ್ಲಿ ಅಂತರ್ಭಾವ ಹೊಂದಿ, ಇದಕ್ಕೆ ವ್ಯತಿರಿಕ್ತವಾದ ಆತ್ಮೋದ್ಧಾರದ ಮಾರ್ಗವನ್ನು ಖಚಿತವಾಗಿ ನಿರ್ದೇಶಮಾಡಲಾರದೆ ಹೋಗುತ್ತೇವೆ.

ಧರ್ಮವೆನ್ನುವುದು ಬಲಿಷ್ಠರ ಇಷ್ಟಸಾಧಕವಾದ ಶಾಸನ ಸಮೂಹವಲ್ಲ, ಎಲ್ಲರ ಆತ್ಮೋನ್ನತಿಗೂ ಸಾಧಕವಾದ ಮಾರ್ಗ – ಎಂಬುದು ಪ್ಲೇಟೋವಿನ ಸಿದ್ಧಾಂತ. ಇಲ್ಲಿ ಧರ್ಮವೆಂದರೆ ಮುಖ್ಯವಾಗಿ ನೀತಿ, ಸಮಾಜದಲ್ಲಿ ಸಮರಸ ವನ್ನೇರ್ಪಡಿಸುವ ಪದ್ಧತಿಗಳು, ನಡತೆಗಳು, ಧರ್ಮವೆಂಬ ಪದಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ಎರಡರ್ಥಗಳು ಸೇರಿಕೊಂಡಿವೆ. ಒಂದು, ದೇವರ ವಿಚಾರದಲ್ಲಿ ಜನರಲ್ಲಿರುವ ಅಭಿಪ್ರಾಯ, ನಡವಳಿಕೆ, ಪೂಜೆ ಪುರಸ್ಕಾರಗಳ ನಿಯಮ. ಇನ್ನೊಂದು ಜನರಲ್ಲಿ ಒಬ್ಬರಿಗೊಬ್ಬರು ತೋರಿಸಬೇಕಾದ ವಿನಯ, ಸೌಹಾರ್ದ. ಮೊದನೆಯದರಲ್ಲಿ ಮತ ಪ್ರಧಾನ; ಎರಡನೆಯದರಲ್ಲಿ ನೀತಿ ಪ್ರಧಾನ.

ಪ್ಲೇಟೋವಿನ ವಿಚಾರ ಕ್ರಮದಲ್ಲಿ ಈ ಎರಡು ಅರ್ಥಗಳೂ ಇವೆ. ಇದ್ದರೂ ರಾಜಕೀಯ ತತ್ತ್ವಗಳನ್ನು ಪರೀಕ್ಷೆ ಮಾಡುವ ಸಂದರ್ಭಗಳಲ್ಲಿ ಎರಡನೆಯ ಅರ್ಥವಾದ ನೀತಿ, ನಡತೆ, ವಿನಯ, ಸಮಾಜದ ಸಂಪ್ರದಾಯಗಳು, ರಾಷ್ಟ್ರದ ಶಾಸನಗಳು – ಇವೇ ಮುಖ್ಯವಾಗಿ ಪ್ರತಿಪಾದನೆಗೆ ವಿಷಯವಾಗುವುವು.

ಪೂರ್ವಪಕ್ಷದ ಪ್ರಕಾರ, ಧರ್ಮವೆಂದರೆ ಸ್ವಾರ್ಥಸಾಧನೆಯ ಮಾರ್ಗ, ಬಲಿಷ್ಠರು ತಮ್ಮ ಇಷ್ಟವನ್ನು ನೇರವಾಗಿ ನೆರವೇರಿಸಿಕೊಳ್ಳುತ್ತಾರೆ. ಬಲಹೀನರು

ಬಲಿಷ್ಠರು ಅನುಕೂಲಕ್ಕೆ ನೆರವಾಗಿ ಆ ಮೂಲಕ ತಮಗೆ ದೊರೆಯಬಹುದಾದ ರಕ್ಷಣೆ, ಸುಖ, ನೆಮ್ಮದಿಗಳನ್ನು ಸಂಪಾದಿಸಿಕೊಳ್ಳುತ್ತಾರೆ. ರಾಜರೇ ಮುಂತಾದ ಪ್ರಭುತ್ವದವರು ಇದಕ್ಕಾಗಿ ನಿಯಮಿಸಿರುವ ಶಾಸನಗಳೇ ಧರ್ಮದ ಶರೀರ. ಅನೇಕವೇಳೆ ಬಲಹೀನರಿಗೆ, ಪ್ರಜೆಗಳಿಗೆ ಇಂಥ ಪರಾಧೀನದಿಂದ ಕಷ್ಟ, ದುಃಖ ಪರಂಪರೆಗಳೇ ಹೆಚ್ಚಾಗಿ ಲಭಿಸುವ ಸಂಭವವಿದೆ. ಅಂಥ ಸಮಯದಲ್ಲಿ ಅವರು ಶಾಸನೋಲ್ಲಂಘನೆಗೆ ಪ್ರಯತ್ನ ಪಡುವುದು ಸಹಜವಾಗಿಯೇ ಇದೆ. ಅಂಥ ಶಾಸನಭಂಗದಿಂದ ಅವರು ಶಿಕ್ಷೆಗೆ ಗುರಿಯಾಗುತ್ತಾರೆ. ಆ ಶಿಕ್ಷೆಯನ್ನು ಬುದ್ಧಿವಂತಿಕೆಯಿಂದ ತಪ್ಪಿಸಿಕೊಳ್ಳುವ ಭರವಸೆಯಿದ್ದರೆ ತಪ್ಪಿಸಿಕೊಳ್ಳಬಹುದು. ಹಾಗೆ ಶಾಸನದ ಬಲೆಯಿಂದ ನುಸಿದು ತಪ್ಪಿಸಿಕೊಳ್ಳುವುದೂ ಇಷ್ಟಸಾಧನೆಯೇ ಆದುದರಿಂದ ಧರ್ಮಕ್ಕೆ ಸೇರಿದ ಕೆಲಸವೇ ಆಗುತ್ತದೆ. ಇಷ್ಟಸಾಧನೆಯೇ ಮೂಲತತ್ತ್ವ, ಶಾಸನ ಸಂಪ್ರದಾಯಗಳ ಅನುಸರಣೆ ಅದನ್ನು ನಮಗೆ ಗಳಿಸಿಕೊಡುವ ದಾರಿ, ರೀತಿ.

ಈ ಪ್ರತಿಪಾದನೆಯನ್ನು ಒಪ್ಪಲು ಪ್ಲೇಟೋವಿಗೆ ಮನಸ್ಸಿಲ್ಲ. ಇದಕ್ಕೆ ಪ್ರತಿಯಾದ ಮಾರ್ಗವನ್ನು ಅನೇಕ ವಿಧಗಳಲ್ಲಿ ಶೋಧನೆ ಮಾಡುತ್ತಾನೆ. ಹೀಗೆ ಧರ್ಮಸ್ವರೂಪವನ್ನು ಅನ್ವೇಷಣ ಮಾಡುವ ಸನ್ನಿವೇಶದಲ್ಲಿ ರಾಜಕೀಯ ತತ್ತ್ವದ ವಿಚಾರ ಅವನ ಮುಂದೆ ರೂಪುತಾಳುತ್ತದೆ. ನಾವು ಓದುವ ಪುಸ್ತಕದಲ್ಲಿ ಅಕ್ಷರಗಳು ತೀರ ಸಣ್ಣ ಸಣ್ಣವಾಗಿದ್ದರೆ ಅವನ್ನು ಸಾಕಷ್ಟು ವೇಗವಾಗಿ ಗುರುತಿಸಲು ಕಷ್ಟವಾಗಿ ನಮ್ಮ ಓದಿಗೆ ತಡೆಯಾಗುತ್ತದೆ. ಅವೇ ಅಕ್ಷರಗಳು ದೊಡ್ಡ ಪ್ರಮಾಣದಲ್ಲಿದ್ದರೆ ಸುಲಭವಾಗಿ ಓದಲು ಸೌಕರ್ಯವಾಗುತ್ತದೆ. ಹಾಗೆಯೇ, ಧರ್ಮವು ವ್ಯಕ್ತಿಗತ ರೂಪದಲ್ಲಿ ಸೂಕ್ಷ್ಮವಾಗಿದ್ದು ಅದರ ಸ್ವರೂಪವನ್ನು ಗುರುತಿಸುವುದು ವಿಚಾರಪರರಿಗೆ ಕಷ್ಟಸಾಧ್ಯವಾಗುತ್ತದೆ. ಥ್ರಾಸಿಮಾಕಸ್ ಮತ್ತು ಅವನಂತೆ ವಾದಮಾಡುವ ಇತರರು ಧರ್ಮದ ವಿಷಯವಾಗಿ ಮಂಡಿಸುವ ರೀತಿಯು ನಮಗೆ ಸಮಂಜಸವಾಗಿ ಕಾಣಬರದಿದ್ದರೂ ಅದರಲ್ಲಿ ಅಡಗಿರುವ ದೋಷವನ್ನು ಕಂಡು ಹಿಡಿದು ಎತ್ತಿ ತೋರಿಸಲು ನಮಗೆ ಕಷ್ಟಸಾಧ್ಯವಾಗಿ ತೋರುತ್ತದೆ. ಆದ್ದರಿಂದ ಅದೇ ಧರ್ಮ ಸ್ವರೂಪವು ಹೆಚ್ಚು ಪ್ರಮಾಣವುಳ್ಳ ಆಕಾರವನ್ನು ತಾಳಿರುವ ಪ್ರದೇಶವಿದ್ದರೆ, ನಾವು ದೊಡ್ಡ ಅಕ್ಷರಗಳನ್ನು ಗುರುತಿಸಿ ಓದುವ ಸೌಲಭ್ಯವು ತತ್ತ್ವಾನ್ವೇಷಣ ಕಾರ್ಯದಲ್ಲಿ ನಮಗೆ ಲಭಿಸುವುದು.

ಸಮಾಜ ಜೀವನವೇ ಧರ್ಮವು ಬೃಹದ್ರೂಪವನ್ನು ತಾಳುವ ಪಾತ್ರವಿಶೇಷ. ವ್ಯಕ್ತಿಜೀವನದಲ್ಲಿ ತೋರಿಬರುವ ಧರ್ಮಾಧರ್ಮಗಳ ಸ್ವಭಾವ, ಓಟ, ಗತಿ, ಕರ್ಮ, ಏಳಿಗೆ ಅವನತಿ – ಇವುಗಳ ಸೂಕ್ಷ್ಮ ತತ್ತ್ವಗಳೇ, ಸಮಾಜದಲ್ಲಿಯೂ, ವ್ಯಕ್ತವಾಗುವುವು. ಆದ್ದರಿಂದ ಪ್ಲೇಟೋ ರಿಪಬ್ಲಿಕ್ ಗ್ರಂಥದಲ್ಲಿ ಸಮಾಜ ಅಥವಾ ರಾಜ್ಯದಲ್ಲಿ ಧರ್ಮಾಧರ್ಮಗಳ ಪ್ರಭಾವವನ್ನು ಚಿತ್ರಿಸುವುದಕ್ಕೆ ತೊಡಗಿದ್ದಾನೆ.

* * *

ಲನೆಯ ಅಧ್ಯಾಯ

ರಾಜ್ಯದ ಮೂಲ ಮತ್ತು ಲಕ್ಷಣ

ವ್ಯಕ್ತಿಗಳಲ್ಲಿ ಒಳ್ಳೆಯವರೂ ಕೆಟ್ಟವರೂ ಇರುವಂತೆಯೇ ರಾಜ್ಯಗಳಲ್ಲಿಯೂ ಒಳ್ಳೆಯ ರಾಜ್ಯ, ಕೆಟ್ಟ ರಾಜ್ಯ ಎಂಬ ಭೇದಗಳಿವೆ. ಒಳ್ಳೆಯ ಮನುಷ್ಯನ ಮನೋವೃತ್ತಿಯಲ್ಲಿಯೂ ಕಾರ್ಯದಲ್ಲಿಯೂ ಧರ್ಮವು ರೂಪುಗೊಳ್ಳುತ್ತದೆ. ಅಂತೆಯೇ ಒಳ್ಳೆಯ ಸಮಾಜ ಅಥವಾ ರಾಜ್ಯದಲ್ಲಿಯೂ ಅದರ ಶಾಸನ ವ್ಯವಸ್ಥೆಯಲ್ಲಿಯೂ ಅದರ ಪ್ರಜೆಗಳ ವರ್ತನೆಯಲ್ಲಿಯೂ ಧರ್ಮವು ಅಭಿವ್ಯಕ್ತವಾಗುತ್ತದೆ. ಹೀಗೆ ಧರ್ಮವು ಸುವ್ಯವಸ್ಥಿತವಾಗಿ ನೆಲಸಿರುವ ರಾಜ್ಯದ ಆಕಾರವನ್ನು ನಿರ್ದಿಷ್ಟವಾಗಿ ವರ್ಣನೆ ಮಾಡಲು ಪ್ಲೇಟೋ ರಿಪಬ್ಲಿಕ್ ಗ್ರಂಥದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿಸುತ್ತಾನೆ.

ರಾಜ್ಯದ ಮುಖ್ಯ ಲಕ್ಷಣವೆಂದರೆ, ಅದಕ್ಕೆ ಸೇರಿದ ಜನರ ಪರಸ್ಪರ ಸಹಾಯ ಮತ್ತು ಆ ಜನರು ತಮ್ಮ ತಮ್ಮ ಸ್ವಭಾವಕ್ಕನುಗುಣವಾದ ವೃತ್ತಿಗಳನ್ನು ಅನುಸರಿಸುವುದು.

ರಾಜ್ಯವು ಮನುಷ್ಯನ ಸ್ವಭಾವಜನ್ಯವಾದ್ದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನಕ್ಕೆ ಬೇಕಾದ ಅತ್ಯಾವಶ್ಯಕ ಪದಾರ್ಥಗಳನ್ನು ತಾನೇ ಒದಗಿಸಿಕೊಳ್ಳಲು ಸಮರ್ಥನಾಗಿದ್ದಿದ್ದರೆ, ಸಮಾಜ ಜೀವನವೇ ಅಸಂಭವ. ಆಗ ಮನುಷ್ಯರು ಕುಟುಂಬ, ಕುಲ, ಬುಡಕಟ್ಟು, ಜನಾಂಗ, ಎಂದು ಮುಂತಾದ ಸಂಘ ಜೀವನದ ಬಲೆಗೆ ಬೀಳದೆ ಒಬ್ಬೊಂಟಿಗರಾಗಿ ಇದ್ದು ಬಿಡುತ್ತಿದ್ದರು. ಹೀಗೆ ಒಂಟಿಯಾಗಿ ಬಾಳತಕ್ಕ ಸ್ವಭಾವವುಳ್ಳ ಜೀವವು ಪ್ರಾಣಿಯೋ ಇಲ್ಲವೆ ದೇವತೆಯೋ ಆಗಿರಬೇಕೇ ಹೊರತು ಮನುಷ್ಯನಲ್ಲ–ಎಂದು ಅರಿಸ್ಟಾಟಲನು ಹೇಳಿದ್ದಾನೆ. ಮಾನವ ವ್ಯಕ್ತಿಯು ಇತರ ಸಹಜೀವಿಗಳ ಸಹಾಯಪಡೆದು ಸಮೂಹಗಳಲ್ಲಿ ಬಾಳಬೇಕಾಗಿದೆ. ಹೀಗಲ್ಲದೆ ಒಂಟಿಯಾಗಿ ಜೀವನ ನಡಸುವುದಕ್ಕೆ ಇವನಿಗೆ ಆಗುವುದಿಲ್ಲ. ತನ್ನ ಜೀವನವನ್ನು ತಾನು ನಿರ್ವಹಿಸಿ ಕೊಳ್ಳುವುದಕ್ಕೂ ಇತರರ ಸಹಾಯವು ಪ್ರತಿಯೊಬ್ಬ ಮಾನವನಿಗೂ ಅನಿವಾರ್ಯವಾಗಿದೆ. ಈ ಅಪೂರ್ಣತೆಯು ಇವನ ಸ್ವಭಾವಕ್ಕೇ ಸೇರಿದ ಲಕ್ಷಣ. ವ್ಯಕ್ತಿಯು ಅಪೂರ್ಣನಾದುದರಿಂದ ಸಮಾಜ ಜೀವನವನ್ನು ಅಪೇಕ್ಷಿಸುತ್ತಾನೆ. ವ್ಯಕ್ತಿಯಿಲ್ಲದೆ ಸಮಾಜವಿಲ್ಲವೆನ್ನುವುದೇನೋ ಸ್ವತಸ್ಸಿದ್ಧವಾಗಿ ವಿವಾದಕ್ಕೆ ಆಸ್ಪದವಿಲ್ಲದಂತೆ

ಎದ್ದು ಕಾಣುತ್ತದೆ. ಹಾಗೆಯೇ ಸಮಾಜವಿಲ್ಲದೆ ವ್ಯಕ್ತಿಯಿಲ್ಲವೆಂಬುದು ಅಷ್ಟು ಸ್ಪಷ್ಟವಾಗಿ, ನಿರ್ವಿವಾದವಾಗಿ ತೋರುವುದಿಲ್ಲ. ಆದರೂ ಇದೂ ಅಷ್ಟೇ ಸತ್ಯಾಂಶವುಳ್ಳದ್ದಾಗಿದೆ.

ಸಮಾಜ ಜೀವನವು ಹೇಗೆ ಆರಂಭವಾಯಿತು? ತತ್ಪರಿಣಾಮವಾಗಿ ರಾಜ್ಯಾಂಗವು ಹೇಗೆ ಉತ್ಪನ್ನವಾಯಿತು? – ಎಂಬ ವಿಷಯವನ್ನು ಊಹಿಸೋಣ; ರಾಜ್ಯವನ್ನು ನಮ್ಮ ಕಲ್ಪನೆಯಲ್ಲಿ ನಿರ್ಮಾಣ ಮಾಡೋಣ. ಹೀಗೆ ಮಾಡುವುದರಿಂದ ಸಮಾಜ ಜೀವನ ಮತ್ತು ರಾಜ್ಯ ಸ್ವರೂಪದಲ್ಲಿ ಅಡಗಿರುವ ತತ್ತ್ವಗಳು ಎದ್ದುಕಾಣುವ ಸಂಭವವಿದೆ–ಎಂದು ಸಾಕ್ರಟೀಸನು ರಿಪಬ್ಲಿಕ್ ಗ್ರಂಥದಲ್ಲಿ ಪೀಠಿಕೆ ಹಾಕುತ್ತಾನೆ. ಊಹೆ, ಕಲ್ಪನೆ ಎಂದ ಮಾತ್ರಕ್ಕೇ ರಾಜ್ಯವು ಕೃತಕವೆಂದಾಗಲಿ ಅನಾವಶ್ಯಕವೆಂದಾಗಲಿ ಒಪ್ಪಬೇಕಾಗಿಲ್ಲ. ಇದಕ್ಕೆ ಪ್ರತಿಯಾಗಿ ಮನುಷ್ಯನ ಸ್ವಭಾವದಲ್ಲಿಯೇ ಒಂಟಿ ಬಾಳಿಗೆ ಅವಕಾಶವಿಲ್ಲದಿರುವುದರಿಂದಲೂ, ಬಾಳಿಗೆ ಅತ್ಯಾವಶ್ಯಕವಾದ ಸಾಮಗ್ರಿಗಳನ್ನು ಹೊಂದಿಸಿಕೊಳ್ಳುವುದಕ್ಕೆ ಒಂಟಿ ಜೀವಕ್ಕೆ ಅಸಾಧ್ಯವಾದ್ದರಿಂದಲೂ ಸಮೂಹ ಜೀವನವು ಮನುಷ್ಯನ ಸ್ವಭಾವಕ್ಕೇ ಸೇರಿದ ಸತ್ಯಾಂಶವಾಗಿದೆ. ಇದು ಅವನ 'ಸತ್'ಎಂಬ ಅಸ್ತಿತ್ವಕ್ಕೇ ಸೇರಿದ ಅಂಶವಾಗಿದೆ. ಈ ಸತ್ಯವು ಮನುಷ್ಯನ ಹೊರ ಜೀವನಕ್ಕೆ ಮಾತ್ರ–ದೇಹ ಸಂಬಂಧವಾದ ಆಹಾರ, ಬಟ್ಟೆ, ನೆರಳು, ಮಳೆಗಾಳಿ ಶೀತೋಷ್ಣಗಳಿಂದ ರಕ್ಷಣೆ, ಇವುಗಳಿಗೆ ಮಾತ್ರ–ಸಂಬಂಧಿಸಿದೆ. ಅವನ ಆಂತರಿಕ ಸ್ವಭಾವಕ್ಕೆ ಸೇರಿಲ್ಲ ಎಂಬ ಶಂಕೆಗೂ ಆಧಾರವಿಲ್ಲ. ಮನುಷ್ಯನು ಪ್ರಾಣಿ ಜೀವ ಕೋಟಿಗೆ ಸೇರಿರುವುದರಿಂದ ಲಿಂಗಭೇದವು ಇವನ ಸ್ವಭಾವಕ್ಕೆ ಸೇರಿದ ಅಂಶವಾಗಿದೆ. ಗಂಡಿಗೆ ಹೆಣ್ಣು ಬೇಕು; ಹೆಣ್ಣಿಗೆ ಗಂಡು ಬೇಕು. ಇದು ಸಂತಾನಧಾರೆಯನ್ನು ಅವಿಚ್ಛಿನ್ನವಾಗಿ ನಡೆಸಿಕೊಡುವ ಹುಟ್ಟುಗುಣವೇನೋ ಸರಿ. ಆದರೂ ಇದರ ಪ್ರಭಾವ ಮನುಷ್ಯನ ಮನಸ್ಸನ್ನೂ ಆತ್ಮ ಬುದ್ಧಿಗಳನ್ನೂ ಆಕ್ರಮಿಸಿರುತ್ತದೆ. ಲಿಂಗಭೇದದಿಂದ ಕುಟುಂಬ ಜೀವನವುತ್ಪನ್ನವಾಗಿ ಮಾನವ ಸಂಸಾರವು ಬೆಳೆಯುವುದಲ್ಲದೆ, ವ್ಯಕ್ತಿ ಜೀವನದಲ್ಲಿ ಉತ್ತಮ ಸಂಸ್ಕಾರಕ್ಕೆ ಕಾರಣವಾಗುತ್ತದೆ. ಮಾತಾಪಿತೃಗಳ ವಾತ್ಸಲ್ಯ, ಒಡಹುಟ್ಟಿದವರ ಪರಸ್ಪರ ಅನುರಾಗ, ಕುಲಾಭಿಮಾನ, ರಾಷ್ಟ್ರಾಭಿಮಾನ, ಕೊನೆಗೆ ವಿಶ್ವದ ಸಮಸ್ತ ಜೀವರಾಶಿಗಳ ಮೇಲಿನ ಸೌಹಾರ್ದ–ಹೀಗೆ ಮನುಷ್ಯನ ಆತ್ಮವಿಸ್ತಾರದ ಚರಿತ್ರೆಯು ವಿಕಾಸಗೊಳ್ಳುವುದು ಈಶ್ವರನ ಉದ್ದೇಶವೋ ಎಂಬಂತಿರುವ ವಿಶ್ವವ್ಯವಸ್ಥೆಗೆ ಅಸ್ತಿವಾರವಾಗಿ ಪರಿಣಮಿಸುತ್ತದೆ. ದೇಹದಲ್ಲಿ ಉತ್ಪನ್ನವಾಗುವುದೂ ಸರ್ವಪ್ರಾಣಿವರ್ಗಕ್ಕೆಲ್ಲ ಸಮಾನವಾದ್ದೂ ಆದ ಹುಟ್ಟುಗುಣದ ರಾಗದ್ವೇಷಗಳಲ್ಲಿ ಅಡಗಿರುವ ಶಕ್ತಿಪ್ರಭಾವಗಳನ್ನು ಉಪಯೋಗಿಸಿಕೊಂಡು ಉತ್ತಮ ಜೀವನವನ್ನು ರಚಿಸಿಕೊಳ್ಳುವುದಕ್ಕೂ ಸಮಾಜ ಜೀವನವು ಅತ್ಯಾವಶ್ಯಕವಾಗಿದೆ. ದೇಹ ಪ್ರಾಣಿಗಳಿಗೂ ಇವಕ್ಕೆ ಸಂಬಂಧ ಪಟ್ಟ ಹುಟ್ಟುಗುಣಗಳೂ ಮನುಷ್ಯನ ಜೀವನಕ್ಕೆ ಮೊದಲನೆಯ ಸೋಪಾನ. ಅವುಗಳನ್ನು ಸ್ವಾಧೀನಪಡಿಸಿಕೊಂಡು ಸಂಸ್ಕೃತ ಜೀವನವನ್ನು ನಡಸುವುದು ಮೇಲಿನ ಸೋಪಾನಗಳು.

ಹೀಗೆ ಪರಸ್ಪರ ಸಹಾಯ, ವ್ಯಕ್ತಿಯ ಅಪೂರ್ಣತೆ–ಇವು ಸಮಾಜ ಜೀವನದ ಅಸ್ತಿವಾರವೆಂದು ಸ್ಪಷ್ಟವಾಗುತ್ತದೆ.

ಸಮಾಜ ಜೀವನದ ಆರಂಭವನ್ನು ಕಲ್ಪನಾದೃಷ್ಟಿಯಿಂದ ನೋಡಿದರೂ ಈ ವಿಷಯವು ಸ್ಪಷ್ಟವಾಗುವುದು. ಮೊದಲು ಮನುಷ್ಯರಿಗೆ ಆಹಾರಬೇಕು. ವ್ಯವಸಾಯಕ್ಕನುಕೂಲವಾದ ಒಂದು ಪ್ರದೇಶವು ಒಂದು ಜನಸಮುದಾಯಕ್ಕೆ ಸಿಕ್ಕಿದೆಯೆಂದು ಭಾವಿಸೋಣ. ವ್ಯವಸಾಯಕ್ಕೆ ಬೇಕಾದ ಎತ್ತೋ ಕುದುರೆಯೋ ಇವೆಯೆಂದು ಕೊಳ್ಳೋಣ. ಆದರೂ ಕೃಷಿಗಾರನಿಗೆ ಬೇಕಾದ ಎಷ್ಟೋ ಸಾಮಗ್ರಿಗಳಿವೆ. ನೇಗಿಲು, ಮನೆ ಕಟ್ಟುವುದಕ್ಕೆ ಮರದ ಸಾಮಾನು, ಮಚ್ಚು ಕೊಡಲಿ ಗುಳ ಮುಂತಾದ ಕಬ್ಬಿಣದ ಸಾಮಾನು – ಇವನ್ನೆಲ್ಲ ಕೃಷಿಗಾರನೇ ತಯಾರು ಮಾಡುತ್ತ ಕುಳಿತರೆ ವ್ಯವಸಾಯವು ಹದಗೆಡುತ್ತದೆ. ಆಹಾರದ ಜೊತೆಗೆ ಬಟ್ಟೆಯೂ ಅವಶ್ಯಕ. ಕುರಿಗಳಿವೆ ಎಂದು ಕೊಳ್ಳೋಣ. ಕುರಿ ಕಾಯುವುದೇ ಒಂದು ವೃತ್ತಿ. ಕುರಿಗಳನ್ನು ನೋಡಿಕೊಳ್ಳುತ್ತ ಅವುಗಳ ಉಣ್ಣೆಯನ್ನು ಕಾಲಕಾಲಕ್ಕೆ ತೆಗೆದು ಅದರಿಂದ ನೂಲುತೆಗೆದು ಮಗ್ಗ ಹಾಕಿ ಬಟ್ಟೆ ತಯಾರಿಸುವ ವೃತ್ತಿಮಾಡಿಕೊಂಡು ನಡಸುವುದಕ್ಕಾಗುವುದಿಲ್ಲ. ಹೀಗೆಯೇ ಪಾದರಕ್ಷೆ ಮೊದಲಾದ ಇತರ ಪದಾರ್ಥಗಳೂ ಅವಶ್ಯಕ. ಇವನ್ನೆಲ್ಲ ಕೃಷಿಗಾರ ತಾನೇ ಒಬ್ಬೊಂಟಿಗನಾಗಿ ಮಾಡಿಕೊಳ್ಳುವುದು ಅಸಾಧ್ಯ. ಹೀಗಾಗಿ ಸಮಾಜವು ಬೆಳೆಯುತ್ತಾ ಹೋಗುತ್ತದೆ; ಪರಸ್ಪರ ಸಹಾಯದ ಕ್ಷೇತ್ರ ವಿಸ್ತಾರವಾಗುತ್ತಾ ಬರುತ್ತದೆ.

ಯಾವ ಸ್ಥಳವೂ ಅಲ್ಲಿಯ ಜನರಿಗೆ ಬೇಕಾದ ಸಾಮಗ್ರಿಗಳನ್ನು ಸಾಕಾದಷ್ಟು ಒದಗಿಸುವಂತಿಲ್ಲ. ಕೆಲವು ಪದಾರ್ಥಗಳು ಹೊರಗಿನಿಂದ ಬರಬೇಕಾಗುತ್ತದೆ. ಅವುಗಳನ್ನು ಕೊಂಡುಕೊಳ್ಳುವುದಕ್ಕೆ ಸ್ಥಳದವರು ಹೆಚ್ಚು ಸಾಮಾನುಗಳನ್ನು ತಯಾರಿಸಿ ಇತರರಿಗೆ ಮಾರವುದಕ್ಕೆ ಸಿದ್ಧರಾಗಿರಬೇಕು. ಇಂಥ ಸಾಮಾನುಗಳನ್ನು ಇತರ ಪ್ರದೇಶಗಳಿಗೆ ಕೊಂಡೊಯ್ದು ಅಲ್ಲಿಯ ಸರಕುಗಳನ್ನು ತರುವುದೇ ಒಂದು ಕಸಬಾಗುತ್ತದೆ. ವ್ಯಾಪಾರಿಗಳು ಕಾಲಕ್ರಮೇಣ ಸಾಕಾದಷ್ಟು ಸಂಖ್ಯೆಯಲ್ಲಿ ಬರುತ್ತಾರೆ. ಮತ್ತು, ಸಾಮಾನುಗಳನ್ನು ಸಮುದ್ರಮೇಲೆ ಸಾಗಿಸುವುದಕ್ಕೆ ಹಡಗುಗಳು ಬೇಕಾಗುತ್ತವೆ. ಹಾಗೆಂದರೆ, ನಾವಿಕರೂ ನಾವೆಯ ಶಿಲ್ಪಿಗಳೂ ಅವಶ್ಯಕ. ಅಲ್ಲದೆ, ವ್ಯಾಪಾರ ಸುಗಮವಾಗಿ ನಡೆಯಲು ನಾಣ್ಯವೂ ಅಳತೆ ತೂಕಗಳ ವ್ಯವಸ್ಥೆಯೂ ಏರ್ಪಡಬೇಕಾಗುತ್ತದೆ. ಹೀಗೆ ಒಂದು ಸ್ಥಳದಲ್ಲಿ ಮನುಷ್ಯನಿಗೆ ಬೇಕಾದ ಅತ್ಯಾವಶ್ಯಕ ಪದಾರ್ಥಗಳನ್ನು ಒದಗಿಸುವ ಅನೇಕ ಕಸಬುಗಳ ಜನರು ಪರಸ್ಪರ ವ್ಯಾಪರ ಮಾಡುತ್ತ ತಮ್ಮ ತಮ್ಮ ಜೀವನವನ್ನು ಸಾಗಿಸುತ್ತಿರುತ್ತಾರೆ. ಇದೇ ಸಮಾಜ.

ಆದರೆ, ಈ ವರ್ಣನೆಯು ಅಪೂರ್ಣವೆಂದು ಸೂಚಿಸುವುದಕ್ಕಾಗಿ ಗ್ಲೌಕನ್ ಎಂಬವನು (ಇವನು ಪ್ಲೇಟೋವಿನ ಅಣ್ಣನೆಂದು ಹೇಳಿದ್ದಾರೆ), "ಇದೊಂದು ಹಂದಿಗಳ ಪಟ್ಟಣವೇ ಸರಿ?" ಎಂದು ಕುಚೋದ್ಯ ಮಾಡುತ್ತಾನೆ. ಏಕೆಂದರೆ, ಅನ್ನಾಹಾರಗಳೂ ಮನೆ ಮಠಗಳೂ ಬಟ್ಟೆಬರೆಗಳೂ–ಇವಿಷ್ಟರಿಂದ ಮನುಷ್ಯನಿಗೆ ತೃಪ್ತಿಯಿಲ್ಲ. ಯಾವ ಸಮಾಜವೂ ಬಹುಕಾಲ ಇಷ್ಟರಲ್ಲಿಯೇ ತೃಪ್ತಿಪಟ್ಟು ನಿಲ್ಲುವುದಿಲ್ಲ. ಕ್ರಮೇಣ ಹೆಚ್ಚಿನ ಸುಖ ಸಾಮಗ್ರಿಗಳು ತಲೆದೋರುತ್ತವೆ. ಮೇಜು, ಕುರ್ಚಿ, ಸೊಫ಼ಾಗಳೂ, ಪಾಯಸ, ಮಿಠಾಯಿ, ಮುಂತಾದ ಖಾದ್ಯಗಳೂ, ಸುಗಂಧ ದ್ರವ್ಯಗಳೂ, ವೇಶ್ಯೆಯರೂ, ಚಿತ್ರ

ಗಾರರೂ, ಶಿಲ್ಪಿಗಳೂ, ಕಾವ್ಯ ನಾಟಕ ನೃತ್ಯ ಗೀತ ಮುಂತಾದ ಕಲೋಪಾಸಕರೂ, ಕಸೂತಿ ಮುಂತಾದ ನಾಜೂಕು ಕೆಲಸಗಳೂ, ಚಿನ್ನ ಬೆಳ್ಳಿ ದಂತಗಳಿಂದ ಮಾಡಿದ ಅಲಂಕಾರ ವಸ್ತುಗಳೂ ಜನ ಜೀವನದಲ್ಲಿ ಕಾಣಿಸಿಕೊಳ್ಳುತ್ತವೆ.

ಇದರ ಪರಿಣಾಮ ಕೃತಕವಾದ ಆಶಯಗಳು ಮಿತಿಮೀರಿ ಬೆಳೆಯುವುದು; ಹಳ್ಳಿಯು ಪಟ್ಟಣವಾಗುವುದು, ಜನ ಸಂಖ್ಯೆ ಹೆಚ್ಚುವುದು. ಕೊನೆಗೆ ಇದರ ಫಲ ನಮ್ಮ ಪಟ್ಟಣಿಗರು ಇತರರ ಭೂಮಿಯನ್ನು ಆಶಿಸುವುದು; ಕ್ರಮೇಣ ಯುದ್ಧಸನ್ನಾಹ ಮತ್ತು ಅದರ ದುಷ್ಪರಿಣಾಮ !

ಇತರ ಕಸಬುಗಳೊಡನೆ ಈ ಸ್ಥಿತಿಯಲ್ಲಿ ಮತ್ತೊಂದು ಕಸಬು ಪ್ರಶಸ್ತಿ ಪಡೆಯುತ್ತದೆ–ಯೋಧರ ಕಸಬು. ದೇಶದ ರಕ್ಷಣೆಗೆ ಸಾವಿರಾರು ಯೋಧರು ಸದಾ ಯುದ್ಧಸನ್ನದ್ಧರಾಗಿ ನಿಲ್ಲಬೇಕಾಗುತ್ತದೆ. ದೇಶಪಾಲನೆಯು ಕೂಡ ಇತರ ಕೆಲಸಗಳಂತೆಯೇ. ಅದು ಸಮರ್ಪಕವಾಗಿ ನೆರವೇರಬೇಕಾದರೆ ಅದಕ್ಕೆ ತಮ್ಮ ಜೀವನವನ್ನೆಲ್ಲ ಧಾರೆಯೆರೆದು, ಬೇರೆ ಹವ್ಯಾಸಕ್ಕೆ ಗಮನ ಕೊಡದೆ ಅದರಲ್ಲಿ ಪ್ರವೀಣರಾದವರ ಒಂದು ವರ್ಗವೇ ಬೇಕಾಗುತ್ತದೆ. ಪ್ರತಿಯೊಂದು ರಾಜ್ಯವೂ ಒಂದೊಂದು ಸೈನ್ಯವನ್ನು ಇಟ್ಟುಕೊಳ್ಳಬೇಕಾಗಿ ಬರುತ್ತದೆ. ನಗರಪಾಲನೆಯೇ ತಮ್ಮ ಮುಖ್ಯ ವೃತ್ತಿಯಾಗಿರುವ ಸೈನಿಕರೂ ಅದರ ಮೇಲ್ವಿಚಾರಕರೂ ಅಧಿಕಾರಿಗಳೂ ಸತತವಾಗಿ ಯುದ್ಧಸನ್ನದ್ಧರಾಗಿದ್ದು, ದೇಶದಲ್ಲಿ ಶಾಂತಿಭಂಗವಾಗದಂತೆಯೂ ವಿದೇಶದವರ ಆಕ್ರಮಣ ಭಯವಿಲ್ಲದಂತೆಯೂ ನೋಡಿಕೊಳ್ಳುತ್ತಿರಬೇಕು.

ಸಮಾಜದ ಕಾರ್ಯಕಲಾಪಗಳು ಹೀಗೆ ಬೆಳೆಯುತ್ತ ಬರಲು ಒಳದೇಶದಲ್ಲಿಯೂ ಆಡಳಿತದ ಕೆಲಸ ಸೂಕ್ಷ್ಮವೂ ಸರ್ವತೋಮುಖವುಳ್ಳದ್ದೂ ಆಗುತ್ತ ಬರುತ್ತದೆ. ಈ ಕೆಲಸವನ್ನು ನಿರ್ವಹಿಸಲು ಒಂದು ಆಡಳಿತಗಾರ ವರ್ಗವೇ ಏರ್ಪಡುತ್ತದೆ. ಇವೆರಡು ಗುಂಪುಗಳೂ ಪಾಲಕರೆಂಬ ಒಂದೇ ವರ್ಗಕ್ಕೆ ಸೇರಿದವರೆಂದು ಹೇಳಬಹುದು.

ಹೀಗೆ, ಕಲ್ಪನೆಯ ಮೂಲಕ ಸಮಾಜದ ಸಾಮಾನ್ಯ ರಚನೆ ಎಂದರೆ, ಅದರಲ್ಲಿ ಸ್ವಾಭಾವಿಕವಾಗಿ ಹುಟ್ಟುವ ವರ್ಗಗಳೂ ಅವುಗಳ ಪರಸ್ಪರ ಸಂಬಂಧಗಳೂ ಪ್ರತಿ ವರ್ಗವೂ ತನ್ನ ಕೆಲಸದಲ್ಲಿ ಹೆಚ್ಚು ನಿಷ್ಠೆಯಿಡಬೇಕಾದ ಅವಶ್ಯಕತೆಯೂ ವಿಶದವಾಯಿತು.

ಹೀಗೆ ವಿಶದವಾದ ಸಮಾಜ ಸ್ವರೂಪವನ್ನು ಮನನ ಮಾಡುತ್ತ ಪ್ಲೇಟೋ ಅದರಲ್ಲಿ ಅಡಗಿರುವ ತತ್ತ್ವಾಂಶಗಳನ್ನು ಸ್ಪಷ್ಟಪಡಿಸುತ್ತಾನೆ :–

ಜನರ ಸ್ವಭಾವವು ಭಿನ್ನ ಭಿನ್ನವಾಗಿರುತ್ತದೆ. ತನ್ನ ಸ್ವಭಾವಕ್ಕೆ ಅನುಗುಣವಾದ ಕೆಲಸದಲ್ಲಿ ಪ್ರತಿಯೊಬ್ಬನೂ ನಿರತನಾದರೆ ಅವನಿಗೂ ಶ್ರೇಯಸ್ಸು, ಸಮಾಜಕ್ಕೂ ಶ್ರೇಯಸ್ಸು. ಇದು ಒಳ್ಳೆಯ ಸಮಾಜದ ಲಕ್ಷಣ.

ಸಮಾಜದ ಕಾರ್ಯಕಲಾಪಗಳೆಲ್ಲ ಮೂರು ವಿಧವಾಗಿ ತೋರಿ ಬರುವುದು:–

(೧) ಸಮಾಜದ ಆಡಳಿತವನ್ನು ನೋಡಿಕೊಳ್ಳುವುದು ; (೨) ಶಾಂತಿ ಸ್ಥಾಪನೆ, ಪರ ರಾಷ್ಟ್ರಗಳಿಂದ ರಕ್ಷಣೆ ; ಮತ್ತು (೩) ಕೃಷಿ, ಕೈಗಾರಿಕೆ, ವ್ಯಾಪಾರ, ಕಲೆ ಮುಂತಾದವು.

ಈ ಮೂರು ವಿಧ ಕಾರ್ಯವಿಶೇಷಗಳೂ ಯಾವ ಸಮಾಜದಲ್ಲಿ ಅವಕ್ಕೆ ಅರ್ಹರಾದ ಜನರ ಕೈಯಲ್ಲಿರುತ್ತವೆಯೋ ಅಂಥ ಸಮಾಜವೇ ಒಳ್ಳೆಯ ಸಮಾಜ, ಒಳ್ಳೆಯ ರಾಜ್ಯ. ಇದರ ಲಕ್ಷಣವನ್ನು ಸ್ವಧರ್ಮ ಎಂದು ಕರೆಯಬಹುದು. ಜನರು ತಮ್ಮ ತಮ್ಮ ಆಂತರಿಕ ಗುಣಕ್ಕನುಸಾರವಾಗಿರುವ ಕೆಲಸದಲ್ಲಿ ನಿರತರಾಗಿದ್ದರೆ ಅವರಿಗೆ ಅದಕ್ಕಿಂತ ಹೆಚ್ಚು ಸುಖದಾಯಕವಾದದ್ದು ಮತ್ತೊಂದಿಲ್ಲ. ಸಮಾಜಕ್ಕೂ ಕೂಡ ಅದಕ್ಕಿಂತ ಹೆಚ್ಚಿನ ಲಾಭವಿಲ್ಲ.

ಎಲ್ಲಕ್ಕಿಂತ ಮುಖ್ಯವಾದ್ದು ರಾಜ್ಯ ಪರಿಪಾಲನೆ. ಈ ಕರ್ತವ್ಯವನ್ನು ನೆರವೇರಿಸಲು ಯಾವ ಮನೋವೃತ್ತಿ ಸಹಾಯಕ ಎಂಬುದು ಮೊದಲನೆಯ ಪ್ರಶ್ನೆ.

ರಾಜ್ಯಪಾಲಕರಲ್ಲಿ ಪರಸ್ಪರ ವಿರೋಧವಾದ ಎರಡು ಗುಣಗಳು ಮುಖ್ಯವಾಗಿ ಕಾಣಬರಬೇಕು. ಒಂದು, ಯೋಧ ಧರ್ಮ ; ಧೈರ್ಯದಿಂದ ಯುದ್ಧ ಮಾಡುವುದು. ಎರಡನೆಯದು ಸ್ನೇಹಿತರ ವಿಷಯದಲ್ಲಿ ವಿಶ್ವಾಸ, ಶತ್ರುಗಳ ವಿಷಯದಲ್ಲಿ ಕ್ರೌರ್ಯ ಭಾವಗಳು. ಬಲವೂ ಧೈರ್ಯವೂ ಕದನ ಕುತೂಹಲವೂ ಯಾರ ಸ್ವಭಾವದಲ್ಲಿ ಪ್ರಧಾನವಾಗಿರುತ್ತವೆಯೋ ಅವರಿಗೆ ಶತ್ರು ಮಿತ್ರರೆಂಬ ವಿವೇಕವಿರುವುದು ಸುಲಭವಲ್ಲ. ಇಂಥ ವಿವೇಕ ಜ್ಞಾನವು ಸಾಕಾದಷ್ಟು ಪ್ರಬಲವಾಗಿಲ್ಲದಿದ್ದರೆ ಪಾಲಕರೇ ಸ್ವಜನರನ್ನು ಹಿಂಸಿಸಬಹುದು. ಬೇಲಿಯೇ ಹೊಲವನ್ನು ಮೇಯುವ ಹಾಗೆ, ಕುರುಬನ ನಾಯಿಗಳೇ ಕುರಿಗಳನ್ನು ತಿನ್ನುವ ಹಾಗೆ ರಾಜ್ಯದ ರಕ್ಷಕರೇ ಅದರ ನಾಶಕ್ಕೆ ಕಾರಣರಾಗುತ್ತಾರೆ. ಆದರೆ, ಹೀಗೆ ಪರಸ್ಪರ ವಿರುದ್ಧಗುಣಗಳು ಒಂದೇ ಸ್ವಭಾವದಲ್ಲಿರುವುದು ಹೇಗೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಇದಕ್ಕೆ ಉತ್ತರ ಅನುಭವ ಪರೀಕ್ಷೆಯಲ್ಲಿ ಸಿಕ್ಕುತ್ತದೆ. ಪ್ರಾಣಿ ವರ್ಗಗಳಲ್ಲಿ ಕೂಡ ಬಲವಿವೇಕಗಳ ಸಮನ್ವಯ ಕಾಣಬರುತ್ತದೆ. ಬೇಟೆನಾಯಿಗಳ ವರ್ತನೆಯೇ ಇದಕ್ಕೆ ಉದಾಹರಣೆ. ಬೇಟೆನಾಯಿಗಳು ತಮ್ಮ ಬೇಟೆಗೆ ಗುರಿಯಾದ ಮೃಗಗಳಲ್ಲಿ ಕ್ರೂರಸ್ವಭಾವವನ್ನು ಪ್ರದರ್ಶಿಸಿದರೂ ತಮ್ಮ ಯಜಮಾನರಲ್ಲಿಯೂ ಅವರ ಸ್ನೇಹಿತರಲ್ಲಿಯೂ ವಿಶ್ವಾಸ ತೋರಿಸುತ್ತವೆ. ನಮ್ರತೆಯಿಂದಲೂ ವಿನಯದಿಂದಲೂ ನಡೆದು ಕೊಳ್ಳುತ್ತವೆ.

ಹೀಗೆ ಪ್ರಾಣಿ ಸ್ವಭಾವದಲ್ಲಿಯೇ ಕಂಡುಬರುವ ವಿವೇಕಜ್ಞಾನವು ಮನುಷ್ಯರಲ್ಲಿ ವಿಶೇಷವಾಗಿ ತೋರಿಬರುವದೇನೋ ಆಶ್ಚರ್ಯವಲ್ಲ. ಮನುಷ್ಯರಲ್ಲಿಯೂ ಕದನಕುತೂಹಲವೂ ಸೌಮ್ಯಗುಣಗಳೂ ಕೆಲಕೆಲವರಲ್ಲಿ ಸ್ವಭಾವವಾಗಿಯೇ ಇರುವುವು. ಸಂದರ್ಭಾನುಸಾರವಾಗಿ ವಿವೇಕ ಪರಿಜ್ಞಾನಕ್ಕೆ ಅಧೀನವಾಗಿ ಶೌರ್ಯ ಕ್ರೌರ್ಯಕಾರ್ಯಗಳೋ ಸೌಮ್ಯ ಸ್ನೇಹಭಾವಗಳೋ ಹೊರಹೊಮ್ಮುವುವು.

ಇಂಥ ಸ್ವಭಾವವುಳ್ಳವರನ್ನು ಚಿಕ್ಕಂದಿನಿಂದಲೇ ಆಯ್ದು ಅವರಿಗೆ ಸರಿಯಾದ ವಿದ್ಯಾಭ್ಯಾಸವನ್ನು ಕೊಡಿಸಿ ಅವರನ್ನು ರಾಜ್ಯದ ಪಾಲಕ ವರ್ಗಕ್ಕೆ ಸೇರಿಸಬೇಕು. ಬಲಪ್ರಯೋಗದ ಸಂದರ್ಭದಲ್ಲಿ ಶತ್ರು ಮಿತ್ರ ವಿಷಯವಾದ ವಿವೇಕವೇ ತತ್ತ್ವಪ್ರೇಮದ ಲಕ್ಷಣವಾದ್ದರಿಂದ ಬೇಟೆನಾಯಿಗಳೂ ತತ್ತ್ವಪ್ರೇಮಿಗಳ ವರ್ಗಕ್ಕೆ ಸೇರಿದವೆಂದು ಪ್ಲೇಟೋ ಹಾಸ್ಯಗರ್ಭಿತವಾಗಿ ಹೇಳಿದ್ದಾನೆ. ಆದರೂ ಈ ಲಘುವಾಕ್ಯದ ಹಿಂದೆ ಗಾಢವಾದ ಮರ್ಮವಿದೆ.

ರಾಜ್ಯದಲ್ಲಿ ಪಾಲಕರೇನೋ ಅಧಿಕಾರಸ್ಥಾನದಲ್ಲಿರಬೇಕಾದ್ದು ಅನಿವಾರ್ಯ. ಆದರೆ, ಇವರ ಮನೋವೃತ್ತಿ ಹೇಗಿರಬೇಕೆಂಬುದು ಅತ್ಯಂತ ಮಹತ್ತರವಾದ ಪ್ರಶ್ನೆ. ಇದನ್ನು ಪ್ರತಿಪಾದಿಸುವುದೇ ಪ್ಲೇಟೋವಿನ ರಾಜ್ಯಶಾಸ್ತ್ರದ ತಿರುಳು.

ಸಮಾಜದಲ್ಲಿ ಇತರ ವೃತ್ತಿಗಳಿಗೆ ಒಂದು ನಿರ್ದಿಷ್ಟವಾದ ವಿಷಯ ಸ್ಪಷ್ಟವಾಗಿ ಕಾಣಬರುತ್ತದೆ. ದವಸಧಾನ್ಯಗಳನ್ನು ಬೆಳೆಯುವುದು ರೈತನ ಕೆಲಸ. ಮರದ ಸಾಮಾನುಗಳನ್ನು ತಯಾರಿಸುವುದು ಮರಗೆಲಸದವನಿಗೆ ಸೇರಿದ್ದು. ಕಬ್ಬಿಣದಲ್ಲಿ ಕೆಲಸ ಮಾಡುವುದು ಕಮಾರನ ಕಸಬು. ರೋಗ ನಿವಾರಣೆ ಮಾಡುವುದು ವೈದ್ಯನ ಕಾರ್ಯ. ವಿದ್ಯೆ ಕಲಿಸುವುದು ಅಧ್ಯಾಪಕನ ಕರ್ತವ್ಯ. ಹೀಗೆಯೇ ರಾಜನ ಮತ್ತು ಅವನ ಕೈ ಕೆಳಗಿನ ಅಧಿಕಾರಿಗಳ ವಿಶೇಷ ಕರ್ತವ್ಯವೇನು?–ಎಂಬ ಪ್ರಶ್ನೆ ಸಹಜವಾಗಿದೆ.

ಭಾರತೀಯ ಸಂಪ್ರದಾಯದಲ್ಲಿ ಈ ಕರ್ತವ್ಯವು ದುಷ್ಟನಿಗ್ರಹ, ಶಿಷ್ಟಪರಿಪಾಲನೆ ಎಂಬ ಪದಗಳಿಂದ ಸಮಗ್ರವಾಗಿ ನಿರೂಪಿತವಾಗಿದೆ. ಈ ಧರ್ಮವನ್ನು ನಿರ್ವಹಿಸಲು ಬೇಕಾದ ವಿದ್ಯಾಕ್ರಮ ಭಾರತೀಯ ಶಾಸ್ತ್ರಗ್ರಂಥಗಳಲ್ಲಿ ಖಚಿತವಾಗಿ ನಿರೂಪಣೆಯಾಗಿದೆ. ಆದರೆ, ಸಾಕ್ರಟೀಸನ ಕಾಲದಲ್ಲಿ ರಾಜ್ಯಭಾರಕ್ರಮವು ಶಾಸ್ತ್ರ ರೀತಿಯಲ್ಲಿ ರೂಪುಗೊಂಡಿರಲಿಲ್ಲ. ಪ್ರಜಾರಾಜ್ಯಪದ್ಧತಿಯೇ ಎಲ್ಲೆಲ್ಲಿಯೂ ಆಚರಣೆಯಲ್ಲಿದ್ದುದರಿಂದ, ರಾಜ್ಯಭಾರವು ರಾಜ್ಯದ ಪ್ರಮುಖ ಕುಟುಂಬದವರಲ್ಲಿಯೂ ನಗರಸಭೆಗಳಲ್ಲಿ ಮಾನ್ಯಸ್ಥಾನಗಳನ್ನು ಸಾಮರ್ಥ್ಯ, ಜನ ಸಹಾಯಗಳ ಮೂಲಕ ಸಂಪಾದಿಸಿಕೊಂಡ ಪ್ರಜಾನಾಯಕರ ವಶದಲ್ಲಿಯೂ ಇತ್ತು. ಸಮಾಜದ ಇತರ ಕಸಬುಗಳನ್ನು ನಡಸಲು ಅವಕ್ಕೆ ತಕ್ಕ ವಿದ್ಯೆಗಳಿದ್ದವು; ಶಿಕ್ಷಕರೂ ಇದ್ದರು. ಆದರೆ ರಾಜ್ಯಭಾರ ಕಾರ್ಯದಲ್ಲಿ ಭಾಗವಹಿಸಲು ಉದ್ಯುಕ್ತರಾದವರಿಗೆ ಅವರ ಉದ್ಯಮಕ್ಕೆ ತಕ್ಕ ಶಾಸ್ತ್ರವಿರಲಿಲ್ಲ. ಪರಿಪಕ್ವವಾದ ವಿಶೇಷ ಜ್ಞಾನವು ರಾಜಕಾರಣದಲ್ಲಿ ಇಲ್ಲದಿರುವ ಕೊರತೆಯನ್ನು ನಿವಾರಣೆ ಮಾಡುವುದೇ ಪ್ಲೇಟೋವಿನ ಮುಖ್ಯ ಧ್ಯೇಯವಾಯಿತು.

ಇಂಥ ಶಾಸ್ತ್ರಜ್ಞಾನವನ್ನು ಸಂಪಾದಿಸುವುದಕ್ಕೆ ರಾಜಕಾರಣಿಗಳಲ್ಲಿ ಮೊಟ್ಟಮೊದಲು ತತ್ತ್ವಪ್ರೇಮವಿರಬೇಕು, ಜ್ಞಾನಾಭಿವೃದ್ಧಿಯಲ್ಲಿ ನೈಜವಾದ ಆಸಕ್ತಿ ಅತ್ಯಾವಶ್ಯಕ. ಇದರ ಜೊತೆಗೆ ಶ್ರೇಷ್ಠರಾದ ಯೋಧರಿಗೆ ಸ್ವಭಾವವಾದ ಧೈರ್ಯ, ರಣಕುತೂಹಲ, ಸಮರ ಸಿದ್ಧತೆಗಳೂ ಸಮ್ಮಿಳಿತವಾಗಿರಬೇಕು.

ಪ್ರಭುತ್ರವರ್ಗದವರಲ್ಲಿ ಎರಡು ವಿಭಾಗಗಳು ಕಾಣಬರುತ್ತವೆ. ಮೊದಲನೆಯ

ಶ್ರೇಣಿಯವರು ರಾಜ್ಯದ ಪರಮ ಪ್ರಭುತ್ವಕಾರ್ಯವನ್ನು ನಡಸುವವರು. ಇವರನ್ನು ಪಾಲಕರೆನ್ನಬಹುದು. ಇವರ ಸಹಾಯಕರಾಗಿ ಇವರ ಆಜ್ಞೆಗಳನ್ನೂ ಸೂಚನೆಗಳನ್ನೂ ನಡಸಿಕೊಡುವ ಮಿಕ್ಕವರನ್ನು ಸಹಾಯಕರೆಂದೋ ರಕ್ಷಕರೆಂದೋ ಕರೆಯಬಹುದು. ಇಬ್ಬರಿಗೂ ತತ್ತ್ವಪ್ರೇಮ ಯೋಧ ಧರ್ಮಗಳು . ಸಾಮಾನ್ಯ. ಪಾಲಕರು ವಯೋವೃದ್ಧರಾಗಿ, ಪೂರ್ವ ವಯಸ್ಸಿನ್ನಲ್ಲಿ ರಕ್ಷಕರ ಸ್ಥಾನದಲ್ಲಿ ಕರ್ತವ್ಯ ಸಲ್ಲಿಸುತ್ತಿದ್ದು ಪರಮಪದವಿಗೆ ಏರಿದವರು.

ಪ್ರಭುತ್ವದವರಲ್ಲದೆ ಮಿಕ್ಕವರು ತಮ್ಮ ತಮ್ಮ ಸ್ವಭಾವಕ್ಕನುಗುಣವಾದ ಜೀವನೋಪಾಯಗಳನ್ನು ಅನುಸರಿಸುತ್ತಿರುತ್ತಾರೆ.

ಹೀಗೆ ಪ್ಲೇಟೋವಿನ ಆದರ್ಶರಾಜ್ಯದಲ್ಲಿ ಮುಖ್ಯವಾಗಿ ಮೂರು ವರ್ಗದವರು ಕಾಣಬರುತ್ತಾರೆ. ಜ್ಞಾನ ಪ್ರಾಧಾನ್ಯವುಳ್ಳ ಪಾಲಕರು, ಯೋಧಗುಣ ಪ್ರಾಧಾನ್ಯವುಳ್ಳ ರಕ್ಷಕರು (ಅಥವಾ ಸಹಾಯಕರು), ಮತ್ತು ರಾಜಕೀಯವಲ್ಲದ ವೃತ್ತಿಗಳನ್ನು ಅನುಸರಿಸುವ ಮಿಕ್ಕ ಪ್ರಜೆಗಳು – ಇವೇ ಆ ಮೂರು ವರ್ಗಗಳು.

ಪಾಲಕರು ರಾಜ್ಯಭಾರಕ್ಕೆ ಸಂಬಂಧಪಟ್ಟ ಕಾರ್ಯಕಲಾಪಗಳಲ್ಲಿ, ಅವಕ್ಕೆ ಉಚಿತವಾದ ಅನುಭವಸಾರವನ್ನೊಳಗೊಂಡ ತತ್ತ್ವಜ್ಞಾನ ದೃಷ್ಟಿಯಿಂದ ವಿವೇಚಿಸಿ, ನಿರ್ಧಾರಕ್ಕೆ ಬರುತ್ತಾರೆ. ಸಮಾಜದ ಶಾಂತಿಪಾಲನೆಗೂ ಪುರೋಭಿವೃದ್ಧಿಗೂ ಅವಶ್ಯಕವಾದ ಶಾಸನಗಳನ್ನು ಕಾಲಕಾಲಕ್ಕೆ ರೂಪುಗೊಳಿಸುತ್ತಾರೆ.

ಪಾಲಕರಿಗೆ ಅಧೀನವಾಗಿ ಸಹಾಯಕ ರಕ್ಷಕರು ದೇಶದ ಸೈನ್ಯಮತ್ತು ಆಡಳಿತದವರ ಸ್ಥಾನದಲ್ಲಿ ತಮ್ಮ ಸೇವೆಯನ್ನು ಸಲ್ಲಿಸುತ್ತಾರೆ. ಕೇವಲ ಸಂಬಳಕ್ಕಿರುವ ಸೈನ್ಯ ವ್ಯವಸ್ಥೆಯನ್ನು ಪ್ಲೇಟೋ ನಿರಾಕರಿಸುತ್ತಾನೆ. ಇಂಥ ಸ್ಯನ್ಯಗಳು ಅನೇಕ ವೇಳೆ ಪರಕೀಯರನ್ನು ಸೇರಿಸಿ ಕೊಂಡು, ಗ್ರೀಕ್ ಪಟ್ಟಣಗಳಲ್ಲಿ ಅನರ್ಥಕ್ಕೆ ಕಾರಣವಾಗಿದ್ದವು. ಇಂಥ ಪದ್ಧತಿಗೆ ಗ್ರೀಕರ ಮನ್ನಣೆಯಿರಲಿಲ್ಲ. ಅವರಿಗೆ ಸಮ್ಮತವಾದದ್ದು ದೇಶಪ್ರೇಮಪೂರಿತವಾದ, ಸೇವಾಭಾವನೆಯಿಂದ ರಚಿತವಾದ ನಾಗರಿಕರ ಸೈನ್ಯ. ಪ್ಲೇಟೋ ಈ ಸಂದರ್ಭದಲ್ಲಿ ಸೂಚಿಸುವ ಸಹಾಯಕ ರಕ್ಷಕರ ಸೈನ್ಯದಳದಲ್ಲಿ ಸಾಧಾರಣ ಭಟರಿಗೂ ಉನ್ನತಾಧಿಕಾರಿಗಳಿಗೂ ವರ್ಗಭೇದವಿರಲಿಲ್ಲ ! ಪ್ರತಿಯೊಬ್ಬ ಯೋಧನೂ ತನ್ನ ಸಾಹಸ ಸಾಮರ್ಥ್ಯಗಳಿಗನುಗುಣವಾಗಿ ಉನ್ನತಸ್ಥಾನಗಳಿಗೇರಲು ಅವಕಾಶವಿತ್ತು. ಮತ್ತು ಸೈನ್ಯ ಶಾಖೆಗೂ ರಾಜ್ಯದ ಒಳಾಡಿತದಲ್ಲಿ ನಿರತರಾಗಿರುವ ಇತರ 'ಸಿವಿಲ್' ಆಡಳಿತ ಶಾಖೆಗಳಲ್ಲಾಗಲಿ ಸಂದರ್ಭಾನುಸಾರ ಕೆಲಸ ಮಾಡಬೇಕಾಗಿತ್ತು. ರಕ್ಷಕರೆಲ್ಲ ಈ ಎರಡು ಬಗೆಯ ರಾಜಕಾರ್ಯಕ್ಕೂ ಸದಾ ಸಿದ್ಧರಾಗಿರಬೇಕಾಗಿತ್ತು. ಎರಡು ಕೆಲಸಗಳಿಗೂ ಅನ್ವಯಿಸುವಂತೆ ಇವರ ವಿದ್ಯಾಭ್ಯಾಸ ವ್ಯವಸ್ಥೆಯನ್ನು ಪ್ಲೇಟೋ ಸೂಚಿಸುತ್ತಾನೆ. ಇವರಲ್ಲಿ ಅಗ್ರಗಣ್ಯರಾದವರು. ಕ್ರಮೇಣ ಪಾಲಕರ ಪಂಕ್ತಿಗೆ ಏರುತ್ತಾರೆ.

ಮಿಕ್ಕವರು ಮೂರನೆಯ ವರ್ಗದವರು, ಇವರಲ್ಲಿ ಬಡಗಿ, ಕಮ್ಮಾರ ಮೊದಲಾದ ಕಾಮಾಟಿಗಳ ಅಂತಸ್ತಿನಿಂದ ವ್ಯಾಪಾರೋದ್ಯಮಗಳಲ್ಲಿರುವ

ಲಕ್ಷಾಧೀಶರವರೆಗೂ ಜನರು ಅನೇಕ ವೃತ್ತಿಗಳನ್ನವಲಂಬಿಸಿರುತ್ತಾರೆ. ವೈದ್ಯರೂ ಅಧ್ಯಾಪಕರೂ ಶಿಲ್ಪಿಗಳೂ ಇತರ ಕಲಾಕೋವಿದರೂ ಇವರಲ್ಲೇ ಸೇರಿರುತ್ತಾರೆ.

ಈ ಮೂರು ವರ್ಗದವರ ಮೇಳನವೇ ಸಮಾಜದ ಶ್ರೇಯಸ್ಸಿಗೆ ಮೂಲ ಕಾರಣ; ಮತ್ತು ಉತ್ತಮ ಸಮಾಜದ ಮುಖ್ಯಲಕ್ಷಣ. ಈ ಮೂರು ವರ್ಗದವರೂ ತಮ್ಮ ತಮ್ಮ ಕರ್ತವ್ಯಗಳನ್ನು ನ್ಯಾಯಮಾರ್ಗದಲ್ಲಿಯೂ ಉತ್ತಮ ರೀತಿಯಲ್ಲಿಯೂ ನೆರವೇರಿಸುವುದರಿಂದ ಸಮಾಜದಲ್ಲಿ ಸಮರಸವೇರ್ಪಡುತ್ತದೆ. ವರ್ಗ ಸಾಮರಸ್ಯವೇ ವ್ಯಕ್ತಿಗಳ ಶ್ರೇಯಸ್ಸಿಗೂ ಸುಖಜೀವನಕ್ಕೂ ದಾರಿ.

* * *

೯ನೆಯ ಅಧ್ಯಾಯ

ರಾಜ್ಯದ ಸಾಮರಸ್ಯ ಮತ್ತು ವರ್ಗಧರ್ಮ

ಪ್ಲೇಟೋವಿನ ಸಮಾಜವ್ಯವಸ್ಥೆಯು ಭಾರತದ ಸ್ವಧರ್ಮ ಮತ್ತು ವರ್ಣಧರ್ಮ ತತ್ತ್ವಗಳನ್ನು ಬಹುಮಟ್ಟಿಗೆ ಅನುಸರಿಸುವ ಹಾಗೆ ತೋರುತ್ತದೆ. ತತ್ತ್ವಸೂಕ್ಷ್ಮ ಪರಿಶೀಲನೆಗೆ ಎರಡೂ ಒಂದೇ ರೀತಿ ತೋರುವುದಾದರೂ, ಕೆಲವು ಅಂಶಗಳಲ್ಲಿ ಇವೆರಡಕ್ಕೂ ವ್ಯತ್ಯಾಸಗಳೂ ಭಾಸವಾಗುತ್ತವೆ.

ಪ್ಲೇಟೋವಿನ ಸಿದ್ಧಾಂತಕ್ಕೂ ಭಾರತದ ವರ್ಣಾಶ್ರಮಧರ್ಮಕ್ಕೂ ಇರುವ ವ್ಯತ್ಯಾಸವೇನೆಂದರೆ, ಜ್ಞಾನಾನ್ವೇಷಣಕ್ಕೆ ಜೀವನವನ್ನೆಲ್ಲ ಧಾರೆಯೆರೆಯಬೇಕಾದ ಬ್ರಾಹ್ಮವರ್ಗದವರಿಗೆ ಭಾರತದ ರೀತಿಯಲ್ಲಿ ರಾಜಕೀಯ ಅಧಿಕಾರವಿರುವುದಿಲ್ಲ. ಅವರ ಪಾಲಿಗೆ ಹೇಳಿರುವುದು ಅಧ್ಯಯನ, ಅಧ್ಯಾಪನ ಮಾತ್ರ. ಸರ್ವಶಾಸ್ತ್ರಗಳನ್ನು ಮುಂದುವರಿಸುವುದೂ ಜ್ಞಾನ ಪ್ರಪಂಚದ ಸೀಮೆಯನ್ನು ವಿಸ್ತರಿಸುವುದೂ ಈ ವರ್ಗದವರ ಮುಖ್ಯಧರ್ಮ. ಇವರು ಕೇವಲ ಪುರೋಹಿತರಲ್ಲ; ಮತ್ತೇನೆಂದರೆ, ಶಾಸ್ತ್ರನಿರ್ಮಾಪಕರು, ತತ್ತ್ವಾನ್ವೇಷಿಗಳು. ಈಗಿನ ಕಾಲದಲ್ಲಿ ಇವರಿಗೆ ತಾತ್ತ್ವಿಕರು (ಫಿಲಾಸಫರ್ಸ್) ಮತ್ತು ವಿಜ್ಞಾನಿಗಳು (ಸೈಂಟಿಸ್ಟ್ಸ್) ಎಂಬ ಹೆಸರುಗಳಿವೆ. ಪ್ಲೇಟೋವಿನ ವ್ಯವಸ್ಥೆಯಲ್ಲಿ ಕೇವಲ ಜ್ಞಾನಮಾರ್ಗದಲ್ಲಿ ನಿರತರಾಗಿರುವವರಿಗೆ ಸ್ಥಾನವಿಲ್ಲವೆಂದು ತೋರುತ್ತದೆ. ಜ್ಞಾನಿಗಳು ರಾಜ್ಯಭಾರ ಕಾರ್ಯದಲ್ಲಿ ನಿರತರಾಗಿರಲೇಬೇಕೆಂದು ಅವನ ಆಶಯ. ಸರ್ವಾಧಿಕಾರ ಬರುವ ಮುನ್ನ ಅವರು ತತ್ತ್ವಾನ್ವೇಷಣ ಕಾರ್ಯವನ್ನು ಸಾಕಾದೆಷ್ಟು ಮಾಡಲು ಅವಕಾಶವಿರುತ್ತದೆ. ಆದರೆ, ತಮ್ಮ ಸರದಿ ಬಂದಾಗ ಅವರು ತಮ್ಮ ಜ್ಞಾನಮಾರ್ಗವನ್ನು ಕರ್ಮಮಾರ್ಗಕ್ಕೆ ಮೇಳನ ಮಾಡಬೇಕಾಗುತ್ತದೆ.

ಅಲ್ಲದೆ, ರಾಜ್ಯಭಾರದ ಹೊರೆಯನ್ನು ಭಾರತದ ರಾಜಧರ್ಮದ ಪ್ರಕಾರ ಕ್ಷತ್ರಿಯರು ಹೊರಬೇಕು. ಅವರಿಗೆ ಪ್ಲೇಟೋ ನಿರ್ದೇಶಿಸುವಷ್ಟು ಜ್ಞಾನಸಂಪತ್ತು ಇರಬೇಕಾಗಿಲ್ಲ. ರಾಜರೂ ಆಡಳಿತಗಾರರೂ ಕ್ಷಾತ್ರಧರ್ಮ ಪ್ರಾಧಾನವುಳ್ಳವರಾಗಿರಬೇಕೇ ಹೊರತು ಜ್ಞಾನ ಸೃಷ್ಟಿಯ ಮಹಾಕಾರ್ಯವನ್ನು ನೆರವೇರಿಸುವಷ್ಟು ಸಮರ್ಥ

ರಾಗಿರಬೇಕಾಗಿಲ್ಲ. ಆದರೂ ರಾಜರೂ ಆಡಳಿತಗಾರರೂ ಸಾಕಾದಷ್ಟು ಅಧ್ಯಯನಶಾಲಿಗಳಾಗಿದ್ದು ಅನುದಿನವೂ ಶಾಸ್ತ್ರಾಭ್ಯಾಸಕ್ಕೂ ಜ್ಞಾನಿಗಳ ಸಹವಾಸಕ್ಕೂ ಸಾಕಾದಷ್ಟು ಅವಕಾಶವನ್ನು ಕಲ್ಪಿಸಿಕೊಳ್ಳತಕ್ಕದ್ದು ಅವರ ಕರ್ತವ್ಯ–ಎಂದು ಭಾರತದ ಶಾಸ್ತ್ರಗಳ ನಿರ್ಣಯ. ಭಾರತದ ರಾಜನೀತಿಯ ಪ್ರಕಾರ ತತ್ತ್ವಾನ್ವೇಷಿಗಳು ರಾಜ್ಯಭಾರವನ್ನು ನಡಸಬೇಕಾಗಿಲ್ಲ; ಆಡಳಿತದ ಹೊರಗೆ ನಿಂತು ರಾಜರಿಗೆ ಆಗಾಗ್ಗೆ ಸಲಹೆ ಕೊಟ್ಟರೆ ಸಾಕು. ಮಂತ್ರಿಸ್ಥಾನದಲ್ಲೇನೋ ಬ್ರಾಹ್ಮಣರಿರುವುದು ಒಳ್ಳೆಯವೆಂದು ಸೂಚನೆಯಿದ್ದರೂ ಈ ಬ್ರಾಹ್ಮಣರ ಜ್ಞಾನವು ವ್ಯವಹಾರ ಜ್ಞಾನ ಮಾತ್ರ. ಆದರ ಜೊತೆಗೆ ಬ್ರಹ್ಮಜ್ಞಾನ ಇಲ್ಲವೆ ಪರಮತತ್ತ್ವ ಜ್ಞಾನ ಇದ್ದೇ ಇರಬೇಕೆಂಬ ನಿಯಮವಿದ್ದಂತೆ ತೋರುವುದಿಲ್ಲ.

ಪ್ಲೇಟೋವಿನ ವ್ಯವಸ್ಥೆಯಲ್ಲಿ ರಾಜ್ಯದಲ್ಲಿ ಪರಮಪ್ರಭುತ್ವ ಸ್ಥಾನಕ್ಕೆ ಬರತಕ್ಕವರು ಬ್ರಹ್ಮಜ್ಞಾನ ಸಮಾನವಾದ ತತ್ತ್ವಜ್ಞಾನವನ್ನೂ ಅನುಭವಜನ್ಯವಾದ ವ್ಯವಹಾರಜ್ಞಾನವನ್ನೂ ಹೊಂದಿದವರಾಗಿರಬೇಕು. ಇದರ ಜೊತೆಗೆ ಕ್ಷಾತ್ರಧರ್ಮಕ್ಕೆ ಸಮಾನವಾದ ಗುಣಸಂಪತ್ತಿಯನ್ನೂ ಸಮ್ಮೇಳನ ಮಾಡಿಕೊಂಡವರಾಗಿರಬೇಕು. ಪ್ಲೇಟೋವಿನ ಪ್ರಭುತ್ವದವರು ನಮ್ಮಲ್ಲಿ ಜೀವನ್ಮುಕ್ತಿಪದವಿಯನ್ನು ಹೊಂದಿಯೂ ರಾಜ್ಯಭಾರದ ಮೂಲಕ ಲೋಕಸಂಗ್ರಹ ಕಾರ್ಯವನ್ನು ಕರ್ಮಯೋಗದ ಪ್ರಕಾರ ನಿರ್ವಹಿಸುತ್ತಿದ್ದ ಜನಕಮಹಾರಾಜನೇ ಮುಂತಾದ ರಾಜರನ್ನು ಬಹುಮಟ್ಟಿಗೆ ಹೋಲುವರು. ಆದರೆ ಪ್ಲೇಟೋವಿನ ಪಾಲಕರು ಅವನ ಕಲ್ಪನಾರಾಜ್ಯಕ್ಕೆ ಮಾತ್ರ ಸೇರಿ, ಆದರ್ಶರೂಪವಾಗಿ ಜನರ ಮನಸ್ಸನ್ನು ಬಹುಕಾಲದಿಂದ ಆಕರ್ಷಿಸುತ್ತ ಬಂದಿದ್ದಾರೆ. ಭಾರತದ ಜನಕಾದಿಗಳಾದರೋ ವಾಸ್ತವ ಪ್ರಪಂಚದಲ್ಲಿ ಬಾಳಿ ಬದುಕಿ ಪ್ರಸಿದ್ಧರಾದವರು.

ಪ್ಲೇಟೋವಿನ ಆದರ್ಶ ಪ್ರಭುಗಳ ಸ್ವಭಾವವನ್ನು ನಮ್ಮ ಸಂಸ್ಕೃತಿಯ ಪ್ರಕಾರ ವರ್ಣಿಸುವುದಾದರೆ, ಅವರು ಜೀವನ್ಮುಕ್ತರ ಜ್ಞಾನ ದೃಷ್ಟಿಯನ್ನೂ ಕರ್ಮಯೋಗಿಗಳ ಚಿತ್ತಶುದ್ಧಿಪೂರ್ವಕವಾದ ಕರ್ಮಕುಶಲತೆಯನ್ನೂ ನಿಷ್ಕಾಮ ಶ್ರದ್ಧೆಯನ್ನೂ ಹೊಂದಿರುವವರು ಎಂದು ಹೇಳಬಹುದು.

ಮಿಕ್ಕ ಜನಸಾಮಾನ್ಯರೂ ತಮ್ಮ ತಮ್ಮ ಸ್ವಭಾವಕ್ಕನುಗುಣವಾದ ಜೀವನೋಪಾಯ ಮಾರ್ಗಗಳಲ್ಲಿ ನಿರತರಾಗಿರುತ್ತಾರೆ. ಇವರನ್ನೆಲ್ಲ ಮಾರ್ಕ್ಸನ ಸೌಮ್ಯವಾದದ ಪ್ರಕಾರ ವೈಶ್ಯವೃತ್ತಿ ಪ್ರಧಾನರಾದ ಬಂಡವಾಳಗಾರರ ವರ್ಗವೆಂದಾಗಲಿ, ಆಸ್ತಿಯೆಂಬುದನ್ನರಿಯದೆ ದೇಹಶ್ರಮದಿಂದ ಜೀವನ ಮಾಡುವ ಕೂಲಿಕಾರ ವರ್ಗವೆಂದಾಗಲಿ ವಿಂಗಡಿಸುವುದು ಪ್ಲೇಟೋವಿನ ಸಮಾಜವ್ಯವಸ್ಥೆಗೆ ಸರಿಹೊಂದುವುದಿಲ್ಲ. ಕೇವಲ ಶ್ರಮಜೀವಿಗಳನ್ನು ಪ್ಲೇಟೋ ಆಗಿನ ಕಾಲದಲ್ಲಿ ಪ್ರಚಾರದಲ್ಲಿದ್ದ ದಾಸವರ್ಗದಲ್ಲಿ ಸೇರಿಸುತ್ತಾನೆ. ನಾಗರಿಕರೆಂಬವರಿಗೆಲ್ಲ ಭೂಮಿಯೋ ಇತರ ಉದ್ಯೋಗದಿಂದ ಸಂಪಾದಿಸಿದ ಆಸ್ತಿಯೋ ಸ್ವಲ್ಪವಾದರೂ ಇರುತ್ತಿತ್ತು. ಹಿಂದಿನಿಂದ ಬಂದಿದ್ದ ದಾಸಪದ್ಧತಿಯನ್ನು ತೊಡೆದು ಹಾಕಿ ಸರ್ವರಿಗೂ ನಾಗರಿಕ ಹಕ್ಕುಗಳನ್ನು ಕೊಟ್ಟು ಸರ್ವರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಬೇಕೆಂಬ ಯೋಚನೆ

ಗ್ರೀಕ್ ರೋಮನ್ ಕಾಲಗಳಲ್ಲಿ ಯಾರಿಗೂ ತೋರಲಿಲ್ಲ. ಈ ದಾಸಪದ್ಧತಿಯು ಮೊನ್ನೆ ಮೊನ್ನೆಯ ತನಕ ಯೂರೋಪು ಅಮೆರಿಕಗಳಲ್ಲಿ ನಡೆದು ಕೊಂಡು ಬಂದಿತ್ತು.

ಇಂಥ ದಾಸರನ್ನು ಬಿಟ್ಟರೆ ನಾಗರಿಕರ ವರ್ಗಗಳಲ್ಲಿ ಮಾರ್ಕ್ಸನ ಬಂಡವಾಳಗಾರ ಕೂಲಿವರ್ಗ ಭೇದವು ಪ್ಲೇಟೋವಿನ ಆದರ್ಶ ರಾಜ್ಯದಲ್ಲಿ ಕಾಣಬರುವುದಿಲ್ಲ. ನಾಗರಿಕರಲ್ಲಿ ಎಲ್ಲರೂ ತಮ್ಮ ತಮ್ಮ ಯೋಗ್ಯತಾನುಸಾರ ಏಳಿಗೆಗೆ ಬರಬಹುದು; ಸಂಪತ್ತನ್ನು ಸಂಪಾದಿಸಿ ಅನುಭವಿಸಬಹುದು.

ಐಶ್ವರ್ಯವೇ ಸಮಾಜದಲ್ಲಿ ಮಾನಮನ್ನಣೆಗಳಿಗೆ ಮೂಲವಾದರೆ ಅದರಿಂದ ವಿಪತ್ತು ಬಂದೊದಗುವುದೆಂಬುದು ರಾಜ್ಯವಿಪ್ಲವ ಮಾರ್ಗವನ್ನು ನಿರೂಪಿಸುವ ಸಂದರ್ಭದಲ್ಲಿ ಸೂಚಿಸಿದೆ. ಸಮಾಜದ ರೋಗರುಜಿನಗಳಿಗೆ ಬಹುಮಟ್ಟಿಗೆ ಧನಾಭಾವ ಧನಲಾಭಗಳೇ ಮುಖ್ಯಕಾರಣವೆಂಬ ತತ್ತ್ವವನ್ನು ಕಾರ್ಲ್ ಮಾರ್ಕ್ಸನಂತೆಯೇ ಪ್ಲೇಟೋ ಕೂಡ ಮನಗಂಡಿದ್ದನು. ನಿರಾಶೆಯಿಂದ ಉನ್ಮತ್ತರಾದ ನಿರ್ಗತಿಕರು ಹೆಚ್ಚಿದ ಹಾಗೆಲ್ಲ ಸಮಾಜದಲ್ಲಿ ವಿಪ್ಲವದ ಜ್ವಾಲಾಮುಖಿಯು ಉದ್ರೇಕಗೊಳ್ಳುವುದು ಸಹಜವೆಂದು ಅವನ ಅಭಿಪ್ರಾಯ.

ಆದ್ದರಿಂದ ಪ್ರಭುತ್ವದವರಿಗೆ ಆಸ್ತಿಪಾಸ್ತಿಯ ಸೋಂಕೇ ಇಲ್ಲದಂತೆ ಪ್ಲೇಟೋ ಶಾಸನ ಮಾಡುತ್ತಾನೆ. ಪಾಲಕರಿಗೂ ಸಹಾಯಕರಿಗೂ ಆಸ್ತಿ ಸಂಪಾದನೆಗೆ ಅವಕಾಶವಿರಕೂಡದು. ಅವರು ಸಂಪದಭಿವೃದ್ಧಿ ಕಾರ್ಯದಲ್ಲಿ ಮಗ್ನರಾಗಿ ರಾಜ್ಯಭಾರ ಕಾರ್ಯದಲ್ಲಿ ದಕ್ಷತೆ ಆಸಕ್ತಿಗಳನ್ನು ಕಳೆದುಕೊಳ್ಳುವ ಅವಕಾಶವೇ ಅವರಿಗಿರಬಾರದೆಂದು ಶಾಸನ ಮಾಡುತ್ತಾನೆ. ಶಾಸಕರು ತಾವು ಹಣವನ್ನು ಮುಟ್ಟುವುದಿಲ್ಲವೆಂಬ ಶಾಸನವನ್ನು ಮೊದಲು ಒಪ್ಪಿಕೊಳ್ಳಬೇಕು.

ನಮ್ಮಲ್ಲಿ ಬ್ರಾಹ್ಮಣವರ್ಗದವರೂ ಸಂನ್ಯಾಸಿಗಳೂ ಅರ್ಥಾನ್ವೇಷಣಕ್ಕೆ ಹೇಗೆ ಮನಗೊಡದವರಾಗಿರಬೇಕೆಂಬ ನಿಯಮವಿತ್ತೋ ಹಾಗೆ ತನ್ನ ಆದರ್ಶರಾಜ್ಯದಲ್ಲಿ ಶಾಸನಕಾರರಿಗೂ ಆಡಳಿತಗಾರರಿಗೂ ಸೈನ್ಯದವರಿಗೂ ಆಸ್ತಿಪಾಸ್ತಿಗಳ ಹಂಬಲಿರಕೂಡದೆಂದು ಕರಾಳಶಾಸನವನ್ನು ಪ್ಲೇಟೋ ಘೋಷಿಸುತ್ತಾನೆ.

ಹಾಗೆಯೇ, ಪ್ರಭುತ್ವದವರಿಗೆ ಕುಟುಂಬ ಜೀವನವು ಕೂಡ ಇರಕೂಡದೆಂಬ ಸಾಹಸದವರೆಗೆ ಪ್ಲೇಟೋವಿನ ಧೋರಣೆ ಹೋಗುತ್ತದೆ. ಇವರಿಗೆ ಹೆಂಡತಿ, ಮಕ್ಕಳು, ಸ್ವಂತ ಮನೆ ಇವು ಯಾವುವೂ ಇರಕೂಡದು ಎಂದು ಆಗ್ರಹಪೂರ್ವಕವಾಗಿ ಹೇಳುತ್ತಾನೆ. ಈ ವಿಷಯವಾಗಿ ಮುಂದೆ ವಿವರಿಸುತ್ತೇವೆ.

ರಾಜ್ಯದಂಡವನ್ನು ಹಿಡಿದವರಿಗೆ ಸ್ವಂತ ಆಸ್ತಿ, ಸಂಪತ್ತು, ಸ್ವಂತ ಮನೆ ಮಠ, ಹೆಂಡಿರುಮಕ್ಕಳು ಇವುಗಳ ಹಂಗು ಇರುಕೂಡದೆಂಬ ಪ್ಲೇಟೋವಿನ ವ್ಯವಸ್ಥೆಯು ಒಂದು ರೀತಿಯಲ್ಲಿ ಈಗಿನ ಸೌಮ್ಯವಾದವನ್ನು (ಮಾರ್ಕ್ಸನ ವಾದ) ಹೋಲು ವುದಾದರೂ, ಸ್ವರೂಪದಲ್ಲಿಯೂ, ಧ್ಯೇಯದಲ್ಲಿಯೂ ಎರಡಕ್ಕೂ ಬಹಳ ಅಂತರವಿದೆ. ಮುಖ್ಯವಾಗಿ ಪ್ಲೇಟೋವಿನದು ಆಧ್ಯಾತ್ಮಿಕ ದೃಷ್ಟಿ. ಆತ್ಮೋದ್ಧಾರವೇ ಮನುಷ್ಯನ

ಆತ್ಯಂತಿಕ ಧ್ಯೇಯ ಎಂಬುದೇ ಅವನ ಮತ. ಮಾರ್ಕ್ಸನಾದಾದರೋ ಪ್ರಾಕೃತ ದೃಷ್ಟಿ. ಐಹಿಕ ಸುಖ ಸಂಪತ್ತುಗಳೇ ಮನುಷ್ಯಜೀವನದ ಪರಮ ಧ್ಯೇಯವಾದ್ದರಿಂದ ಇವು ಸರ್ವರಿಗೂ ಸಮಾನವಾಗಿ ಲಭ್ಯವಾಗಬೇಕೆಂಬುದೇ ಅವನ ಮುಖ್ಯೋದ್ದೇಶ.

ಸಮಾಜದ ವ್ಯವಸ್ಥೆಯ ವಿಷಯದಲ್ಲಿ ಪ್ಲೇಟೋವಿಗೂ ನಮ್ಮ ವರ್ಣಾಶ್ರಮ ಧರ್ಮಕ್ಕೂ ಮತ್ತೊಂದು ವ್ಯತ್ಯಾಸವಿದೆ. ಭಾರತೀಯ ವ್ಯವಸ್ಥೆಯ ವರ್ಣಧರ್ಮವು ಜಾತಿಮೂಲವಾದದ್ದು. "ಜಾತಿಯೇ ಮುಖ್ಯವಲ್ಲ; ಮನುಷ್ಯನ ಕರ್ಮ ಗುಣಗಳಿಗೆ ಅನುರೂಪವಾಗಿ ಅವರವರ ಸ್ಥಾನಗತಿಗಳು ನಿಯತವಾಗಬೇಕು: ಪೂರ್ವದಲ್ಲಿ ಎಲ್ಲರೂ ಒಂದೇ ವರ್ಗಕ್ಕೆ ಸೇರಿದ್ದರು; ತರುವಾಯ ಒಂದಲ್ಲ ಒಂದು ಕಾರಣದಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮೊದಲಾದ ವರ್ಣಗಳು ಹುಟ್ಟಿದವು; ಇಲ್ಲಿ ವರ್ಣ ಎಂದರೆ, 'ಚರ್ಮದ ಬಣ್ಣ, ಮಾನವ ಜಾತಿಯನ್ನು ಸೂಚಿಸುವ ಬುಡಕಟ್ಟಿನ ಭೇದ ವಿಶೇಷ' ಎಂಬ ಅರ್ಥ ಸರಿಯಲ್ಲ; ವರ್ಣ ಎಂಬುದು ವೃಣು ಧಾತುವಿನಿಂದ ಹುಟ್ಟಿ, ಅದಕ್ಕೆ ಅಯುವುದು ಎಂಬ ಅರ್ಥವೇ ಪ್ರಧಾನ" – ಎಂದು ಮುಂತಾಗಿ ಈಗ ಪ್ರಚಾರದಲ್ಲಿರುವ ಜಾತಿ ವ್ಯವಸ್ಥೆಯನ್ನೂ ವರ್ಣವ್ಯವಸ್ಥೆಯನ್ನೂ ಬೇರ್ಪಡಿಸಿ, ವರ್ಣವ್ಯವಸ್ಥೆಗೆ ಮಾನಸಿಕ ಸಂಪತ್ತನ್ನು ಆಧಾರಮಾಡತಕ್ಕ ಮನೋಧರ್ಮವು ಭಾರತದಲ್ಲಿ ಈಚಿನದು. ಇದು ಪ್ಲೇಟೋವಿನ ವರ್ಗಸಮರಸವಿಧಾನಕ್ಕೆ ಹೊಂದುವುದಿಲ್ಲ.

ಪ್ಲೇಟೋವಿನ ಪ್ರಕಾರ ನಾಗರಿಕರೆಲ್ಲರೂ ಒಂದೇ ವಿದ್ಯಾಭ್ಯಾಸ ಕ್ರಮಕ್ಕೆ ಅರ್ಹರು. ಒಂದೇ ವಿದ್ಯಾಭ್ಯಾಸ ಕ್ರಮ ಮತ್ತು ಪರೀಕ್ಷಾ ವಿಧಾನದ ಮೂಲಕ ಶ್ರೇಷ್ಠರು ಪ್ರಭುತ್ವಸ್ಥಾನಕ್ಕೇರಲು ಅರ್ಹತೆಯನ್ನು ಪಡೆಯುತ್ತಾರೆ. ಇದರಲ್ಲಿ ಜಾತಿ ಕುಲಗಳ ಭೇದವಿರುವುದಿಲ್ಲ. ಪ್ರಭುತ್ವದವರ ಮಕ್ಕಳಲ್ಲಿ ಕೆಲವರು ಹಿತ್ತಾಳೆ, ತಾಮ್ರ ಸ್ವಭಾವದವರಾಗಿರಬಹುದು. ಅಂಥವರನ್ನು ಪ್ರಭುತ್ವವರ್ಗದಿಂದ ತಳ್ಳಿಹಾಕಬೇಕು. ಹಿತ್ತಾಳೆ ತಾಮ್ರ ಜೀವರಿಗೆ ಬಂಗಾರ ಬೆಳ್ಳಿ ಜೀವದ ಸಂತಾನಪ್ರಾಪ್ತವಾಗಬಹುದು. ಅಂಥವರು ತಮ್ಮ ಶ್ರೇಷ್ಠ ಯೋಗ್ಯತೆಯ ಪ್ರಕಾರ ಪ್ರಭುತ್ವವರ್ಗಕ್ಕೆ ಏರಲು ಅವಕಾಶವಿರಬೇಕು.

ಇಂಥ ವರ್ಗನಿರ್ಣಯ ವರ್ಗವಿನ್ಯಾಸಗಳು ಪ್ರಭುತ್ವದವರಿಗೆ ಸೇರಿದ ಕರ್ತವ್ಯಗಳಲ್ಲಿ ಮುಖ್ಯವಾದ್ದು. ಸಮಾಜದ ಉನ್ನತ ಸ್ಥಾನಗಳಿಗೆ ಅವುಗಳ ಕಾರ್ಯನಿರ್ವಾಹಕ್ಕೆ ಅವಶ್ಯಕವಾದ ಯೋಗ್ಯತೆಯನ್ನು ಹೊಂದಿರುವವರು ಸಾಕಷ್ಟು ಸಿಕ್ಕಬೇಕಾದರೆ, ಅವರನ್ನು ಸಮಗ್ರ ಸಮಾಜದಿಂದ ಆರಿಸಿಕೊಳ್ಳಬೇಕು. ಆಯ್ಕೆಯ ಕ್ಷೇತ್ರವು ಸಂಕೋಚವಾದರೆ ಸಾಕಾದಷ್ಟು ಮಂದಿ ಅರ್ಹರು ಸಿಕ್ಕುವುದು ದುರ್ಲಭ. ಹಾಗೆ ಸಿಕ್ಕಿದ ಅರ್ಹರ ಗುಣಸಂಪತ್ತಿಯ ಮಟ್ಟವೂ ಕುಗ್ಗುತ್ತ ಬರುವ ಸಂಭವವಿದೆ. ಸಂಖ್ಯೆಯಲ್ಲಿಯೂ ಗುಣಸಂಪತ್ತಿಯಲ್ಲಿಯೂ ಯೋಗ್ಯರು ಏರುತ್ತ ಹೋಗುವುದು ಉತ್ತಮ ಸಮಾಜದ ಲಕ್ಷಣ. ಇಂಥ ಪ್ರಗತಿ ದೃಷ್ಟಿಯು ಪ್ಲೇಟೋವಿನ ವ್ಯವಸ್ಥಾ ಸೂತ್ರಗಳ ಮರ್ಮ.

ಇದೇ ನಮ್ಮ ವರ್ಣವ್ಯವಸ್ಥೆಗೂ ಅನ್ವಯಿಸತಕ್ಕ ಸೂಕ್ಷ್ಮತತ್ತ್ವವೆಂದರೆ ತಪ್ಪಾಗಲಾರದು. ಸಮಾಜದ ವರ್ಗವ್ಯವಸ್ಥೆಯು ಯೋನಿಕೃತ ಜಾತಿ ಮೂಲದಿಂದ ಯೋಗ್ಯತಾನಿಷ್ಠ ಕರ್ಮಗುಣಗಳ ಆಧಾರಕ್ಕೆ ತಿರುಗಬೇಕಾದ್ದು ಸಮಾಜದ ಪ್ರಗತಿಗೆ ಸಹಾಯಕವಾದ ಮೂಲತತ್ತ್ವ. ಈ ತತ್ತ್ವವು ಸಂಪ್ರದಾಯಲಬ್ಧವಾದ ವರ್ಣಧರ್ಮದಲ್ಲಿ ಜಾತಿಪದ್ಧತಿಯಿಂದಲೂ ಈಗಿನ ನಗರ ಪದ್ಧತಿಯಲ್ಲಿ ಹಣದ ಪ್ರಾಬಲ್ಯದಿಂದಲೂ ಮರೆಯಾಗಿಹೋಗಿರುತ್ತದೆ.

ಅಂತೂ, ವರ್ಗವ್ಯವಸ್ಥೆಯು ಸಮಾಜದ ಇರುವಿಕೆಗೂ ಏಳಿಗೆಗೂ ಅತ್ಯಾವಶ್ಯಕವೆಂಬುದು ಭಾರತದ ಪದ್ಧತಿಗೂ ಪ್ಲೇಟೋವಿನ ಸಿದ್ಧಾಂತಕ್ಕೂ ಸಾಧಾರಣವಾಗಿ ಅನ್ವಯಿಸತಕ್ಕ ತತ್ತ್ವವಾಗಿದೆ.

ಇದು ಕಾರ್ಲ್ ಮಾರ್ಕ್ಸನ ಸೌಮ್ಯವಾದಕ್ಕೆ ನೇರ ವಿರೋಧನಾಗಿರುವಂತೆ ತೋರುತ್ತದೆ. ಏಕೆಂದರೆ, ಅದರ ಆಶಯ ವರ್ಗರಹಿತವಾದ ಸಮಾಜ. ವರ್ಗವೇ ವರ್ಗಶೋಷಣೆಗೆ ಕಾರಣ. ವರ್ಗಲಯವಾದರೆ ಅದರೊಡನೆ ದೀನದರಿದ್ರರ ಶೋಷಣೆಯೂ ಇಲ್ಲದೆ ಹೋಗುವುದು – ಎಂಬುದು ಸೌಮ್ಯವಾದದ ದೃಷ್ಟಿ. ಆದರೆ, ವರ್ಗವ್ಯವಸ್ಥೆಯಿಂದ ಉತ್ಪನ್ನವಾಗುವ ಅನ್ಯಾಯ, ಶೋಷಣೆಗಳು ವರ್ಗಮೂಲವಲ್ಲ; ಯೋಗ್ಯತಾಯೋಗ್ಯತಾ ನಿರ್ಣಯವಿಲ್ಲದೆ ಯೋಗ್ಯರಿಗೆ ವಿದ್ಯಾಬುದ್ಧಿಗಳ ವಿಕಾಸಕ್ಕೆ ಅವಕಾಶ ಕೊಡದ ವರ್ಗದ ದುರ್ವ್ಯವಸ್ಥೆಯೇ ಸಮಾಜದಲ್ಲಿ ನಡೆಯುವ ಕೇಡಿಗೆಲ್ಲ ಕಾರಣ–ಎಂಬುದೇ ಪ್ಲೇಟೋವಿನ, ಅಂತೆಯೇ ಭಾರತೀಯ ಸಮಾಜಶಾಸ್ತ್ರದ ಅಭಿಪ್ರಾಯ.

ಅಲ್ಲದೇ, ವರ್ಗಗಳು ಮಾನವ ಸ್ವಭಾವಕ್ಕೆ ಸೇರಿದವಾದ್ದರಿಂದ ಅವುಗಳನ್ನು ನಿರ್ಮೂಲ ಮಾಡುವುದಕ್ಕಾಗುವುದಿಲ್ಲ. ಹಾಗೆ ನಿರ್ಮೂಲ ಮಾಡುವ ಪ್ರಯತ್ನ ಕೂಡ ಸಫಲವಾಗಬೇಕಾದರೆ, ಅದಕ್ಕಾಗಿ ಆ ತತ್ತ್ವವನ್ನು ಕಾರ್ಯರೂಪಕ್ಕೆ ತರಲು ಬದ್ಧಕಂಕಣರಾಗಿ ನಿಂತ ಹೊಸ ವರ್ಗವೇ ಬೇಕಾಗುತ್ತದೆ. ಈ ತತ್ತ್ವವು ರಷ್ಯದಲ್ಲಿ ಈಗ ಮೂರ್ತಿ ಮತ್ತಾಗಿರುವ ಸಾಮ್ಯವಾದ ಪಕ್ಷದ ಪ್ರಭುತ್ವದ ಚರಿತ್ರೆಯಲ್ಲಿ ಕಾಣಬರುತ್ತದೆ.

ಮನುಷ್ಯರಲ್ಲಿ ಭೇದವು ಸ್ವಭಾವಜನ್ಯವೂ ಅನಿವಾರ್ಯವೂ ಆಗಿದೆ. ಸಮಾಜ ಸುಧಾರಣೆ ಮತ್ತು ರಾಜ್ಯಾಂಗ ನಿರ್ಮಾಣಗಳ ಕುಶಲತೆಯಿರುವುದು ಈ ಭೇದವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದರಲ್ಲಿ ; ಇದನ್ನು ನಿರ್ನಾಮಮಾಡುವುದರಲ್ಲಲ್ಲ.

ಈ ವಿಧವಾಗಿ ಪರಸ್ಪರ ವಿರೋಧ ಧ್ಯೇಯಗಳುಳ್ಳ ವ್ಯವಸ್ಥೆಗಳ ಸತ್ವ ತತ್ತ್ವ ಪರೀಕ್ಷೆಗಳು ಈಗಿನ ಪ್ರಪಂಚದಲ್ಲಿ ಮಹದಾಕಾರದಲ್ಲಿ ನಡೆಯುತ್ತಿವೆ. ಈ ವಿರೋಧವನ್ನು ಪ್ರಜಾರಾಜ್ಯ, ಯೋಗ್ಯರ ರಾಜ್ಯ, ಯೋಧರ ರಾಜ್ಯ, ಧನಿಕರ ರಾಜ್ಯ ಮುಂತಾದ ರಾಜ್ಯಾಂಗಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಪ್ರದರ್ಶಿಸುತ್ತವೆ.

ಅಂತೂ, ತತ್ತ್ವಾಧಾರವಾದ ವರ್ಗನಿರ್ಮಾಣ, ವರ್ಗಸಾಮರಸ್ಯ – ಇವುಗಳೇ

ಸಮಾಜ ರಾಜ್ಯಗಳ ಉತ್ತಮಾವಸ್ಥೆಯೆಂಬುದು ಪ್ಲೇಟೋವಿನ ಮುಖ್ಯ ಆಶಯವೆಂದ ಹಾಗಾಯಿತು. ಈ ಆಶಯದ ಅಂಗಗಳು ಮುಖ್ಯವಾಗಿ ಎರಡು : ಸ್ವಧರ್ಮನಿಷ್ಠವಾದ ಕಾರ್ಯವನ್ನು ಜನರು ತಮ್ಮಗುಣಕ್ಕನುಗುಣವಾದ ವರ್ಗದಲ್ಲಿ ನಿಂತು ಮಾಡುವುದು ಮೊದಲನೆಯದು; ಇದರಿಂದ ಸಹಜವಾಗಿ ಫಲಿಸುವ ಪರಸ್ಪರ ಸಹಾಯ, ಸಂಘಟನೆ, ಲೋಕಸಂಗ್ರಹ – ಇವು ಎರಡನೆಯನದು.

ವರ್ಗರಹಿತ ಸಮಾಜ ವ್ಯವಸ್ಥೆಯು ಸಾಮ್ಯವಾದದ ಪ್ರಾಬಲ್ಯದಿಂದ ಜನರ ಮನಸ್ಸನ್ನು ಸೆಳೆಯುತ್ತಿದೆ. ಆದರ್ಶ ಸಮಾಜವೆನ್ನುವುದು ವರ್ಗರಹಿತವಾಗಿರಬೇಕು. ದೀನರು, ಧನಿಕರು, ಜೀತಗಾರರು, ಯಜಮಾನರು, ಕೂಲಿಯವರು ಅವರಿಗೆ ಕೆಲಸ ಕೊಟ್ಟ ಆ ಕೆಲಸದ ಫಲವನ್ನು ಅನುಭವಿಸುವ ಶ್ರೀಮಂತ ಬಂಡವಾಳಗಾರರು, ಶ್ರಮಜೀವಿಗಳು, ವಿಹಾರಜೀವಿಗಳು ಎಂದು ಮುಂತಾದ ವೈಷಮ್ಯಕಾರಿಯಾದ ವರ್ಗ ವ್ಯವಸ್ಥೆಯು ಮಾಯವಾಗಿ ಸರ್ವಸಮಾನತೆಯನ್ನು ಸಮಾಜದ ಸಿಂಹಾಸನಕ್ಕೇರಿಸಲೆಣಿಸುವ ಸಾಮ್ಯವಾದತತ್ತ್ವವೇ ಸರ್ವೋತ್ಕೃಷ್ಟವೆಂಬ ಅಭಿಪ್ರಾಯ ಅನೇಕರ ಮನಸ್ಸನ್ನು ಆಕರ್ಷಿಸುತ್ತಿದೆ.

ಪ್ಲೇಟೋವಿನ ಸಿದ್ಧಾಂತ ಈ ದೃಷ್ಟಿಗೆ ತೀರ ವಿರುದ್ಧವಾಗಿದೆ. ಆದರೆ ಕೂಲಂಕುಷವಾಗಿ ವಿಮರ್ಶೆ ಮಾಡಿದರೆ, ಪ್ಲೇಟೋವಿನ ಸಿದ್ಧಾಂತದ ಮನನೀಯವಾದ ತತ್ತ್ವಾಂಶವೂ ಸಾಮ್ಯವಾದದಲ್ಲಿ ಪ್ರತಿಪಾದನೆಯಾಗಿರುವ ವರ್ಗರಹಿತ ಸಮಾಜ ಪದ್ಧತಿಯ ನ್ಯೂನತೆಗಳೂ ನಮಗೆ ಮನವರಿಕೆಯಾಗುತ್ತವೆ.

ವರ್ಗರಾಹಿತ್ಯವನ್ನು ಕೋರುವುದರ ಆಶಯವೇನೆಂದರೆ, ಸಾಮಾಜಿಕರಿಗೆಲ್ಲಾ ಸುಖಜೀವನದ ಸಾಮಗ್ರಿ ಮತ್ತು ಅವಕಾಶಗಳನ್ನು ಒದಗಿಸುವುದೇ. ಸಮಾನತೆಯು ಬೇಕಾಗಿರುವುದು ಆರ್ಥಿಕರಂಗದಲ್ಲಿ ಮಾತ್ರ. ಅಂತೂ, ವಿಚಾರವು ಈ ರಂಗದಿಂದ ಪ್ರಾರಂಭವಾಗುತ್ತದೆ. ಯಂತ್ರಯುಗದಲ್ಲಿ ವಿಜ್ಞಾನವು ಮಹತ್ತರವಾಗಿ ಬೆಳೆದಿದೆ. ಮಾನವನ ಸುಖಸಾಮಗ್ರಿಗಳ ನಿರ್ಮಾಣಶಕ್ತಿಯು ಅಚಿಂತ್ಯ ಅದ್ಭುತ ಪ್ರಮಾಣಗಳಲ್ಲಿ ಬೆಳೆದುಹೋಗಿದೆ; ಇನ್ನೂ ಬೆಳೆಯುತ್ತಿದೆ. ಈ ವಿಜ್ಞಾನನಿರ್ಮಿತ ಸೌಕರ್ಯಗಳನ್ನು ಜನರು ಸರಿಯಾಗಿ, ವಿತರಣೆಯಿಂದ ಉಪಯೋಗಿಸಿ ಕೊಂಡದ್ದೇ ಆದರೆ, ಈಗ ಎಲ್ಲೆಲ್ಲಿಯೂ ಕಾಣಬರುವ " ಸಮೃದ್ಧಿಯ ಮಧ್ಯದಲ್ಲಿ ದಾರಿದ್ರ್ಯ" ಎಂಬ ಅಸಹ್ಯ, ಕರಾಳ ಸನ್ನಿವೇಶವನ್ನು ಹೇಳಹೆಸರಿಲ್ಲದಂತೆ ನಿರ್ಮೂಲ ಮಾಡಬಹುದು; ಪುರಾತನಕಾಲದಿಂದಲೂ ಮಾನವನ ಹೃದಯದ ಅಂತರಾಳದಿಂದ ಏಳುತ್ತಿರುವ "ಸರ್ವೇ ಜನಾಃ ಸುಖಿನೋಭವಂತು" ಎಂಬ ಘನವಾದ ಆಶಯವನ್ನು ಸಾರ್ಥಕಗೊಳಿಸಬಹುದು. ಇಂಥ ಅಗಾಧವಾದ ಮತ್ತು ಸರ್ವಮಂಗಳಕರವಾದ ಶಕ್ತಿಯು ಮನುಷ್ಯನಿಗೆ ಯಂತ್ರಯುಗದ ಮಹಾತ್ಮೆಯಿಂದ ಲಭಿಸಿರುವುದಾದರೂ, ಪ್ರಪಂಚದಲ್ಲಿ ಈಗ ಎಲ್ಲೆಲ್ಲಿಯೂ ಕಾಣಬರುವ ದಾರಿದ್ರ್ಯವೂ ಆರ್ಥಿಕ ತಾರತಮ್ಯವೂ ತೀರ ಅಸಹನೀಯವಾಗಿದೆ. ಇದನ್ನು ತೊಡೆದು ಹಾಕಿ ಸರ್ವಜನಸಮಾನತೆಯನ್ನು ಸುದೃಢವಾಗಿ ನಿರ್ಮಿಸುವುದಕ್ಕೆ ಸಾಮ್ಯವಾದವು ಜನರನ್ನು ಕರೆಯುತ್ತದೆ.

ಈ ಉದ್ಯಮವು ಸಾಧ್ಯವಾದರೂ ಸಾಮ್ಯವಾದದ ಸೂತ್ರಗಳ ಮೂಲಕ ಇದನ್ನು ನೆರವೇರಿಸಬಹುದೆಂಬುದರಲ್ಲಿ ಸಂಶಯವಿದೆ. ಈ ಸೂತ್ರಗಳಲ್ಲಿ ಒಂದು, ಸರ್ವಆರ್ಥಿಕ ಉದ್ಯಮಗಳ (ಎಂದರೆ, ಎಲ್ಲ ಕೈಗಾರಿಕೆಗಳು, ವಾಹನಸೌಕರ್ಯಗಳು, ಬ್ಯಾಂಕ್, ಇನ್ಷೂರೆನ್ಸ್ ಸಂಸ್ಥೆಗಳು ಇವುಗಳ) ರಾಷ್ಟ್ರೀಕರಣ. ಇದರಿಂದ ಯಾರಿಗೂ ಆರ್ಥಿಕ ವಿಷಯದಲ್ಲಿ ಸ್ವತಂತ್ರ ವ್ಯಾಪಾರವಿಲ್ಲದಂತಾಗುತ್ತದೆ. ಆರ್ಥಿಕ ವಿಷಯದಲ್ಲಿ ಸ್ವಾತಂತ್ರ್ಯವಿಲ್ಲದಿದ್ದರೆ, ಎಲ್ಲರ ಜೀವನೋಪಾಯವೂ ಪ್ರಭುತ್ವದವರ ಆಳ್ವಿಕೆಗೆ ಸಂಪೂರ್ಣವಾಗಿ ವಶವಾಗುಬೇಕಾಗುತ್ತದೆ. ಇದರಿಂದ ಸ್ವಾವಲಂಬನ, ಆತ್ಮಗೌರವ ಮುಂತಾದ ಸ್ವಾತಂತ್ರ್ಯಕ್ಕೆ ತ್ರಾಣ ಹುರುಪುಗಳನ್ನು ತುಂಬುವ ಪ್ರವೃತ್ತಿ, ಮನೋಧರ್ಮಗಳಿಗೆ ಅವಕಾಶವಿಲ್ಲದಂತಾಗುವ ಸಂಭವವಿದೆ.

ಅಲ್ಲದೆ, ಆರ್ಥಿಕರಂಗದಲ್ಲಿ ರಾಜ್ಯವು ಏಕತಂತ್ರವಾದರೆ, ಇದರ ಪ್ರಭಾವವು ಜೀವನದ ಇತರ ರಂಗಗಳಲ್ಲಿಯೂ ಪ್ರವೇಶಿಸುವ ಸಂಭವವುಂಟಾಗುತ್ತದೆ. ಹೀಗಾಗಿ, ಸಾಮ್ಯವಾದ ತಂತ್ರವನ್ನನುಸರಿಸಿದ ಪ್ರಭುತ್ವವು ಮತವಿಷಯದಲ್ಲಿ ಪ್ರವೇಶಿಸಿ, ಜನರಲ್ಲಿ ಅನಾದಿಯಾಗಿ ಬಂದಿರುವ ಧರ್ಮ ಸಂಪ್ರದಾಯಗಳನ್ನು ನಿರ್ಮೂಲ ಮಾಡುವುದ್ಕಕೆ ಪ್ರಯತ್ನಪಡುವುದು ಆಶ್ಚರ್ಯವಲ್ಲ. ಪ್ರಕೃತಿವಾದವನ್ನು ಹಿಡಿದು, "ಪರಮಾತ್ಮನೆಂಬ ವಸ್ತುವೇ ಇಲ್ಲ; ಇದು ಕಟ್ಟು ಕಥೆ; ಧನಿಕರು ತಮ್ಮ ಅನುಕೂಲಕ್ಕಾಗಿ ದೀನರನ್ನು ಸ್ವಾಧೀನಪಡಿಸಿಕೊಂಡು ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೋಸ್ಕರ ತಯಾರಿಸಿರುವ ತಂತ್ರ" ಎಂದು ಮುಂತಾಗಿ ಕಾರ್ಲ್ ಮಾರ್ಕ್ಸನ ಸಾಮ್ಯವಾದವು ವಾದಿಸುತ್ತದೆ. ಇದು ಬಹುಮಟ್ಟಿಗೆ ರಷ್ಯದಲ್ಲಿ ಈಗ ರಾಜನೀತಿಗೆ ಸೇರಿದೆಯೆಂದೆನ್ನಬಹುದು. ಇದರ ವಿಷಯದಲ್ಲಿ ಅಂತಿಮತತ್ತ್ವವು ಹೇಗೇ ಇರಲಿ, ಏಕೈಕ ಸೂತ್ರ ಪ್ರಧಾನವಾದ ನೀತಿಯು ವರ್ಗರಹಿತ ಸಮಾಜಕ್ಕೆ ಸಹಜವಾಗಿ ಹೊಂದಿಕೊಂಡಿರುತ್ತದೆ. ಏಕ ಸೂತ್ರತೆಯು ಮೊದಲು ಅರ್ಥಿಕರಂಗದಲ್ಲಿ ಕಾಲಿಟ್ಟು ಅಲ್ಲಿಂದ ಹೊರಟು ಕ್ರಮೇಣ ಮತ, ಕುಟುಂಬ ಜೀವನ, ನೀತಿ, ವಿದ್ಯಾಭ್ಯಾಸಕ್ರಮ, ವಿಜ್ಞಾನ, ಕಲೆ ಈ ರೀತಿಯಾಗಿ "ಪ್ರಾಣಾರಾಮ, ಮನ ಆನಂದ"ಗಳಿಗೆ ಅವಕಾಶವಾದ ಎಲ್ಲ ರಂಗಗಳನ್ನೂ ಆಕ್ರಮಣ ಮಾಡುತ್ತದೆ; ಆಕ್ರಮಿಸಿ, ಜನಜೀವನವನ್ನು ಹೊರ ಸೂತ್ರಕ್ಕೆ ಅಧೀನವಾದ ಆಟದ ಬೊಂಬೆಗಳ ಸ್ವಭಾವವನ್ನು ಹೋಲುವಂತೆ ಮಾಡುತ್ತದೆ.

ಬಹುಮಟ್ಟಿಗೆ ಸ್ವಾತಂತ್ರ್ಯ ಉಳಿದಿರುವ ಪ್ರಜಾರಾಜ್ಯಗಳಲ್ಲಿ ಕೂಡ ಏಕ ಸೂತ್ರತೆಯ ಕಡೆಗೆ ಜನಸ್ವಭಾವವನ್ನು ಕೊಂಡೊಯ್ಯುವ ಸನ್ನಿವೇಶಗಳಿಗೂ ಸೆಳೆತಗಳೂ ಯಂತ್ರಯುಗಕ್ಕೆ ಸಹಜವಾಗಿವೆ.

ಈಗಿನ ಕುಬೇರ ರಾಜ್ಯಗಳಲ್ಲಿ ಯಂತ್ರಯುಗದ ಮಹಿಮೆಯಿಂದ ಆರ್ಥಿಕರಂಗದಲ್ಲಿ ಹೊರಡುವ ಪ್ರತೀತಿ, ಮನೋವೃತ್ತಿಗಳಿಗೇ ಪ್ರಶಸ್ತಿ ಹೆಚ್ಚು. ವ್ಯಾಪಾರೋದ್ಯಮಗಳ ಮತ್ತು ಕೈಗಾರಿಕೆಯ ಮಹದಾಗಾರಗಳ ಮೂಲಕ ಅಪಾರ ಹಣವನ್ನು ಸಂಪಾದಿಸುವರೇ ಈಗಿನ ಕಾಲದ ಧೀರರು, ಆದರ್ಶ ಪುರುಷರು. ಮೊನ್ನೆ ಮೊನ್ನೆಯತನಕ, ಕಳೆದ ಮಹಾಯುದ್ಧಗಳ ಪೂರ್ವದಲ್ಲಿ, ಅವರಿಗೆ ಅಪಾರ

ಸನ್ಮಾನ –ಹಿಂದೆ ಅವತಾರ ಪುರುಷರಿಗೆ ಸಲ್ಲುತ್ತಿದ್ದಷ್ಟು ಮಟ್ಟಿನ ಸನ್ಮಾನ–ಸಲ್ಲುತ್ತಿತ್ತು. ಈಗಲು ಅಮೇರಿಕದಲ್ಲಿ ಸಲ್ಲುತ್ತಲೇ ಇದೆ. ಆರ್ಥಿಕವ್ಯಾಪಾರದ ಬೆಲೆಗಳು ಇತರ ವ್ಯಾಪಾರಗಳಲ್ಲಿಯೂ ಪ್ರವೇಶಿಸಿವೆ. ಕೋಟ್ಯಂತರ ಡಾಲರುಗಳನ್ನು ಪಡೆದಿರುವುದು ಮನುಷ್ಯರ ಶೀಲಸ್ವಭಾವ ಮತ್ತು ಎಲ್ಲಾ ವಿಧವಾದ ಶಕ್ತಿಸಾಮರ್ಥ್ಯಗಳನ್ನೂ ಅಳೆಯುವ ಮಾನದಂಡವಾಗಿದೆ. ವಿಜ್ಞಾನಿಯೊಬ್ಬನನ್ನು ಶ್ಲಾಘಿಸಬೇಕಾದರೆ, "ಕೋಟಿಡಾಲರ್ ವಿಜ್ಞಾನಿ" ಎನ್ನುತ್ತಾರೆ ಕವಿಯನ್ನಾಗಲಿ ರಾಜಕಾರಣಿಯನ್ನಾಗಲಿ ಯೋಧನನ್ನಾಗಲಿ ಶ್ಲಾಘನೆ ಮಾಡುವ ಸಂದರ್ಭದಲ್ಲಿಯೂ ಹೀಗೆಯೇ. ಮೊದಲು, ಉತ್ಪಾದನಾಗಾರಗಳನ್ನು ನಿರ್ಮಿಸುವ ಕೌಶಲ್ಯಕ್ಕೆ ಮೊದಲನೆಯ ಅಂತಸ್ತು ಸಿಕ್ಕುತ್ತಿತ್ತು. ಈಗ ಸಾಮಾನುಗಳನ್ನು ಮಾರಾಟ ಮಾಡುವವರ ಸಾಮರ್ಥ್ಯಕ್ಕೆ ಹೆಚ್ಚು ಮನ್ನಣೆಯಿದೆ. ಅಮೆರಿಕನರು ರಷ್ಯನರನ್ನು ಒಂದು ನೀತಿಗೆ ಒಪ್ಪಿಸಬೇಕಾದರೆ, "ಅವರು ಆ ನೀತಿಯನ್ನು ಮಾರುವುದಕ್ಕೆ ಹೊರಟಿದ್ದಾರೆ" ಎಂಬ ಮಾತು ಬರುತ್ತದೆ. ಯಾವುದೇ ಕೆಲಸವನ್ನು ಫಲಕಾರಿಯಾಗಿ ಮುಕ್ತಾಯಗೊಳಿಸಬೇಕಾದರೂ ಅದಕ್ಕೆ ಅನುಸರಿಸಬೇಕಾದ ಕಾರ್ಯಕಲಾಪಗಳನ್ನು ಅದರ ಮಾರಾಟವೆಂದು ಕರೆಯುತ್ತಾರೆ. ಯಾವ ಕೆಲಸವಾದರೂ ನೆರವೇರಿದಾಗ, ಅದು ಮಾರಾಟವಾಯಿತೆಂದರೆ ವಿಷಯ ಜನರ ಮನಸ್ಸಿಗೆ ಹಿಡಿಯುತ್ತದೆ. ಹೀಗೆಯೇ, ಒಂದು ಮದುವೆ ಸುಖಮಯವಾಗಿ ಪರಿಣಮಿಸಿದರೂ ಅದನ್ನು ಕೂಡ 'ಮಾರಾಟವಾಯಿತು' ಎನ್ನುವ ವಾಡಿಕೆ ಬಂದುಹೋಗಿದೆ!

ಹೀಗೆ ಜೀವನದ ಎಲ್ಲ ವಿಷಯಗಳಲ್ಲಿಯೂ ಒಂದೇ ವಿಧವಾದ ಅಭಿಪ್ರಾಯಗಳೂ ಧ್ಯೇಯಗಳೂ ಆದರ್ಶಗಳೂ ರಾಗದ್ವೇಷಗಳೂ ಏಕಕಾಲದಲ್ಲಿ ಪ್ರವಹಿಸಿ ತಾಂಡವವಾಡುವುದು ಆಧುನಿಕ ಸಮಾಜದ ಸ್ವಭಾವವಾಗಿ ಪರಿಣಮಿಸುತ್ತಿದೆ. ಈಗಿನ ಕಮ್ಯೂನಿಸ್ಟ್ ರಾಜ್ಯಗಳಲ್ಲಿ ಇದರ ಪರಾಕಾಷ್ಠತೆಯನ್ನು ಕಾಣಬಹುದು.

ಇದರ ದುಷ್ಪರಿಣಾಮವೇನೆಂದರೆ, ಜನರ ಮನಸ್ಸಿನ ಬೆಳವಣಿಗೆಗೆ ಅದು ತರುವ ಆತಂಕ. ಜನರ ಸ್ವಭಾವಗಳು ಭಿನ್ನವಾಗಿರುತ್ತವೆ; ಅವರ ಮನಸ್ಸು ಭಿನ್ನಭಿನ್ನ ವೇಗದಿಂದ ಹರಿಯುತ್ತದೆ. ಜನರ ಗುಣಗಳು ಅವರವರ ಭಿನ್ನ ಸ್ವಭಾವವನ್ನನುಸರಿಸುತ್ತದೆ. ಪುನರ್ಜನ್ಮವನ್ನೊಪ್ಪದಿದ್ದರೂ ಅನುವಂಶಿಕ ಗುಣಭೇದಗಳನ್ನು ಒಪ್ಪಲೇ ಬೇಕಾಗಿದೆ. ಅನುವಂಶಿಕ ಗುಣಸಂಪತ್ತಿ ಭೇದದಿಂದಲೂ ಕುಟುಂಬ, .ಕುಲ, ಜನಾಂಗ, ವೃತ್ತಿ, ಧರ್ಮ, ನೀತಿ ಸಂಪ್ರದಾಯಗಳು, ಸಾಮಾಜಿಕ ಸಂಸ್ಥೆಗಳು–ಇವುಗಳಲ್ಲಿ ತೋರಿಬರುವ ಭೇದಗಳ ಪ್ರಭಾವದಿಂದಲೂ ಜನರ ಮನಸ್ಸು ವಿಧವಿಧವಾಗಿರುತ್ತದೆ.

ಅಲ್ಲದೆ, ಜನರ, ಕೆಲಸವೂ ಅವರ ಮನಸ್ಸಿನ ಮೇಲೆ ಮಹತ್ತರವಾದ ಪರಿಣಾಮವನ್ನುಂಟುಮಾಡುತ್ತದೆ. ಹಳ್ಳಿಗಾಡಿನಲ್ಲಿದ್ದು ವ್ಯವಸಾಯ ವೃತ್ತಿಯನ್ನನುಸರಿಸುವವರ ಮಾನಸಿಕ ಪ್ರಪಂಚವೇ ಬೇರೆ; ನಗರವಾಸಿಗಳಾಗಿದ್ದು ನಗರದ ಕಚೇರಿ ಮಿಲ್ಲುಗಳಲ್ಲಿ ಕೆಲಸ ಮಾಡುವವರ ಮಾನಸಿಕ ವಾತಾವರಣವೇ

ಬೇರೆ. ಕೂಲಿಕಾರರ ಮನೋವೃತ್ತಿಗೂ ಗಿರಣಿಮಾಲೀಕರ ಮನೋಧರ್ಮಕ್ಕೂ ಬಹಳ ಭೇದವಿರುತ್ತದೆ. ಹೀಗೆಯೇ ವಿಜ್ಞಾನದಲ್ಲಿ ನಿರತರಾಗಿರುವವರಿಗೂ ಮತಧರ್ಮಾಚರಣೆಯಲ್ಲಿ ಆಸಕ್ತರಾಗಿರುವವರಿಗೂ ಬಹಳ ವ್ಯತ್ಯಾಸವಿರುವುದು ಸಹಜವಾಗಿದೆ. ಹೀಗಿರುವಾಗ, ಯಾವುದೋ ಒಂದು ಗುಂಪು ತಮ್ಮ ಒಂದು ದೃಷ್ಟಿಯಿಂದ ರಾಜ್ಯದಲ್ಲಿ ಜನರ ಮನಸ್ಸನ್ನಾಕ್ರಮಿಸಿದರೆ, ಅವರ ಮನೋವೃತ್ತಿಯು ಇತರ ಎಲ್ಲ ಗುಂಪಿನವರಿಗೂ ಪ್ರಮಾಣವಾಗುವುದು ಈಗಿನ ಯಂತ್ರ ಯುಗದಲ್ಲಿ ಸಾಧಾರಣವಾಗುತ್ತ ಬಂದಿದೆ. ವರ್ಗರಹಿತ ಸಮಾಜದಲ್ಲಿ ಹೀಗೆ ಒಂದು ಗುಂಪಿನ ಮನೋಧರ್ಮವು ಉಳಿದೆಲ್ಲರಿಗೂ ಹರಡಿ ಪ್ರಭಾವ ಬೀರುವುದು. ಇದು ಸಾಮ್ಯವಾದದ ಪ್ರಭಾವಕ್ಕೆ ಅನುಗುಣವಾಗಿದೆ.

ಈ ಸ್ಥಿತಿಯ ಅವಗುಣವೇನೆಂದರೆ, ಜನರ ಮಾನಸಿಕವ್ಯಾಪಾರದಲ್ಲಿ ಉಂಟಾಗುವ ಅವ್ಯವಸ್ಥೆ, ಜನರು ತಮ್ಮ ಸ್ವಭಾವಕ್ಕನುಗುಣವಾಗಿಯೂ ತಮ್ಮ ವರ್ಗದವರ ಮತ್ತು ನೆರೆಹೊರೆಯವರ ಅನುಭವಕ್ಕೆ ಬಂದ ರೀತಿಯಲ್ಲಿಯೂ ಬೆಳೆಯುತ್ತ ಆಚಾರ ವ್ಯವಹಾರಗಳನ್ನು ನಡಸುವುದನ್ನು ಬಿಟ್ಟು ಇತರರ ಅನುಭವದಿಂದ ಬಂದ ಅಭಿಪ್ರಾಯಗಳನ್ನು ಅನುಮೋದಿಸಲು ಪ್ರಾರಂಭಿಸುತ್ತಾರೆ. ಇದರಿಂದ ಇವರ ಮನೋಗತಿಯು ಕೃತಕವಾಗುತ್ತದೆ; ದುರ್ಬಲವಾಗುತ್ತದೆ. ಜನರಲ್ಲಿ ಪ್ರಾಮಾಣಿಕತೆ ಕ್ಷೀಣಾವಾಗುತ್ತದೆ; ಸ್ವಾವಲಂಬನ ಬುದ್ಧಿ ಕುಗ್ಗುತ್ತದೆ. ಕೊನೆಗೆ ಬೀದಿಯಲ್ಲಿ ಕೇಳಬರುವ ಕೂಗುಗಳಿಗೆಲ್ಲ ಮನಸೋತು ತಮ್ಮ ಸ್ವಂತ ಆತ್ಮಭಾವವನ್ನೇ ಕಳೆದುಕೊಂಡು ಪ್ರಬಲರ ಕೈಗೊಂಬೆಗಳಾಗಿ ಪರ್ಯವಸಾನ ಹೊಂದುತ್ತಾರೆ. ಈ ಸ್ಥಿತಿಯು ಸರ್ವಾಧಿಕಾರಗಳ ಏಕ ಸೂತ್ರತೆಗೆ ಅನುಕೂಲವೇ ಹೊರತು ಸ್ವಾತಂತ್ರ್ಯ ಪ್ರೇಮಪೂರಿತರಾದ ಸ್ವಾವಲಂಬನ ಪ್ರಿಯರಾದ, ಕ್ರಿಯಾಶೀಲರಾದ, ಮನೋದಾರ್ಢ್ಯವುಳ್ಳ ನಾಗರಿಕರ ಬೆಳವಣಿಗೆಗೆ ಅನುಕೂಲವಾಗಿರುವುದಿಲ್ಲ.

ಹೊರಗಿನ ದೃಷ್ಟಿಗೆ ಜನರೆಲ್ಲ ಹೆಚ್ಚು ಕಡಮೆ ಒಂದೇ ರೀತಿಯಾಗಿ. ಕಾಣಬಹುದು. ಅವರ ಶರೀರಗಳಲ್ಲಿ ಕಾಣಬರಬಹುದಾಧ ಭೇದಗಳೇನೂ ಮಹತ್ತ್ವ ಪೂರ್ಣವಾದವಲ್ಲ. ಇದೇನೋ ಸರಿಯೆ. ಆದರೆ, ನೋಡುವಹಾಗೆ ಸ್ಪಷ್ಟವಾಗಿ ನಾವು ನೋಡಬಹುದಾದರೆ, ಬೇರೆ ಬೇರೆಯವರ ಮನಸ್ಸುಗಳಲ್ಲಿ ಬಹಳ ಹೆಚ್ಚಿನ ವ್ಯತ್ಯಾಸವೇ ಕಂಡು ಬರುತ್ತದೆ ಎಂದು ಹೇಳಬಹುದು. ಎಲ್ಲರ ಮನಸ್ಸುಗಳೂ ಒಂದೇ ಎರಕದಲ್ಲಿ ಹುಯ್ದು ಒಂದೇ ಆಕಾರವನ್ನು ತಾಳಿಬಂದಂತೆ ತೋರಿ ಬರುವುದಿಲ್ಲ. ಅವರ ಮನಸ್ಸಿನ ಆಕಾರಭೇದಗಳು ಒಂದು ದೊಡ್ಡ ಯಂತ್ರದಲ್ಲಿ ಕಂಡುಬರುವ ಮೊಳೆ, ಕೀಲು, ಚಕ್ರ, ಮುಂತಾಗಿ ವಿವಿಧ ಕಾರ್ಯವಿಶೇಷಗಳಿಗೆ ಅನುರೂಪವಾದ ಭಾಗಗಳಂತೆ ಭಿನ್ನ ಭಿನ್ನವಾಗಿರುತ್ತವೆ. ಹೀಗೆಂದು ಬೊಸಾಂಕೆ ಎಂಬ ಇಂಗ್ಲಿಷ್ ದಾರ್ಶನಿಕನು ಹೇಳುತ್ತಾನೆ.

ಇದರ ತಾತ್ಪರ್ಯವಿಷ್ಟೇ : ಈಗಿನ ಬೃಹತ್ಸಮಾಜಗಳಲ್ಲಿ ಕಾರ್ಯಬಾಹುಳ್ಯವು ಮುಖ್ಯ ಲಕ್ಷಣವಾಗಿದೆ. ಆದ್ದರಿಂದ, ವಿವಿಧ ವೃತ್ತಿಗಳನ್ನು ಅನುಸರಿಸುವ ವಿವಿಧ

ವಿದ್ಯಾಬುದ್ಧಿ ಕರ್ಮಗುಣಗಳುಳ್ಳ ಜನರ ಮನೋಧರ್ಮಗಳು ಬಹಳ ವ್ಯತ್ಯಾಸವುಳ್ಳವಾಗಿರುತ್ತವೆ. ಹೀಗಿರುವುದರಿಂದ ಅವರಿಗೆಲ್ಲ ಒಂದೇ ವಿಧವಾದ ಅಭಿಪ್ರಾಯವಾಗಲಿ, ಇತರ ಮಾನಸಿಕ ವಾತಾವರಣವಾಗಲಿ ಏಕಕಾಲದಲ್ಲಿ ರುಚಿಸಿ ಅವರ ಬೆಳವಣಿಗೆಗೆ ಕಾರಣವಾಗಲು ಸಾಧ್ಯವಾಗುವುದಿಲ್ಲ.

ಅಲ್ಲದೆ, ಒಂದು ವರ್ಗದವರಲ್ಲಿ ಹರಿಯುವ ವಿಚಾರ ವಾಹಿನಿಯಲ್ಲಿ ಯಾಗಲಿ ಧರ್ಮ ನೀತಿ ಸಂಪ್ರದಾಯಗಳಲ್ಲಿಯಾಗಲಿ ಅಸತ್ಯವೂ ಹಾನಿಕರವೂ ಆದ ಅಂಶಗಳಿರಬಹುದು. ಇವುಗಳೆಲ್ಲ ಅ ವರ್ಗದವರ ಪ್ರಾಶಸ್ತ್ಯದ ಬಲದಿಂದ ಇತರ ಗುಂಪಿನವರಿಗೂ ಹರಿದು ಬಂದು ಅವರಲ್ಲಿ ಬುದ್ಧಿಭೇದವನ್ನೂ ಅರ್ಥವಿಲ್ಲದ ಅನುಕರಣ ಬುದ್ಧಿಯನ್ನೂ ತಂದೊಡ್ಡಿ, ಅವರ ಜೀವನ ಮಾರ್ಗದಲ್ಲಿ ಅನಾವಶ್ಯಕವಾದ ತೊಡಕುಗಳಿಗೆ ಕಾರಣವಾಗಬಹುದು. ನಗರದಲ್ಲಿ ನವೀನ ನಾಗರಿಕತೆಗೆ ಮನಸೋತ ಗುಂಪುಗಳಲ್ಲಿ ಮತ ಧರ್ಮಗಳಲ್ಲಿನ ಶ್ರದ್ಧೆ ಕ್ಷೀಣವಾಗಿರಬಹುದು, ನಗರದವರು ನಡೆನುಡಿಗಳಲ್ಲಿ ನಯನಾಜೂಕಿನ ಮೂರ್ತಿಗಳೇ ಆಗಿರಬಹುದು. ಈ ಕಾರಣದಿಂದಲೂ ಅವರಿಗೆ ರಾಜಕೀಯದಲ್ಲಿರುವ ಮಾನ್ಯಸ್ಥಾನ ಬಲದಿಂದಲೂ ಅವರ ನಡೆನುಡಿಗಳೇ ಇತರರಿಗೆ ಪ್ರಮಾಣವಾಗುವ ಸಂಭವವಿರುತ್ತದೆ.

ವರ್ಗವ್ಯವಸ್ಥೆಯು ಉಚ್ಛ್ರಾಯ ಸ್ಥಿತಿಯಲ್ಲಿದ್ದದ್ದೇ ಆದರೆ, ಹೀಗೆ ಮನೋಧರ್ಮಗಳು ವರ್ಗದಿಂದ ವರ್ಗಕ್ಕೆ ತಡೆಯಿಲ್ಲದೆ ಹರಿಯುವುದು ಅಸಂಭವವಾಗುತ್ತದೆ. ಏಕೆಂದರೆ, ಪ್ರತಿವರ್ಗದಲ್ಲಿಯು ಅವರವರ ಮುಖಂಡರೂ ಪ್ರಮಾಣ ಕರ್ತರೂ ಇರುತ್ತಾರೆ. ಆಯಾ ವರ್ಗಕ್ಕೆ ತಕ್ಕ, ಅದರ ಅನುಭವ ಕರ್ಮಗುಣಗಳಿಗೆ ಅನುಸಾರವಾದ ಮಾನಸಿಕ ವಾತಾವರಣವಿರುತ್ತದೆ. ಹೀಗಾಗಿ, ಹೊಸ ಅಭಿಪ್ರಾಯಗಳನ್ನೂ ನಡವಳಿಕೆಗಳನ್ನೂ ಅಂಗೀಕರಿಸುವ ಮುನ್ನ ಎಲ್ಲ ವರ್ಗಗಳಲ್ಲಿಯೂ ವಿಮರ್ಶೆ ನಡೆಯುತ್ತದೆ. ಇಂಥ ವಿಮರ್ಶೆ, ಚರ್ಚೆ ವಿಚಾರಗಳ ಫಲವಾಗಿ ವರ್ಗದವರ ಮನಸ್ಸಿಗೆ ಹಿಡಿಯತಕ್ಕ ವಿಷಯಗಳು ಅಂಗೀಕೃತವಾಗುತ್ತವೆ : ಮಿಕ್ಕವು ತಿರಸ್ಕೃತವಾಗುತ್ತವೆ. ಹೀಗೆ, ಮನಸ್ಸಿನ ವ್ಯಾಪಾರಕ್ಕೂ ಅನುಭವಕ್ಕೂ ಹೊರಗಿನ ನಡೆನುಡಿ ವಿಚಾರಗಳಿಗೂ ಹೊಂದಿಕೆಯುಂಟಾಗಿ, ಜೀವನವು ಸರಳತೆಯನ್ನೂ ಸಹಜ ಪುಷ್ಟಿಯನ್ನೂ ಹೊಂದುತ್ತದೆ, ಇದೇ ಸಂಸ್ಕೃತಿ ಬೆಳೆಯುವ ಮಾರ್ಗ.

ಹೀಗೆಯೇ ಒಟ್ಟು ರಾಜ್ಯವೂ ಕೂಡ ಇತರ ನಾಗರಿಕತೆಗಳ ಘರ್ಷಣೆಯಿಂದ ಸಂಭವಿಸಬಹುದಾದ ನಷ್ಟವನ್ನು ನಿವಾರಿಸಿಕೊಂಡು ತನ್ನ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು ಅನುಕೂಲವಾಗಬೇಕಾದರೆ ತನ್ನದೇ ಆದ ಅನುಭವಮೂಲವಾದ ಆಚಾರವಿಚಾರಗಳನ್ನು ಸುಲಭವಾಗಿ ಬಿಡಬಾರದು. ವಿಚಾರ ನಡಸಿ, ಶೋಧನೆಮಾಡಿ, ತನ್ನ ಬೆಳವಣಿಗೆಗೆ ಅನುಕೂಲವಾದ ಅಭಿಪ್ರಾಯಗಳನ್ನೂ ಯಂತ್ರ ಸೌಕರ್ಯಗಳನ್ನುಆಚಾರ ನಡೆನುಡಿಗಳನ್ನೂ ಆರಿಸಿಕೊಳ್ಳಬೇಕು. ಹೀಗೆ ಆಯ್ದು ಕೊಳ್ಳುವ ಸ್ವಾವಲಂಬನ ಬುದ್ಧಿಯನ್ನೂ ಆತ್ಮಗೌರವನ್ನೂ ಉಳಿಸಿಕೊಳ್ಳುವುದು ಎಲ್ಲ ರಾಜ್ಯಗಳಿಗೂ ಶ್ರೇಯಸ್ಕರ.

ಹೀಗೆ ಒಂದೇ ಸಮಾಜದಲ್ಲಿ ಅನೇಕ ವರ್ಗಗಳಿರುವುದರಲ್ಲಿ ಮನಶ್ಶಾಸ್ತ್ರದ ಪ್ರಕಾರ ಕೆಲವು ಅಮೂಲ್ಯವಾದ ಅನುಕೂಲಗಳಿವೆ. ಆದ್ದರಿಂದ, ಆರ್ಥಿಕ ಸಮಾನತೆಯೊಂದನ್ನೇ ಗುರಿಯಾಗಿಟ್ಟುಕೊಂಡು ಸಾಮ್ಯವಾದದ ಸಲಹೆಯ ಪ್ರಕಾರ ವರ್ಗರಹಿತ ಸಮಾಜವನ್ನು ದುಡುಕಿ ರಚಿಸಿದ್ದೇ ಆದರೆ, ಇತರ ಹಲವು ಅನರ್ಥಗಳೂ ಸಂಭವಿಸುವ ಹಾಗೆ ತೋರುತ್ತದೆ. ಇಂಥ ವರ್ಗರಹಿತ ಪದ್ಧತಿಯಿಂದ ಏಕಸೂತ್ರತೆಯು ಮಿತಿಮೀರಿ, ಆರ್ಥಿಕ ಸಾಮ್ಯದಿಂದ ಮಾನಸಿಕ ಸಾಮ್ಯಕ್ಕೆ ಸಮಾಜವು ಪರಿವರ್ತನೆಹೊಂದುವ ಸಂಭವವಿರುತ್ತದೆ. ಮನಸ್ಸಿನ ಸಾಮ್ಯದಿಂದ ಸ್ವಾತಂತ್ರ್ಯವೈಶಿಷ್ಟ್ಯಗಳ ಹಾನಿ ಸ್ವತಃಸಿದ್ಧ. ಜನರೆಲ್ಲ ಸಮಾಜದ ಏಕಸೂತ್ರದ ಕೈಗೊಂಬೆಗಳಾಗಿ ಹೋಗುವ ಸಂಭವ ಹೆಚ್ಚು.

ಈ ದೃಷ್ಟಿಯಿಂದ ಈಗಿನ ತತ್ತ್ವಚಿಂತಕರಲ್ಲಿ 'ಅನೇಕಸೂತ್ರತೆಯ ಸಮಾಜ' (Pluralist Society) ರಾಜ್ಯಗಳ ಬೆಲೆ ಹೆಚ್ಚಾಗುತ್ತ ಬಂದಿದೆ, ಆದರೆ, ಅನೇಕ ಸೂತ್ರತೆಯು ಎಲ್ಲ ವಿಷಯಕ್ಕೂ ಅನ್ವಯಿಸಿದರೆ, ಸಮಾಜದ ಐಕ್ಯಭಾವವು ಅಳಸಿಹೋಗಿ ಅನಾಯಕತ್ವವೇ ಉಂಟಾಗುತ್ತದೆ. ಆದ್ದರಿಂದ, ಸಮಾಜದಲ್ಲಿ ಏಕೀಭಾವವೂ ಇರಬೇಕು; ಅನೇಕತ್ವ ವೈಶಿಷ್ಟ್ಯಗಳೂ ಇರಬೇಕು, ಭೇದ ಅಭೇದಗಳೆರಡೂ ಅವಶ್ಯಕಗಳೇ, ಆದರೂ ಅಭೇದವೇ ತಳಹದಿಯಾಗಿದ್ದು, ಸಮಾಜದ ಕಟ್ಟುಬಿಗಿಗಳನ್ನು ಕಾಪಾಡಬೇಕು. ವೈವಿಧ್ಯವು ಕಾರ್ಯರಂಗದಲ್ಲಿ ತೋರಿಬಂದು, ಒಳಗಿನ ಅಭೇದ ಮನೋಧರ್ಮವನ್ನು ವಿವಿಧ ವರ್ಗಗಳ ಅನೇಕ ಜನರ ಸ್ವಧರ್ಮವರ್ಗಗಳ ಮೂಲಕ ವ್ಯಕ್ತಪಡಿಸಿ ಸಮಾಜದ ಸಂಪತ್ತನ್ನೂ ಏಳಿಗೆಯನ್ನೂ ಹೆಚ್ಚಿಸಬೇಕು.

ಈ ಗುಟ್ಟನ್ನು ಹಿಡಿದು ಪ್ಲೇಟೋ ತನ್ನ ವರ್ಗವ್ಯವಸ್ಥೆಯನ್ನೂ ಭಾರತೀಯರು ತಮ್ಮ ವರ್ಣಾಶ್ರಮ ಧರ್ಮವನ್ನೂ ಪ್ರತಿಪಾದಿಸಿದ್ದಾರೆ. ಆದರೆ ಪ್ಲೇಟೋವಿನ ನಿರೂಪಣೆಯಲ್ಲಿ (ಗುಲಾಮರ ಸ್ಥಾನವನ್ನು ಬಿಟ್ಟರೆ) ವರ್ಣಾಶ್ರಮ ವ್ಯವಸ್ಥೆಯ ನ್ಯೂನತೆಯನ್ನು ತ್ಯಜಿಸಿ, ಅದರ ತತ್ತ್ವಾಂಶವನ್ನು ಅಳವಡಿಸಿಕೊಂಡ ಮಹತ್ತ್ವವಿದೆ.

* * *

೧೦ನೆಯ ಅಧ್ಯಾಯ

ಮನಶ್ಶಾಸ್ತ್ರ ಮತ್ತು ಪ್ರಜಾರಾಜ್ಯ ತತ್ತ್ವ

ಇದುವರೆಗೆ ಆದರ್ಶವ್ಯಕ್ತಿ, ಆದರ್ಶರಾಜ್ಯ – ಇವೆರಡಕ್ಕೂ ನಿಕಟ ಸಂಬಂಧವಿದೆಯೆಂದು ಏರ್ಪಟ್ಟ ಹಾಗಾಯಿತು. ಒಳ್ಳೆಯ ಮನುಷ್ಯ ಎಂದರೆ ಅವನಲ್ಲಿ ಮುಖ್ಯವಾದ ಕೆಲವು ಗುಣಗಳಿರಬೇಕು. ಇವು ನಾಲ್ಕು-ಜ್ಞಾನಜನ್ಯವಾದ ವಿವೇಕ, ಧೈರ್ಯ, ಇಂದ್ರಿಯ ನಿಗ್ರಹ, ಇವೆಲ್ಲವುಗಳ ಸಾಮರಸ್ಯವಾದ ಧರ್ಮ ಬುದ್ಧಿ ಅಥವಾ ಸಮತ್ವ. ಪ್ಲೇಟೋವಿನ ಧ್ಯೇಯ ಧರ್ಮಸ್ವರೂಪವನ್ನು ರೂಪಿಸುವುದು. ಇದನ್ನು ಹೇಳುವಾಗ ಅವನು ಉಪಯೋಗಿಸುವ ಪದ 'ಡಿಕಾಯೋಸುನಿ' ಎಂಬುದು. ಈ ಗ್ರೀಕ್ ಪದವನ್ನು ಆಂಗ್ಲಭಾಷಾಂತಕಾರರು 'ಜಸ್ಟಿಸ್' (Justice) ಎಂದು ಭಾಷಾಂತರ ಮಾಡುತ್ತಾರೆ, ಆದರೆ 'ಜಸ್ಟಿಸ್' ಎಂಬ ಇಂಗ್ಲಿಷ್ ಪದ ಗ್ರೀಕಿನ 'ಡಿಕಾಯೋಸುನಿ' ಪದದ ಅರ್ಥವನ್ನೂ ಧ್ವನಿಯನ್ನೂ ಸಮರ್ಪಕವಾಗಿ ಸೂಚಿಸುವುದಿಲ್ಲ. ಇಂಗ್ಲಿಷ್ ಪದದಲ್ಲಿ 'ನ್ಯಾಯ' ಎಂಬ ಅರ್ಥವೇ ಪ್ರಧಾನವಾಗಿದೆ. 'ನ್ಯಾಯ' ಎಂಬುದು ಸಮವಾಗಿ ಹಂಚುವುದು, ತಪ್ಪಿತಸ್ಥರಿಗೆ ನಿರ್ದಾಕ್ಷಿಣ್ಯವಾಗಿ ಶಿಕ್ಷೆವಿಧಿಸುವುದು, ಅರ್ಹರಿಗೆ ಬಹುಮಾನ ಮನ್ನಣೆಗಳನ್ನು ಕೊಡುವುದು–ಇವನ್ನು ಸೂಚಿಸುತ್ತದೆ. ಅಂತೂ 'ಜಸ್ಟಿಸ್' ಪದದ ಅರ್ಥ ನ್ಯಾಯಸ್ಥಾನ ಮತ್ತು ಶಾಸನಗಳ ವಾಸನೆಯನ್ನೇ ಹೆಚ್ಚಾಗಿ ಬೀರುತ್ತದೆ. ಪ್ಲೇಟೋವಿನ ಪದವಾದರೋ, ಇನ್ನೂ ಅರ್ಥ ವಿಸ್ತೀರ್ಣವುಳ್ಳದ್ದಾಗಿರುವುದಲ್ಲದೆ ಇನ್ನೂ ಆಳವಾದ ಅರ್ಥವನ್ನು ಸೂಚಿಸುತ್ತದೆ. 'ಡಿಕಾಯೋಸುನಿ' ಎಂಬುದು ಸರ್ವಶೀಲಗಳಿಗೂ ಮೂಲಭೂತವಾದ, ಮನುಷ್ಯನ ಆತ್ಮಕ್ಕೆ ಸಂಬಂಧಪಟ್ಟ ಆಕಾರವಿಶೇಷ. ಆದ್ದರಿಂದ ಕೆಲವರು ಈ ಪದಕ್ಕೆ 'ಜಸ್ಟಿಸ್' (Justice=ನ್ಯಾಯ) ಎಂಬ ಸಾಧಾರಣ ಪದವನ್ನು ಉಪಯೋಗಿಸುವುದರ ಬದಲು 'ರೈಚಸ್‌ನೆಸ್' (Righteousness=ಧರ್ಮಭಾವನೆ) ಎಂಬ ಪದವನ್ನು ಉಪಯೋಗಿಸುತ್ತಾರೆ. ಅಲ್ಲದೆ, 'ಡಿಕಾಯೋಸುನಿ'ಯಲ್ಲಿ ಕೇವಲ ವ್ಯಕ್ತಿಜೀವನದ ಗುಣವಲ್ಲದೆ, ವ್ಯಕ್ತಿಯ ಚಿತ್ತವೃತಿಯು ಸಮಾಜದಲ್ಲಿನ ಹಲವು ಸಂಬಂಧಗಳಲ್ಲಿ ಹೇಗೆ ಅಭಿವ್ಯಕ್ತವಾಗುತ್ತದೆ, ಒಳಗಿನ ಸಮತಾಭಾವವು ಹೊರಗಿನ ಆಚಾರದಲ್ಲಿ ಇತರರ ವಿಷಯದಲ್ಲಿ ಹೇಗೆ

ತೋರಿಸಿ ಕೊಳ್ಳುತ್ತದೆ–ಎಂಬ ಅರ್ಥವೇ ಮುಖ್ಯಲಕ್ಷ್ಯ. ಆದ್ದರಿಂದ 'ರೈಚಸ್‌ನೆಸ್' ಎಂಬ ಪದವನ್ನು 'ಸೋಷಲ್ ರೈಚಸ್‌ನೆಸ್' (Social Righteousness = ಸಾಮಾಜಿಕಶೀಲ) ಎಂದು ವಿಶದಪಡಿಸುವುದೂ ಉಂಟು. ಇದನ್ನೆಲ್ಲ ಗಮನಿಸಿದರೆ ಪ್ಲೇಟೋವಿನ 'ಡಿಕಾಯೋಸುನಿಗೂ' ಭಾರತೀಯ ಸಂಸ್ಕೃತಿಯ 'ಧರ್ಮ'ಕ್ಕೂ ಅಷ್ಟೇನೂ ಭೇದವಿರುವಂತೆ ತೋರುವುದಿಲ್ಲ. ಧರ್ಮ ಪದದಲ್ಲಿ ಮತಾಚರಣೆ ಮತ್ತು ನೀತಿ ಎಂಬ ಎರಡು ಅರ್ಥಗಳೂ ಸೇರಿಕೊಂಡಿವೆ. ಈ ಸಂದರ್ಭದಲ್ಲಿ ನೀತಿಯೇ ಪ್ರಧಾನ. ಆದುದರಿಂದ 'ಡಿಕಾಯೋಸುನಿ' ಎಂಬ ಪದದ ಸ್ಥಾನದಲ್ಲಿ 'ಧರ್ಮ' ಎಂಬ ಭಾರತೀಯ ಪದವನ್ನು ಪ್ರಯೋಗಿಸುವುದೇ ಸರಿಯೆಂದು ತೋರುತ್ತದೆ; 'ನ್ಯಾಯ' ಎಂಬುದಕ್ಕಿಂತಲಂತೂ ವಾಸಿ. 'ಡಿಕಾಯೋಸುನಿಯ' ಅರ್ಥ ಕೇವಲ 'ನ್ಯಾಯ' ಮಾತ್ರವೇ ಅಲ್ಲ; ಅದರ ಮೂಲವೂ ಆತ್ಮಸ್ವರೂಪದ ಆವಿರ್ಭಾವವೂ ಆದ ಧಾರ್ಮಿಕ ಮನೋಧರ್ಮ.

ಅಂತೂ ವಿವೇಕ, ಧೈರ್ಯ, ಸಂಯಮ, ಮತ್ತು ಧರ್ಮ–ಇವು ನಾಲ್ಕೂ ಒಳ್ಳೆಯ ವ್ಯಕ್ತಿಯ ಮುಖ್ಯ ಗುಣಗಳು, ಜೀವನದಲ್ಲಿ ಕಂಡು ಬರುವ ಮಿಕ್ಕ ಎಲ್ಲ ಶೀಲಗಳೂ ಇವುಗಳ ರೂಪಾಂತರ, ಮನುಷ್ಯನ ಸ್ವಭಾವದಲ್ಲಿ ಮೂರು ಬೇರೆ ಬೇರೆ ಶಕ್ತಿಗಳಿವೆ. ಇವುಗಳಿಗೆ ಪ್ರಿಯವಾದ ವಸ್ತುವಿಶೇಷಗಳೂ ಬೇರೆಬೇರೆ, ಜ್ಞಾನಶಕ್ತಿಯು ಪ್ರಪಂಚದ ಸತ್ಯಾಂಶವನ್ನು ಗ್ರಹಿಸಲು ಹೊರಡುತ್ತದೆ, ಉತ್ಸಾಹ ಅಥವಾ ಓಜಸ್ಸು ಕರ್ಮದ ಕಡೆ ಓಡುತ್ತದೆ, ಬಲಪ್ರಯೋಗ, ಅಡ್ಡಬರುವ ಪದಾರ್ಥಗಳನ್ನೇ ಆಗಲಿ ಇತರ ಜೀವರನ್ನೇ ಆಗಲಿ ಎದುರಿಸಿ ಅವರೊಡನೆ ಕಾದಾಡಿ ಗೆಲ್ಲಬೇಕೆಂಬ ಹುರುಪು–ಇದು ಓಜಸ್ಸಿನ ಲಕ್ಷಣ. ಮೂರನೆಯದು ಇಂದ್ರಿಯಾರ್ಥಗಳನ್ನು ಬಯಸುವ ಕಾಮ, ರಾಗ ಮೊದಲಾದ ಇಚ್ಛೆಗಳು.

ಈ ಮೂರು ಶಕ್ತಿಗಳೂ ಸಂಮೇಳನಹೊಂದಿ ಕೆಲಸಮಾಡುವುದೇ ಧರ್ಮ. ಈ ಶಕ್ತಿಗಳು ಶ್ರೇಯಸ್ಕರವಾಗಿ ಪರಿಣಮಿಸಬಹುದು, ಇಲ್ಲವೆ ಹಾನಿಕರವಾಗಿ ಕೊನೆಗಾಣಬಹುದು. ಇವಕ್ಕೆ ಸದುಪಯೋಗವೂ ಉಂಟು, ದುರುಪಯೋಗವೂ ಉಂಟು. ಬುದ್ಧಿಯು ಸರಿಯಾದ ಉಪಯೋಗಜ್ಞಾನ ವಿವೇಕಗಳನ್ನು ಉಂಟುಮಾಡುತ್ತದೆ. ಉತ್ಸಾಹದ ಸರಿಯಾದ ಉಪಯೋಗ ಧೈರ್ಯ, ಇಂದ್ರಿಯಗಳ ಸರಿಯಾದ ಉಪಯೋಗ ಸಂಯಮ, ಮಿತಿ (ಶಮದಮಾದಿಸಂಪತ್ತು): ಇವೆಲ್ಲದರ ಸಂಮೇಳನವೇ ಧರ್ಮ. ಧರ್ಮಕ್ಕೆ ಮೂಲವಾದ ಬೇರೊಂದು ಶಕ್ತಿಯನ್ನು ಪ್ಲೇಟೋ ನಿರೂಪಿಸಿಲ್ಲ.

ಸತ್ಯವನ್ನು ಸರಿಯಾಗಿ ತಿಳಿಯುವುದೇ ಬುದ್ಧಿಯ ಸದುಪಯೋಗ. ಪ್ರಪಂಚವನ್ನು ಮನಸ್ಸಿನಲ್ಲಿ ಯಥಾವತ್ತಾಗಿ ಪ್ರತಿಬಿಂಬಿಸುವುದೇ ಜ್ಞಾನಕಾರ್ಯ. ಈ ಜ್ಞಾನಕ್ಕೆ ಅನುಗುಣವಾದ ಕಾರ್ಯಾಕಾರ್ಯವನ್ನು ತಿಳಿಯುವುದೇ ವಿವೇಕ. ಪ್ಲೇಟೋ ಉಪಯೋಗಿಸುವ ಪದದಲ್ಲಿ ಈ ಎರಡು ಅರ್ಥಗಳೂ ಸೇರಿಕೊಂಡಿವೆ. ಯಥಾರ್ಥ ಜ್ಞಾನದೊಡನೆ ಕರ್ಮಕೌಶಲವೂ ವಿತರಣೆಯೂ ವಿವೇಕವೂ ಸೇರಿಕೊಂಡಿವೆ. ಪ್ಲೇಟೋ

ಹೇಳುವ ಎರಡನೆಯ ಶಕ್ತಿಯನ್ನು ಉತ್ಸಾಹ, ಓಜಸ್ಸು ಎಂದು ಕರೆದಿದ್ದೇವೆ. ಇದು ರಜೋಗುಣವನ್ನು ಹೋಲುತ್ತದೆ. ಸತತವಾಗಿ ಪ್ರವಹಿಸುತ್ತಿರುವುದೇ ಇದರ ಸ್ವಭಾವ. ಈ ಕರ್ಮಗುಣವು ಪದಾರ್ಥಗಳನ್ನು ಹಿಡಿದು ಅವುಗಳನ್ನು ಗೆದ್ದು ವಶಪಡಿಸಿಕೊಳ್ಳಬೇಕೆಂಬ ಮನೋಭಾವದಲ್ಲಿ ಕಂಡುಬರುತ್ತದೆ. ಇದರ ಸದುಪಯೋಗವನ್ನು ಪ್ಲೇಟೋ 'ಧೈರ್ಯ' ಎಂದು ಕರೆದಿದ್ದಾನೆ. ಧೈರ್ಯವೆಂಬ ಪದಕ್ಕೆ ಪ್ಲೇಟೋ ವಿಶಾಲವಾದ ಅರ್ಥವನ್ನು ಕಲ್ಪಿಸುತ್ತಾನೆ. ಉತ್ಸಾಹದ (ಎಂದರೆ, ರಜೋಗುಣದ) ಸದುಪಯೋಗವೇ ಧೈರ್ಯ. ಸದುಪಯೋಗವೆಂದರೆ ಸತ್ಪದಾರ್ಥಗಳಲ್ಲಿ, ಸದ್ವಿಷಯಗಳಲ್ಲಿ ಸ್ನೇಹ. ಈ ಶಕ್ತಿಯದು ವಾಸ್ತವವಾಗಿ ಜ್ಞಾನ ಅಥವಾ ವಿವೇಕಕ್ಕೆ ಅಧೀನವಾಗಿ ನಡೆದುಕೊಳ್ಳುವ ಸ್ವಭಾವ. ವಿವೇಕವು ಜಾಗೃತವಾಗಿದ್ದು ಸೂಚನೆಕೊಡದಿದ್ದರೆ ರಜೋಗುಣವು ವಿತರಣೆಯಿಲ್ಲದೆ ಇಂದ್ರಿಯಾರ್ಥಗಳಲ್ಲಿಯೂ ಅಹಂಕಾರ ಪ್ರತಿಷ್ಠೆಗಳ ಅತಿರೇಕಗಳಲ್ಲಿಯೂ ಪ್ರಯೋಗವಾಗುತ್ತದೆ. ವಿವೇಕವು ಸ್ಪಷ್ಟವಾಗಿ ನಿರ್ದೇಶ ಮಾಡಿದರೆ ಈ ಶಕ್ತಿಯು ಅದನ್ನು ಮನ್ನಿಸಿ ಜ್ಞಾನವ್ಯಾಪಾರಕ್ಕೇ ಪುಷ್ಟಿಕೊಡುತ್ತದೆ. 'ಫ್ಲೆಡ್ರಸ್' ಎಂಬ ಸಂವಾದ ಗ್ರಂಥದಲ್ಲಿ ಪ್ಲೇಟೋ ಚಿತ್ರಿಸಿರುವ ರಥಸಾಮ್ಯದಲ್ಲಿ, ರಥಕ್ಕೆ ಕಟ್ಟಿರುವ ಬಿಳಿ ಕುದುರೆಯೇ ಈ ಉತ್ಸಾಹ (=ರಜೋ)ಗುಣ. ಬಿಳಿಯ ಕುದುರೆಯು ಸಾರಥಿಯ ಇಂಗಿತಕ್ಕೆ ಅಧೀನವಾಗಿ ನಡೆದುಕೊಳ್ಳುತ್ತದೆ. ಹೀಗೆ ಜ್ಞಾನವು ತೋರಿಕೊಡುವ ಸತ್ಪದಾರ್ಥ ಸದ್ವಿಷಯ ಸಜ್ಜನರುಗಳಲ್ಲಿ ಪ್ರೇಮ, ಗಾಢವಾದ ಸ್ನೇಹ(ಹಿಡಿತ) ಐಕ್ಯಭಾವ–ಇವುಗಳೇ ರಜೋಗುಣದ ಸ್ವರೂಪಾವಿರ್ಭಾವ.

ಧೈರ್ಯವೆಂದರೆ ಒಳ್ಳೆಯ ಅಭಿಪ್ರಾಯಗಳಲ್ಲಿಯೂ ಒಳ್ಳೆಯ ಜನರಲ್ಲಿಯೂ ಇರುವ ಗಾಢವಾದ ಸ್ನಗ್ಧತೆ; ಯಾವ ಸಂದರ್ಭದಲ್ಲಿಯೂ ಭಯಭೀತಿಗಳಿಗೆ ಎಡೆಗೊಡದೆ ಸ್ವಸ್ಥಿತಿಯನ್ನುಳಿಸಿಕೊಳ್ಳುವುದು. ಭಯೋತ್ಪಾದಕವಾದ ಸನ್ನಿವೇಶದಲ್ಲಿ ಮನುಷ್ಯನ ಉದಾತ್ತ ಭಾವನೆಗಳು ಮಾಯವಾಗಿ ಓಡಿಹೋಗುವುದೂ, ಮತ್ತೆ ಯಾವ ರೀತಿಯಲ್ಲಿಯಾದರೂ ತಪ್ಪಿಸಿಕೊಳ್ಳಬೇಕೆಂಬ ಉತ್ಕಟೇಚ್ಛೆಯುಂಟಾಗುವುದೂ ಸರ್ವವೇದ್ಯವಾಗಿದೆ. ಇಂಥ ಸಮಯದಲ್ಲಿಯೂ ಯಾವುದಕ್ಕೆ ಹೆದರಬೇಕು, ಯಾವುದಕ್ಕೆ ಹೆದರಬಾರದು ಎಂಬ ವಿವೇಕಜ್ಞಾನದ ಸೂಚನೆಯ ಪ್ರಕಾರ ನಡೆದುಕೊಳ್ಳುವುದು ಈ ಶಕ್ತಿಯ ಸ್ವರೂಪಕ್ಕೆ ಅನುಗುಣವಾದ ವರ್ತನೆ. ಈ ರೀತಿಯ ಅರ್ಥ ವೈಶಾಲ್ಯದಲ್ಲಿ ರಜೋಗುಣವು ಮನಸ್ಸಿನ ಎಲ್ಲ ವ್ಯಾಪಾರಗಳಲ್ಲಿಯೂ ಸೇರಿಕೊಂಡ ಅಂಶವಾಗಿ ಪರಿಣಮಿಸುವುದು ಆಶ್ಚರ್ಯವಲ್ಲ. ಒಟ್ಟಿನಲ್ಲಿ ಇದರ ಮರ್ಮವೇನೆಂದರೆ, ರಜೋಗುಣವು ಸಾತ್ತ್ವಿಕಗುಣದಲ್ಲಿ ಅಂತರ್ಭಾವವಾಗಿ ಸಾತ್ತ್ವಿಕ ವ್ಯಾಪಾರಕ್ಕೆ ಶಕ್ತಿ, ಸ್ಥೈರ್ಯ, ಧೃತಿ ಮುಂತಾದ ಗುಣಗಳ ಬೆಂಬಲಕೊಡುವುದೇ ಆಗಿದೆ.

ಇನ್ನು ಇಂದ್ರಿಯ ಶಕ್ತಿಗಳು, ಪ್ಲೇಟೋವಿನ ವಿಚಾರಧಾರೆಯಲ್ಲಿ ಇಂದ್ರಿಯಗಳನ್ನು ಸಂಪೂರ್ಣವಾಗಿ ದಮನಮಾಡಬೇಕೆಂಬ ಅಭಿಪ್ರಾಯದ ವಾಸನೆಯಿಲ್ಲ. ಇಂದ್ರಿಯಗಳನ್ನು ಮಿತವಾಗಿ ಉಪಯೋಗಿಸಬೇಕೆಂಬುದೇ ಅವನ ಆಶಯ. ಹೀಗೆ ಇಂದ್ರಿಯಶಕ್ತಿಗಳನ್ನು ಜ್ಞಾನ ವಿವೇಕಗಳಿಗೆ ಅಧೀನಪಡಿಸಿ ನಡೆದು

ಕೊಳ್ಳುವುದು ಮೂರನೆಯ ಮುಖ್ಯಗುಣ.

ಇವೆಲ್ಲದರ ಸಾಮರಸ್ಯವೇ ಧರ್ಮ. ಧರ್ಮವೆಂಬುದು ಪ್ರತ್ಯೇಕ ಗುಣವಲ್ಲ. ಜ್ಞಾನ, ಧೈರ್ಯ, ಧರ್ಮ–ಇವುಗಳ ಹೊಂದಾಣಿಕೆಯೇ ಧರ್ಮ. ನಮ್ಮಲ್ಲಿ ಸಮತೆಯೆಂದರೆ 'ಇಂದ್ರಿಯ ವಿಷಯಗಳಲ್ಲಿ ನಿರ್ಲಿಪ್ತತೆ' ಎಂಬ ಅರ್ಥವೇ ಪ್ರಧಾನವಾಗಿದೆ. ಪ್ಲೇಟೋವಿನ ಸಿದ್ಧಾಂತದಲ್ಲಿ ಸಮತೆಯೆಂದರೆ, ಈ ಮೂರು ಗುಣಗಳ ಸಮ್ಮೇಳನ. ಈ ಸಮ್ಮೇಳನದಲ್ಲಿ ಮೂರಕ್ಕೂ ಒಂದೇ ಸ್ಥಾನವಿರುವುದಿಲ್ಲ. ಅಲ್ಲದೆ, ಇದರಲ್ಲಿ ಜ್ಞಾನಕ್ಕೆ ಅಗ್ರಸ್ಥಾನ. ಅದಕ್ಕೆ ಅಧೀನವಾಗಿರುವುದು ಉತ್ಸಾಹ. ಇವೆರಡಕ್ಕೂ ಅಧೀನವಾಗಿ ಇಂದ್ರಿಯ ವ್ಯಾಪಾರ. ಇದೇ ಸರಿಯಾದ ಮೇಳನ. ಇದರಲ್ಲಿ ಸಮತೆಯು ಅಕ್ಷರಶಃ ಕಾಣಬರುವುದಿಲ್ಲ. ಅಲ್ಲದೆ, ಜೀವಾತ್ಮನ ಸ್ವರೂಪಾವಿರ್ಭಾವಕ್ಕೆ ಅನುಗುಣವಾದ ತೂಕ ವಿನ್ಯಾಸವಿರುತ್ತದೆ. ಇಂಥ ಸಮ್ಮೇಳನವೇ ಧರ್ಮ. (Justice, ಡಿಕಾಯೋಸುನಿ).

ಈ ಮೂರು ಶಕ್ತಿಗಳೂ ಬೇರೆ ಬೇರೆ; ಅವಕ್ಕೆ (ಪ್ರತ್ಯೇಕ ಚಿಲುಮೆಗಳಂತೆ) ಪ್ರತ್ಯೇಕ ಮೂಲಗಳಿರುತ್ತವೆ–ಎಂಬ ತತ್ತ್ವವನ್ನು ಪ್ಲೇಟೋ ಸೂಕ್ಷ್ಮರೀತಿಯಲ್ಲಿ ವಿಶದಪಡಿಸುತ್ತಾನೆ. ಇದರಲ್ಲಿ ಮನಶ್ಶಾಸ್ತ್ರದ ಮರ್ಮವು ಚರ್ಚೆಗೆ ಬರುತ್ತದೆ.

ಆಧುನಿಕ ಮನಶ್ಶಾಸ್ತ್ರದ ಪ್ರಕಾರ ಜ್ಞಾನ, ಭಾವ (Feeling) ಮತ್ತು ಸಂಕಲ್ಪ (Will) ಎಂಬ ಮೂರು ಮುಖಗಳನ್ನು ಮನೋವ್ಯಾಪಾರದಲ್ಲಿ ಲಕ್ಷಿಸುತ್ತಾರೆ. ಇವನ್ನು ನಾವು ಮನಸ್ಸಿನಲ್ಲಿ ಗುರುತಿಸಬಹುದೇ ಹೊರತು ಸಾಕ್ಷಾತ್ತಾಗಿ ವಿಭಾಗಿಸುವುದಕ್ಕಾಗುವುದಿಲ್ಲ. ಎಲ್ಲ ಮನೋವ್ಯಾಪಾರಗಳಲ್ಲಿಯೂ ಜ್ಞಾನ, ಭಾವ, ಇಚ್ಛೆ(ಸಂಕಲ್ಪ)ಗಳು ಒಂದಲ್ಲ ಒಂದು ಪ್ರಮಾಣದಲ್ಲಿ ಸೇರಿಕೊಂಡೇ ಇರುತ್ತವೆ. ಇವು ಒಂದನ್ನು ಬಿಟ್ಟು ಇನ್ನೊಂದು ಇರುವುದಿಲ್ಲ. ಜ್ಞಾನ ಪ್ರಧಾನವಾದರೆ ಜ್ಞಾನವೆಂದೂ, ಭಾವ ಪ್ರಧಾನವಾದರೆ ಭಾವವೆಂದೂ, ಇಚ್ಛೆಪ್ರಧಾನವಾದರೆ ಇಚ್ಛೆಯೆಂದೂ ಮನಃಪ್ರತೀತಿಗಳನ್ನು ನಾವು ಕರೆಯುತ್ತೇವೆ.

ಪ್ಲೇಟೋವಿನ ಮೂರು ಮನಶ್ಶಕ್ತಿಗಳಿಗೂ ಇವಕ್ಕೂ ಸಂಬಂಧವಿಲ್ಲ. ಪ್ಲೇಟೋವಿನ ದೃಷ್ಟಿಯಲ್ಲಿ ಆತ್ಮನೇನೋ ಒಂದು. ಆದರೆ ಅದರಲ್ಲಿ ಜ್ಞಾನ, ಉತ್ಸಾಹ, ಇಂದ್ರಿಯಗಳೆಂಬ ಮೂರು ಪ್ರತ್ಯೇಕ ವ್ಯಾಪಾರ ಚೋದಕ ಶಕ್ತಿ ವಿಶೇಷಗಳು ಪ್ರತ್ಯೇಕ ಚಿಲುಮೆಗಳಂತೆ ಇರುತ್ತವೆಯೆಂಬ ಚಿತ್ರವು ಎದ್ದು ಕಾಣುತ್ತದೆ. ಶಕ್ತಿ ಮೂಲಗಳು ಮೂರಾದರೂ ಅವೆಲ್ಲ ಜ್ಞಾನದ ಮುಂದಾಳುತನದಲ್ಲಿ ಅನ್ಯೋನ್ಯ ಸಹಾಯಕ ವೃತ್ತಿಯುಳ್ಳ ಸ್ವಭಾವವನ್ನು ಹೊಂದಿರುತ್ತವೆಯೆಂಬುದು ಪ್ಲೇಟೋವಿನ ಅಭಿಪ್ರಾಯ. ಜೀವಾತ್ಮನು ಪ್ರಾಣಿಸಾಮಾನ್ಯವಾದ ಇಂದ್ರಿಯಾರ್ಥಗಳಲ್ಲಿ ಆರಾಮಕ್ಕೆ ಅವಕಾಶ ಹೊಂದುತ್ತಾನೆ. ತರುವಾಯ ಉತ್ಸಾಹ (ರಜೋ)ಗುಣದವ್ಯಾಪಾರದಲ್ಲಿ ಹೆಚ್ಚಿನ ಅವಕಾಶವನ್ನು ಗಳಿಸಿ, ಕೊನೆಗೆ ಜ್ಞಾನವ್ಯಾಪಾರದಲ್ಲಿ ಸಂಪೂರ್ಣವಾದ ಸ್ವರೂಪಾವಿರ್ಭಾವವನ್ನು ಹೊಂದಿಆನಂದಿಸುತ್ತಾನೆ–ಎಂಬ ಭಾವನೆ ಪ್ಲೇಟೋವಿನ ಮನಸ್ಸಿನಲ್ಲಿ ನಾಟಿತ್ತೋ ಎಂಬಂತೆ ಅವನ ತತ್ತ್ವವನ್ನು ಸೂಕ್ಷ್ಮವಾಗಿ ಪರಿಶೀಲಿಸುವವರಿಗೆ ಭಾಸವಾಗುತ್ತದೆ.

ಜೀವಾತ್ಮನಂತೆ ಸಮಾಜದ ಆತ್ಮ. ಈ ತತ್ತ್ವವನ್ನನುಸರಿಸಿ ಪ್ಲೇಟೋ ಸಮಾಜದ ಸರಿಯಾದ ವ್ಯವಸ್ಥೆಯನ್ನು ನಿರೂಪಿಸುತ್ತಾನೆ. ವ್ಯಕ್ತಿಯ ಉಚ್ಚ್ರಾಯಸ್ಥಿತಿ ಅವನ ಆತ್ಮಶಕ್ತಿಗಳ ಸಮ್ಮೇಳನದಲ್ಲಿ ರೂಪುಗೊಳ್ಳುವಂತೆಯೇ ಸಮಾಜದ ಉನ್ನತಿ ಅದರ ಅಂಗವಾದ ನಗರಗಳ ಸಮ್ಮೇಳನದ ಮೂಲಕ ಆವಿರ್ಭಾವವಾಗುತ್ತದೆ. ವ್ಯಕ್ತಿಯಲ್ಲಿ ಹೇಗೆ ವಿವೇಕವು ಪ್ರಧಾನವಾಗಿದ್ದು ಅದಕ್ಕೆ ಅನುಗುಣವಾಗಿ ಉತ್ಸಾಹ ಇಂದ್ರಿಯಗಳು ಕೆಲಸಮಾಡಿ ಶ್ರೇಯಸ್ಸನ್ನು ತಂದುಕೊಡುವುವೋ ಹಾಗೆಯೇ, ರಾಜ್ಯದಲ್ಲಿ ಕೂಡ ಅಗ್ರಸ್ಥಾನವು ಜ್ಞಾನಿಗಳಿಗೆ ಸೇರಿರತಕ್ಕದ್ದು. ತತ್ತ್ವಪ್ರೇಮಿಗಳಾದ ಪ್ರಭುತ್ವವರ್ಗದವರ ಅಧೀನದಲ್ಲಿ ಸಹಾಯಕ ರಕ್ಷಕರು ನಡೆದುಕೊಳ್ಳತಕ್ಕದ್ದು. ಹೀಗೆ ಜ್ಞಾನ ಧೈರ್ಯಗಳಿಂದ ಅರ್ಹರಾದವರ ವರ್ಗಗಳಿಗೆ ಅನುಕೂಲರಾಗಿ ವರ್ತಿಸುವ ಮಿಕ್ಕವರ್ಗಗಳ ಜನರನ್ನೊಳಗೊಂಡ ಸಮಾಜದಲ್ಲಿ ಸರಿಯಾದ ಸಮ್ಮೇಳನ ಏರ್ಪಡುತ್ತದೆ. ಈ ಸಮ್ಮೇಳನವು ಸಮಾಜದ ಧರ್ಮವನ್ನು ಅಭಿವ್ಯಕ್ತಪಡಿಸುತ್ತದೆ. ಈ ರೀತಿ ವ್ಯಕ್ತಿಸ್ವರೂಪಕ್ಕೂ ಸಮಾಜಸ್ವರೂಪಕ್ಕೂ ಸಾಧರ್ಮ್ಯವನ್ನು ಪ್ಲೇಟೋ ಹೃದಯಂಗಮವಾಗಿ ಚಿತ್ರಿಸುತ್ತಾನೆ.

ಫ್ರೆಂಚ್ ವಿಪ್ಲವಕಾಲ (೧೭೮೯)ದಿಂದ ಪ್ರಜಾರಾಜ್ಯದ ಪ್ರಾಶಸ್ತ್ಯ ಬೆಳೆಯುತ್ತ ಬಂತು. ಅದು ಬೆಳೆಯುತ್ತ ಬಂದಹಾಗೆಲ್ಲ ಪ್ಲೇಟೋವಿನ ಈ ರಾಜ್ಯಶಾಸ್ತ್ರದ ವಿಷಯವಾಗಿ ಕೆಲವು ಖಂಡನೆಗಳೇಳುತ್ತಿವೆ. ಮೊದಲನೆಯ ಮಹಾಯುದ್ಧದಿಂದೀಚೆಗೆ (೧೯೧೪–೧೯೧೮) ಪ್ರಜಾರಾಜ್ಯ ಪದ್ಧತಿಗೂ ರಾಜರ ಇಲ್ಲವೆ ಶ್ರೀಮಂತರ ಪ್ರಭುತ್ವ ಪದ್ಧತಿಗೂ ಇರುವ ತಾರತಮ್ಯದ ವಿಷಯವಾಗಿಯೂ ಇವುಗಳ ಬಲಾಬಲಗಳ ವಿಷಯವಾಗಿಯೂ ಕೂಲಂಕಷವಾಗಿ ಚರ್ಚೆ ನಡೆಯುತ್ತಿದೆ. ೧೮೭೦ರಲ್ಲಿ ಫ್ರೆಂಚರಿಗೂ ಜರ್ಮನರಿಗೂ ನಡೆದ ಯುದ್ಧದಲ್ಲಿ ಜರ್ಮನರ ಶಿಸ್ತೂ ಯುದ್ಧ ಕೌಶಲವೂ ದೇಶಪ್ರೇಮವೂ ಜನರ ಮನಸ್ಸನ್ನಾಕರ್ಷಿಸಿತು. ೧೯೧೪–೧೯೧೮ರ ಯುದ್ಧದಲ್ಲಿ ಜರ್ಮನರಿಗೇ ಕೊನೆಗೆ ಸೋಲಾದರೂ ಅವರ ಸಂಘಟನ ಶಕ್ತಿಯೂ ಕಾರ್ಯನಿಪುಣತೆಯೂ ಯುದ್ಧ ಕಾರ್ಯದಲ್ಲಿ ಅವರ ಅಸದೃಶ ಸಾಮರ್ಥ್ಯವೂ ಎಲ್ಲರನ್ನೂ ಆಶ್ಚರ್ಯಗೊಳಿಸಿತು. ಪ್ರಜಾರಾಜ್ಯಕ್ಕೆ ಅನುಗುಣವೆಂದೆನಿಸಿದ ಪ್ರಜಾಬೆಂಬಲವಿಲ್ಲದೆ ಚಕ್ರವರ್ತಿಯ ಅಧೀನದಲ್ಲಿ ಬೆಳೆದ ಶ್ರೀಮಂತವರ್ಗದವರ ಮುಂದಾಳುತನವಿದ್ದಿತಾದರೂ ರಾಷ್ಟ್ರೀಯಭಾವನೆಯೂ ಒಗ್ಗಟ್ಟೂ ಶಿಸ್ತೂ ಸಾಮಾನ್ಯ ಜನರ ಉತ್ಸಾಹ ದಕ್ಷತೆಗಳೂ ಪ್ರಜಾರಾಜ್ಯಗಳಲ್ಲಿ ತೋರಿಬಂದದ್ದಕ್ಕಿಂತ ಜರ್ಮನರಲ್ಲಿ ಅಷ್ಟೇನು ಕಡಮೆಯಾಗಿದ್ದಂತೆ ಕಾಣಲಿಲ್ಲ. ಆದುದರಿಂದ ರಾಜ್ಯದ ಪುರೋಭಿವೃದ್ಧಿಗೆ ಪ್ರಜಾರಾಜ್ಯ ಅಗತ್ಯವೆಂಬ ಭಾವನೆಗೆ ಕೆಲವರ ಅಭಿಪ್ರಾಯದಲ್ಲಿ ಕುಂದು ಬಂತು. ಕಳೆದ ಮಹಾಯುದ್ಧದಲ್ಲಿಯೂ ಕೂಡ ಜನಸ್ವಾತಂತ್ರ್ಯವಿಲ್ಲದಿದ್ದರೂ ಜರ್ಮನರು ಹಿಟ್ಲರನ ಮುಂದಾಳುತನದಲ್ಲಿ ಅಸದೃಶವಾದ ದೇಶಪ್ರೇಮವನ್ನೂ ತ್ಯಾಗಬುದ್ಧಿಯನ್ನೂ ದಕ್ಷತೆಯನ್ನೂ ಪ್ರದರ್ಶಿಸಿದರು.

ಜರ್ಮನಿಯಲ್ಲಿ ಹಿಟ್ಲರನ 'ನಾಟ್ಸಿ' ಪಾರ್ಟಿಯವರೂ ಇಟಲಿಯಲ್ಲಿ ಮುಸೋಲಿನಿಯ 'ಫಾಸಿಸ್ಟ್' ಪಕ್ಷದವರೂ ತಮ್ಮ ಸರ್ವಾಧಿಕಾರ ಪ್ರಭುತ್ವಕ್ಕೆ ಬೆಂಬಲವಾಗಿ

ಹೊಸ ರಾಜಕೀಯತತ್ತ್ವಗಳನ್ನು ಮಂಡಿಸಿದರು. ರಷ್ಯಾದೇಶದಲ್ಲಿ ಸ್ಥಾಪನೆಯಾದ ಸಾಮ್ಯವಾದ ರಾಷ್ಟ್ರದ ತತ್ತ್ವದಂತೆಯೇ ನಾಟ್ಸಿ, ಫಾಸಿಸ್ಟ್ ಪಕ್ಷದವರೂ ಪ್ರಜಾಸ್ವಾತಂತ್ರವನ್ನು ಮೂಲೆಗೆ ತಳ್ಳಿದರು. ರಷ್ಯದ ವರ್ಗರಹಿತ ರಾಜ್ಯಪದ್ಧತಿಯಲ್ಲಿ ಪ್ರಜೆಗಳ ವ್ಯಕ್ತಿಸ್ವಾತಂತ್ರ್ಯವು ಕುಂದಿಹೋದ ಹಾಗೆ ಜರ್ಮನಿ ಇಟಲಿಗಳಲ್ಲಿಯೂ ಇದು ಮಾಯವಾಯಿತು. ನಾಟ್ಸಿ, ಫಾಸಿಸ್ಟ್ ಪಕ್ಷಗಳವರು ವ್ಯಕ್ತಿಸ್ವಾತಂತ್ರ್ಯದ ಸ್ಥಾನದಲ್ಲಿ ರಾಷ್ಟ್ರಪ್ರೇಮವನ್ನು ಮಂಡಿಸಿ, ನಾಗರಿಕರು ರಾಷ್ಟ್ರೋನ್ನತಿಗಾಗಿ ತಮ್ಮ ಸರ್ವಸ್ವವನ್ನೂ ಧಾರೆಯೆರೆಯಬೇಕೆಂದೂ, ಅವರು ಹಾಗೆ ಆತ್ಮತ್ಯಾಗ ಮಾಡುವುದೇ ಅವರಿಗೂ ರಾಷ್ಟ್ರಕ್ಕೂ ಶ್ರೇಯಸ್ಕರವೆಂದೂ, ರಾಷ್ಟ್ರದ ಐಕ್ಯತೆಯೂ ಸಂಘಟನೆಯೂ ಪಾರಮಾರ್ಥಿಕ ಪ್ರಯೋಜನವೆಂದೂ ವಾದ ಹೂಡಿದರು.

ಈ ವಾದಸರಣಿಯು ಪ್ರಜಾರಾಜ್ಯಪ್ರೇಮಿಗಳಿಗೂ ತತ್ತ್ವಾನ್ವೇಷಿಗಳಿಗೂ ಆದರಣೀಯವಾಗಲಿಲ್ಲ. ರಾಷ್ಟ್ರದ ಹಿತಕ್ಕಾಗಿ ಪ್ರಜೆಗಳು ಆತ್ಮತ್ಯಾಗ ಮಾಡತಕ್ಕದ್ದೇನೋ ಪಾರಮಾರ್ಥಿಕ ಪ್ರಯೋಜನವೆಂದು ಒಪ್ಪಿದರೂ, ಅಂಥ ಆತ್ಮತ್ಯಾಗವು ರಾಷ್ಟ್ರಪ್ರೇಮದಿಂದ ಮೂಡಿ ಸ್ವತಂತ್ರವಾಗಿ ಯಾರ ನಿರ್ಬಂಧವೂ ಇಲ್ಲದೆ ಜನರ ಹೃದಯದಿಂದ ಉಕ್ಕಿ ಬಂದದ್ದೇ ಆದರೆ ಪ್ರಯೋಜನವೇ ಹೊರತು, ಪ್ರಭುತ್ವದವರ ಕಟ್ಟಪ್ಪಣೆಗೆ ತಲೆಬಾಗಿ ಅರ್ಪಿಸಿದ್ದೇ ಆದರೆ ನಿಷ್ಫಲವೆಂದು ಅವರು ಶಂಕಿಸಿದರು. ಹಿಟ್ಲರನ ರಾಜ್ಯದಲ್ಲಿಯೂ ಮುಸೋಲಿನಿಯ ಇಟಲಿಯಲ್ಲಿಯೂ ಪ್ರಜೆಗಳಿಗೆ ವ್ಯಕ್ತಿಸ್ವಾತಂತ್ರ್ಯವಿಲ್ಲದ್ದರಿಂದ ಆಯಾ ಪ್ರಭುತ್ವಕ್ಕೆ ಸಾಕಷ್ಟು ಜನಾನುರಾಗವಿಲ್ಲವೆಂದು ಪ್ರೇಕ್ಷಕರಿಗೆ ಮಂದಟ್ಟಾಯಿತು. ಇವರ ಸರ್ವಾಧಿಕಾರ ಪದ್ಧತಿಯನ್ನು ಖಂಡಿಸುವ ಸಮಯದಲ್ಲಿ ರಾಜ್ಯತತ್ತ್ವ ಚಿಂತಕರಲ್ಲಿ ಕೆಲವರು ಇದನ್ನು ಪ್ಲೇಟೋವಿನ ರಾಜಕೀಯತತ್ತ್ವಕ್ಕೆ ಹೋಲಿಸಿದರು. ಪ್ಲೇಟೋವಿನ ವರ್ಣನೆಯಲ್ಲಿ ಜ್ಞಾನಿಗಳಿಗಿದ್ದ ಸರ್ವಾಧಿಕಾರವನ್ನು ಹಿಟ್ಲರ್ ಮುಸೋಲಿನಿಗಳ ನಿರಂಕುಶಾಧಿಕಾರಕ್ಕೆ ಹೋಲಿಸಿದರು. ಪ್ಲೇಟೋ ಪ್ರಜಾರಾಜ್ಯವನ್ನು ಖಂಡನೆ ಮಾಡಿದ್ದನ್ನೂ ತನ್ನ 'ರಿಪಬ್ಲಿಕ್' ಗ್ರಂಥದಲ್ಲಿ ಪ್ರಭುತ್ವದವರು ಜನರ ವೋಟಿನ ಬಲವಿಲ್ಲದೆ ಅಧಿಕಾರಕ್ಕೆ ಬರುವ ಸಂಭವವನ್ನು ಪ್ರತಿಪಾದಿಸಿರುವುದನ್ನು ಮನಸ್ಸಿನಲ್ಲಿಟ್ಟು ಪ್ಲೇಟೋವಿನ ರಾಜ್ಯಾಂಗವು ಕೂಡ ನಾಟ್ಸಿ, ಫ್ಯಾಸಿಸ್ಟ್ ಜಾತಿಗೇ ಸೇರಿದ್ದೆಂದು ವಾದ ಮಾಡಿದರು.

ಅಲ್ಲದೆ, ಪ್ಲೇಟೋ ನಿರ್ದೇಶಿಸುವ ವರ್ಗಸಾಮರಸ್ಯವನ್ನೂ ಹಿಟ್ಲರ್ ಮುಸೋಲಿನಿಗಳ ಪದ್ಧತಿಗೆ ಹೋಲಿಸಿದರು. ಅವರ ಪದ್ಧತಿಯಲ್ಲಿ ಸಾಮಾನ್ಯ ಜನರು ರಾಜ್ಯಹಿತದಲ್ಲಿಲೀನರಾಗಿ ಹೋಗಿ ತಮ್ಮ ವ್ಯಕ್ತಿ ಸುಖ, ವ್ಯಕ್ತಿಸಾಮರ್ಥ್ಯಗಳನ್ನು ಮರೆಯಬೇಕೆಂದೂ ತನ್ಮೂಲಕ ರಾಷ್ಟ್ರದ ಒಗ್ಗಟ್ಟನ್ನು ಸಾಧಿಸಬೇಕೆಂದೂ ಕೂಗೆಬ್ಬಿಸಿ ಸಾಧಿಸಿದ "ಸಾಮರಸ್ಯ"ಕ್ಕೆ ಹೋಲಿಸಿದರು. ಪ್ಲೇಟೋವಿನ ತತ್ತ್ವವೂ ಕೂಡ ನಾಟ್ಸಿ, ಫ್ಯಾಸಿಸ್ಟ್ ಪಕ್ಷದಲ್ಲೇ ಅಂತರ್ಭಾವವಾಗುವುದೆಂದು ಈಗಲೂ ಕೆಲವರು ಅಭಿಪ್ರಾಯಪಡುತ್ತಾರೆ. ಕೆಲವು ಆಧುನಿಕ ಸಮಾಜ ಶಾಸ್ತ್ರಕಾರರು (Sociologists) ಪ್ಲೇಟೋವನ್ನು "ಸ್ವಾತಂತ್ರ್ಯನಿಷ್ಠ ಸಮಾಜ ಶತ್ರು" ಎಂದು ಕೂಡ ಕರೆದಿದ್ದಾರೆ.

ಈ ಆಕ್ಷೇಪಣೆಯಲ್ಲಿ ಎಷ್ಟರ ಮಟಿಗೆ ತಿರುಳಿದೆಯೆಂಬುದನ್ನು ಗ್ರಹಿಸುವುದು ಆವಶ್ಯಕ.

ಪ್ಲೇಟೋ ನಿರೂಪಿಸುವ ಪ್ರಭುತ್ವ ಪದ್ಧತಿಗೂ 'ನಾಟ್ಸಿ, ಫ್ಯಾಸಿಸ್ಟ್' ಪದ್ಧತಿಗಳಿಗೂ ಸಂಬಂಧವಿಲ್ಲ. ಪ್ಲೇಟೋವಿನ ರಾಜ್ಯಾಂಗದಲ್ಲಿ ಪ್ರಭುತ್ವಕ್ಕೆ ಬರುವವರು ತತ್ತ್ವಜ್ಞಾನಿಗಳೂ. ಚಿಕ್ಕಂದಿನಿಂದ ಸರ್ವೋತ್ಕೃಷ್ಟವಾದ ವಿದ್ಯಾಭ್ಯಾಸಹೊಂದಿ, ಯೌವನದಲ್ಲಿ ವಿಜ್ಞಾನ ಸಂಶೋಧನೆ ಪರಮತತ್ತ್ವಾನ್ವೇಷಣಗಳ ಸಾಧನೆಯನ್ನು ಯಶಸ್ವಿಯಾಗಿ ನಡಸಿ, ಅಪ್ರತಿಮ ಪ್ರತಿಭೆಯನ್ನು ತೋರಿಸಿದವರ ಪೈಕಿ ಜ್ಞಾನಿಗಳಿಂದ ಆರಿಸಲ್ಪಟ್ಟ ಮೇಧಾವಿಗಳು ಪ್ರಭುತ್ವಕ್ಕೆ ಬರುತ್ತಾರೆ. ಇಂಥ ಬುದ್ಧಿ ವ್ಯವಸಾಯವಲ್ಲದೆ, ಉನ್ನತ ಅಧಿಕಾರ ಸ್ಥಾನಗಳಲ್ಲಿ ನಿಂತು ಆಡಳಿತ ಕಾರ್ಯವನ್ನು ನಡಸುತ್ತ ಬರುತ್ತ ದಕ್ಷತೆಯಿಂದ ಕೆಲಸ ಮಾಡಿದವರೇ ಪ್ರಭುತ್ವಸ್ಥಾನಕ್ಕೆ ಏರತಕ್ಕದ್ದೆಂಬ ನಿಯಮವೂ ಇದೆ. ಅಲ್ಲದೆ, ಪ್ರಭುತ್ವ ಪದವಿಗಳಿಗೆ ಬರುವ ಸಹಾಯಕ ರಕ್ಷಕರು ಸೈನ್ಯಾಧಿಕಾರ ಸ್ಥಾನಗಳಲ್ಲಿಯೂ ಕೆಲಸಮಾಡಿ ಯುದ್ಧ ಕಾರ್ಯದಲ್ಲಿಯೂ ಪ್ರವೀಣರಾಗಿರುತ್ತಾರೆ. ಎಲ್ಲ ವಿಷಯದಲ್ಲಿಯೂ ದೇಶದ ಪರಮಾಧಿಕಾರಪದವಿಗೆ ಅವಶ್ಯಕವಾದ ಅರ್ಹತೆಯನ್ನು ಗಳಿಸಿದವರೇ ಅಂಥ ರಾಜಪದವಿಗೆ ಬರಬೇಕೆಂದು ಪ್ಲೇಟೋವಿನ ಆಶಯ. ಇಂಥ ಸರ್ವಾಧಿಕಾರಿಗಳಿಗೂ ಹಿಟ್ಲರ್ ಮುಸೋಲಿನಿಗಳಿಗೂ ಹೋಲಿಕೆಯಿರುವುದಿಲ್ಲ.

'ರಿಪಬ್ಲಿಕ್' ಗ್ರಂಥದಲ್ಲಿ ಸಾಮಾನ್ಯ ಪ್ರಜೆಗಳಿಗೆ ಪ್ಲೇಟೋ ಅಧಿಕಾರದ ಮಾತನ್ನು ಎತ್ತದಿದ್ದರೂ, ತನ್ನ ವೃದ್ಧಾಪ್ಯದಲ್ಲಿ ಬರೆದ 'ಲಾಸ್' ಎಂಬ ಗ್ರಂಥದಲ್ಲಿ ಪ್ರಭುತ್ವದವರು ವರಣಪದ್ಧತಿಯ (Election) ಮೂಲಕ ಚುನಾಯಿತರಾಗಬೇಕೆಂಬ ನಿಯಮವನ್ನು ಸೂಚಿಸುತ್ತಾನೆ. ಅಲ್ಲದೆ, 'ರಿಪಬ್ಲಿಕ್' ಗ್ರಂಥದಲ್ಲಿ ರಾಜ್ಯಾಂಗದ ಮೂಲತತ್ತ್ವಗಳನ್ನು ಮಾತ್ರ ಪ್ರತಿಪಾದಿಸುತ್ತಾನೆ. ತತ್ತ್ವಜ್ಞಾನಿಗಳೂ ವ್ಯವಹಾರ ಕುಶಲರೂ ಅನುಭವಸ್ಥರೂ ಉಜ್ಜ್ವಲ ದೇಶಪ್ರೇಮಿಗಳೂ ಆದ ಪ್ರಭುತ್ವದವರಿಗೆ ಅಧಿಕಾರ ಬಂತೆಂದರೆ, ಮಿಕ್ಕ ಸಾಧಾರಣ ಶಾಸನಗಳನ್ನು ಅವರು ರಾಷ್ಟ್ರ ಹಿತಕ್ಕಾಗಿಯೇ ಸರ್ವಪ್ರಜಾಹಿತದ ದೃಷ್ಟಿಯಿಂದಲೇ ಮಿಕ್ಕೆಲ್ಲ ಸಂದರ್ಭಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ನಿರೂಪಿಸುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ. ಆದ್ದರಿಂದ, ಅಂಥವರು ಸ್ವಾರ್ಥಕ್ಕಾಗಿ ಜನರನ್ನು ಪೀಡಿಸುತ್ತಾರೆಂಬ ಶಂಕೆಗೆ ಅರ್ಥವಿಲ್ಲ.

ಮತ್ತೂ, ಪ್ಲೇಟೋವಿನ ಸಮಾಜ ಸಾಮರಸ್ಯ ತತ್ತ್ವಕ್ಕೂ ನಾಟ್ಸಿ ಫ್ಯಾಸಿಸ್ಟ್ ಪಕ್ಷದವರ ರಾಷ್ಟ್ರಭಾವನೆಗೂ ಅಜಗಜಾಂತರವಿದೆ. ಪ್ಲೇಟೋವಿನ ತತ್ತ್ವದೃಷ್ಟಿಯಲ್ಲಿ ಪ್ರಜೆಗಳ ಆತ್ಮೋದ್ಧಾರ ಮಾರ್ಗಕ್ಕೆ ಚ್ಯುತಿ ಬರುವುದಿಲ್ಲ. ತತ್ತ್ವಪ್ರೇಮಿಗಳಾದ ಪ್ರಭುತ್ವದವರು ಸರ್ವರ ಅಂತರಿಕವಾದ, ಆಧ್ಯಾತ್ಮಿಕವಾದ, ಶಾಶ್ವತ, ಸಾತ್ವಿಕ ಆತ್ಮೋನ್ನತಿಗಾಗಿಯೇ ಬದ್ಧಕಂಕಣರಾಗಿರುತ್ತಾರೆ. ಸಮಾಜದಲ್ಲಿ ಯಾವ ವರ್ಗವೂ ಆತ್ಮಹತ್ಯ ಮಾಡಿಕೊಳ್ಳಬೇಕಾಗಿಲ್ಲ. ಎಲ್ಲ ವರ್ಗದವರೂ ತಮ್ಮ ತಮ್ಮ ಸ್ವಭಾವ ಕರ್ಮಗುಣಗಳಿಗನುಸಾರವಾದ ಕಾರ್ಯಗಳಲ್ಲಿ ನಿರತರಾಗಿರುವುದಕ್ಕೆ ಬೇಕಾದ ವಾತಾವರಣವೇರ್ಪಡುತ್ತದೆ. ಚಿನ್ನ ಬೆಳ್ಳಿ ಸ್ವಭಾವವುಳ್ಳ (ಎಂದರೆ, ಉತ್ತಮ ಸ್ವಭಾವ

ಶಕ್ತಿಗಳುಳ್ಳ) ಪ್ರಜೆಗಳು ಸಾಧಾರಣ ಜನರಲ್ಲಿ ಹುಟ್ಟಿದ್ದರೂ ಅವರನ್ನು ಪ್ರಭುತ್ವದವರ ವರ್ಗಕ್ಕೆ ಏರಿಸುವುದು ಆಡಳಿತದವರ ಮುಖ್ಯ ಕಾರ್ಯವಾಗುತ್ತದೆ. ಆತ್ಮೋದ್ಧಾರಕ್ಕೆ ಸಾಕಾದಷ್ಟು ಸ್ವಾತಂತ್ರ್ಯವು ಅವಶ್ಯಕವೆಂಬ ಪ್ರಮೇಯವು ತತ್ತ್ವಜ್ಞಾನಿಗಳಾದ ಪ್ರಭುಗಳಿಗೆ ತಿಳಿದೇ ಇರುತ್ತದೆ. ಇದಕ್ಕೆ ಅವಕಾಶಗಳನ್ನು ಶಾಸನದ ಮೂಲಕ ಇವರು ಕಲ್ಪಿಸಿಕೊಡುತ್ತಾರೆಂಬುದರಲ್ಲಿ ಸಂಶಯವಿಲ್ಲ.

ರಾಷ್ಟ್ರಪ್ರೇಮದ ಆವೇಶದಲ್ಲಿ ರಾಷ್ಟ್ರಹಿತಕ್ಕಾಗಿ ಆತ್ಮಸಮರ್ಪಣೆ ಮಾಡುವುದಕ್ಕೆ ಸಿದ್ಧರಾಗಿದ್ದರೂ, ಅಂಥ ಆತ್ಮ ಸಮರ್ಪಣೆ ಎರಡು ವಿಧವಾಗಿರುತ್ತದೆ. ಒಂದು ತಾಮಸ, ರಾಜಸಗುಣ ಪ್ರಧಾನವಾದ್ದು; ಮತ್ತೊಂದು ಸಾತ್ವಿಕ ಗುಣಪ್ರಧಾನವಾದ್ದು. ತಾಮಸ ರಾಜಸಗುಣ ಪ್ರೇರಿತವಾದ ಆತ್ಮತ್ಯಾಗದಿಂದ ಆತ್ಮೋದ್ಧಾರವು ನೆರವೇರುವುದಿಲ್ಲ. ಅಜ್ಞಾನ ಆವೇಶಪೂರಿತವಾದ್ದರಿಂದ ಅಂಥ ಆತ್ಮನಿವೇದನವು ಅಷ್ಟು ಫಲಕಾರಿಯಾಗುವುದಿಲ್ಲವೆಂದು ಹೇಳಬೇಕು. ಇಂಥ ಆತ್ಮಸಮರ್ಪಣೆಯನ್ನೇ ನಾಟ್ಸಿಗಳೂ ಫ್ಯಾಸಿಸ್ಟರೂ ಬಯಸುವುದು. ಸಾತ್ವಿಕ ಗುಣ ಪ್ರಧಾನವಾದ ಆತ್ಮ ಸಮರ್ಪಣೆಯಲ್ಲಿಯಾದರೋ ಆತ್ಮಸ್ವರೂಪಕ್ಕೆ ಚ್ಯುತಿಯಾಗುವುದಿಲ್ಲ. ಜ್ಞಾನಪೂರ್ವಕವಾಗಿ ರಾಷ್ಟ್ರಹಿತ ಸಾಧನೆಗೋಸ್ಕರ ಪ್ರಭುತ್ವದವರು ಹೂಡಿದ ಶಾಸನಗಳನ್ನು ಅನುಮೋದಿಸಿ, ತಮ್ಮ ಸ್ವಭಾವಕ್ಕನುಗುಣವಾದ ಕಾರ್ಯಕಲಾಪಗಳ ಮೂಲಕ ಸಂತೋಷವಾಗಿ ರಾಷ್ಟ್ರಸೇವೆಯನ್ನು ಸಲ್ಲಿಸುವುದು ಸಾತ್ವಿಕ ಮಾರ್ಗ. ಇಂಥ ಮಾರ್ಗವನ್ನು ಪ್ಲೇಟೋವಿನ ಪ್ರತಿಪಾದನೆಯಲ್ಲಿ ನಾವು ಗುರುತಿಸಬಹುದು.

ಅಲ್ಲದೆ, ಪ್ಲೇಟೋವಿನ ತತ್ತ್ವಾನ್ವೇಷಣೆ ರೀತಿಯಲ್ಲಿ ಪ್ರಶಾಂತವಾದ ಜ್ಞಾನದೃಷ್ಟಿಯು ಎದ್ದುಕಾಣುತ್ತದೆ. ಇಂದ್ರಿಯ ನಿಗ್ರಹದ ಮಹತ್ತ್ವವನ್ನೂ ಇಷ್ಟಸಾಧನಗಳಲ್ಲಿ ಪರಿಮಿತತ್ವವನ್ನೂ ಪ್ಲೇಟೋ ಪ್ರಶಂಸಿಸುತ್ತಾನೆ. ಪದಾರ್ಥಸ್ವರೂಪವನ್ನೂ ಆತ್ಮಸ್ವರೂಪವನ್ನು ಮರೆಮಾಡುವ ಇಂದ್ರಿಯ ಜನ್ಯವಾದ ಮಂಜಿನ ತೆರೆಯನ್ನು ಜ್ಞಾನ ಭಾಸ್ಕರನು ಕರಗಿಸಿದ ಹೊರತು ಮನುಷ್ಯನ ಕಾರ್ಯವೂ ಇಚ್ಛೆಯೂ ಪರಿಶುದ್ಧವಾಗುವುದಿಲ್ಲವೆಂಬ ಅಂಶವನ್ನು ಪ್ಲೇಟೋ ಅನೇಕ ಸಂದರ್ಭಗಳಲ್ಲಿ ಸ್ಪಷ್ಟವಾಗಿ ನಿರೂಪಿಸುತ್ತಾನೆ. ಆದ್ದರಿಂದ ಇಂಥ ಸಂಸ್ಕಾರವನ್ನು ಸಂಪೂರ್ಣವಾಗಿ ಬೆಳಸಿಕೊಂಡ ಪ್ರಭುತ್ವದವರ ಆಳ್ವಿಕೆಯಲ್ಲಿ ಅಸ್ಪಷ್ಟ ತತ್ತ್ವಗಳಾಗಲಿ ರಾಷ್ಟ್ರೀಯ ಅಹಂಕಾರವಾಗಲಿ ಅಸತ್ಯ ಪ್ರಚಾರವಾಗಲಿ ಆವೇಶಪೂರಿತವಾದ ಆಕ್ರಮಣ ನೀತಿಗಳಾಗಲಿ ತಲೆದೋರುವುದಕ್ಕೆ ಅವಕಾಶವಿರುವುದಿಲ್ಲ

ಹೀಗೆ ಪ್ಲೇಟೋ ನಿರೂಪಿಸುವ ಮಾನಸಿಕ ವಾತಾವರಣಕ್ಕೂ ನಾಟ್ಸಿ ಫ್ಯಾಸಿಸ್ಟರ ವಾತಾವರಣಕ್ಕೂ, ಪ್ಲೇಟೋವಿನ ಸಮಾಜ ಸಾಮರಸ್ಯ ತತ್ತ್ವಕ್ಕೂ ನಾಟ್ಸಿ ಫ್ಯಾಸಿಸ್ಟರು ಪ್ರತಿಪಾದಿಸುವ ರಾಷ್ಟ್ರದ ಸರ್ವಪ್ರಜೆಗಳ ಅಭೇದೈಕ್ಯಗಳಿಗೂ ಮೂಲಭೂತವಾದ ಸ್ವರೂಪ ಭೇದವಿರುವುದು ಸ್ಪಷ್ಟವಾಗುತ್ತದೆ.

* * *

೧೧ನೆಯ ಅಧ್ಯಾಯ

ಪ್ಲೇಟೋ ಮತ್ತು ಕಾರ್ಲ್ ಮಾರ್ಕ್ಸ್

ಪ್ಲೇಟೋವಿನ ಆದರ್ಶರಾಜ್ಯ ನಿರೂಪಣೆಯು ರಷ್ಯದಲ್ಲಿ ಈಗ ನಡೆಯುತ್ತಿರುವ ಸಾಮ್ಯತತ್ತ್ವನಿಷ್ಠವಾದ "ಕಾರ್ಲ್‌ಮಾರ್ಕ್ಸ್"ನ ಪದ್ಧತಿಗೆ ತತ್ತ್ವತಃ ಹೊಂದುತ್ತದೆಯೆಂದು ಮತ್ತೆ ಕೆಲವರು ವಾದಿಸುತ್ತಾರೆ. ನಾಟ್ಸಿ, ಫ್ಯಾಸಿಸ್ಟ್ ಪದ್ಧತಿಗಳು ಒಂದು ರೀತಿಯಿಂದ ಏಕಪಕ್ಷದ ಸರ್ವಾಧಿಕಾರವಾದರೆ, ಸಾಮ್ಯವಾದಕ್ಕನುರೂಪವಾಗಿ ನಿರ್ಮಿತವಾದ ರಷ್ಯದ ರಾಜ್ಯಾಂಗವೂ ಇನ್ನೊಂದು ರೀತಿಯ ಸರ್ವಾಧಿಕಾರ ಪದ್ಧತಿಯಾಗಿದೆ. ಈಗಿನಕಾಲದ ರಾಜಕೀಯ ತತ್ತ್ವಚಿಂತಕರ ಮನಸ್ಸು ಈಯೆರಡು ಪರಿಮಿತಿಗಳ ಮಧ್ಯೆ ಓಲಾಡುತ್ತಿದೆ. ಎರಡಕ್ಕೂ ನೇರವಾದ ವಿರೋಧವಿದ್ದರೂ ಒಂದು ರೀತಿಯಲ್ಲಿ ನೋಡಿದರೆ ಎರಡೂ ಒಂದೇ ತತ್ತ್ವದ ಅಭಾಸ ರೂಪಗಳೋ ಎಂಬಂತೆ ತೋರುವುವು. ಏಕೆಂದರೆ, ಎರಡು ಪದ್ಧತಿಗಳೂ ಜನಸ್ವಾತಂತ್ರಕ್ಕೆ ಎಡೆಗೊಡದ ಸರ್ವಾಧಿಕಾರ ಪದ್ಧತಿಗಳು. ಎರಡು ರಾಜ್ಯಪದ್ಧತಿಗಳಲ್ಲಿಯೂ ಅಧಿಕಾರದಲ್ಲಿರುವ ಪಕ್ಷವನ್ನು ಬಿಟ್ಟು ಬೇರೊಂದು ಪಕ್ಷ ಹುಟ್ಟಿಕೊಳ್ಳುವ ಪ್ರಮೇಯವೇ ಇರುವುದಿಲ್ಲ. ಎರಡರಲ್ಲಿಯೂ ಕೆಲವು ಮೂಲತತ್ತ್ವಗಳಿಗೆ ಅದ್ವಿತೀಯವಾದ ಮನ್ನಣೆ ಅಂಗೀಕಾರಗಳಿರುತ್ತವೆ. ನಾಟ್ಸಿ ಮತ್ತು ಫ್ಯಾಸಿಸ್ಟ್ ರಾಜ್ಯಪದ್ಧತಿಗಳಲ್ಲಿ ರಾಷ್ಟ್ರದ ಸಾರ್ವಭೌಮತ್ವ ಪ್ರಜೆಗೆ ಅದರಲ್ಲಿ ತಲ್ಲೀನತೆ, ಅಂತರ್ಭಾವ – ಕಂಡುಬರುತ್ತದೆ. ರಾಷ್ಟ್ರವೇ ಪರಮಪೂಜ್ಯ ವಸ್ತು. ಪರಮೇಶ್ವರನ ಸ್ಥಾನವನ್ನು ರಾಷ್ಟ್ರವು ಆಕ್ರಮಿಸುತ್ತದೆ. ಇಂಥ ರಾಷ್ಟ್ರಕ್ಕೆ ಒಬ್ಬನೇ ನಾಯಕ. ಅವನು ರಾಷ್ಟ್ರದ ಉತ್ಸವಮೂರ್ತಿಯಂತೆ ಪೂಜಾರ್ಹನು. ರಾಷ್ಟ್ರದ ಎಲ್ಲ ಕಾರ್ಯಕಲಾಪಗಳೂ ಅವನ ಹೆಸರಿನಲ್ಲಿ ನಡೆಯಬೇಕು. ಅವನದೇ ಅಂತಿಮ ಆಜ್ಞೆ; ಅವನದೇ ಪರಮ ಶಾಸನ. ಸಾಮ್ಯವಾದ ರಾಜ್ಯಪದ್ಧತಿಯಲ್ಲಿಯೂ ಹೀಗೆ ಕೆಲವು ಮೂಲತತ್ತ್ವಗಳಿಗೆ ಅಂತಿಮ ಮರ್ಯಾದೆ ಸಲ್ಲುತ್ತದೆ; ವರ್ಗರಹಿತ ಸಮಾಜ ಮತ್ತು ರಾಷ್ಟ್ರಗಳನ್ನು ನಿರ್ಮಿಸುವುದೇ ಮಾನವ ಇತಿಹಾಸದ ಕೊನೆಯ ಹಂತ. ಇದು ಬಹುಶಃ ಹಿಂಸಾಮಾರ್ಗದಲ್ಲಿಯೇ ನೆರವೇರಬೇಕು. ಸಮಾಜದಲ್ಲಿ ಮಾನವನ ಇತಿಹಾಸದ ಆರಂಭಕಾಲದಿಂದಲೂ ವರ್ಗ ಘರ್ಷಣೆಯೂ ವರ್ಗ ಕಲಹವೂ ವರ್ಗ

ಶೋಷಣೆಯೂ ನಡೆಯುತ್ತಲೇ ಬಂದಿದೆ. ಸಾಮ್ಯನಿಷ್ಠ ರಾಜ್ಯಪದ್ಧತಿಯು ಏರ್ಪಡುವವರೆಗೆ ಈ ವರ್ಗಕಷಾಯವು ಮಾಯವಾಗುವುದಿಲ್ಲ. ಮತ್ತು ಜನರಿಗೆ ಬೇಕಾದ್ದು ಅನ್ನಾಹಾರಗಳು; ಆರ್ಥಿಕ ಸುಖ ಸಂಪತ್ತಿಗಳು; ಸ್ವಾತಂತ್ರ್ಯವಲ್ಲ. ಪ್ರಜಾರಾಜ್ಯಗಳಲ್ಲಿ ಈಗ ಪ್ರಶಸ್ತಿ ಹೊಂದಿರುವ ವೋಟಿನ ಪದ್ಧತಿಯಿಂದ ಬಡವರ ಸ್ವಾತಂತ್ರ್ಯ ಸಿದ್ಧಿಯಾಗುವುದಿಲ್ಲ. ಆಗುತ್ತದೆಯೆಂದು ನಂಬುವುದು ಮೋಹಜಾಲ. ಆಗುತ್ತದೆಯೆಂದು ಸಾರುವುದು ಮೋಸ. ರಾಷ್ಟ್ರಭಾವನೆಯು ಜನರ ಮೋಹಜಾಲದಲ್ಲಿ ಒಂದು ಅಂಶ: ಇದು ಪ್ರಭುತ್ವವರ್ಗದವರು ಸೃಷ್ಟಿಸಿರುವ ಕೃತಕಭಾವನೆ. ಈ ಭಾವನೆಯ ನೆರವಿನಲ್ಲಿ ಬಡಜನರ ಮನಸ್ಸನ್ನೂ ಬೆಂಬಲವನ್ನೂ ದೇಶದ ಹೆಸರಿನಲ್ಲಿ ಗಳಿಸಿ, ಅವರನ್ನು ಯುದ್ಧಗಳಿಗೆ ಆಹುತಿಮಾಡಿ, ಧನಿಕವರ್ಗದವರ ಕೈಗೊಂಬೆಯಂತಿರುವ ರಾಷ್ಟ್ರಪ್ರಭುತ್ವಗಳು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತವೆ. – ಇವೇ ಮೊದಲಾದ ಸಾಮ್ಯವಾದದ ಮೂಲತತ್ತ್ವಗಳು ಸಾಮ್ಯ ರಾಜ್ಯಗಳಲ್ಲಿ ನಿರ್ವಿವಾದವಾಗಿ ಸತತವಾಗಿ ಘೋಷಣೆಯಾಗುತ್ತಿರುತ್ತವೆ.

ಈ ಎರಡು ರಾಜ್ಯಪದ್ಧತಿಗಳಲ್ಲಿಯೂ ರಾಷ್ಟ್ರದ ಮೂಲ ತತ್ತ್ವಗಳನ್ನು ಅಂಗೀಕಾರ ಮಾಡದವರಿಗೆ ಉಳಿಗಾಲವಿಲ್ಲ. ಹೀಗೆ ಪರಸ್ಪರ ವಿರೋಧ ತತ್ತ್ವಗಳನ್ನೊಳಗೊಂಡಿದ್ದರೂ ಸರ್ವಾಧಿಕಾರದಲ್ಲಿಯೂ ವ್ಯಕ್ತಿಸ್ವಾತಂತ್ರ್ಯದಮನ ನೀತಿಯಲ್ಲಿಯೂ ನಾಟ್ಸಿಫ್ಯಾಸಿಸ್ಟ್ ಪದ್ಧತಿಗಳಿಗೂ ಸಾಮ್ಯವಾದ ಪದ್ಧತಿಗಳಿಗೂ ಸಾಧರ್ಮ್ಯವಿದೆ.

ಆದ್ದರಿಂದ ಪ್ಲೇಟೋವಿನ ರಾಜ್ಯಪದ್ಧತಿಯನ್ನು ಸರ್ವಾಧಿಕಾರ, ವ್ಯಕ್ತಿ ಸ್ವಾತಂತ್ರ್ಯ ನಾಶ – ಇವುಗಳ ದೃಷ್ಟಿಯಿಂದ ಫ್ಯಾಸಿಸ್‌ಮ್ ಮತ್ತು ಸಾಮ್ಯವಾದ ಪದ್ಧತಿಗಳೆರಡಕ್ಕೂ ಹೋಲಿಸುವುದುಂಟು. ಆದರೆ ಹಿಟ್ಲರ್, ಮುಸೋಲಿನಿ, ಸ್ಟಾಲಿನ್ ಪ್ರಭೃತಿಗಳ ಸರ್ವಾಧಿಕಾರಕ್ಕೂ ಪ್ಲೇಟೋವಿನ ಆದರ್ಶರಾಜ್ಯದ ಸರ್ವಾಧಿಕಾರಕ್ಕೂ ಬಹಳ ಭೇದವಿದೆ ಎಂದು ಹಿಂದೆಯೇ ಸೂಚಿಸಿದ್ದೇವೆ.

ಇನ್ನೊಂದು ದೃಷ್ಟಿಯಿಂದ ಪ್ಲೇಟೋವಿನ ರಾಜ್ಯವು ಸಾಮ್ಯರಾಜ್ಯವನ್ನು ಹೋಲುತ್ತದೆಯೆಂದು ಕೆಲವರ ಅಭಿಪ್ರಾಯ. ಅದೇನೆಂದರೆ, ಪ್ಲೇಟೋವಿನ ರಾಜ್ಯದಲ್ಲಿ ಆಸ್ತಿ ವಿಷಯದಲ್ಲಿ ಸಾಮ್ಯವು ಕಂಡುಬರುತ್ತದೆಯೆಂಬುದು, ಪ್ಲೇಟೋ ತನ್ನ ಆದರ್ಶ ರಾಜ್ಯದಲ್ಲಿ ಪ್ರಭುತ್ವ ವರ್ಗದವರಿಗೆ ಸ್ವಂತ ಆಸ್ತಿಪಾಸ್ತಿಗಳಿರಕೂಡದೆಂದು ಅಭಿಪ್ರಾಯ ಪಟ್ಟಿದ್ದಾನೆ. ಪಾಲಕರು, ಅವರ ಸಹಾಯಕರು, ಇವೆರಡು ವರ್ಗದವರೂ ವ್ಯಕ್ತಿಗತವಾದ ಸ್ವಂತ ಆಸ್ತಿ ಮನೆಮಠಗಳನ್ನು ತ್ಯಜಿಸಬೇಕು, ಅವರು ಸೈನ್ಯದ ಯೋಧರಂತೆ ಸೈನ್ಯಾಗಾರಗಳಲ್ಲಿ ಒಟ್ಟಿಗೆ, ಮಠದಲ್ಲಿದ್ದಂತೆ ವಾಸಿಸಬೇಕು. ಎಲ್ಲರಿಗೂ ಒಂದೇ ಅಡಿಗೆ, ಒಂದೇ ಆಹಾರ – ಎಂದು ಮುಂತಾಗಿ ಶಾಸನ ಮಾಡಿರುವುದು 'ರಿಪಬ್ಲಿಕ್' ಗ್ರಂಥದಲ್ಲಿ ನಿರೂಪಿತವಾಗಿದೆ, ಈ ರೀತಿಯ ಸಮೂಹ ಜೀವನವೂ ಸ್ವಂತ ಆಸ್ತಿಯ ಹಂಬಲನ್ನು ತ್ಯಜಿಸಿರುವುದೂ ಸಾಮ್ಯವಾದದ ಲಕ್ಷಣವೆಂದು ಅವರ ಅಭಿಪ್ರಾಯ. ಪಾಲಕರೂ ಸಹಾಯಕರೂ ತಮ್ಮ ತಮ್ಮೊಳಗೆ ವರ್ಗರಹಿತವಾದ ಸಮೂಹ

ಜೀವನವನ್ನು ನಡೆಸುವುದು ಸಾಮ್ಯವಾದದ ಆಶಯವನ್ನು ನೆರವೇರಿಸುತ್ತದೆ. ಹೀಗೆ ಪ್ರಭುತ್ವದವರಿಗೆ ಮಾತ್ರ ನಿಯಮಿಸಿರುವ ತತ್ತ್ವವನ್ನು ಜನಸಾಮಾನ್ಯರಿಗೆಲ್ಲ ಅನ್ವಯಿಸಿ ರಾಷ್ಟ್ರನಿರ್ಮಾಣ ಮಾಡಿದರೆ, ಸಾಮ್ಯವಾದವು ಅಭಿವ್ಯಕ್ತವಾಗುವುದು – ಎಂಬುದು ಕೆಲವರ ಅಭಿಪ್ರಾಯ.

ಆದರೆ, ಪ್ಲೇಟೋವಿನ ರಾಜ್ಯಕ್ಕೂ ಸಾಮ್ಯ ರಾಜ್ಯಕ್ಕೂ ಹೀಗೆ ನಿರೂಪಿಸುವ ಹೋಲಿಕೆ ಏಕದೇಶ ಮಾತ್ರ. ಇವೆರಡಕ್ಕೂ ಸಾಧರ್ಮ್ಯಕ್ಕಿಂತ ವೈಷಮ್ಯವೇ ಹೆಚ್ಚು. ಇವರಡರ ಅಂತಿಮ ಧ್ಯೇಯಗಳು ಕೂಡ ಬೇರೆಬೇರೆ.

ಕಾರ್ಲ್ ಮಾರ್ಕ್ಸ್‌ನು ವ್ಯಕ್ತಿಗಿಂತ ಆಸ್ತಿಯನ್ನು ತೊಡೆದುಹಾಕಬೇಕೆನ್ನುವುದರ ಮುಖ್ಯೋದ್ದೇಶವೇನೆಂದರೆ, ಎಲ್ಲರಿಗೂ ಆಸ್ತಿಯ ಫಲ, ಎಂದರೆ ಆರ್ಥಿಕ ಸುಖಸಾಮಗ್ರಿಗಳ ಮೇಲಿನ ಹತೋಟಿ, ಒಂದೇ ಸಮನಾಗಿ ಲಭಿಸಬೇಕೆಂದು. ಹಾಗೆ ಲಭಿಸಿದ ಮೇಲೆ ಜನರು ಹೇಗೆ ಜೀವನ ನಡಸಬೇಕು ಮತ್ತು ಜೀವನವನ್ನು ಸಾರ್ಥಕಗೊಳಿಸುವ ಧ್ಯೇಯಗಳೇನು – ಎಂಬ ಅಂತಿಮ ಪುರುಷಾರ್ಥಗಳ ಗೋಜಿಗೆ ಮಾರ್ಕ್ಸ್ ಹೋಗುವುದಿಲ್ಲ. ಅವನು ಪ್ರಕೃತಿವಾದಿ. ಅವನ ಪಾಲಿಗೆ ದೇವರಿಲ್ಲ; ಜೀವರಲ್ಲಿ ಆತ್ಮವೆಂಬ ವಸ್ತುವಿಲ್ಲ.

ಪ್ಲೇಟೋವಿನ ದೃಷ್ಟಿ ಇದಕ್ಕೆ ತೀರ ವಿರೋಧವಾದ್ದು. ಪಾಲಕ ಸಹಾಯಕರಲ್ಲಿ ಸಾಮ್ಯವನ್ನು ವಿಧಿಸುವ ಉದ್ದೇಶ ಅವರೆಲ್ಲ ಒಂದೇ ಸಮನಾದ ಸುಖಸಾಮಗ್ರಿಗಳನ್ನು ಪಡೆದಿರಬೇಕೆಂಬುದಲ್ಲ. ಸ್ವಂತ ಆಸ್ತಿಯಿದ್ದರೆ, ಲೋಕದಲ್ಲಿ ಸಾಧಾರಣ ಗೃಹಸ್ಥರಂತೆ ಆಸ್ತಿಪಾಸ್ತಿಗಳನ್ನು ನೋಡಿಕೊಳ್ಳುವುದಕ್ಕೆ ಮನಸ್ಸು ಕೊಡಬೇಕಾಗುತ್ತದೆ. ಇದರ ಹವ್ಯಾಸದಿಂದ ಪಾಲಕರು ತಮ್ಮ ಶಕ್ತಿಸರ್ವಸ್ವವನ್ನೂ ದೇಶಸೇವೆಗೆ ವಿನಿಯೋಗಿಸಲು ಅಡಚಣೆಯುಂಟಾಗಬಹುದು. ಹಾಗೆ ಉಂಟಾಗುವುದು ಸ್ವಾಭಾವಿಕ. ಈ ಆತಂಕವನ್ನು ಅವರ ಮನಸ್ಸಿನಿಂದ ತೆಗೆದುಹಾಕಬೇಕೆಂಬ ಸದುದ್ದೇಶದಿಮದ ಪ್ಲೇಟೋ ಅವರಿಗೆ ಆಸ್ತಿಯನ್ನು ಕೊಡುವುದಿಲ್ಲ. ಮಠದ ಸನ್ಯಾಸಿಗಳಂತೆಯೋ ಜೈನಬೌದ್ಧ ವಿಹಾರಗಳ ಬಿಕ್ಷುಗಳಂತೆಯೋ ಇವರು ಸ್ವಂತ ಐಶ್ವರ್ಯ ಸಂಪಾದನೆಯ ಯೋಚನೆಯನ್ನು ಬಿಟ್ಟು, ರಾಷ್ಟ್ರವು ತಮಗೆ ಕೊಡುವ ಆಹಾರ ವಸತಿಗಳಲ್ಲಿ ತೃಪ್ತಿಗೊಂಡು ತಮ್ಮ ಜ್ಞಾನಶಕ್ತಿ ಸರ್ವಸ್ವವನ್ನೂ ದೇಶಸೇವೆಯಲ್ಲಿ ವ್ಯಯಮಾಡಬೇಕೆಂಬುದೇ ಪ್ಲೇಟೋವಿನ ಆಶಯ.

ಈ ಪಾಲಕರು ರಾಷ್ಟ್ರಸೇವಾ ಕಾರ್ಯದಲ್ಲಿ ತಮ್ಮ ಸುಖಸಂತೋಷಗಳನ್ನು ಕಾಣುತ್ತಾರೆ. ಮುಖ್ಯವಾಗಿ ಸತ್ಯಾಗ್ರಹಿಯಾದ ಜ್ಞಾನದಲ್ಲಿಯೂ, ವಿವೇಕಯುತವಾದ ಆಡಳಿತ ಕಾರ್ಯದಲ್ಲಿ ಸಫಲತೆಯನ್ನು ಕಾಣುವುದರಲ್ಲಿಯೂ, ಜನರ ಏಳಿಗೆಗೆ ಅನುಕೂಲಗಳನ್ನೊದಗಿಸುವುದರಲ್ಲಿಯೂ, ದುಷ್ಟನಿಗ್ರಹ ಶಿಷ್ಟಪರಿಪಾಲನೆಯಲ್ಲಿಯೂ ಅವರಿಗೆ ಆನಂದ ಲಭಿಸುತ್ತದೆ. ಈ ರೀತಿ ಉದ್ಭವಿಸಿದ ಆನಂದ ಅವರ ಆತ್ಮವನ್ನು ಅವರಿಸಿ ಅವರಿಗೆ ಆತ್ಮಲಾಭದ ಪರಮ ತೃಪ್ತಿಯನ್ನು ತಂದುಕೊಂಡುತ್ತದೆ. ಮಾರ್ಕ್ಸನ

ಸಾಮ್ಯವಾದದಲ್ಲಿ ನಿರೂಪಿತವಾದ ಸಂಪತ್ಸಮಾನತೆಗೆ ಈ ವಿಧವಾದ ಆಧ್ಯಾತ್ಮಿಕ ಸ್ಫೂರ್ತಿಯಿರುವುದಿಲ್ಲ.

ಮಾರ್ಕ್ಸನ ಅಭಿಪ್ರಾಯದಲ್ಲಿ, ಸಮಾಜದಲ್ಲಿ ಬಲಿಷ್ಠರು ತಮ್ಮ ಪ್ರಯೋಜನಕ್ಕಾಗಿ ಆರ್ಥಿಕ ವ್ಯವಸ್ಥೆಯನ್ನು ರೂಪುಗೊಳಿಸಿಕೊಳ್ಳುತ್ತಾರೆ. ಇಂಥ ಆರ್ಥಿಕ ವ್ಯವಸ್ಥೆಯು ಆಯಾ ಕಾಲದಲ್ಲಿ ಪ್ರಚಲಿತವಾಗಿರುವ ಸಂಪತ್ಸೃಷ್ಟಿವಿಧಾನವನ್ನು ಅನುಸರಿಸುತ್ತದೆ. ದನಕರುಗಳು, ಕುರಿ, ಮೇಕೆ, ಕುದುರೆ, ಆನೆ, ಒಂಟೆಗಳೇ ಜನರ ಸಂಪತ್ತಾಗಿದ್ದ ಕಾಲದಲ್ಲಿ ಇವುಗಳ ಮಾಲೀಕರೇ ರಾಜರಾಗುತ್ತಿದ್ದರು. ಭೂವ್ಯವಸಾಯ ಪದ್ಧತಿ ಬಂದ ಮೇಲೆ ಭೂಮಿಯ ಮೇಲೆ ಸ್ವಾಮ್ಯವನ್ನು ಸಂಪಾದಿಸಿಕೊಂಡ ಯೋಧರೇ ರಾಜರಾಗುತ್ತಿದ್ದರು. ಯಂತ್ರಯುಗ ಪ್ರಾರಂಭವಾದ ಮೇಲೆ ಯಂತ್ರಗಳ ಮಾಲೀಕರೇ ರಾಜಪದವಿಗೆ ಬರುವುದು ಸಹಜವಾಗಿದೆ. ಆಸ್ತಿಯ ಮೇಲಿನ ಸ್ವಾಮ್ಯವನ್ನು ಬಯಸುವುದು ಸಂಪತ್ಸಮೃದ್ಧಿಗೋಸ್ಕರ ಪ್ರಭುತ್ವದವರು ಬಲಪ್ರಯೋಗಮಾಡಿ, ರಾಜ್ಯದ ಸೈನ್ಯ ಪೊಲೀಸ್ ಸಿಬ್ಬಂದಿಗಳ ಸಹಾಯದಿಂದ ತಮ್ಮ ಸಂಪದಭಿವೃದ್ಧಿಯ ಸಲಕರಣೆಗಳನ್ನು ಸ್ವಂತ ಪ್ರಯೋಜನಕ್ಕಾಗಿ ಕಾಯ್ದಿಟ್ಟುಕೊಳ್ಳುತ್ತಾರೆ. ಇಂಥ ಸ್ವಾಮ್ಯವಿಲ್ಲದವರು ಬಡವರಾಗಿ ಉಳಿದುಕೊಂಡು ಕೇವಲ ಶ್ರಮಜೀವಿಗಳಾಗಿರುತ್ತಾರೆ. ಹೀಗೆ ಸಮಾಜದಲ್ಲಿ ಆಸ್ತಿವಂತರಿಗೂ ಶ್ರಮಜೀವಿಗಳಿಗೂ ಅಂತರವೇರ್ಪಟ್ಟು ಅದರಿಂದ ವರ್ಗವ್ಯವಸ್ಥೆಯುಂಟಾಗುತ್ತದೆ. ಹೀಗೆ ವರ್ಗವ್ಯವಸ್ಥೆಯು ಪ್ರಭುತ್ವ ವರ್ಗದವರ ಸ್ವಾರ್ಥದಲ್ಲಿ ರೂಢಮೂಲವಾಗಿದೆ.

ಆಸ್ತಿಯ ವಿಷಯದಲ್ಲಿ ಮಾರ್ಕ್ಸನ ಈ ಅಭಿಪ್ರಾಯವನ್ನು ಪ್ಲೇಟೋ ಕೂಡ ಕೊಂಚಮಟ್ಟಿಗೆ ಅನುಮೋದಿಸುತ್ತಾನೆ. ಐಶ್ವರ್ಯವಾಗಲಿ ಬಡತನವಾಗಲಿ ಒಂದು ಮಿತಿಮೀರಿದರೆ ಯಾರಿಗೂ ಶ್ರೇಯಸ್ಕರವಲ್ಲ ಎಂಬುದು ಪ್ಲೇಟೋವಿನ ಅಭಿಪ್ರಾಯ. ಸಂಪತ್ಸಾಮಗ್ರಿಗಳಿಗೋಸ್ಕರ ಆಸೆಪಟ್ಟು ಜನರು ಲೋಭಿಗಳಾಗಿ ಕೆಟ್ಟದಾರಿಗೆ ಬೀಳುತ್ತಾರೆ. ಇದರಿಂದ ಅವರ ಹೃದಯವು ಕಠಿನವಾಗಿ ಹೋಗಿ ಅವರು ಜನಾನುರಾಗವನ್ನು ಕಳೆದುಕೊಳ್ಳುತ್ತಾರೆ. ಧನಿಕರೂ ಬಡವರೂ ಒಂದೇ ರಾಜ್ಯಕ್ಕೆ ಸೇರಿದ್ದರೂ ಪರಸ್ಪರ ದ್ವೇಷವುಳ್ಳ ಎರಡು ಪ್ರತ್ಯೇಕ ರಾಜ್ಯಗಳಿಗೆ ಸೇರಿದವರ ಹಾಗೆ ವರ್ತಿಸುತ್ತಾರೆ. ಇದೇ ಎಲ್ಲ ಸಮಾಜ ವಿಪ್ಲವಗಳಿಗೂ ಮೂಲ. ಸಮಾಜದ ಹೃದಯದಲ್ಲಿ ಬಡಬಾಗ್ನಿಯನ್ನು ಕೆರಳಿಸುವುದು ಈ ಧನಲೋಭ, ಅತ್ಯಾಶೆ. ಹೀಗೆ ಪ್ಲೇಟೋ ಧನಪಿಶಾಚಿಯ ಮಹಿಮೆಯನ್ನು ಒಪ್ಪುತ್ತಾನೆ. ಈ ರೀತಿ ಧನದ ಮಹಿಮೆಯನ್ನೊಪ್ಪಿಕೊಂಡು ಅದರ ದುಷ್ಪರಿಣಾಮವನ್ನು ತಪ್ಪಿಸುವ ಬಗೆಯನ್ನು ಹುಡುಕುವುದೇ ಸಾಮ್ಯವಾದದ ಕುರುಹೆನ್ನುವುದಾದರೆ, ಪ್ಲೇಟೋವಿನಲ್ಲಿ ಸಾಮ್ಯವಾದದ ಸತ್ಯಾಂಶಕ್ಕೆ ಸ್ಥಳವಿದೆ.

ಆದರೆ, ಧನದ ಮೇಲಿನ ದುರಾಸೆಯನ್ನೂ ಧನವಿಲ್ಲದವರ ನಿರಾಸೆಯನ್ನೂ ನಿರ್ಮೂಲಮಾಡಿ, ಅವುಗಳಿಗೆ ಎಡೆಗೊಡದಿರುವ ಸಾಮ್ಯ ಸಮಾಜವನ್ನು ರಚಿಸುವ ಉದ್ಯಮದಲ್ಲಿ ಪ್ಲೇಟೋ ಮಾರ್ಕ್ಸರಿಬ್ಬರೂ ಬೇರೆಬೇರೆ ಮಾರ್ಗಗಳನ್ನು ಹಿಡಿಯುತ್ತಾರೆ.

ಪ್ರಭುತ್ವವರ್ಗದವರಿಗೆ ಆಸ್ತಿಯಿಲ್ಲದಿರುವಂತೆ ಪ್ಲೇಟೋ ಶಾಸನ ಮಾಡುತ್ತಾನೆ. ಮಾರ್ಕ್ಸನು ಎಲ್ಲರಿಗೂ ಸಮಾನ ಸಂಪತ್ತನ್ನು ಒದಗಿಸಿಕೊಡುತ್ತೇನೆಂದು ಹೊರಟು ಎಲ್ಲ ಸಂಪತ್ಸಾಧನಗಳನ್ನೂ ರಾಷ್ಟ್ರೀಕರಣ ಮಾಡುತ್ತಾನೆ. ಎಲ್ಲ ಮಿಲ್(ಯಂತ್ರ), ಫ್ಯಾಕ್ಟರಿ(ಕಾರ್ಖಾನೆ), ಬ್ಯಾಂಕು, ಇನ್ಶೂರೆನ್ಸ್ (ವಿಮೆ) ವ್ಯಾಪಾರಸಂಸ್ಥೆ, ವಾಹನಸೌಕರ್ಯ, ರೈಲ್ವೇ, ಹಡಗುಗಳು ಎಲ್ಲವನ್ನೂ ಸರಕಾರಕ್ಕೆ ಸೇರಿಸುತ್ತಾನೆ.

ಪಾಲಕರಲ್ಲದ ಜನಸಾಮಾನ್ಯರಲ್ಲಿ ವರ್ಗಭೇದಗಳು ಹುಟ್ಟಿ ಧನಿಕರು ದರಿದ್ರರನ್ನು ಶೋಷಣಮಾಡಲು ಪ್ಲೇಟೋವಿನ ರಾಜ್ಯದಲ್ಲಿ ಅವಕಾಶವುಂಟೆಂದು ಸಾಮ್ಯವಾದಿಗಳು ಶಂಕಿಸಬಹುದು. ಆದರೆ ಇದಕ್ಕೆ ಅಷ್ಟು ಅವಕಾಶವಿಲ್ಲ. ಏಕೆಂದರೆ, ಧನಿಕತೆ ದರಿದ್ರತೆಗಳ ಮಿತಿಮೀರಿದ ವ್ಯಾಪನೆಯಿಂದಾಗುವ ಅನರ್ಥಗಳು ಪಾಲಕರಿಗೆ ತಿಳಿದೇ ಇರುತ್ತದೆ ಎಂದು ಊಹಿಸಬೇಕು. ಹಾಗೆ ತಿಳಿದಮೇಲೆ ಇವುಗಳನ್ನು ಹದ್ದಿನಲ್ಲಿರಿಸುವುದಕ್ಕೆ ತಕ್ಕ ಶಾಸನಗಳನ್ನು ರಚಿಸಿ ಅವು ಬಳಕೆಗೆ ಬರುವಂತೆ ಅವರು ನೋಡಿ ಕೊಳ್ಳುತ್ತಾರೆಯೆಂಬ ಭರವಸೆಯಿದೆ. ಏಕೆಂದರೆ, ಯಾರೂ ನಿರ್ಗತಿಕರಾಗದಂತೆಯೂ ಯಾರೂ ಮಿತಿಮೀರಿ ಹಣ ಸಂಪಾದನೆ ಮಾಡಿ ಶೇಖರಿಸುವುದಕ್ಕಾಗದಂತೆಯೂ ಇರುವುದಕ್ಕೋಸ್ಕರ ಎಲ್ಲರಿಗೂ ಸಮಾನವಾಗಿ ಭೂಮಿಯನ್ನು ರಾಜ್ಯವು ಹಂಚಬೇಕೆಂದೂ, ಆಮೇಲೆ ಯಾರೂ ತಮ್ಮ ಭೂಮಿಯ ಬೆಲೆಯ ನಾಲ್ಕರಷ್ಟಕ್ಕೆ ಮೇಲ್ಪಟ್ಟು ಆಸ್ತಿಯನ್ನು ಸಂಗ್ರಹಿಸಬಾರದೆಂದೂ **ಲಾಸ್** ಎಂಬ ಗ್ರಂಥದಲ್ಲಿ ಪ್ಲೇಟೋ ಶಾಸನ ಮಾಡುತ್ತಾನೆ. ಇತರರಿಗಿಂತ ನಾಲ್ಕರಷ್ಟಕ್ಕೆ ಮೇಲ್ಪಟ್ಟು ಯಾರಿಗಾದರೂ ಸಂಪಾದನೆಯಾದರೆ, ಆ ಹೆಚ್ಚಿನ ವರಮಾನವನ್ನು ವಿಶೇಷ ತೆರಿಗೆಯ ಮೂಲಕ ರಾಜ್ಯವು ತೆಗೆದುಕೊಳ್ಳತಕ್ಕದ್ದೆಂದೂ ತೀರ್ಮಾನ ಮಾಡುತ್ತಾನೆ.

ಆದ್ದರಿಂದ 'ರಿಪಬ್ಲಿಕ್' ಗ್ರಂಥದಲ್ಲಿ ನಿರೂಪಿಸಿರುವ ತತ್ತ್ವಗಳು ಕೇವಲ ಸೂಚನೆಗಳು ಮಾತ್ರ. ಇವು ರಾಜ್ಯಾಂಗದ ರೂಪುರೇಖೆಗಳೇ ವಿನಾ ಅದರ ಸಂಪೂರ್ಣ ವರ್ಣನೆಯಲ್ಲ. ಅಲ್ಲದೆ, ಕಾಲಕಾಲಕ್ಕೆ ಬೇಕಾದ ಶಾಸನಗಳನ್ನು ಸಮಯೋಚಿತವಾಗಿ ಬದಲಾಯಸುವುದೋ, ಹೊಸ ನಿಯಮಗಳನ್ನು ರೂಪಿಸುವುದೋ ಈ ಕೆಲಸಗಳನ್ನು ಪ್ರಭುತ್ವದವರು ಸತತವಾಗಿ ನೆರವೇರಿಸುತ್ತಿರಬೇಕು. ಸದಾಕಾಲಕ್ಕೂ ಅನುಗುಣವಾಗುವ ಶಾಸನ ಸಮೂಹವನ್ನು ರಾಜ್ಯಾಂಗರಚನಾ ಕಾಲದಲ್ಲಿ ಒಂದೇ ಮಾತಿನಿಂದ ನಿರೂಪಿಸುವುದು ಅಸಾಧ್ಯ.

ಹೀಗೆ, ಪ್ಲೇಟೋ ಸಾಮಾನ್ಯರಿಗೆ ಆಸ್ತಿ ವಿಷಯವಾಗಿ ಹೆಚ್ಚು ಸ್ವಾತಂತ್ರ್ಯವನ್ನು ಆಪಾತತಃ ಬಿಟ್ಟುಕೊಟ್ಟಿದ್ದರೂ ಅದರ ನಿಯಮ ವಿಶೇಷಗಳನ್ನು ನಿರೂಪಿಸುವ ಕಾರ್ಯವು ಪ್ರಭುತ್ವದವರ ಜವಾಬ್ದಾರಿ ಮತ್ತು ಕರ್ತವ್ಯ ಎಂದು ಅವನು ಹೇಳಿದ್ದಾನೆ. ಆಸ್ತಿ ಸಂಬಂಧವಾಗಿ ಸಂಭವಿಸಬಹುದಾದ ವಿಷಮ ವಿಪರೀತಗಳನ್ನು ಮೊಳಕೆಯಲ್ಲಿಯೇ ಅಡಗಿಸುವ ಸೂಕ್ಷ್ಮಬುದ್ಧಿಯು ಪ್ರಭುತ್ವದವರಿಗಿರಬೇಕೆಂಬುದು ಪ್ಲೇಟೋವಿನ ಆಶಯ.

ಪ್ಲೇಟೋ 'ಲಾಸ್' ಎಂಬ ಸಂವಾದದಲ್ಲಿ ಸಾಮ್ಯವಾದದ ಉತ್ಕಟೇಚ್ಛೆ ಸಮಾಜದಲ್ಲಿ ಏಳದಹಾಗೆ ತಕ್ಕ ಆರ್ಥಿಕ ವ್ಯವಸ್ಥೆಯನ್ನು ಸೂಚಿಸಿದ್ದಾನೆ. ಆದ್ದರಿಂದ, ಪ್ಲೇಟೋವನ್ನು ಸಾಮ್ಯವಾದದ ಶತ್ರುವೆಂದಾಗಲಿ ಮಿತ್ರನೆಂದಾಗಲಿ ಒಮ್ಮೇಗೇ ಹೇಳುವ ಹಾಗಿಲ್ಲ. ಆಯಾ ಸಂದರ್ಭಕ್ಕೆ ಅನುಸಾರವಾಗಿ ಕೆಲವು ಪರಿಮಿತಿಗಳಿಗೊಳಪಟ್ಟೇ ಹೇಳಬೇಕಾಗುತ್ತದೆ.

* * *

೧೨ನೆಯ ಅಧ್ಯಾಯ

ಆದರ್ಶರಾಜ್ಯದ ಸಾಧನೆ

ಪ್ಲೇಟೋ ವರ್ಣಿಸುವಂಥ ತತ್ತ್ವಪ್ರೇಮಿಗಳೂ ಧೈರ್ಯಶಾಲಿಗಳೂ ಶಮದಮಾದಿ ಗುಣ ಸಂಪತ್ತುಳ್ಳವರೂ ರಾಷ್ಟ್ರ ಪ್ರೇಮಿಗಳೂ ಆದ ಪಾಲಕರ ಪ್ರಭುತ್ವವು ಲಭಿಸಿದ್ದೇ ಆದರೆ, ಅಂಥ ರಾಜ್ಯದಲ್ಲಿ ಮಿಕ್ಕ ರಾಜ್ಯಪದ್ಧತಿಗಳಲ್ಲಿ ತೋರಿಬರುವ ದೋಷಗಳಿಗೆ ಅವಕಾಶವಿಲ್ಲವೆಂದು ಕೇವಲ ತತ್ತ್ವದೃಷ್ಟಿಯಿಂದ ಒಪ್ಪಿಕೊಳ್ಳೋಣ. ಆದರೂ ವ್ಯವಹಾರ ದೃಷ್ಟಿಯಿಂದ ಇದು ಸಂಭಾವ್ಯವೆ? – ಎಂಬ ಪ್ರಶ್ನೆಯೇಳುವುದು ಸ್ವಾಭಾವಿಕವಾಗಿದೆ. ಎಂಥ ಸಾತ್ವಿಕರಾದರೂ ರಾಷ್ಟ್ರದ ಅಧಿಕಾರವೆಲ್ಲ ತಮ್ಮ ಕೈಯಲ್ಲಿರುವಾಗ ಎಷ್ಟುಕಾಲ ಅಂಥ ಪ್ರಭುಗಳು ಸ್ವಾರ್ಥವನ್ನೂ ಸುಖಾಭಿಲಾಷೆಯನ್ನೂ ತೊರೆದು ಮಮಕಾರ ಸ್ವಲ್ಪವೂ ಇಲ್ಲದೆ ಇರುವುದಕ್ಕೆ ಸಾಧ್ಯ ಎಂಬ ಶಂಕೆಯನ್ನು ಸುಲಭವಾಗಿ ಪರಿಹರಸಲಾಗುವುದಿಲ್ಲ.

ಪ್ಲೇಟೋವನ್ನೂ ಈ ಸಂಶಯವು ಬಾಧಿಸುತ್ತಿದ್ದ ಸೂಚನೆ ಅನೇಕ ಸಂದರ್ಭಗಳಲ್ಲಿ ಕಂಡುಬರುತ್ತದೆ. ಎಂಥ ಉತ್ತಮ ರಾಜ್ಯಪದ್ಧತಿಯೂ ಅದೃಷ್ಟವಶದಿಂದ ಬಹುಕಾಲ ನಡೆದು ಬಂದಿದ್ದರೂ ಒಂದಾನೊಂದು ಕಾಲದಲ್ಲಿ ಕ್ಷೀಣದೆಸೆಗೆ ಬರುವ ಸಂಭವವಿದೆಯೆಂದು ಪ್ಲೇಟೋವೇ ಹೇಳುತ್ತಾನೆ. ಹೀಗಾಗಿಯೇ ಉತ್ತಮ ರಾಜ್ಯಪದ್ಧತಿಯಿಂದ ದೋಷಮಿಶ್ರವಾದ ಪದ್ಧತಿಗಳು – ಯೋಧರಾಜ್ಯ, ಧನಿಕರಾಜ್ಯ, ಪ್ರಜಾರಾಜ್ಯ, ನಿರಂಕುಶ ಸರ್ವಾಧಿಕಾರಿ ರಾಜ್ಯ, ಇವುಗಳು – ಕ್ರಮವಾಗಿ ಉತ್ಪನ್ನವಾಗುತ್ತವೆ ಎಂದು ಅವನು ನಿರೂಪಿಸುತ್ತಾನೆ. ಇದಕ್ಕೆ ಮುಖ್ಯಕಾರಣ ಪ್ರಾಕೃತವಾದ ಶರೀರವುಳ್ಳವರಾಗಿ ಇಂದ್ರಿಯಜನ್ಯ ಜ್ಞಾನದ ಪರಿಮಿತಿಗೆ ಸಿಕ್ಕಿದವರಾದ ಮನುಷ್ಯರು ಎಷ್ಟೇ ಜ್ಞಾನಿಗಳಾದರೂ ಕೂಡ ಅವರಿಗೆ ಸಂತಾನ ನಿಯಮನ ಜ್ಞಾನವು ದುರ್ಲಭ. ಆದ್ದರಿಂದ ಜನಸಂಖ್ಯೆಯೂ ಅದರಲ್ಲಿರಬೇಕಾದ ಉತ್ತಮಾಧಮರ ಪರಸ್ಪರ ಪ್ರಮಾಣವೂ ಹತೋಟಿ ಮೀರುವುದು ಸಹಜ. ಹೀಗಾಗಿ ಕ್ರಮೇಣ ಎಲ್ಲ ದೋಷಗಳೂ ಒಂದೊಂದಾಗಿ ತಲೆದೋರುತ್ತವೆ – ಎಂದು ಪ್ಲೇಟೋ ಸೂಚಿಸುತ್ತಾನೆ.

ತಾನು ವರ್ಣಿಸುವ ರಾಜ್ಯಪದ್ಧತಿಯು ಕೇವಲ ಭಾವನಾ ಪ್ರಪಂಚಕ್ಕೆ ಸೇರಿದ್ದೇ ಹೊರತು ಅದನ್ನು ವ್ಯವಹಾರಕ್ಕೆ ತರುವುದು ಅಸಾಧ್ಯವೋ ಏನೋ ಎಂದು ಪ್ಲೇಟೋವಿಗೇ ಭಾಸವಾಗಿದ್ದಂತೆ ಕೆಲವುಕಡೆ ತೋರುತ್ತದೆ. ಆದರೂ ಅವನ ಕೊನೆಯ ಅಭಿಪ್ರಾಯ ಅದು ಸಂಪೂರ್ಣವಾಗಿ ಅಸಾಧ್ಯವೆಂದಲ್ಲ. ಅದನ್ನು ಬಹುಮಟ್ಟಿಗೆ ಆಚರಣೆಗೆ ತರಬಹುದು ಎಂಬ ನಂಬಿಕೆ ಅವನ ಮನಸ್ಸಿನಲ್ಲಿ ಬಲವಾಗಿ ಬೇರೂರಿತ್ತು.

ಅಲ್ಲದೆ, ಆದರ್ಶರಾಜ್ಯದ ಚಿತ್ರವು ರಾಷ್ಟ್ರ ನಿರ್ಮಾಪಕರಿಗೂ ಶಾಸನಕಾರರಿಗೂ ಆಡಳಿತಗಾರರಿಗೂ ಪ್ರಜೆಗಳಿಗೂ ಕೂಡ ಒಂದು ಅಳತೆಗೋಲಿನಂತೆಯೋ, ಏಳಿಗೆಯ ಮಾರ್ಗವನ್ನು ತೋರಿಸತಕ್ಕ ಮೈಲಿಗಲ್ಲಿನಂತೆಯೋ ಪ್ರಯೋಜನಕಾರಿಯಾಗುತ್ತದೆ. ಮಾನವನು ಗುರಿಯನ್ನು ಮುಟ್ಟಲಾಗದಿದ್ದರೂ ಅದರ ದಿಕ್ಕಿನಲ್ಲಿ ಬಹುದೂರ ಹೋಗಬಹುದು. ಈ ಮಾರ್ಗದಲ್ಲಿ ಸಾಗಿದ ಅಲ್ಪ ದೂರವು ಕೂಡ ಹೆಜ್ಜೆ ಹೆಜ್ಜೆಗೂ ಪ್ರಯೋಜನಕಾರಿಯಾಗುತ್ತದೆ – ಎಂದು ಮುಂತಾಗಿ ಪ್ಲೇಟೋ ಸಮಾಧಾನ ಹೇಳುತ್ತಾನೆ. ಜನರ ಸ್ವಭಾವವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಂಥ ಪ್ರಗತಿ ಮಾರ್ಗದಲ್ಲಿಯೂ ಎಷ್ಟುಮಟ್ಟಿಗೆ, ಎಷ್ಟುದೂರ ಸಮಾಜವನ್ನು ಕೊಂಡಯ್ಯಬಹುದು ಎಂಬ ವಿಷಯವಾಗಿ ಸಲಹೆ ಕೊಡುತ್ತಾನೆ.

ಮನಸ್ಸಿನ ಸ್ವಭಾವ ಕನ್ನಡಿಯಂತೆ. ವ್ಯಕ್ತಿಯ ಮನಸ್ಸಿನಲ್ಲಿ ತುಂಬಿರುವ ಅಭಿಪ್ರಾಯಗಳು, ಪ್ರಪಂಚಜ್ಞಾನ, ಚಿಂತನೆಗಳು, ಆಶಾಗೋಪುರಗಳು, ಅದನ್ನು ಕಾರ್ಯೋನ್ಮುಖವಾಗಿ ಹೊರಳಿಸುವ ಒಳಗಿನ ಪ್ರೇರಣೆಗಳು – ಇವೆಲ್ಲ ಹೊರಗಿನ ಸಮಾಜದ ಮಾನಸಿಕ ವಾತಾವರಣದಿಂದ ಬಂದಿವೆಯೇ ಹೊರತು ಆಕಾಶದಿಂದ ನೇರವಾಗಿ ನಾಗರಿಕನ ಮನಸ್ಸಿಗೆ ಬಂದಿಲ್ಲ. ಎಂಥ ಸಮಾಜವೋ ಅಂಥ ವ್ಯಕ್ತಿ, ಅಂಥ ನಾಗರಿಕತೆ – ಎಂಬುದು ಮನಶ್ಶಾಸ್ತ್ರದ ತತ್ತ್ವ. ಇದನ್ನು ಪ್ಲೇಟೋ ತನ್ನ ಆಲೋಚನಾ ಸರಣಿಗಳಲ್ಲೆಲ್ಲ ಮುಂದಿಟ್ಟುಕೊಂಡೇ ತನ್ನ ವಿಚಾರವನ್ನು ಮುಂದುವರಿಸುತ್ತಾನೆ.

ಶ್ರೇಷ್ಠರೆನ್ನಿಸಿಕೊಂಡವರು ಹೇಗೆ ನಡೆದುಕೊಳ್ಳುತ್ತಾರೆಯೋ ಎಂಥ ಆಶಯಗಳಿಂದ ಪ್ರೇರಣೆಹೊಂದಿ ಎಂಥ ಕಾರ್ಯಕಲಾಪಗಳಲ್ಲಿ ತೊಡಗುತ್ತಾರೆಯೋ ಅವೆಲ್ಲ ಜನಸಾಮಾನ್ಯರಿಗೆ ಪ್ರಮಾಣವಾಗುತ್ತದೆ. ಇದೇ ತತ್ತ್ವವನ್ನು ಗೀತೆಯಲ್ಲಿ ಶ್ರೀಕೃಷ್ಣನು ಸೂಚಿಸುತ್ತಾನೆ.

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ
ಸಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥ ೩–೨೧

ಪಾಲಕರನ್ನೂ ಸಹಾಯಕರನ್ನೂ ಚಿಕ್ಕಂದಿನಿಂದಲೂ ಉತ್ತಮವಾದ ಮೇಲ್ಪಂಕ್ತಿಗಳು, ಉತ್ತಮ ಜೀವನದ ಆದರ್ಶರೂಪವಾದ ನಡೆನುಡಿ–ಇವುಗಳ ಮೂಲಕ ತಿದ್ದಬೇಕು; ಕಾವ್ಯ, ಇತಿಹಾಸ, ಪುರಾಣ, ಸಂಗೀತ, ಚಿತ್ರ, ಶಿಲ್ಪ ಮುಂತಾದ ಮನರಂಜನ ಪೂರ್ವಕವಾದ ಕಲೆಗಳ ಸಹಾಯದಿಂದ ಪರಿಶುದ್ಧಗೊಳಿಸಬೇಕು.

ಇದೇ ವಿದ್ಯಾಭ್ಯಾಸದ ಮುಖ್ಯೋದ್ದೇಶ. ಇಂಥ ಮಾನಸಿಕ ವಾತಾವರಣದಲ್ಲಿ ಬೆಳೆದುಬಂದು ಪ್ರಾಪ್ತ ವಯಸ್ಕರಾದಮೇಲೆ ಪ್ರೌಢಶಾಸ್ತ್ರಾಧ್ಯಯನ, ಆಡಳಿತದಲ್ಲಿ ಅಧಿಕಾರಸ್ಥಾನ ಇವುಗಳ ಸಂಮೇಳನದಿಂದ ಪ್ರಗತಿ ಮಾರ್ಗವನ್ನು ಸತತವಾಗಿ ಅನುಸರಿಸುವ ಪ್ರವೃತ್ತಿಯನ್ನೂ ಮನೋದಾರ್ಢ್ಯವನ್ನೂ ಹೊಂದಿದ ಪ್ರಭುತ್ವಪರಂಪರೆಯನ್ನು ಸ್ಥಾಪಿಸುವುದು ಸಾಧ್ಯ. ಹಾಗೆ ಸ್ಥಾಪನೆ ಮಾಡುವುದೇ, ಶ್ರೇಯೋಮಾರ್ಗ–ಎಂಬುದು ಪ್ಲೇಟೋವಿನ ಜ್ಞಾನಪೂರ್ವಕವಾದ ಶ್ರದ್ಧೆ.

ಇಂಥ ವಾತಾವರಣವೇ 'ಸಂಸ್ಕೃತಿ' ಎನ್ನಿಸಿಕೊಳ್ಳುತ್ತದೆ. ಉತ್ತಮವಾದ ಸಂಸ್ಕೃತಿ ಧಾರೆಯನ್ನು ವಿಚ್ಛಿತ್ತಿಯಿಲ್ಲದೆ ಹರಿಸಿಕೊಂಡು ಬರುವುದು ಪ್ರಭುತ್ವದವರ ಮುಖ್ಯಕಾರ್ಯ. ಇದರ ಬಲದಿಂದ ಪ್ರಭುತ್ವದವರು ಸ್ವಾರ್ಥವನ್ನು ನಿಯಮನಮಾಡಿಕೊಂಡು, ಸ್ವಂತಸಂಪದಭಿವೃದ್ಧಿಗೂ ಸುಖಾಭಿಲಾಷೆಗೂ ಮನಗೊಡದ ಹಾಗೆ ಆಗಬಹುದೆಂದು ಪ್ಲೇಟೋವಿನ ನಂಬಿಕೆ. ಈ ನಂಬಿಕೆಗೆ 'ಸ್ಪಾರ್ಟಾ' ನಗರದಲ್ಲಿ ನೂರಾರು ವರ್ಷಗಳಿಂದ ನಡೆದು ಬಂದ, ರಾಷ್ಟ್ರಪದ್ಧತಿಯೂ, ಅದಕ್ಕೂ ಬಹಳ ಹಿಂದೆ 'ಪೈಥಾಗೊರಸ್' ಎಂಬ ತತ್ತ್ವಜ್ಞಾನಿಯು ದಕ್ಷಿಣ ಇಟಲಿಯಲ್ಲಿ ಸ್ಥಾಪಿಸಿದ್ದು ಪರಂಪರಾಗತವಾಗಿ ಬಂದ (ನಾವು ಆಶ್ರಮಗಳೆಂದೂ ವಿಹಾರಗಳೆಂದೂ ಕರೆಯುವ) ಸಂಸ್ಥೆಗಳನ್ನು ಹೋಲುವ ಸಂಸ್ಥೆಗಳೂ ಪಂಥಗಳೂ ಆಧಾರವಾಗಿದ್ದವು. ಸ್ಪಾರ್ಟಾದಲ್ಲಿ ಪ್ರಭುತ್ವದವರಿಗೆ ಸ್ವಂತ ಆಸ್ತಿ ಹೆಚ್ಚಾಗಿರಲಿಲ್ಲ. ಅವರೆಲ್ಲ ಸೈನ್ಯದ ಶಿಸ್ತಿನ ಪ್ರಕಾರ ಸತತವಾಗಿ ಕಾಲಕಳೆಯಬೇಕಾಗಿತ್ತು. ಒಂದೇ ಕಡೆ ಒಟ್ಟಾಗಿ ವಾಸ ಊಟ ಉಪಚಾರಗಳು, ಸತತವಾಗಿ ಯುದ್ಧ ಸನ್ನಾಹ, ಅದಕ್ಕೆ ಪೋಷಕವಾದ ಆಟಪಾಟಗಳು, ಆತ್ಮನಿಗ್ರಹವನ್ನು ಹೆಚ್ಚಿಸುವ ಮತ್ತು ನೋವನ್ನೂ ಕಷ್ಟವನ್ನೂ ಸಹಿಸಿಕೊಂಡು ಧೈರ್ಯಗೆಡದೆ ಅಚಲವಾದ ಸ್ಥೈರ್ಯವನ್ನು ಪ್ರದರ್ಶಿಸುವುದು, – ಈ ವ್ಯಾಪಾರಗಳೇ ಅವರ ದಿನಚರಿಯಾಗಿತ್ತು. ಈ ಯೋಧ ಧರ್ಮಪ್ರಧಾನವಾದ ಸಂಸ್ಕೃತಿಯು ಬಹುಕಾಲ ಸ್ಪಾರ್ಟಾ ನಗರಕ್ಕೆ ಮುಂದಾಳುತನವನ್ನು ಸಂಪಾದಿಸಿಕೊಟ್ಟಿತ್ತು. "ಪ್ರಭುತ್ವವಿದ್ದರೂ ಆತ್ಮಸಂಯಮ ಸಾಧ್ಯ ಎಂಬುದು ಸ್ಪಾರ್ಟಾ ನಗರದ ಚರಿತ್ರೆಯಲಿ ನಿಷ್ಕರ್ಷೆಯಾಯಿತು" ಎಂದು ಪ್ಲೇಟೋವಿಗೆ ಭಾಸವಾಯಿತು. ಹಾಗೆಯೇ ಪೈಥಾಗೊರಿಸಿನ ಸಂಪ್ರದಾಯಗಳೂ ಕೂಡ ವಿದ್ಯೆ, ಜ್ಞಾನ ಸಂಶೋಧನೆ, ಇಂದ್ರಿಯ ನಿಗ್ರಹ, ಸಂಸ್ಥೆಗೆ ಅಧೀನವಾಗಿ ಶಿಸ್ತಿನಲ್ಲಿ ನಿಂತು ಸಂಸ್ಕೃತಿ ಪರಂಪರೆಯನ್ನು ಶಾಶ್ವತವಾಗಿ ನಿಲ್ಲುವ ಹಾಗೆ ಮಾಡುವುದು – ಇವು ಸಾಧ್ಯ ಎಂದು ನಿದರ್ಶನಮಾಡಿಕೊಟ್ಟಿದ್ದವು.

ಇವೆರಡರ ಜೊತೆಗೆ 'ಈಜಿಪ್ಟ್' ದೇಶದ ಚರಿತ್ರೆಯು ಕೂಡ ಇದೇ ತತ್ತ್ವವನ್ನು ಸೂಚಿಸುರುವುದು ಪ್ಲೇಟೋವಿನ ಮನಸ್ಸಿನ ಮೇಲೆ ಪ್ರಬಲ ಪರಿಣಾಮವುಂಟುಮಾಡಿತು. ಈಜಿಪ್ಟ್ ಸಂಸ್ಕೃತಿಯ ಮೂಲ ಇಂಥಕಾಲದ್ದೆಂದು ಹೇಳುವುದು ಅಸಾಧ್ಯ. ಪ್ಲೇಟೋವಿನ ಕಾಲದಲ್ಲಿಯೇ ಈಜಿಪ್ಟಿನ ರಾಜ್ಯಪದ್ಧತಿಯೂ ಸಮಾಜ ವ್ಯವಸ್ಥೆಯೂ ಸಂಸ್ಕೃತಿ ಪರಂಪರೆಯೂ ಬಹಳ ಪುರಾತನವಾದದ್ದೆಂಬ ಪರಿಜ್ಞಾನವು ಸರ್ವಸಾಮಾನ್ಯವಾಗಿತ್ತು. ಈಜಿಪ್ಟರ ಮುಂದೆ ತಾವು ನಿನ್ನೆ ಮೊನ್ನೆಯವರು ಎಂಬುದೇ ಗ್ರೀಕ್ ಶಾಸ್ತ್ರಕಾರರ ಮತ್ತು ಕಲಾಕೋವಿದರ ಮನಸ್ಸಿನ ಹಿನ್ನೆಲೆಯಾಗಿತ್ತು.

ಈ ಉದಾಹರಣೆಗಳನ್ನು ಮನಸ್ಸಿನಲ್ಲಿಟ್ಟು ತಾನು ನಿರ್ದೇಶಿಸುವ ರಾಜ್ಯಪದ್ಧತಿಯನ್ನು ಕಾರ್ಯರಂಗಕ್ಕಿಳಿಸುವುದು ಕಷ್ಟಸಾಧ್ಯವಾದರೂ ತೀರ ಅಸಾಧ್ಯವೆಂದು ಹೇಳಲಾಗದೆಂದು ಪ್ಲೇಟೋ ಅಭಿಪ್ರಾಯಪಡುತ್ತಾನೆ. ಇದರ ಸತ್ಯಾಂಶವನ್ನು, ಎಂದರೆ ಶ್ರೇಷ್ಠರು ಸಂಸ್ಥೆಗಳನ್ನು ರಚಿಸಿಕೊಂಡು, ತಮ್ಮ ಸ್ವಂತ ಜೀವನದಲ್ಲಿ ಸಂಪತ್ತು ಸುಖಾಭಿಲಾಷೆಗಳನ್ನು ಸಂಪೂರ್ಣವಾಗಿ ತ್ಯಜಿಸಿ, ಸಂಘಕ್ಕೋ ಮಠಕ್ಕೋ ಇಲ್ಲವೆ ಸಂನ್ಯಾಸಿವೃಂದಕ್ಕೋ ಸೇವಕರಾಗಿ ನಿಂತು, ತಮ್ಮ ಸಂಸ್ಕೃತಿ ಪರಂಪರೆಯನ್ನು ನೂರಾರು ವರ್ಷಗಳು (ಏಕೆ, ಸಾವಿರಾರು ವರ್ಷಗಳು) ನಡಸಿಕೊಂಡು ಬಂದ ಇತಿಹಾಸ ಸಿದ್ಧವಾದ ನಿದರ್ಶನಗಳನ್ನು ಪಾಶ್ಚಾತ್ಯರ ಮಧ್ಯಕಾಲದ ಮಠಗಳಲ್ಲಿಯೂ ಭಾರತದ ವೈದಿಕ ಜೈನ ಬೌದ್ಧಮಠ ವಿಹಾರಗಳಲ್ಲಿಯೂ ನಾವು ಕಾಣಬಹುದು.

ಆದರೆ, ಸಂಘ ಜೀವನದಲ್ಲಿಯೂ ಸ್ವಾರ್ಥ ತಲೆಯೆತ್ತಬಹುದು. ಅದರಲ್ಲಿ ವ್ಯಕ್ತಿನಿಷ್ಠ ಸ್ವಾರ್ಥವಿಲ್ಲದಿದ್ದರೂ ಸಂಸ್ಥೆಯ ಪರವಾಗಿ ಸಂಪದಭಿವೃದ್ಧಿ, ರಾಜಾಶ್ರಯ, ಜನ ಮರ್ಯಾದೆಗಳು ಕಾಲಕ್ರಮೇಣ ಅಂಕುರಿಸಿ ಬೆಳೆದು ಅದನ್ನು ಅಧೋಗತಿಗೆ ಇಳಿಸಿದ ಉದಾಹರಣೆ ಕೂಡ ಇತಿಹಾಸ ಸಿದ್ಧವಾಗಿಯೇ ಇದೆ. ಪ್ರತಿಯೊಂದು ಸಂಸ್ಕೃತಿಯೂ ನಾಗರಿಕತೆಯೂ ಪ್ರಾಕೃತ ದೇಹವುಳ್ಳ ಮನುಷ್ಯನಂತೆಯೇ ಒಂದಾನೊಂದು ಕಾಲದಲ್ಲಿ ಉದಯಿಸಿ, ಬಾಲ್ಯ, ಯೌವನ, ಮಧ್ಯ ವಯಸ್ಸು, ವೃದ್ಧಾಪ್ಯ, ಮರಣ ಎಂಬ ಅವಸ್ಥಾವಿಶೇಷಗಳನ್ನು ಕ್ರಮವಾಗಿ ಪಡೆದು, ತನ್ನ ಜನಕ್ಕೆ ತೋರಿಬಂದ ಅನುಭವಸಾರವನ್ನೂ ಜ್ಞಾನ ಕಲಾಸಂಪತ್ತುಗಳನ್ನೂ ಜೀವನದ ವಿವಿಧ ಕ್ಷೇತ್ರಗಳಲ್ಲಿ ಆನಂದದಿಂದ ಹಾಯಹರಿಸಿ, ಅವುಗಳಿಗೆ ಆಕಾರಕೊಟ್ಟು ಬಾಳಿ ಬದುಕಿ ಆಗಿಹೋಗುತ್ತದೆ – ಎಂಬುದಾಗಿ ಆಸ್ವಲ್ಡ್ ಸ್ಪೆಂಗ್ಲರ್ (Oswald Spengler) ಎಂಬ ಜರ್ಮನ್ ಪಂಡಿತನು ಮೊದಲನೆ ಮಹಾಯುದ್ಧದ ಕಾಲದಲ್ಲಿ ರಚಿಸಿದ ತನ್ನ 'ಪಾಶ್ಚಾತ್ಯರ ಅವನತಿ' (Decline of the West) ಎಂಬ ಗ್ರಂಥದಲ್ಲಿ ನಿರೂಪಿಸಿದ್ದಾನೆ.

ಇಂಥ ಅವನತಿಯನ್ನು ತಪ್ಪಿಸುವುದು ಹೇಗೆ? ಇದೇ ಈಗಿನ ನಾಗರಿಕತೆಯ ಕಾಲದಲ್ಲಿ ವಿಚಾರಪರರನ್ನು ಬಾಧಿಸುತ್ತಿರುವ ಮಹಾಪ್ರಶ್ನೆ. ಈಗ ಸ್ವಾತಂತ್ರ ಭಾರತದಲ್ಲಿ ಅಗ್ರಸ್ಥಾನ ಪಡೆದಿರುವ ಸಮಸ್ಯೆಯೂ ಇದೇ. ನಮ್ಮ ಸಮಾಜವು ಆದಿಯಲ್ಲಿ ತನಗಿದ್ದ ಸ್ಫೂರ್ತಿಯನ್ನು ಪುನಃ ಸಂಪಾದಿಸಿ, ಅವನತಿಗೆ ಕಾರಣಗಳಾದ ಬಾಧಕಾಂಶಗಳನ್ನು ತಡೆದು, ಮತ್ತೆ ಶ್ರೇಯಃಪಥಕ್ಕೆ ತಿರುಗುವಂತೆ ಮಾಡುವುದು ಹೇಗೆ–ಎಂಬ ಪ್ರಶ್ನೆ ಎಲ್ಲರ ಮನಸ್ಸನ್ನೂ ಆವರಿಸಿದೆ.

ಇಂಥ ಉದ್ಯಮಕ್ಕೆ–ಎಂದರೆ ಸಮಾಜದ ಪುನರುಜ್ಜೀವನ ಸಾಧನೆಗೆ ಸಹಾಯವಾಗುವ ಮಾರ್ಗ ಒಂದೇ ಒಂದು. ಅದೇನೆಂದರೆ, ಸಮಾಜದಲ್ಲಿ ಒಂದು ವರ್ಗವು ಸತತವಾಗಿ ಜ್ಞಾನಾಭಿವೃದ್ಧಿಗೆ ತಮ್ಮ ಸರ್ವಶಕ್ತಿಗಳನ್ನೂ ಮನಃಪೂರ್ವಕವಾಗಿ ಅರ್ಪಿಸುವುದು. ತಾತ್ಕಾಲಿಕ ಹವ್ಯಾಸಗಳನ್ನು ಬಿಟ್ಟು ಕೇವಲ ಜ್ಞಾನ ಪ್ರಪಂಚದಲ್ಲಿಯೇ

ಮನಸ್ಸನ್ನು ಪ್ರವಹಿಸುತ್ತ, ಅದರಲ್ಲಿಯೇ ಪ್ರಾಣಾರಾಮವನ್ನೂ ಮನಸ್ಸಿನ ಆನಂದವನ್ನೂ ಶಾಂತ ಸಮೃದ್ಧಿಯನ್ನೂ ಪಡೆಯುವ ಮನೋವೃತ್ತಿಯುಳ್ಳ ಜನರ ಪರಂಪರೆಯು ನಶಿಸಿಹೋಗದಹಾಗೆ ನೋಡಿಕೊಂಡರೆ ಸಮಾಜಕ್ಕೆ ನವಯೌವನವನ್ನು ಗಳಿಸಬಹುದು, ಇದೇ ಭಾರತ ಸಂಸ್ಕೃತಿಯಲ್ಲಿ ಮೂರ್ತಿಮತ್ತಾದ ವರ್ಣಾಶ್ರಮ ಧರ್ಮದ ಅಂತಿಮ ಸಾರಸರ್ವಸ್ವ, ಪರಮಪ್ರಯೋಜನ. ಈ ಮಾತು ಅತಿಶಯೋಕ್ತಿಯೆಂದೂ, ಅಷ್ಟೇ ಏಕೆ, ತೀರ ಅಸಂಭಾವ್ಯವೆಂದೂ ಈ ತಲೆಮಾರಿನವರಿಗೆ ತೋರಬಹುದು. ಇದಕ್ಕೆ ಕಾರಣ ಭಾರತೀಯ ಧರ್ಮ ಸೂಕ್ಷ್ಮವು ನಮಗೆ ತಿಳಿಯುವಂತೆ ನಮ್ಮ ಕಾಲದ ಸಮಸ್ಯೆಗಳ ಪರಿಭಾಷೆಯಲ್ಲಿ ಪ್ರಚಾರವಾಗದೆ ನಿಂತುಹೋಗಿರುವುದೇ ಹೊರತು ಆ ಧರ್ಮದ ದುರ್ಬಲತೆಯಲ್ಲ ಎಂದು ಹೇಳಬಹುದು.

ಪ್ಲೇಟೋವಿನ ತತ್ತ್ವಮಂಡನೆಯ ಪ್ರಕಾರದಲ್ಲಿಯೂ ಇದೇ ದೃಷ್ಟಿಯನ್ನು ನಾವು ಕಾಣಬಹುದು. ಪ್ರಭುತ್ವ ಸ್ಥಾನಕ್ಕೆ ಬರತಕ್ಕವರು ತತ್ತ್ವಪ್ರೇಮಿಗಳಾಗಿರಬೇಕು; ಜನಾನುರಾಗಿಗಳಾಗಿರಬೇಕು. ಅವರಲ್ಲಿ ತತ್ತ್ವಾನ್ವೇಷಣಕ್ಕೆ ಪೋಷಕವಾದ ಮನೋಧರ್ಮವು ರೂಢಮೂಲವಾಗಿರುತ್ತದೆ. ಇಂಥ ಪದ್ಧತಿಯಲ್ಲಿ ಪ್ರಭುತ್ವದವರು ಸಂತತವೂ ನವನವೋನ್ಮೇಷವಾದ ಸತ್ಯಧರ್ಮಗಳ ಆಕಾಶಗಳನ್ನು ನೋಡುತ್ತಿರುತ್ತಾರೆ. ಅವರ ದೃಷ್ಟಿಯು ತಾತ್ಕಾಲಿಕವಾದ ಸಾಮಾಜಿಕ ಮತ್ತು ರಾಷ್ಟ್ರೀಯ ತಾಪತ್ರಯಗಳಲ್ಲಿ ಲೀನವಾಗಿ ಹೋಗಿರದೆ ತಮ್ಮ ಮನೋರಾಜ್ಯದ ದಿಗಂತದಲ್ಲಿ ಸತತವಾಗಿ ರಾರಾಜಿಸುತ್ತಿರುವ ಆದರ್ಶ ಧ್ಯೇಯಗಳ ಮೇಲೆ ಸಾಕಾದಷ್ಟುಮಟ್ಟಿಗೆ ನೆಲಸಿರುತ್ತದೆ. ಹೀಗೆ ಪ್ರಪಂಚದ ಮತ್ತು ಆತ್ಮನ ಸತ್ಯಾಂಶವು ಅವರ ಮನಸ್ಸಿನಲ್ಲಿ ಎಲ್ಲ ದೃಶ್ಯಗಳ ಹಿಂದೆಯೂ, ತಮ್ಮ ಆಂತರಿಕ ಅನುಭವತರಂಗಗಳ ಹಿಂದೆಯೂ, ಸೂರ್ಯರಶ್ಮಿಗಳು ದಟ್ಟವಾದ ಮೇಘರಾಶಿಗಳನ್ನು ಭೇದಿಸಿಕೊಂಡು ಬೆಳಕು ಸುರಿಸುತ್ತಿರುವಂತೆ, ಸಂತತವಾಗಿ ಪ್ರಕಾಶಮಾನವಾಗಿರುತ್ತದೆ. ಇಂಥ ನಾಯಕರಿಗೆ ಸಮಾಜದ ಅವನತಿಯನ್ನು ತಡೆದು ಪುನಃ ಹೊಸ ಸ್ಫೂರ್ತಿಯನ್ನೂ ನವಚೈತನ್ಯವನ್ನೂ ಪ್ರಚೋದಿಸಿ ರಾಷ್ಟ್ರದಲ್ಲಿ ಪ್ರವಹಿಸುವಂತೆ ಮಾಡುವುದು ಅಸಾಧ್ಯವಲ್ಲ ಎನ್ನಬಹುದು.

ಆದರೆ, ಪ್ಲೇಟೋವಿನ ಪ್ರಭುತ್ವ ವರ್ಗದವರೆಲ್ಲ ಈ ಕೆಲಸದಲ್ಲಿ ನಿರತರಾಗಿದ್ದರೆ, ಸತ್ಯಾನ್ವೇಷಣೆಯೇ ತಮ್ಮ ಮುಖ್ಯ ಕಾರ್ಯವಾಗಿ ಭಾವಿಸಿ ಅದರಲ್ಲಿ ತೊಡಗಿರುವವರಿಗೆ ಅವಕಾಶವಿರುವುದಿಲ್ಲ ಅಲ್ಲದೆ, ಎಲ್ಲ ಮೇಧಾವಿಗಳಿಗೂ ರಾಜ್ಯಕಾರ್ಯದಲ್ಲಿ ಉತ್ಸಾಹ ಅಭಿರುಚಿಗಳಿರುವುದು ಅಸಂಭವ. ಕೆಲವರಿಗೆ ಕೇವಲ ಜ್ಞಾನಾಭಿವೃದ್ಧಿ ಕಾರ್ಯವೇ ಜೀವದ ಉಸಿರು. ಮತ್ತೆ ಕೆಲವರಿಗೆ ಉದಾತ್ತಧ್ಯೇಯಗಳನ್ನು ಕಾರ್ಯರಂಗದಲ್ಲಿ ರೂಪುಗೊಳಿಸುವುದರಲ್ಲಿ ಆಸಕ್ತಿ ಕುಶಲತೆಗಳಿರುವುದು ಸ್ವಾಭಾವಿಕವಾಗುತ್ತದೆ. ಹೀಗಾಗಿ ಪ್ರಭುತ್ವ ವರ್ಗದವರಲ್ಲಿ ಕೆಲವರು ಜ್ಞಾನಮಾರ್ಗಾವಲಂಬಿಗಳಾಗಿಯೂ, ಮತ್ತೆ ಕೆಲವರು ಕರ್ಮಯೋಗಿಗಳಾಗಿಯೂ, ಇನ್ನೂ ಕೆಲವರು ಕಲೋಪಾಸಕರಾಗಿಯೂ ಮೂರು ಗುಂಪುಗಳು ಏರ್ಪಡಬಹುದು. ಪ್ಲೇಟೋ ಈ ವಿಷಯಕ್ಕೆ ಗಮನ ಕೊಟ್ಟಂತೆ ಕಾಣುವುದಿಲ್ಲ.

ಅಧ್ಯಯನ, ಅಧ್ಯಾಪನ, ಜ್ಞಾನ ಸಂಶೋಧನೆ, ಜ್ಞಾನದ ದಿಗಂತವನ್ನು ವಿಸ್ತರಿಸುವುದರಲ್ಲಿ ಉತ್ಸಾಹ, ಇದಕ್ಕೆ ಪೋಷಕವಾಗುವ ಪ್ರಯೋಗಗಳಲ್ಲಿ ಆಸಕ್ತಿ– ಇವುಗಳಿಗೆ ಜೀವನವನ್ನು ಧಾರೆಯೆರೆದ ಜನರು ಸಮಾಜದ ಏಳಿಗೆಗೆ ಅತ್ಯಾವಶ್ಯಕವಾಗಿದ್ದಾರೆ. ಇವರು ಸಂನ್ಯಾಸಿಗಳಾಗಿದ್ದರೂ ಸಂನ್ಯಾಸಿಧರ್ಮದ ಮೂಲತತ್ತ್ವವಾದ ನಿಷ್ಕಾಮ ಕರ್ಮಪಥವನ್ನು ತಮ್ಮ ಜೀವನ ಮಾರ್ಗವಾಗಿ ಅನುಸರಿಸುವಂಥವರಾಗಬೇಕು. ಸಮಾಜವು ಕ್ಷೀಣದೆಸೆಗೆ ಬಂದಾಗ ಇಂಥವರ ತತ್ತ್ವಪ್ರೇಮ ತತ್ತ್ವದೃಷ್ಟಿಗಳು ಹೊಸ ಪ್ರಯೋಜನಗಳನ್ನು ಕಂಡು ಜನರ ಮುಂದೆ ಮಂಡಿಸುವುವಾಗಬೇಕು. ಇಂಥವರು ಕೇವಲ ವೇದಗಳು, ಬೈಬಲ್, ಕೊರಾನ್ ಮುಂತಾದ ಮತಗ್ರಂಥಗಳಲ್ಲಿ ಮಾತ್ರ ಪಾರಂಗತರಾದರೆ ಸಮಾಜ ಪುನರುಜ್ಜೀವನದ ಮಹತ್ಕಾರ್ಯವನ್ನು ನೆರವೇರಿಸಲಾರರು. ಜ್ಞಾನಿಗಳೆಂದು ಇಲ್ಲಿ ನಾವು ನಿರ್ದೇಶಿಸುವುದು ವಾಸ್ತವಪ್ರಕೃತಿ ಶೋಧನೆಯಲ್ಲಿಯೂ ಮಾನವನ ಸ್ವಭಾವ ಮತ್ತು ಶಕ್ತಿಗಳ ಶೋಧನೆಯಲ್ಲಿಯೂ ಪರಮಾತ್ಮ ತತ್ತ್ವದ ಚಿಂತನೆಯಲ್ಲಿಯೂ ನಿರತರಾಗಿರುವವರು.

* * *

೧೩ನೆಯ ಅಧ್ಯಾಯ

ಆದರ್ಶ ರಾಜ್ಯದಲ್ಲಿ ಸ್ತ್ರೀಯರ ಸ್ಥಾನ

ಆಸ್ತಿಯು ಸ್ವಾರ್ಥಕ್ಕೆ ಮೂಲವಾಗಿ ವಿಷವೃಕ್ಷವನ್ನು ಬೆಳಸುವಂತೆಯೇ ಕುಟುಂಬ ಜೀವನವೂ ಸ್ವಾರ್ಥವನ್ನು ಉದ್ರೇಕಗೊಳಿಸಿ ರಾಷ್ಟ್ರಪ್ರೇಮವನ್ನು ಮಲಿನಗೊಳಿಸುತ್ತದೆ – ಎಂಬ ಭಾವನೆಯೂ ಪ್ಲೇಟೋವಿನ ಮನಸ್ಸನ್ನು ಬಾಧಿಸುತ್ತಿತ್ತು. ನಾವು ಸಮುದ್ರತೀರದಲ್ಲಿ ಸ್ನಾನಮಾಡುವ ಸಮಯದಲ್ಲಿ ಒಂದೊಂದುವೇಳೆ ಎಲ್ಲಕ್ಕಿಂತಲೂ ದೊಡ್ಡದಾದ ಅಲೆಯೊಂದು ಭಯಂಕರಾಕಾರವನ್ನು ತಾಳಿ ರಭಸದಿಂದ ಬಂದು ನಮ್ಮನ್ನು ಕೊಚ್ಚಿಕೊಂಡು ಹೋಗುವ ಸಂಭವವುಂಟು. ಹೀಗೆಯೇ ವಿಚಾರಮಥನ ಕಾರ್ಯದಲ್ಲಿಯೂ ಕೂಡ; ಅಗಾಧವಾದ ಬಾಧಕ ಜ್ಞಾನವು ನಾವು ಮಂಡಿಸುವ ತತ್ತ್ವದ ಮುಂದೆ ಕಾಣಿಸಿಕೊಂಡು ಅದನ್ನು ಬುಡಸಹಿತ ಅಳ್ಳಾಡಿಸಿ, ಕೊನೆಗೆ ಕೊಚ್ಚಿಕೊಂಡು ಹೋಗುವುದೋ ಏನೋ–ಎಂಬ ಭಯ ಆಗಾಗ ಅಂಕುರಿಸುವುದು. ಪ್ಲೇಟೋ ತನ್ನ 'ರಿಪಬ್ಲಿಕ್' ಗ್ರಂಥದಲ್ಲಿ ಇಂಥ ಸಾಮ್ಯವನ್ನು ತರುತ್ತಾನೆ. ತಾನು ಮಂಡಿಸಿದ ತತ್ತ್ವಪ್ರೇಮ ಪ್ರಭುತ್ವದ ಜಯಕ್ಕೆ ಮುಖ್ಯವಾಗಿ ಮೂರು ಪ್ರತಿಬಂಧಕಗಳಿವೆ. ಈ ತತ್ತ್ವವು ಒಂದರಮೇಲೊಂದು ನುಗ್ಗಿ ಬರುತ್ತಿರುವ ಮೂರು ಭಯಂಕರವಾದ– ಎಂದರೆ, ತನ್ನ ತತ್ತ್ವವನ್ನು ನಿರಾಸಗೊಳಿಸುವ – ಸಂಶಯವೆಂಬ ಅಲೆಗಳ ಹೊಡೆತದಿಂದ ನಾಶವಾಗುವುದೇನೋ ಎಂಬ ಪ್ರಶ್ನೆಯನ್ನು ಪ್ಲೇಟೋ ಎತ್ತುತ್ತಾನೆ.

ಈ ಮೂರು ಅಲೆಗಳಲ್ಲಿ ಮೊದಲನೆಯದು ನಾವು ಈಗ ಪ್ರತಿಪಾದಿಸಿದೆ ಆಸ್ತಿ ಸಂಬಂಧವಾದ ಸಂಶಯ, ಎರಡನೆಯದು ಇನ್ನೂ ಪ್ರಬಲವಾದ ಅಲೆ. ಇದೇನೆಂದರೆ, ಪ್ರಭುತ್ವದವರು ಕುಟುಂಬ ಜೀವನವನ್ನು ತೊರೆದು ಬೌದ್ಧವಿಹಾರಗಳಲ್ಲಿ ವಾಸಿಸುವ ಭಿಕ್ಷುಗಳಂತೆ ಸರಕಾರಿ ಭವನಗಳಲ್ಲಿ ಒಟ್ಟಿಗೆ ವಾಸಿಸುವ ವ್ಯವಸ್ಥೆ. ಇಂಥ ವ್ಯವಸ್ಥೆಯು ಹೇಗೆ ಯಶಸ್ವಿಯಾಗಿ ಫಲಕಾರಿಯಾದೀತು ಎಂಬುದು ಎರಡನೆಯ ಅಲೆ, ಮೂರನೆಯ ಅಲೆ ಇವೆರಡಕ್ಕಿಂತಲೂ ದೊಡ್ಡದು. ಪ್ಲೇಟೋ ಆಶಿಸುವ ತತ್ತ್ವಪ್ರೇಮಿಗಳೂ ಜ್ಞಾನಿಗಳೂ ಪ್ರಭುತ್ವಕಾರ್ಯಕ್ಕೆ ಹೇಗೆ ದೊರೆತಾರು. ದೊರೆತರೂ

ಇಂಥ ಕಷ್ಟಸಾಧ್ಯವೂ ನಿಷ್ಠುರತೆಯನ್ನು ಸಂಪಾದಿಸುವುದೂ ಆದ ಕೆಲಸಕ್ಕೆ ಅವರನ್ನು ಹೇಗೆ ಒಪ್ಪಿಸಲಾದೀತು; ಎಂಬುದೇ ಆ ಮೂರನೆಯ ಅಲೆ.

ರಾಜ್ಯಪಾಲಕರು ಸ್ವಂತ ಆಸ್ತಿಯ ಗೋಜಿಗೆ ಹೋಗದೆ ಸುಮಾರು ಜೀವನವನ್ನು ನಡಸಬೇಕೆಂಬುದರ ಜೊತೆಗೆ, ಇನ್ನೊಂದು ರೀತಿಯಲ್ಲಿಯೂ ಅವರಲ್ಲಿ ನಿಸ್ವಾರ್ಥತೆಯನ್ನು ದೃಢಪಡಿಸುವ ಉದ್ದೇಶದಿಂದ, ಅವರಿಗೆ ಕುಟುಂಬ ಜೀವನವೂ ಇರಕೂಡದೆಂದು ಪ್ಲೇಟೋ ಸೂಚಿಸುತ್ತಾನೆ. ಪಾಲಕರೆಲ್ಲ (ಸಹಾಯಕರೂ ಸೇರಿ) ಒಂದೇ ಕುಟುಂಬಕ್ಕೆ ಸೇರಿದವರಂತೆ, (ಅಷ್ಟೇ ಏಕೆ, ಇಡೀ ಸಮಾಜವೇ ಒಂದು ಕುಟುಂಬದವರಂತೆ) ಎಲ್ಲಿರಲ್ಲಿಯೂ ಒಂದೇ ರೀತಿಯಾದ ಅನುರಾಗವನ್ನಿಟ್ಟು ಕೊಂಡಿರಬೇಕು. ಇಂಥ ರಾಷ್ಟ್ರಪ್ರೇಮವು ಬೆಳೆಯಬೇಕಾದರೆ ಪಾಲಕರಿಗೆ ತಮ್ಮ ತಮ್ಮ ವ್ಯಕ್ತಿಜೀವನದಲ್ಲಿ ಹೆಚ್ಚು ಆಸಕ್ತಿಯಿರಕೂಡದು. ಅವರ ಪ್ರೇಮ ಸರ್ವಸ್ವವೂ ದೇಶಕ್ಕೇ ಮೀಸಲಾಗಿರಬೇಕಾದ್ದು ಅವಶ್ಯಕ. ರಾಷ್ಟ್ರದ ಲಾಭ ಅವರ ಲಾಭ; ರಾಷ್ಟ್ರದ ನಷ್ಟ ಅವರ ನಷ್ಟ-ಇಂಥ ಅನುಭವ ಅವರ ಹೃದಯವನ್ನಾವರಿಸಿರಬೇಕು. ಹೆಂಡಿರು ಮಕ್ಕಳನ್ನು ಕಾಪಾಡುವ ಭಾರವು ಪಾಲಕರಿಗೂ ಇದ್ದದ್ದೇ ಆದರೆ, ಇತರರಂತೆ ಅವರೂ ಸ್ವಂತ ಗೃಹಕೃತ್ಯಗಳಿಗೆ ಹೆಚ್ಚು ಗಮನ ಕೊಡಬೇಕಾಗುವುದು. ಈ ತಾಪತ್ರಯವನ್ನು ತಪ್ಪಿಸುವುದಕ್ಕಾಗಿಯೇ ಆಸ್ತಿಯ ಗೊಡವೆ ಪಾಲಕರಿಗೆ ಇರಕೂಡದೆಂದು ಶಾಸನ ಮಾಡಿರುವುದು. ಸ್ವಂತ ಕುಟುಂಬವಿರುವುದಾದರೆ ಆಸ್ತಿಯ ಹಂಬಲು ಬಿಟ್ಟು ಹೋಗುವುದಿಲ್ಲ. ಆದ್ದರಿಂದ ಪ್ಲೇಟೋ ಒಂದು ಹೆಜ್ಜೆ ಮುಂದುವರಿಸಿ ಪಾಲಕರಿಗೆ ಹೆಂಡಿರು ಮಕ್ಕಳೂ ಮನೆ ಮಠಗಳೂ ಇರಕೂಡದೆಂದು ವಿಧಿಸುತ್ತಾನೆ. ಆಸ್ತಿಯ ವಿಷಯದಲ್ಲಿ ಸಮೂಹ ಸ್ವಾಮ್ಯವಿರುವಂತೆಯೇ ಹೆಂಗಸರ ವಿಷಯದಲ್ಲಿಯೂ ಸಮೂಹ ಸ್ವಾಮ್ಯವಿರುವುದೇ ಮೇಲೆಂದು ಪ್ಲೇಟೋ ಧೈರ್ಯದಿಂದ ಘೋಷಿಸುತ್ತಾನೆ.

ಹೀಗೆಂದರೆ, ಹೆಂಗಸರಿಗೆ ಸ್ವಾತಂತ್ರ್ಯ ವಿರಕೂಡದೆಂದಾಗಲಿ, ಮದುವೆಯೆಂಬ ಸಂಪ್ರದಾಯವೇ ಇಲ್ಲದೆ ಗಂಡುಹೆಣ್ಣುಗಳ ಸ್ವೇಚ್ಛಾಪ್ರವೃತ್ತಿಗೆ ಅವಕಾಶ ಕೊಟ್ಟು ದುರ್ನಡತೆಗೆ ಮಾರ್ಗವನ್ನು ಕಲ್ಪಿಸಿಕೊಟ್ಟಂತಾಯಿತೆಂದಾಗಲಿ, ಭಾವಿಸುವುದು ತಪ್ಪು.

ಪ್ಲೇಟೋ ಹೆಂಗಸರಿಗೂ ಗಂಡಸರಷ್ಟೇ ಸ್ವಾತಂತ್ರ್ಯವನ್ನು ಕೊಡುತ್ತಾನೆಂಬುದನ್ನು ಮುಖ್ಯವಾಗಿ ಗಮನಿಸಬೇಕು. ಸ್ತ್ರೀಪುರುಷರಿಬ್ಬರೂ ಒಂದೇ ಸಮನಾಗಿ ಒಂದೇ ವಿಧವಾದ ಅಭ್ಯಾಸವನ್ನು ಪಡೆಯುತ್ತಾರೆ. ಸಾಮಾನ್ಯ ವಿದ್ಯಾಭ್ಯಾಸ, ತರುವಾಯ ಪ್ರೌಢಶಾಸ್ತ್ರ ವ್ಯಾಸಂಗ, ಆಡಳತದಲ್ಲಿ ಜವಾಬ್ದಾರಿ ಸ್ಥಾನಗಳು-ಇವುಗಳ ಮೂಲಕ ಪ್ರಭುತ್ವವರ್ಗಕ್ಕೆ ಏರಲು ಗಂಡಸರಿಗೆ ಹೇಗೆ ಅವಕಾಶವಿರುವುದೋ ಹಾಗೆಯೇ, ಅವರ ಜೊತೆಯಲ್ಲಿಯೇ ವ್ಯಾಸಂಗ ನಡಸಿ ಆಡಳಿತಕಾರ್ಯ ಭಾರಗಳಲ್ಲಿ ಅನುಭವ ಪಡೆದು ಅರ್ಹತೆ ಹೊಂದಿದವರು ಪ್ರಭುತ್ವಸ್ಥಾನಕ್ಕೇರಲು ಹೆಂಗಸರಿಗೂ ಅವಕಾಶವಿದೆ. ಪ್ಲೇಟೋವಿನ ಪ್ರಭುತ್ವವರ್ಗದವರಲ್ಲಿ ಸ್ತ್ರೀಪುರುಷರಿಬ್ಬರಿಗೂ ಅವರವರ ಸಾಮರ್ಥ್ಯಶೀಲಗಳ ಆಧಾರದ ಮೇಲೆ ಆರಿಸಲ್ಪಟ್ಟು ರಾಜ್ಯಭಾರ ಮಾಡುತ್ತಾರೆ.

ಈ ಸಲಹೆಯು ಗ್ರೀಕರ ಸಂಪ್ರದಾಯಕ್ಕೆ ಹೇಗೆ ವಿರುದ್ಧವಾಗಿತ್ತೋ ಹಾಗೆಯೇ ಯೂರೋಪಿನ ಎಲ್ಲ ದೇಶಗಳ ಸಂಪ್ರದಾಯಕ್ಕೂ ವಿರೋಧವಾಗಿದೆ. "ಹೆಂಗಸರು ರಾಜಕೀಯಕ್ಕೆ ಪ್ರವೇಶಿಸಬಾರದು; ಗೃಹಕೃತ್ಯದಲ್ಲಿ ಮಗ್ನರಾಗಿ, ಮಕ್ಕಳನ್ನು ಪೋಷಿಸಿಕೊಂಡು ಕೃತಾರ್ಥರಾಗಬೇಕಾದ್ದು ಸ್ತ್ರೀಯರ ಧರ್ಮ. ಅವರು ಈ ಧರ್ಮವನ್ನು ಬಿಟ್ಟು ಪುರುಷರ ಜೊತೆಗೆ ಜೀವನೋಪಾಯಕ್ಕಾಗಿ ಸಮಾಜದ ಆರ್ಥಿಕ ರಾಜಕೀಯ ರಂಗಗಳನ್ನು ಪ್ರವೇಶಿಸಿದರೆ, ಒಟ್ಟಿನಲ್ಲಿ ಅವರಿಗೂ ಸಮಾಜಕ್ಕೂ ಶ್ರೇಯಸ್ಕರವಲ್ಲ"–ಎಂಬ ಅಭಿಪ್ರಾಯ ಮೊನ್ನೆಮೊನ್ನೆಯವರೆಗೂ ಪ್ರಬಲವಾಗಿತ್ತು. ಈಗಿನ ಕಾಲದಲ್ಲಿಯೂ ವಿಚಾರಪರರಲ್ಲಿ ನೆಲಸಿರುವ ಆಂತರಿಕ ಅಭಿಪ್ರಾಯ ಇದೇ. ಆದರೆ, ಈಗಿನ ನಾಗರಿಕತೆಯಲ್ಲಿ ಹಲವಾರು ಸಂದರ್ಭಗಳ ಬಲದಿಂದ ಕೆಲವು ಮುಂದುವರಿದ ದೇಶಗಳಲ್ಲಿ ಸ್ತ್ರೀಯರಿಗೆ ಆರ್ಥಿಕ ರಾಜಕೀಯಕ್ಷೇತ್ರಗಳಲ್ಲಿ ಸಮಾನಸ್ಥಾನವು ಲಭಿಸಿದೆ. ಇದರ ಪರಿಣಾಮದ ವಿಷಯದಲ್ಲಿ ಇನ್ನೂ ಭಿನ್ನಾಭಿಪ್ರಾಯಗಳಿವೆ. ಈಗಿನ ನಾಗರಿಕತೆಯ ಮುಂದಿರುವ ಮಹಾಸಮಸ್ಯೆಗಳಲ್ಲಿ ಸ್ತ್ರೀಯರಿಗೆ ಸಮಾಜ ಮತ್ತು ರಾಷ್ಟ್ರವ್ಯವಸ್ಥೆಗಳಲ್ಲಿರಬೇಕಾದ ಸ್ಥಾನವೇನೆಂಬ ವಿಷಯವೂ ಒಂದು.

ಸ್ತ್ರೀಯರಿಗೂ ಪುರುಷರಿಗೂ ಒಂದೇ ವಿಧವಾದ ವಿದ್ಯಾಭ್ಯಾಸವಿರಬೇಕು. ಎಂದರೆ, ಸ್ತ್ರೀಯರೂ ಶರೀರ ವ್ಯಾಯಾಮ ಪದ್ಧತಿಗಳನ್ನು ಪುರುಷರೊಡನೆಯೇ ಅಭ್ಯಾಸ ಮಾಡಬೇಕು. ವ್ಯಾಯಾಮ ಶಾಲೆಗಳಲ್ಲಿ ಪುರುಷರೊಡನೆ ಶ್ರಮಪಟ್ಟು ದೇಹದಾರ್ಢ್ಯವನ್ನು ಸಂಪಾದಿಸಬೇಕು. ವಸ್ತ್ರಸಂಕೋಚ ಮಾಡಿಕೊಂಡು, ಮೈಬಿಟ್ಟುಕೊಂಡು ಗಂಡಸರಂತೆ ಹೆಂಗಸರೂ ಚಿಕ್ಕಂದಿನಿಂದ ಸಾಮುಮಾಡುವ ವಾಡಿಕೆ ಬರಬೇಕು. ಇದು ಮೊದಮೊದಲು ಹಾಸ್ಯಾಸ್ಪದವಾಗಿ ಕಂಡರೂ ಹಳೆಯದಾಗುತ್ತಾಗುತ್ತ ಸ್ವಾಭಾವಿಕವಾಗಿ ತೋರುವುದರಲ್ಲಿ ಸಂದೇಹವಿಲ್ಲ. ಹಿಂದೆ ಗ್ರೀಕ್ ನಗರಗಳಲ್ಲಿ ಗಂಡಸರೂ ವ್ಯಾಯಾಮಶಾಲೆಗಳಲ್ಲಿ ಮೈಬಿಟ್ಟು 'ಕಸರತ್' ಮಾಡುವ ಅಭ್ಯಾಸವಿರಲಿಲ್ಲ. ಮೊಟ್ಟಮೊದಲು 'ಸ್ಪಾರ್ಟಾ'ದಲ್ಲಿಯೂ ಕ್ರೀಟ್ ದ್ವೀಪದ ನಗರಗಳಲ್ಲಿಯೂ ಈ ಪದ್ಧತಿ ಪ್ರಾರಂಭವಾದಾಗ ಜನರಿಗೆ ಸ್ವಲ್ಪ ಅಸಹ್ಯವಾಗಿಯೇ ತೋರುತ್ತಿತ್ತು. ಕ್ರಮೇಣ ಈ ಪದ್ಧತಿ ಎಲ್ಲ ಗ್ರೀಕ್ ನಗರಗಳಿಗೂ ಹರಡಿ ತತ್ಕಾಲದಲ್ಲಿ 'ಅಸಹ್ಯ, ಅಸಭ್ಯ' ಎಂಬ ಭಾವನೆಯನ್ನು ಕಳೆದುಕೊಂಡು ಸರ್ವಮಾನ್ಯವಾಗಿದೆ. ಹೀಗೆಯೇ, ಯುವಕ ಯುವತಿಯರಿಬ್ಬರೂ ವ್ಯಾಯಾಮ ಶಾಲೆಗಳಲ್ಲಿ ದೇಹದಾರ್ಢ್ಯವನ್ನು ವೃದ್ಧಿಪಡಿಸುವ ಉದ್ಯಮಗಳ ಮೂಲಕ ಶರೀರಕ್ಕೆ ಸಂಬಂಧಪಟ್ಟ ಆರೋಗ್ಯ, ಶಕ್ತಿ, ಅಂಗಸೌಷ್ಠವ, ಅಂದವಾದ ದೇಹಭಂಗಿ, ವಿನ್ಯಾಸ, ಚಲನೆಗಳ ವಿಷಯದಲ್ಲಿ ಅಧ್ಯಾಪಕರ ಕಣ್ಣುಮುಂದೆ ಶಿಕ್ಷಣಹೊಂದುವ ಪದ್ಧತಿಯೂ ಕೂಡ ಕಾಲಕ್ರಮೇಣ ಸಭ್ಯವೂ ಲಾಭದಾಯಕವೂ ಆದದ್ದೆಂಬ ಅಭಿಪ್ರಾಯವು ರೂಢಮೂಲವಾಗುವುದರಲ್ಲಿ ಸಂಶಯವಿಲ್ಲ–ಎಂದು ಪ್ಲೇಟೋ ದೃಢಧ್ವನಿಯಿಂದ ಸ್ಪಷ್ಟವಾಗಿ ಹೇಳುತ್ತಾನೆ.

ಈ ಪದ್ಧತಿಯನ್ನನುಸರಿಸಿದರೆ ಪ್ಲೇಟೋ ಹಿಂದೆ ನಿರೂಪಿಸಿದ ಮುಖ್ಯ ಸಿದ್ಧಾಂತವೊಂದಕ್ಕೆ ಭಂಗಬರುವುದೆಂಬ ಶಂಕೆ ಸಹಜವಾಗಿಯೇ ಉಂಟಾಗುತ್ತದೆ. ಅದು ಯಾವುದೆಂದರೆ 'ಸ್ವಧರ್ಮ'. ಸರ್ವರೂ ತಮ್ಮ ತಮ್ಮ ಸ್ವಭಾವಕ್ಕನುಸಾರವಾಗಿ ಜಿವನೋಪಾಯವನ್ನೂ ಕಾರ್ಯಕಲಾಪಗಳನ್ನೂ ಆರಿಸಿಕೊಳ್ಳಬೇಕು. ಅವರು ಹಾಗೆ ತಮ್ಮ ಸ್ವಭಾವಸಿದ್ಧವಾದ ಆತ್ಮಗುಣವನ್ನು ಕಂಡುಹಿಡಿಯುವುದಕ್ಕೆ ರಾಜ್ಯದಲ್ಲಿ ಅವಕಾಶವಿರಬೇಕು. ಅಂಥ ಆತ್ಮಗುಣ ಪರಿಚಯಕ್ಕೆ ಅನುಸಾರವಾದ ಕಸಬುಗಳನ್ನು ಆರಿಸಿಕೊಂಡು ತನ್ಮೂಲಕ ಜೀವನೋಪಾಯವನ್ನೂ ದೇಶಸೇವೆಯನ್ನೂ ಒಂದೇ ವೃತ್ತಿಯಿಂದ ನೇರವೇರಿಸತಕ್ಕದ್ದೇ ಸಮಾಜದ ತಳಹದಿ-ಎಂದು ಮುಂತಾಗಿ ಪ್ಲೇಟೋ ಸಿದ್ಧಾಂತ ಮಾಡಿದ್ದಾನೆ. ಎಂದರೆ, ಪ್ರತ್ಯೇಕ ಸ್ವಭಾವವುಳ್ಳವರು ಸಮಾನವಾದ ಕರ್ಮಗಳಿಗೆ ಕೈಹಾಕಬಾರದು. ಈ ತತ್ತ್ವ ಸರಿಯೆಂದರೆ, ಸ್ತ್ರೀ ಪುರುಷರಿಬ್ಬರಿಗೂ ಒಂದೇ ರೀತಿಯ ವಿದ್ಯಾಭ್ಯಾಸವನ್ನೂ ಒಂದೇ ರೀತಿಯ ಕರ್ಮಗಳನ್ನೂ ವಿಧಿಸುವುದರಿಂದ ಸ್ವಧರ್ಮ ತತ್ತ್ವಕ್ಕೆ ಚ್ಯುತಿಬರುವುದಿಲ್ಲವೇ – ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಈ ವಿಚಾರದ ಪ್ರಾರಂಭದಲ್ಲಿ ಪ್ಲೇಟೋ ಬೇಟೆನಾಯಿಗಳ ಸಾಮ್ಯವನ್ನು ಕೊಡುತ್ತಾನೆ. ಬೇಟೆನಾಯಿಗಳಿಗೆ ಬೇಟೆಗೆ ತಕ್ಕ ಶಿಕ್ಷಣ ಕೊಟ್ಟು ಅವನ್ನು ಕಾಡಿಗೆ ಕರೆದುಕೊಂಡು ಹೋಗುವಾಗ ಅವುಗಳಲ್ಲಿ ಗಂಡುಹೆಣ್ಣುಗಳ ವ್ಯಾತ್ಯಾಸವನ್ನು ಯಾರೂ ನೋಡುವುದಿಲ್ಲ. ಹಾಗೆ ಭೇದಮಾಡಿ ಹೆಣ್ಣುನಾಯಿಗಳು ತಮ್ಮ ಮರಿಗಳನ್ನು ನೋಡಿಕೊಂಡಿರಲಿ ಎಂದು ಅವನ್ನು ಯಾರೂ ಮನೆಯಲ್ಲೇ ಬಿಟ್ಟು ಹೋಗುವುದಿಲ್ಲ. ಒಟ್ಟಿನಲ್ಲಿ ಹೆಣ್ಣು ನಾಯಿಗಳಿಗೆ ಶಕ್ತಿ ಸ್ವಲ್ಪ ಕಡಮೆ ಇರಬಹುದು. ಅಷ್ಟೇಹೊರತು ಬೇಟೆಯಾಡುವುದಕ್ಕೆ ಸಂಬಂಧಪಟ್ಟ ಇತರ ಗುಣಗಳಲ್ಲಿ ಗಂಡು ನಾಯಿಗಳಿಗಿಂತ ಹೆಣ್ಣುನಾಯಿಗಳೇನೂ ಕಡಮೆಯಲ್ಲ. ಅವು ಕಡಮೆಯಾಗಿವೆಯೆಂದು ಹೇಳುವುದಕ್ಕೆ ಅನುಭವ ಸಿದ್ಧವಾದ ಪ್ರಮಾಣವಿಲ್ಲ. ಹಾಗೆಯೇ ಸ್ತ್ರೀಪುರುಷರ ವಿಷಯದಲ್ಲಿ ಕೂಡ ಎಂದೆಣಿಸಬೇಕು. ಸ್ತ್ರೀಯರು ಪುರುಷರಿಗಿಂತ ಒಟ್ಟಿನಲ್ಲಿ ಸ್ವಲ್ಪ ಕಡಮೆ ಶಕ್ತಿಯುಳ್ಳವರಾಗಿರಬಹುದು; ದೇಹದಾರ್ಢ್ಯದಲ್ಲಿ ಸ್ವಲ್ಪ ಕಡಮೆಯಾಗಿರಬಹುದು. ಆದರೆ ಆಡಳಿತಕ್ಕೆ ಬೇಕಾದ್ದು ಹೆಚ್ಚು ದೇಹಶಕ್ತಿಯಲ್ಲ; ಬುದ್ಧಿಶಕ್ತಿ, ದಕ್ಷತೆ, ಶ್ರದ್ಧೆ.

ಸ್ತ್ರೀಪುರುಷರಿಗಿರುವ ಸ್ವಾಭಾವಿಕ ಭೇದವನ್ನು ನಾವು ತಿರಸ್ಕರಿಸಬೇಕಾಗಿಲ್ಲ. ಮಕ್ಕಳನ್ನು ಹೆರುವುದು ಹೆಂಗಸರ ವಿಶೇಷ ಶಕ್ತಿ, ಹೊಣೆ. ಆದರೆ ಈ ಭೇದವು ಪ್ರಭುತ್ವ ಕಾರ್ಯಕ್ಕೆ ಪ್ರತಿಬಂಧಕವಾಗುವುದೇ-ಎಂಬುದು ಇಲ್ಲಿ ಪ್ರಕೃತವಾದ ಸೂಕ್ಷ್ಮ ವಿಷಯ. ಗಂಡಸರಲ್ಲಿಯೂ ಬೋಳುತಲೆಯವರು, ಕೂದಲು ಸಮೃದ್ಧಿಯಾಗಿರುವವರು, ಕರಿಯ ಕಣ್ಣುಗುಡ್ಡೆಯವರು, ಬೆಕ್ಕಿನ ಕಣ್ಣಿನವರು-ಎಂದು ಮುಂತಾದ ಭೇದಗಳಿದ್ದೇ ಇರುತ್ತವೆ. ಆದರೆ, ರಾಜಕಾರ್ಯಗಳಿಗೆ ನೇಮಕ ಮಾಡುವಾಗ ಈ ಭೇದಗಳನ್ನು ಗಣನೆಗೆ ತೆಗೆದುಕೊಳ್ಳುವುದು ಹಾಸ್ಯಾಸ್ಪದ, ಅನ್ಯಾಯ. ಹೀಗೆಂದು ಇಂಥ ಸಾಮ್ಯಗಳನ್ನೇ ಉದಾಹರಿಸಿ ಪ್ಲೇಟೋ ಸ್ತ್ರೀಯರಿಗೆ ರಾಜಕೀಯದಲ್ಲಿ ಸಮಾನಾವಕಾಶ ಕೊಡುವುದು ನ್ಯಾಯವೆಂದೂ ಸತ್ಯಾನುರೂಪವೆಂದೂ ವಾದಿಸಿದ್ದಾನೆ.

ಈ ವಾದ ಬಹುದೂರ ಹೋಗುತ್ತದೆ. ನಾಟ್ಸಿ ಪಕ್ಷದವರು ಅನುಸರಿಸಿದ ಕೆಲವು ನೀತಿಗಳ ಮೇಲೆ ಪ್ಲೇಟೋವಿನ ಸೂಕ್ಷ್ಮ ಟೀಕೆಯು ಅಪೂರ್ವವಾದ ಬೆಳಕನ್ನು ಬೀರುತ್ತದೆ. ನಾಟ್ಸಿ ಪಕ್ಷದವರು ಬಂಗಾರಬಣ್ಣದ ತಲೆಗೂದಲು, ಕೋಲು ಮುಖ, ಎತ್ತರವಾದ ಶರೀರ, ಕೆಂಬಣ್ಣ ಮೇಲಾದ ಚರ್ಮ, ಬೆಕ್ಕಿನ ಕಣ್ಣು, ನೇರವಾಗಿ ತಿದ್ದಿದಮೂಗು, –ಇವುಗಳು : ಮಾನವ ಜನಾಂಗಗಳಲ್ಲಿ ಶ್ರೇಷ್ಠತೆಯ ಹೆಗ್ಗುರುತುಗಳೆಂದೂ, ಇಂಥ ಲಕ್ಷಣಗಳುಳ್ಳವರು ಜರ್ಮನ್ ರಾಷ್ಟ್ರದ ಮೂಲ ಜನರೆಂದೂ, ಇವರ ಹಿರಿಯ ಶಕ್ತಿಸಂಪತ್ತಿಗನುಗುಣವಾಗಿ ಇವರಿಗೇ ಪ್ರಪಂಚದ ಪ್ರಭುತ್ವ ಸಲ್ಲುವುದು ವಿಶ್ವಪ್ರಕೃತಿಯ ನಿಯಮವೆಂದು ಭಾವಿಸಿ, ಆ ಭಾವನೆಗನುಗುಣವಾಗಿ ಅಗಾಧವಾದ ಅನರ್ಥಕಾರಕ ನೀತಿಗಳನ್ನು ಹಿಡಿದು, ಪ್ರಪಂಚವನ್ನೇ ಭೂಕಂಪದಂತೆ ನಡುಗಿಸಿಬಿಟ್ಟರು. ಹೊರಮೈ ಲಕ್ಷಣಗಳಲ್ಲೇನೋ ಬೇರೆಬೇರೆ ಜನಾಂಗಗಳಲ್ಲಿ ಭೇದವು ಎದ್ದು ಹೊಡೆಯುವಂತೆ ತೋರುತ್ತದೆ. ಆದರೆ, ಈ ಭೇದವು ಮಾನವತ್ವಕ್ಕೆ ಸಂಬಂಧಪಟ್ಟ ಕಾರ್ಯವಿಶೇಷಗಳಲ್ಲಿ ಏನೂ ಪರಿಣಾಮವುಂಟುಮಾಡಲಾರದು.

ಹಾಗೆಯೇ ಸ್ತ್ರೀಪುರುಷರಿಗಿರುವ ಶಾರೀರಕ ಭೇದವು ಅವರ ಮಾನಸಿಕ ವ್ಯಾಪಾರಕ್ಕೆ, ಬುದ್ಧಿಪ್ರಯೋಗ ಕಲಾಕೌಶಲ್ಯಗಳಿಗೆ, ವ್ಯವಹಾರಜ್ಞಾನಕ್ಕೆ – ಒಂದು ಮಾತಿನಲ್ಲಿ ಹೇಳುವುದಾದರೆ, ಮಾನವ ಜೀವರುಗಳ ಆತ್ಮಸ್ವರೂಪಾಭಿವ್ಯಕ್ತಿಗೆ ಸಂಬಂಧಪಟ್ಟ ಯಾವ ಕ್ಷೇತ್ರದಲ್ಲಿಯೇ ಆದರೂ – ಪ್ರತಿಬಂಧಕವಾಗಲಾರದು. ಇದೇ ಪ್ಲೇಟೋವಿನ ಸಿದ್ಧಾಂತ. ಹೀಗೆ, ಈಗ್ಗೆ ಸುಮಾರು ೨೪೦೦ವರ್ಷಗಳ ಹಿಂದೆಯೇ ಪ್ಲೇಟೋ ಸ್ತ್ರೀಪುರುಷರ ಸಮಾನತೆಯ ತತ್ತ್ವವನ್ನು ಘೋಷಿಸಿದ್ದಾನೆ. ಆದರೆ ಈ ತತ್ತ್ವವು ಮೊನ್ನೆ ಮೊನ್ನೆಯಿಂದ ಮಾತ್ರ ಆಧುನಿಕ ಪ್ರಪಂಚದಲ್ಲಿ ಕಾರ್ಯಗತವಾಗುತ್ತ ಬಂದಿದೆ. ರಷ್ಯಾ ದೇಶದ ಸೋವಿಯೆಟ್ ರಾಜ್ಯದ ಮೂಲತತ್ತ್ವಗಳಲ್ಲಿ ಇದೂ ಒಂದು. ಸೋವಿಯೆಟ್ ರಾಜ್ಯದಲ್ಲಿ ಸ್ತ್ರೀಯರಿಗೆ ಪುರುಷರೊಡನೆ ಸಂಪೂರ್ಣಸಮಾನತೆಯಿದೆಯಂತೆ. ಅಲ್ಲಿಯ ರಾಜಕೀಯದ ಎಲ್ಲ ಕ್ಷೇತ್ರಗಳಲ್ಲಿಯೂ ಹೆಂಗಸರು ಕೆಲಸ ಮಾಡುತ್ತಿದ್ದಾರೆ. ಸೈನ್ಯದಲ್ಲಿ ಕೂಡ ಹೆಂಗಸರು ಅಧಿಕಾರಿಗಳಾಗಿದ್ದಾರೆ. ಅವರಲ್ಲಿ ಏರೋಪ್ಲೇನ್ ಸಾರಥಿಗಳೂ, ಟ್ಯಾಂಕ್ ಎಂಬ 'ದೊಡ್ಡ ತೋಪುಗಳುಳ್ಳ ಚಲಿಸುವ ಕೋಟೆಗಳಲ್ಲಿ' ಕೂತು ಯುದ್ಧ ಮಾಡುವ ಯೋಧರೂ ಇದ್ದಾರೆ. ವೈದ್ಯರು, ಅಧ್ಯಾಪಕರು, ಕಚೇರಿಯಲ್ಲಿ ಕೆಲಸ ಮಾಡುವ ಗುಮಾಸ್ತರು, ಹುದ್ದೇದಾರರು, ಟೈಪಿಸ್ಟುಗಳು ಇಂಥವರಂತೂ ಹೇರಳವಾಗಿದ್ದಾರೆ.

ಬುದ್ಧಿಶಕ್ತಿಯಲ್ಲಿ ಹೇಗೆ ಗಂಡಸರಲ್ಲಿ ಭೇದವಿರುತ್ತದೆಯೋ ಹಾಗೆಯೇ ಹೆಂಗಸರಲ್ಲಿಯೂ ಭೇದವಿರುತ್ತದೆ. ಗಂಡಸರಲ್ಲಿ ಹೇಗೆ ಹೆಚ್ಚು ಸಮರ್ಥರನ್ನು ಉನ್ನತಸ್ಥಾನಗಳಿಗೆ ಆರಿಸುತ್ತೇವೆಯೋ ಹಾಗೆಯೇ ಹೆಂಗಸರಲ್ಲಿ ಕೂಡ ಸಮರ್ಥರನ್ನು ಇಬ್ಬರಿಗೂ (ಎಂದರೆ ಸ್ತ್ರೀಪುರುಷರಿಬ್ಬರಿಗೂ) ಸರಿಸಮಾನವಾದ ಪರೀಕ್ಷೆಗಳ ಮೂಲಕ ಆರಿಸಿ ಪ್ರಭುತ್ವವರ್ಗದ ಸ್ಥಾನಗಳಿಗೆ ಸೇರಿಸಬೇಕಾದ್ದು ಅವಶ್ಯಕ. ಹೀಗೆ ಮಾಡದಿದ್ದರೆ

ಸಮಾಜದ ಅರ್ಧ ಜನರ ಶಕ್ತಿ ಸಾಮರ್ಥ್ಯವ್ಯರ್ಥವಾಗುತ್ತದೆ; ಆಶಕ್ತಿ ಸಾಮರ್ಥ್ಯ ವಿಶೇಷಗಳನ್ನು ದೇಶಸೇವೆಯಲ್ಲಿ ಉಪಯೋಗ ಮಾಡಿಕೊಳ್ಳದೆ, ಜನಸಂಪತ್ತಿಯಿಂದ ಎಷ್ಟು ಪ್ರಯೋಜನ ಸಾಧ್ಯವೋ ಅಷ್ಟು ಪ್ರಯೋಜನವನ್ನು ಸಮಾಜವು ಪಡೆಯದೆ, ಅದನ್ನು ನಿರರ್ಥಕವಾಗಿ ಹಾಳುಮಾಡಿಕೊಂಡಂತಾಗುತ್ತದೆ. ಅಲ್ಲದೆ, ಸ್ತ್ರೀಯರಿಗೆ ಆತ್ಮಾಭಿವ್ಯಕ್ತಿ ಆತ್ಮಲಾಭಗಳ ಅಂತಿಮ ಶ್ರೇಯಸ್ಸನ್ನೂ ಮಾನವಜನ್ಮಕ್ಕೆ ಸಲ್ಲತಕ್ಕ ಹಕ್ಕನ್ನೂ ರಾಷ್ಟ್ರನಾಯಕರು ಸಲ್ಲಿಸದೆ ವಂಚನೆ ಮಾಡಿದಂತಾಗುತ್ತದೆ. – ಇದು ಪ್ಲೇಟೋವಿನ ಸಿದ್ಧಾಂತ.

ಈ ಸಿದ್ಧಾಂತಕ್ಕೂ ಸಂಪ್ರದಾಯದಿಂದ ಬಂದ ಹಿಂದಿನವರ ದೃಷ್ಟಿಗೂ ನೇರವಾದ ವಿರೋಧವಿದೆ. ಈ ವಿಷಯುವನ್ನು ಇಲ್ಲಿ ಕೂಲಂಕಷವಾಗಿ ಚರ್ಚಿಸುವುದಕ್ಕಾಗುವುದಿಲ್ಲ. ಆದರೂ ಈ ಸಮಸ್ಯೆಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುವುದು ಅಗತ್ಯವೆಂದು ತೋರುತ್ತದೆ.

ಮೊದಲನೆಯದಾಗಿ, ಬೇಟೆನಾಯಿಗಳ ಸಾಮ್ಯ. ಪ್ರಾಣಿಗಳಲ್ಲಿ ಲಿಂಗಭೇದದಿಂದ ಗಂಡು ಹೆಣ್ಣುಗಳಲ್ಲಿ ಕರ್ತವ್ಯ ಭೇದವಿರಬೇಕೆಂದು ವಾದಿಸುವುದರಲ್ಲಿ ಅಷ್ಟು ತಿರುಳಿಲ್ಲ. ಬೇಟೆಯಲ್ಲಿ ಗಂಡು ನಾಯಿಗಳಿಗೂ ಹೆಣ್ಣು ನಾಯಿಗಳಿಗೂ ಭೇದ ತೋರದಿರಬಹುದು. ಆದರೆ, ಮನುಷ್ಯರಿಗೂ ಈ ಸಾಮ್ಯವನ್ನು ಅನ್ವಯಿಸುವುದರಲ್ಲಿ ಪ್ರಮಾದವಿರಬಹುದೆಂಬ ಶಂಕೆಯೇಳುತ್ತದೆ. ಏಕೆಂದರೆ, ಬೇಟೆನಾಯಿಯ ಜಾತಿಯಲ್ಲಿ (ಪ್ರಾಣಿ ಸಾಮಾನ್ಯದಲ್ಲೆಲ್ಲ) ಹೆಣ್ಣಿಗೆ ಮರಿಹಾಕಿದಮೇಲೆ ಅವನ್ನು ಸಾಕುವ ಕಾಲಾವಧಿ ದೀರ್ಘವಾಗಿಲ್ಲ. ಪ್ರಾಣಿಗಳ ಶೈಶವ ಆಲ್ಪಾವಧಿಯುಳ್ಳದ್ದು ಪಕ್ಷಿಗಳು ಕೆಲವಾರು ದಿನಗಳಲ್ಲಿಯೋ ವಾರಗಳಲ್ಲಿಯೋ ತಮ್ಮಷ್ಟಕ್ಕೆ ತಾವು ಹೊಟ್ಟೆ ಹೊರೆದುಕೊಳ್ಳುವುದಕ್ಕೆ ತಕ್ಕಷ್ಟು ಸಾಮರ್ಥ್ಯವನ್ನು ಪಡೆಯುತ್ತವೆ. ನಾಯಿ ಮರಿಗಳೂ ತಾಯಿಯ ಮೊಲೆಹಾಲನ್ನು ಬಹಳಕಾಲ ಅಪೇಕ್ಷಿಸುವುದಿಲ್ಲ. ಮನುಷ್ಯರಲ್ಲಾದರೋ, ಶೈಶವಾವಸ್ಥೆಯು ದೀರ್ಘಕಾಲಕ್ಕೆ ವ್ಯಾಪಿಸುತ್ತದೆ. ಮಕ್ಕಳನ್ನು ನೋಡಿಕೊಳ್ಳಬೇಕಾದ ಕಾಲ ಹೆಚ್ಚಾಗಿರುವುದಲ್ಲದೆ, ಮಾನವಜಾತಿಯ ಮಕ್ಕಳ ಮನಸ್ಸಿನ ವಿಕಾಸಕ್ಕೆ ಕಾಲಾವಕಾಶವೂ ಕುಟುಂಬದ ಆಶ್ರಯವೂ ತಂದೆತಾಯಿಗಳಿಬ್ಬರ ಪ್ರೀತಿಪೂರ್ವಕವಾದ ಮನೆಯ ವಾತಾವರಣವೂ ಇತರ ಸಾಂಸ್ಕೃತಿಕ ಸಹಕಾರಿ ಕಾರಣಗಳೂ ಅತ್ಯಗತ್ಯವಾಗಿವೆ. ಜನಾಂಗದ ಇತಿಹಾಸವೆಲ್ಲ ಭಟ್ಟಿಯಿಳಿಸಿದಂತೆ ಅತೀಂದ್ರಿಯವಾದ ಸಾರರೂಪವಾಗಿ ತಂದೆತಾಯಿ ಮಕ್ಕಳ ಮನಸ್ಸನ್ನಾವರಿಸುತ್ತದೆ. ಸಂಸ್ಕೃತಿಯು ತಲೆತಲಾಂತರಪರಂಪರೆಯಲ್ಲಿ ಅವಿಚ್ಛಿನ್ನವಾಗಿ ಹರಿಯಬೇಕಾದರೆ, ತಾಯಿಯ ಪ್ರೇಮರೂಪವಾದ ಅತೀಂದ್ರಿಯ ವಾತಾವರಣವು ಮಕ್ಕಳಿಗೆ ಬಹುಕಾಲದವರೆಗೂ ಇರಬೇಕು. ಅಲ್ಲದೆ, 'ಒಂದೆರಡು ಮಕ್ಕಳು ಮಾತ್ರ ಸಾಕು'– ಎಂಬ ವಾದವೂ ಅಷ್ಟು ತೃಪ್ತಿಕರವಾಗಿಲ್ಲ. ಹಾಗೆಂದರೆ, ಡಜನ್‌ಗಟ್ಟಳೆ ವಿಪರೀತ ಸಂತಾನವನ್ನೇನೂ ನಾವು ಅಪೇಕ್ಷಿಸಬೇಕಾಗಿಲ್ಲ. ಒಂದೆರಡು ಮಕ್ಕಳನ್ನು ಹಡೆದು ಸಾಕಿ, ಇತರ ಹವ್ಯಾಸಗಳಿಗೆ ಸಂಪೂರ್ಣವಾಗಿ ಮನಕೊಟ್ಟು ಜೀವನದಲ್ಲಿ ಹೆಚ್ಚು ಕಾಲವನ್ನು ಮಕ್ಕಳ ಸಂಪರ್ಕವಿಲ್ಲದೆ ಕಳೆಯುವ ಸ್ತ್ರೀಯರ ಹೃದಯ ಮಾರ್ದವವು

ಕೆಡುತ್ತದೆ ; ಅವರ ಹೃದಯ ಗಡುಸಾಗುವುದು ಸ್ವಾಭಾವಿಕವೇ ಆಗಿದೆ. ಒಂದೆರಡು ಸಂತಾನವೇ ಹೆಚ್ಚು ಸಂಖ್ಯೆಯಲ್ಲಿರುವ ಪಾಶ್ಚಾತ್ಯ ದೇಶಗಳಲ್ಲಿ ಹೆಂಗಸರಿಗೆ ವೋಟು ಬಂದು ರಾಜಕೀಯದಲ್ಲಿ ಅವರ ಪ್ರಭಾವ ಪ್ರದರ್ಶನಕ್ಕೆ ಸಾಕಾದಷ್ಟು ಅವಕಾಶ ಸಿಕ್ಕದ್ದರೂ ಕೂಡ ಅಲ್ಲೆಲ್ಲಿಯೂ ಸ್ತ್ರೀ ಸ್ವಭಾವಕ್ಕೆ ಅನುರೂಪವಾದ್ದೆಂದು ನಾವು ನಂಬಿರುವ ಗುಣಗಳ – ಎಂದರೆ, ಅಹಿಂಸೆ, ಸ್ನೇಹ, ಅಂತರ್ ರಾಷ್ಟ್ರೀಯ ಸೌಹಾರ್ದ, ಯುದ್ಧಸನ್ನಾಹಕ್ಕೆ ತಡೆ ಮುಂತಾದ ಮೃದುಭಾವಗಳ – ಪ್ರಭಾವವೇನೂ, ರಾಜನೀತಿ ಮತ್ತು ಸಮಾಜ ಸುಧಾರಣೆಗಳಲ್ಲಿ ಕೇವಲ ಗಂಡಸರಿರುವಲ್ಲಿಗಿಂತ ಹೆಚ್ಚಾಗಿ ಕಂಡುಬಂದಿಲ್ಲ. ಹೆಂಗಸರು ಗಂಡಸರ ಕರ್ತವ್ಯದಲ್ಲಿ ನಿರತರಾದರೆ ಅವರಿಗೂ ಗಂಡಸರ ಮನೋಧರ್ಮವೂ ಆ ಕಸಬಿನ ಮನೋಧರ್ಮವೂ ಬರುವುದು ಸಹಜ. ಇದರಿಂದ ಒಟ್ಟಿನಲ್ಲಿ ಸಮಾಜಕ್ಕೆ ಲಾಭವಾಯಿತೆ, ನಷ್ಟವಾಯಿತೆ, ಎಂಬುದೇ ಪ್ರಶ್ನೆ. ಪ್ಲೇಟೋವಿನ ಸ್ವಧರ್ಮತತ್ತ್ವದ ಪ್ರಕಾರ ನಷ್ಟವಾಯಿತೆಂದೇ ನಿಷ್ಕರ್ಷೆಯಾಗಬೇಕಾದರೂ ಆತನು ಈ ತರ್ಕವನ್ನು ಒಪ್ಪುವುದಿಲ್ಲ.

ಈಗಿನ ಸಮಾಜ ಶಾಸ್ತ್ರಕಾರರಲ್ಲಿ (Sociologists) ಕೆಲವರು ಹೆಂಗಸರ ಮಾನಸಿಕ ಶಕ್ತಿಯು ಸಾಮಾಜಿಕ ರಾಜಕೀಯ ಕಾರ್ಯಗಳಲ್ಲಿಯೂ ವಿಜ್ಞಾನ, ಕಲೆ, ತತ್ತ್ವಶಾಸ್ತ್ರ ಸಂಪದಭಿವೃದ್ಧಿ ರಂಗಗಳಲ್ಲಿಯೂ ಪ್ರಯೋಗವಾಗದೆ ಇರುವುದರಿಂದ ದೇಶಕ್ಕೆ ಅಪಾರ ನಷ್ಟುವಾಗುತ್ತಿದೆಯೆಂದು ವಾದಿಸುತ್ತಾರೆ. ಹೆಂಗಸರೂ ಕೂಡ ಗಂಡಸರೊಡನೆ ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಪ್ರವೇಶಮಾಡಿ ತಮ್ಮ ಸೇವೆಯನ್ನು ಸಲ್ಲಿಸಿದರೆ ಸಂಸ್ಕೃತಿಯೂ ನಾಗರಿಕತೆಯೂ ಇನ್ನೂ ವೇಗವಾಗಿ ಮುಂದುವರಿಯುವಂತಾಗುತ್ತದೆ ಎಂದು ಅವರ ಆಶಯ.

ಈ ವಿಷಯದಲ್ಲಿ ಗಮನಿಸಬೇಕಾಗಿರುವ ಅಂಶಗಳು ಅನೇಕ ಇವೆ; ಸಮಾನತೆಯೆಂದರೆ ಅಭೇದವೇ? – ಎಂಬುದೊಂದು ದೊಡ್ಡಪ್ರಶ್ನೆ. ಪ್ಲೇಟೋ ಹೇಳುವಂತೆ ಹೆಂಗಸರಿಗೂ ಶ್ರೇಷ್ಠವಾದ ವಿದ್ಯಾವಕಾಶವಿರಬೇಕೆಂಬ ವಿಷಯದಲ್ಲಿ ವಾದವಿಲ್ಲ. ಆ ವಿದ್ಯೆಯು ಗಂಡಸರಿಗೆ ಕೊಡುವ ವಿದ್ಯೆಯೇ ಆಗಿರಬೇಕು? – ಎಂಬುದು ಮತ್ತೊಂದು ಪ್ರಶ್ನೆ. ಗಂಡಸರ ವಿಷಯದಲ್ಲಿ ಒಳ್ಳೆಯ ತಂದೆಯರಾಗಿ, ಗೃಹಸ್ಥರಾಗಿ ಬಾಳುವುದಕ್ಕೆ ಬೇಕಾದ ಪಾಠಗಳ ವಾಸನೆಯೇ ಈಗಿನ ವಿದ್ಯಾಭ್ಯಾಸಕ್ರಮದಲ್ಲಿ ಇಲ್ಲದಿರುವಾಗ, ಹೆಂಗಸರಿಗೆ ಮಾತ್ರ ಒಳ್ಳೆಯ ತಾಯಂದಿರಾಗುವುದಕ್ಕೆ ಸಹಾಯವಾಗುವ ಮನೆಗೆಲಸ, ಮನೆಯ ಅಲಂಕಾರಕ್ಕೆ ಬೇಕಾದ ನಾಜೂಕು ವಿದ್ಯೆಗಳು, ಮಕ್ಕಳನ್ನು ಬೆಳಸಿ ಪೋಷಿಸುವ ಮಾನಸಿಕ ಅಂಶಗಳು–ಇವೇ ಅವರ ಪಾಠಕ್ರಮದಲ್ಲಿ ಪ್ರಮುಖವಾಗಿರಬೇಕೆಂದು ಒತ್ತಾಯಪಡಿಸುವ ಗಂಡಸರ ವಾದವನ್ನು ಈಗಿನ ಹೆಂಗಸರು ಖಂಡಿಸುತ್ತಾರೆ.

ಇದಕ್ಕೆ ಉತ್ತರ ಹೆಂಗಸರಿಗೂ ಮನೆಗೆಲಸ, ಮಕ್ಕಳ ಲಾಲನೆ ಮುಂತಾದ್ದು ಬೇಡದೆ ಹೋಗಲಿ ಎನ್ನುವುದಲ್ಲ, ಗಂಡಸರ ವಿದ್ಯಾಕ್ರಮದಲ್ಲಿಯೂ ಅವರಿಗನುರೂಪವಾದ ರೀತಿಯಲ್ಲಿ ಮನೆಗೆಲಸ, ಮಕ್ಕಳ ಲಾಲನೆ, ಇವರ ಸಂಸ್ಕೃತಿ ಪೋಷಣೆಗೆ

ಬೇಕಾದ ಕುಶಲತೆ ಮೊದಲಾದ್ದನ್ನು ಸೇರಿಸುವುದೇ.

"ಹೆಂಗಸರು ವಿದ್ಯಾವತಿಯರಾಗಿ ಮಕ್ಕಳನ್ನು ಸುಸಂಸ್ಕೃತರನ್ನಾಗಿ ಬೆಳಸಬೇಕು. ಇದೇ ಅವರ ವಿಶೇಷ ಧರ್ಮ; ಸಮಾಜಕ್ಕೆ ಅವರು ಸಲ್ಲಿಸಬೇಕಾದ ಮತ್ತು ಅವರಿಗೆ ನೈಜವಾದ ಸೇವೆ" ಎಂದು ಹೇಳಿದ ಮಾತ್ರಕ್ಕೇ, "ಇದು ಅವಿದ್ಯಾವತಿಯರಿಗೂ ಸಾಮಾನ್ಯವಾದ ಕಾರ್ಯ. ಇದಕ್ಕೆ ಪ್ರೌಢವಿದ್ಯೆಯೇಕೆ?" ಎಂಬ ಆಕ್ಷೇಪಣೆ ಆಗಾಗ್ಗೆ ಕೇಳಬರುತ್ತದೆ. ಬಾಲಕೃಷ್ಣನು ತನ್ನ ಬಾಯಲ್ಲಿ ಯಶೋದೆಗೆ ಹದಿನಾಲ್ಕು ಲೋಕಗಳನ್ನೂ ತೋರಿಸಿದನಂತೆ. ಈ ಕಥೆಯಲ್ಲಿ ಅಮೂಲ್ಯವಾದ ತತ್ತ್ವ ಅಡಗಿದೆ, ಮಾನವನ ಇತಿಹಾಸದಲ್ಲಿ ಗಳಿಸಿರುವ ಸಮಸ್ತ ಸಂಸ್ಕೃತಿ ಸಾರವೂ ಮಕ್ಕಳ ಆತ್ಮವಿಕಾಸಕ್ಕೆ ಆವಶ್ಯಕ. ಮಕ್ಕಳ ಶರೀರಪೋಷಣೆ, ಆರೋಗ್ಯ ರಕ್ಷಣೆ, ಅವರ ಮನಸ್ಸಿನ ಸಂಸ್ಕಾರ–ಇವುಗಳನ್ನು ಸಮರ್ಪಕವಾಗಿ ನೆರವೇರಿಸುವ ಉದ್ಯಮದಲ್ಲಿ ವಿದ್ಯಾವತಿಯಾದ ತಾಯಿಗೆ ಎಷ್ಟು ವಿದ್ಯಾಸಂಪತ್ತಿಯಿದ್ದರೂ ಸಾಲದು. ಸಮಸ್ತ ವಿಜ್ಞಾನಕಲೆಗಳಿಗೂ ಇಲ್ಲಿ ಸ್ಥಾನವಿದೆ, ಉಪಯೋಗವಿದೆ.

"ಈ ಕೆಲಸವನ್ನು ನೆರೆವೇರಿಸುವುದಕ್ಕೆ ಅದಕ್ಕೆ ತಕ್ಕ ವಿದ್ಯಾಸಂಪತ್ತಿಬೇಕಾಗಿಲ್ಲ. ಸಾಮಾನ್ಯ ವ್ಯವಹಾರಜ್ಞಾನವಿದ್ದರೆ ಸಾಕು" ಎಂಬ ವಾದದಲ್ಲಿ ತಿರುಳಿಲ್ಲ. ಬಡಗಿ, ಕಮ್ಮಾರ, ವೈದ್ಯ, ಅಧ್ಯಾಪಕ, ವ್ಯವಸಾಯಗಾರ, ಶಿಲ್ಪಿ ಮುಂತಾದವರ ಕೆಲಸಗಳನ್ನು ಸಮರ್ಪಕವಾಗಿ ನೆರವೇರಿಸುವುದಕ್ಕೆ ಅವರಿಗೆಲ್ಲ ತಮ್ಮ ತಮ್ಮ ಕೆಲಸಕ್ಕೆ ತಕ್ಕ ಮನೋಧರ್ಮವಿರಬೇಕೆಂದು ಪ್ಲೇಟೋ ವಾದಿಸುತ್ತಾನೆ. ಆದರೆ ಮನೆಗೆಲಸ, ಮಕ್ಕಳ ಪೋಷಣೆ, ಮುಂದಿನ ತಲೆಮಾರಿಗೆ ಹಿಂದಿನ ಸಂಸ್ಕೃತಿಯನ್ನು ತಮ್ಮ ಜೀವನದ ಕನ್ನಡಿಯಲ್ಲಿ ಪ್ರತಿಬಿಂಬಿಸಿ ಅದರ ಮಾನಸಿಕ ವಾತಾವರಣವನ್ನು ಮನೆಯಲ್ಲಿ ಪ್ರಕಾಶಪಡಿಸಿ ಮಕ್ಕಳ ಮನಸ್ಸನ್ನು ಹೊಕ್ಕು ಅದನ್ನು ಅರಳುವಂತೆ ಮಾಡುವುದು ಮೊದಲಾದ ಸರ್ವತೋಮುಖವಾದ ಕರ್ತವ್ಯ ಪ್ರಪಂಚಕ್ಕೆ ತನ್ನದೇ ಆದ ಮನೋಧರ್ಮ ಆವಶ್ಯಕವಲ್ಲವೋ? ಈ ಪ್ರಶ್ನೆಯನ್ನು ಕುರಿತು ಪ್ಲೇಟೋ ಕೂಲಂಕಷವಾಗಿ ವಿಚಾರ ನಡಸಿಲ್ಲ. ಸಮಾನತೆಗೂ ಐಕ್ಯ ಅಥವಾ ಅಭೇದಕ್ಕೂ ಬಹಳ ಅಂತರವಿದೆ.

ಅಲ್ಲದೆ, ಮನೆಗೆಲಸವನ್ನು ನೋಡಿಕೊಂಡು ಮಿಕ್ಕ ಎಲ್ಲಾ ವ್ಯವಹಾರಗಳೂ ವಿದ್ಯೆಗಳೂ ಅನುಭವಗಳೂ ಮನೆಗೆಲಸಕ್ಕೆ ಪುಷ್ಟಿಯನ್ನು ತಂದುಕೊಡುವ ರೀತಿಯಲ್ಲಿ ಹೆಂಗಸರು ತಮ್ಮ ವಿದ್ಯಾವ್ಯವಹಾರಗಳನ್ನು ಅಳವಡಿಸಿಕೊಂಡರೆ, ಆತ್ಮಲಾಭವೂ ಸಮಾಜಸೇವೆಯೂ ಏಕಕಾಲದಲ್ಲಿ ಒಂದೇ ಜೀವನಪಥದಿಂದ ಕೈಗೂಡಬಹುದು. ಇದಕ್ಕೆ ಕರ್ಮಕೌಶಲವಿರಬೇಕು.

ಸ್ತ್ರೀಪುರುಷರಿಗೆ ಸ್ವಭಾವಜನ್ಯವಾದ ಭೇದಗಳಿವೆಯೆ? ಮನಸ್ಸಿನ ಭಾವನೆಗಳು, ಆಲೋಚನಾಶಕ್ತಿ, ಕಾರ್ಯಕುಶಲತೆ,–ಇವುಗಳಲ್ಲಿ ಭೇದವಿದೆಯೆ? ಈ ವಿಷಯವಾಗಿ ಮನಶ್ಶಾಸ್ತ್ರಜ್ಞರು ಸ್ವಲ್ಪಮಟ್ಟಿಗೆ ಶೋಧನೆ ನಡೆಸಿದ್ದಾರೆ. ಆದರೆ ಇನ್ನೂ ನಿಷ್ಕೃಷ್ಟವಾದ ಸಿದ್ಧಾಂತಕ್ಕೆ ಯಾರೂ ಬಂದಿಲ್ಲ.

ಈಗೀಗ ಕೆಲವರು ಸೂಕ್ಷ್ಮದೃಷ್ಟಿಯಿಂದ (ಪ್ರತಿಭಾ ವಿಶೇಷದಿಂದಲೋ ಎಂಬಂತೆ) ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ನೊಬೆಲ್ ಬಹುಮಾನಪಡೆದ 'ಅಲೆಕ್ಸಿಸ್ ಕ್ಯಾರೆಲ್' (Alexis Carrel) ಎಂಬ ಪ್ರಾಣಿರಸಾಯನಶಾಸ್ತ್ರ (Biochemistry) ಪ್ರವೀಣನು, ಸ್ತ್ರೀದೇಹದ ಜೀವಕಣಗಳಿಗೂ ಪುರುಷದೇಹದ ಜೀವಕಣಗಳಿಗೂ ಆಂತರಿಕವಾದ ಭೇದ ಕಂಡುಬರುತ್ತದೆಯೆಂದಿದ್ದಾನೆ. ಇದು ನಿಜವಾದರೆ, ಮನೋವ್ಯಾಪಾರಗಳಲ್ಲಿ ಕೂಡ ಈ ಭೇದ ಕಾಣಿಸಿಕೊಳ್ಳಬೇಕು. ಈ ದೃಷ್ಟಿಯಿಂದ ಸ್ತ್ರೀಪುರುಷರ ಸ್ವಭಾವದಲ್ಲಿ, ಎಂದರೆ ಅನ್ನ, ಪ್ರಾಣ, ಮನ, ವಿಜ್ಞಾನ, ಆನಂದ ಕೋಶಗಳಲ್ಲೆಲ್ಲ ಸ್ವರೂಪ ಭೇದವೇರ್ಪಟ್ಟ ಹಾಗಾಯಿತು. ಇದು ನಿಜವಾದರೆ ಪ್ಲೇಟೋವಿನ ಬೇಟೆನಾಯಿಗಳ ಸಾಮ್ಯವು ಅಸತ್ಯವಾಗಬೇಕಾಗುತ್ತದೆ.

ಇದಲ್ಲದೆ ಸ್ತ್ರೀಪುರುಷರ ಸಹವಾಸವು ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ತಡೆಯಿಲ್ಲದೆ ಬೆಳೆಯುತ್ತ ಬಂದರೆ, ಇಬ್ಬರ ಸಂಯಮಸಂಪತ್ತಿಯೂ ಕಡಮೆಯಾಗುವುದು ಸಹಜ. ಸಂಯಮಶಕ್ತಿ ಕಡಮೆಯಾಗುವುದರ ಫಲ ಈಗ ಮುಂದುವರಿದ ದೇಶಗಳಲ್ಲಿ ಕಂಡುಬರುವ ದಾಂಪತ್ಯ ವಿಚ್ಛೇದನ ಪ್ರವೃತ್ತಿಯ ಪ್ರಾಬಲ್ಯ. ನಾಲ್ಕು ಮದುವೆಗಳಲ್ಲಿ ಒಂದು ವಿಚ್ಛೇದಕ್ಕೆ ಗುರಿಯಾಗಿ ಮದುವೆಯೆಂಬುದರ ಅರ್ಥಕ್ಕೇ ನಾಶಸಂಭವಿಸುವ ಕಾಲ ಹತ್ತಿರಕ್ಕೆ ಬರುತ್ತದೆ. " ಸ್ತ್ರೀಪುರುಷ ಸಂಗ ವಿಷಯದಲ್ಲಿರಬೇಕೆಂಬ ಪರಿಶುದ್ಧತೆ ಕೇವಲ ಅಂಧ ಶ್ರದ್ಧೆಯಿಂದ ಹುಟ್ಟಿದ್ದು. ಇಂಥ ಪರಿಶುದ್ಧತೆ ಇರಬೇಕಾಗಿಲ್ಲ. ಸುಖ ಸಾಧನೆಯೇ ಜೀವನದ ಗುರಿ"–ಎಂದು ಮುಂತಾದ ವಾದವು ಹೆಚ್ಚುತ್ತಿದೆ. ಇದರ ತಿರುಳನ್ನು ಕುರಿತು ಶೋಧನಾತ್ಮಕವಾದ ಪರಿಶೀಲನೆ ಅಗತ್ಯವಾಗಿದೆ. ಇಂಥ ಶೋಧನೆಗೆ ಅನೇಕ ಶಾಸ್ತ್ರಗಳ ಸಹಾಯಬೇಕಾಗಿದೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ಒಂದು ವಿಷಯವನ್ನು ಮಾತ್ರ ಇಲ್ಲಿ ಸೂಚಿಸುತ್ತೇವೆ.

ಕೆಲವು ಚರಿತ್ರಕಾರರು ಸ್ತ್ರೀಪುರುಷರ ಸಂಗವಿಷಯದಲ್ಲಿ ಒಂದು ತತ್ತ್ವವನ್ನು ಸೂಚಿಸಿದ್ದಾರೆ. ಯಾವ ಕಾಲದಲ್ಲಿ ಇಂದ್ರಿಯನಿಗ್ರಹ ಸಂಪ್ರದಾಯವು ಪ್ರಬಲವಾಗಿದ್ದಿರಬೇಕೆಂದು ತೋರಿಬರುತ್ತದೆಯೋ ಅಂಥ ಕಾಲಗಳಲ್ಲಿ (ಶೋಧನೆಗೆ ವಿಷಯವಾದ ದೇಶಗಳಲ್ಲಿ) ಶಾಸ್ತ್ರಕಲೆಗಳಲ್ಲಿ ಅಭಿವೃದ್ಧಿ, ರಾಷ್ಟ್ರೋನ್ನತಿಯನ್ನು ಸಾಧಿಸುವ ಮಹತ್ಕಾರ್ಯಗಳು–ಇವೆಲ್ಲ ಹೆಚ್ಚಾಗಿ ನಡೆದಿವೆಯಂತೆ. ಇಂದ್ರಿಯ ನಿಗ್ರಹದಿಂದ ಶಕ್ತಿ ಶೇಖರಣೆಯಾಗುತ್ತದೆಯಂತೆ ; ಉತ್ಸಾಹ, ಕರ್ತವ್ಯನಿಷ್ಠೆ, ದೂರದರ್ಶಿತ್ವ, ಧೃತಿ ಮುಂತಾದ ಗುಣಗಳ ಉತ್ಕರ್ಷವಾಗುತ್ತದೆಯಂತೆ. ಸಾಧಾರಣ ಅನುಭವದಲ್ಲಿ ಕೂಡ ಈ ಕಾರ್ಯಕಾರಣ ಸಂಬಂಧವು ಸ್ವಲ್ಪಮಟ್ಟಿಗೆ ಕಾಣಬರುತ್ತದೆ.

ಇದು ಹೇಗೇ ಆಗಲಿ, ಪ್ಲೇಟೋವಿನ ಸಿದ್ಧಾಂತದಲ್ಲಿ ಸ್ವೇಚ್ಛಾಪ್ರವೃತ್ತಿಗೆ ಅವಕಾಶವಿಲ್ಲ. ಆದರ್ಶರಾಜ್ಯದ ಪಾಲಕರಿಗೆ ಪ್ಲೇಟೋ ವಿಧಿಸುವ ವಿವಾಹಪದ್ಧತಿಯನ್ನು ಅನೇಕರು ಅಪಾರ್ಥ ಮಾಡಿಕೊಂಡಿದ್ದಾರೆ. ಆತನು ಪಾಲಕರಿಗೆಲ್ಲ ಸಾಮಾನ್ಯವಾದ (Common) ಆಸ್ತಿಯನ್ನು ವಿಧಿಸುವಂತೆಯೇ ಎಲ್ಲರಿಗೂ ಸಾಮಾನ್ಯವಾಗಿರುವ ಹೆಂಡಿರು ಮಕ್ಕಳ ವ್ಯವಸ್ಥೆಯನ್ನು ಸೂಚಿಸಿದ್ದಾನೆಂದು ಕೆಲವರು ತಿಳಿದುಕೊಂಡಿದ್ದಾರೆ.

ಎಲ್ಲ ಪಾಲಕರಿಗೂ ಅವರ ಗುಂಪಿನ ಹೆಂಗಸರೆಲ್ಲ ಹೆಂಡತಿಯರು, ಆ ಹೆಂಗಸರಿಗೆ ಆ ಪಾಲಕರೆಲ್ಲರೂ ಗಂಡಂದಿರು. ಇದನ್ನು 'ಸಮೂಹ ವಿವಾಹ ಪದ್ಧತಿ' ಎಂದು ಕರೆಯಬಹುದು. ಇಂಥ ಪದ್ಧತಿ ಈಗಲೂ ಹಿಮಾಲಯ ಪರ್ವತಶ್ರೇಣಿಯ ಕಣಿವೆಗಳಲ್ಲಿಯೂ ಪೆಸಿಫಿಕ್ ಸಾಗರದ ಮಧ್ಯದಲ್ಲಿರುವ ಕೆಲವು ದ್ವೀಪಗಳಲ್ಲಿ ವಾಸಿಸುವ ಕಾಡುಜನ ಕೆಲವರಲ್ಲಿಯೂ ಉಳಿದಿರುವುದೆಂದು ತಿಳಿಯಬಂದಿದೆ.

ಪ್ಲೇಟೋವಿನಂತಹ ಮೇಧಾವಿಯಾದ ತತ್ತ್ವಚಿಂತಕನು ಆಪಾತತಃ ಅಸಹ್ಯವೆಂದು ತೋರುವ ಇಂಥ ವಿವಾಹಶಾಸನವನ್ನು ಸೂಚಿಸಿರುವುದು ಪಾಶ್ಚಾತ್ಯ ಸಂಸ್ಕೃತಿಯ ಚರಿತ್ರೆಯಲ್ಲಿಯೇ ಆಶ್ಚರ್ಯಕರವಾದ ಸಂಗತಿ. ಇದರ ಮರ್ಮವೇನೆಂದರೆ, ಮಾನವ ವಂಶೋದ್ಧಾರದಲ್ಲಿ ಪ್ಲೇಟೋವಿಗೆ ಇದ್ದ ಶ್ರದ್ಧೆ. ಸಮಾಜದ ಏಳಿಗೆಗೆ ಎರಡು ವಿಧವಾದ ಕಾರಣಗಳಿವೆ. ಒಂದು, ಸಂಸ್ಕೃತಿಯ ಬೆಳೆವಣಿಗೆ; ಶಾಸ್ತ್ರಕಲೆಗಳ ಅಭಿವೃದ್ಧಿ; ಇನ್ನೊಂದು, ಜನರಲ್ಲಿ ಅನುವಂಶಿಕವಾಗಿ ಬರುವ ಗುಣ, ಶಕ್ತಿ, ವಿದ್ಯೆ – ಇವು ತಂದೆತಾಯಿಗಳಿಂದ ಮಕ್ಕಳಿಗೆ ರಕ್ತಗತವಾಗಿ ಹುಟ್ಟುಗುಣದ ರೂಪದಲ್ಲಿ ಹರಿಯುವುದಿಲ್ಲ. ವಿದ್ಯೆಯನ್ನು ಕಲಿಯುವ ಶಕ್ತಿ ಮಾತ್ರ ಹಾಗೆ ಹರಿದುಬರುತ್ತದೆ. ಒಂದು ಸಮಾಜದಲ್ಲಿರುವ ಶಾಸ್ತ್ರಸಂಪತ್ತೆಲ್ಲ ಸಂತಾನ ಮಾರ್ಗವಾಗಿ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹರಿಯುವುದಾದರೆ, ನಾಗರಿಕತೆಯ ಅಭಿವೃದ್ಧಿಯು ಅತಿವೇಗದಿಂದ ನಡೆಯಲು ಅವಕಾಶವಾಗುತ್ತದೆ; ಪ್ರತಿ ತಲೆಮಾರಿನವರೂ ಹಿಂದಿನ ತಲೆಮಾರಿನವರಿಗಿಂತ ಹೆಚ್ಚು ತಿಳಿದವರಾಗುತ್ತಾರೆ. ಹಾಗೆಯೇ ಹಿಂದಿನವರ ದುರಭ್ಯಾಸ ದುಷ್ಪ್ರವೃತ್ತಿಗಳೂ ಹತೋಟಿ ಮೀರಿ ಬೆಳೆಯುವ ಸಂಭವವಿದೆ. ಆದರೆ, ವಾಸ್ತವವಾಗಿ ಇಂಥ ಪರಿಣಾಮಕ್ಕೆ ಆಧಾರವಿಲ್ಲ. ಸಂತಾನ ಮಾರ್ಗವಾಗಿ ತಂದೆ ತಾಯಿಗಳಿಂದ ಮಕ್ಕಳಿಗೆ ಬರುವುದು ಶರೀರ ಮನಸ್ಸುಗಳಲ್ಲಿ ಸುಪ್ತವಾಗಿ ಅಡಗಿರುವ ಶಕ್ತಿ ವಿಶೇಷಗಳು ಮಾತ್ರ. ಪ್ರತಿಯೊಬ್ಬ ವ್ಯಕ್ತಿಯೂ ವಿದ್ಯೆಯನ್ನೂ ಸದಾಚಾರವನ್ನೂ ಪ್ರಯತ್ನಪೂರ್ವಕವಾಗಿ ಅಭ್ಯಾಸಮಾಡಿ ಕಲಿಯಬೇಕಾದ್ದು ಅನಿವಾರ್ಯ, ವಂಶಪರಂಪರೆಯನ್ನು ಪ್ರಭುತ್ವದವರು ಸಮಾಜದ ಏಳಿಗೆಯ ದೃಷ್ಟಿಯಿಂದ ನಿಯಮನ ಮಾಡುವುದರಿಂದ ಅನುವಂಶಿಕ ಗುಣಸಂಪತ್ತಿಯನ್ನು ಉತ್ತಮಗೊಳಿಸಬಹುದು. ಈ ಆಶಯವೇ ಪ್ಲೇಟೋ ಪಾಲಕರಿಗೆ ವಿಧಿಸುವ ವಿವಾಹ ಪದ್ಧತಿಯ ಗುಟ್ಟು.

ಪ್ರಾಣಿಗಳ ಕೂಡುವಳಿಯನ್ನು ನಿಯಮನ ಮಾಡಿ, ನಮಗೆ ಬೇಕಾದ ಗುಣಗಳನ್ನು ಅವುಗಳ ಪರಂಪರೆಯಲ್ಲಿ ತರಬಹುದು. ಬೇಟೆನಾಯಿ, ಕುದುರೆ, ಹಸು, ಕುರಿ, ಕೆಲವು ಪಕ್ಷಿಗಳು–ಇವುಗಳಲ್ಲಿ ನಿರ್ದಿಷ್ಟ ಗುಣಗಳನ್ನು ಸಂತಾನದ ಮೂಲಕ ಬೆಳಸಬಹುದೆಂಬುದು ಅನುಭವಸಿದ್ಧವಾಗಿದೆ. ಬೇಟೆ ನಾಯಿಗಳಲ್ಲಿ ವೇಗ, ಮತ್ತು ವಾಸನೆ ಹಿಡಿಯುವ ಶಕ್ತಿ, ಜೂಜು ಕುದುರೆಗಳಲ್ಲಿ ವೇಗ, ಹಸುವಿನಲ್ಲಿ ಹಾಲು–ಇವನ್ನು ಆಶ್ಚರ್ಯಕರವಾದ ರೀತಿಯಲ್ಲಿ ವೃದ್ಧಿಗೊಳಿಸಿದ್ದಾರೆ. ಈಚೆಗೆ ಧಾನ್ಯಗಳ ಗುಣಗಳಲ್ಲಿಯೂ ಈ ವಿದ್ಯೆ ಫಲಕಾರಿಯಾಗಿದೆ. ಹುಳುಹಿಡಿಯದೆ ಇರುವ ಮತ್ತು

ತೆನೆಯಲ್ಲಿ ಹೆಚ್ಚು ಕಾಳುಬಿಡುವ ಧಾನ್ಯ ವಿಶೇಷಗಳನ್ನು ಕಂಡುಹಿಡಿದು ಬೆಳಸಿದ್ದಾರೆ. ರಷ್ಯಾ ದೇಶದಲ್ಲಿ ಬಣ್ಣ ಬಣ್ಣದ ಹತ್ತಿಬಿಡುವ ಹತ್ತಿಬೆಳೆಯನ್ನು ಕಂಡುಹಿಡಿದಿದ್ದಾರಂತೆ.

ಇಂಥ ಅನುಭವವನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ಲೇಟೋ ಆದರ್ಶರಾಜ್ಯದ ಪಾಲಕರಿಗೆ ವಿವಾಹಪದ್ಧತಿಯನ್ನು ವಿಧಿಸುತ್ತಾನೆ. ಉತ್ತಮರು ಉತ್ತಮರನ್ನು ಮದುವೆಯಾಗಬೇಕು. ಇದರಿಂದ ಉತ್ತಮ ಸಂತಾನ ಹೆಚ್ಚುತ್ತದೆ–ಎಂಬುದೇ ಪ್ಲೇಟೋವಿನ ಸೂತ್ರ.

ರಾಜ್ಯಪಾಲಕರು ತಮ್ಮ ತಮ್ಮಲ್ಲಿ ವಿವಾಹಗಳನ್ನು ನಿರ್ಧರಿಸುತ್ತಾರೆ. ಪಾಲಕರಲ್ಲಿ ಗಂಡಸರೂ ಹೆಂಗಸರೂ ಇರುತ್ತಾರೆ. ಪಾಲಕರು ಮತ್ತು ಸಹಾಯಕರಲ್ಲಿ ವಿವಾಹಕ್ಕೆ ಸರಿಯಾದ ವಯುಸ್ಸುಳ್ಳವರು ಪ್ರತಿವರ್ಷವೋ ಅಥವಾ ಇನ್ನೂ ಹೆಚ್ಚು ಕಾಲವಿಳಂಬವಾದ ಮೇಲೆಯೋ ವಸಂತ ಮಾಸದಲ್ಲಿ ಮದುವೆಯಾಗುತ್ತಾರೆ. ಯಾರು ಯಾರನ್ನು ಮದುವೆಯಾಗಬೇಕೆಂಬುದನ್ನು ಪಾಲಕರಲ್ಲಿ ವಯೋವೃದ್ಧರೂ ಅಧಿಕಾರದಲ್ಲಿ ಹೆಚ್ಚಿನವರೂ ನಿರ್ಣಯಿಸುತ್ತಾರೆ. ಬಹಿರಂಗವಾಗಿ ಆಜ್ಞೆಯನ್ನು ಹೊರಡಿಸುವುದು ಅನುಚಿತವಾದ್ದರಿಂದ ಲಾಟರಿಯನ್ನು ತಮ್ಮ ನಿಶ್ಚಯದ ಪ್ರಕಾರ ಮೊದಲೇ ವ್ಯವಸ್ಥೆ ಮಾಡಿರುತ್ತಾರೆ. ಈ ವ್ಯವಸ್ಥೆಯಲ್ಲಿ ಮೋಸವಿದ್ದರೂ ದೇಶದ ಹಿತಕ್ಕೋಸ್ಕರ ಇಂಥ ಪ್ರಯೋಗವಾಗುವುದರಿಂದ ಈ ಮೋಸ ಅಸಭ್ಯವಾಗುವುದಿಲ್ಲ.

ಮದುವೆಯು ಪರಿಮಿತ ಕಾಲದವರೆಗೆ ನಡೆಯತಕ್ಕದ್ದು ; ಒಂದೆರಡು ತಿಂಗಳ ಕಾಲಮಾತ್ರ. ಪ್ರತಿಯೊಂದು ವಿವಾಹೋತ್ಸವ ಕಾಲದಲ್ಲಿಯೂ ಬೇರೆಬೇರೆ ಕೂಡುವಳಿಗಳಾಗುತ್ತವೆ. ಒಂದು ವಸಂತ ಮಾಸದ ಗಂಡಹೆಂಡಿರು ಇನ್ನೊಂದು ವಸಂತಮಾಸಕ್ಕೆ ಗಂಡಹೆಂಡಿರಾಗಿರುವುದಿಲ್ಲ. ಅಲ್ಲದೆ, ಯುದ್ಧದಲ್ಲಿ ಹೆಚ್ಚು ಶೌರ್ಯವನ್ನು ಪ್ರದರ್ಶಿಸಿದ ವಯಸ್ಕರಿಗೆ ಹೆಚ್ಚು ಸಾರಿ ಮದುವೆಯ ಅವಕಾಶ ಸಿಕ್ಕುತ್ತದೆ. ಹೀಗೆಯೇ ಶಾಸ್ತ್ರಜ್ಞಾನ, ಆಡಳಿತದಲ್ಲಿ ಹೆಚ್ಚು ಪ್ರತಿಭೆ ವಿವೇಕಗಳನ್ನು ವ್ಯಕ್ತಪಡಿಸುವವರಿಗೂ ವಿವಾಹದ ಅವಕಾಶ ಹೆಚ್ಚಾಗಿ ಸಿಕ್ಕುವಂತೆ ವ್ಯವಸ್ಥೆಯಾಗುತ್ತದೆ.

ಈ ವಿಧಿಗಳ ಉದ್ದೇಶವೇನೆಂದರೆ: ಸ್ತ್ರೀಪುರುಷರ ಸಂತಾನ ಶಕ್ತಿಯ ವೈವಿಧ್ಯವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದು ; ಇವರ ಗುಣವೈವಿಧ್ಯಕ್ಕೆ ವಿವಿಧ ಸಂಯೋಗ ಸಂದರ್ಭವನ್ನು ಒದಗಿಸುವುದು ; ಮತ್ತು ಹೆಚ್ಚು ಪ್ರತಿಭಾವಂತರು ಜನಿಸುವುದಕ್ಕೆ ಆಯ್ಕೆಯ ಕ್ಷೇತ್ರವನ್ನು ವಿಸ್ತರಿಸುವುದರ ಮೂಲಕ ಅನುಕೂಲ ಕಲ್ಪಿಸುವುದು.

ಪಾಲಕರ ದಾಂಪತ್ಯ ಜೀವನವು ಅದಕ್ಕೆ ಗೊತ್ತಾದ ಕಾಲದಲ್ಲಿ ಮಾತ್ರ ನಡೆಯಬೇಕು. ಮಿಕ್ಕ ಕಾಲದಲ್ಲಿ ಸ್ತ್ರೀಪುರುಷರ ಸಂಗನಿಷಿದ್ಧ. ಸ್ತ್ರೀಪುರುಷರಿಬ್ಬರೂ ಒಂದೇ ಸಹವಾಸದಲ್ಲಿದ್ದು ರಾಜ್ಯ ಭಾರವನ್ನು ನಡಸುತ್ತಿದ್ದರೂ ದಾಂಪತ್ಯಕ್ಕೆ ಮೀಸಲಾದ ಕಾಲವನ್ನು ಬಿಟ್ಟು ಮಿಕ್ಕ ಸಮಯಗಳಲ್ಲಿ ಅವರು ಸಂಗವನ್ನಪೇಕ್ಷಿಸಬಾರದು.

ಪಾಲಕರಿಗೆ ಪ್ಲೇಟೋ ಸಂನ್ಯಾಸ ಜೀವನವನ್ನು ವಿಧಿಸುವುದಿಲ್ಲವೆಂಬುದು

ಇದರಿಂದ ಸ್ಪಷ್ಟವಾಗುತ್ತದೆ.

ಸಹೋದರ ಸಹೋದರಿಯರಲ್ಲಿ ಮದುವೆಯಾಗುವ ಸಂಭವವನ್ನು ನಿಷೇಧಮಾಡುವುದಕ್ಕೆ ತಕ್ಕ ಶಾಸನಗಳನ್ನು ಪಾಲಕರು ಮಾಡಿಕೊಳ್ಳುತ್ತಾರೆ. ಒಂದೇ ವಿವಾಹ ಕಾಲದಲ್ಲಿ ಜನಿಸಿದವರೆಲ್ಲ ಸಹೋದರ ಸಹೋದರಿಯರೆಂದು ಗಣನೆಯಾಗುತ್ತದೆ. ಒಂದು ಉತ್ಸವ ಕಾಲದಲ್ಲಿ ಮದುವೆಯಾದವರೆಲ್ಲ ಇವರಿಗೆ ತಂದೆತಾಯಿಗಳು. ತಂದೆತಾಯಿಗಳು ತಮ್ಮ ಮದುವೆಯ ವರ್ಷದಲ್ಲಿ ಜನಿಸಿದ ಮಕ್ಕಳನ್ನೆಲ್ಲ, ಅವು ಯಾರ ಯಾರವೇ ಆಗಿರಲಿ, ತಮ್ಮ ಮಕ್ಕಳೆಂದು ಭಾವಿಸಬೇಕು. ತಂದೆತಾಯಿಯರಿಗೆ ತಮ್ಮ ಮಕ್ಕಳ ಗುರುತಿರಬಾರದೆಂದು, ಹುಟ್ಟಿದ ತಕ್ಷಣವೇ ಮಕ್ಕಳನ್ನು ದಾದಿಯರ ವಶಕ್ಕೆ ಕಳಿಸುವ ವಿಧಿಯೂ ಹೇಳಿದೆ. ಸ್ವಂತ ಆಸ್ತಿಯನ್ನು ನಿಷೇಧಮಾಡಿದ ಹಾಗೆಯೇ ಪಾಲಕರಿಗೆ ಸ್ವಂತ ಕುಟುಂಬವೂ ಸ್ವಂತ ಮಕ್ಕಳೂ ನಿಷೇಧವಾಗಿದೆ.

ಅನುವಂಶಿಕ ಗುಣಸಂಪತ್ತಿಯ ಮಟ್ಟವನ್ನು ಏರಿಸುವುದರ ಜೊತೆಗೆ ರಾಷ್ಟ್ರಪ್ರೇಮವನ್ನು ತಿದ್ದಿ ಉಜ್ಜ್ವಲಗೊಳಿಸುವುದೂ ಈ ವಿಧಿಗಳ ಆಶಯವಾಗಿದೆ. ಸ್ವಂತಮನೆ, ಸ್ವಂತ ಆಸ್ತಿ, ಸ್ವಂತಕುಲ, ಸ್ವಂತ ಪತಿ ಪತ್ನಿಯರು – ಇವುಗಳು ಸ್ವಾರ್ಥಪರತೆಗೆ ಪೋಷಕಗಳಾಗಿ ದೇಶಪ್ರೇಮವನ್ನು ಮರಸುವುವು, ಎಲ್ಲ ಅಧರ್ಮಗಳಿಗೂ ಮೂಲವಾಗುವುವು ಎಂಬ ಶಕೆ ಪ್ಲೇಟೋವಿನ ಮನಸ್ಸನ್ನು ಪ್ರಬಲವಾಗಿ ಬಾಧಿಸುತ್ತಿತ್ತೆಂಬುದುಸ್ಪಷ್ಟವಾಗಿದೆ.

ಪಾಲಕರಿಗೆಲ್ಲ ಒಂದೇ ಸಂಸಾರವೇರ್ಪಟ್ಟರೆ ಅವರು ಸ್ವಾರ್ಥಪರತೆಯನ್ನು ಬಿಟ್ಟು ತಮ್ಮ ಕಾಲವನ್ನೆಲ್ಲ, ತಮ್ಮ ವಿದ್ಯಾ ಬುದ್ಧಿ ಭಾವನಾಸಂಪತ್ತನ್ನೆಲ್ಲ, ರಾಷ್ಟ್ರಕಾರ್ಯಕ್ಕೆ ವಿನಿಯೋಗ ಮಾಡಲು ಶಕ್ಯವಾಗುತ್ತದೆ. ಅವರ ಉದಾತ್ತವೂ ಉಜ್ಜ್ವಲವೂ ಆದ ರಾಷ್ಟ್ರಪ್ರೇಮನಿಷ್ಠ ಆದರ್ಶ ಜೀವನವು ಸಮಾಜದ ಮಿಕ್ಕ ವರ್ಗದವರಿಗೆ ಮೇಲುಪಂಕ್ತಿಯಾಗಿ, ಸಮಾಜದ 'ಮಾನಸ ಸರೋವರ'ವನ್ನು ಪರಿಶುದ್ಧಿ ಗೊಳಿಸುತ್ತಿರುತ್ತದೆ, ಶೇಷ್ಠರ, ಮಾನ್ಯರ, ಅಧಿಕಾರಸ್ಥರ ಆಚರಣೆಗಿಂತ ಪ್ರಬಲ ವಾದ ಪ್ರಭಾವ ಬೇರೊಂದಿಲ್ಲ.

ಈ ವಿವಾಹ ವಿಧಿಗಳ ಪ್ರೇರಕವಾದ ಉದಾತ್ತ ಭಾವನೆಯು ಕಾರ್ಯರೂಪದಲ್ಲಿ ಸಫಲವಾಗುವುದೇ?–ಎಂಬ ವಿಷಯದಲ್ಲಿ ಪ್ರಬಲವಾದ ಶಂಕೆ ತಲೆದೋರುವುದು ಆಶ್ಚರ್ಯವೇನೂ ಅಲ್ಲ. ಕಾಮಪ್ರವೃತ್ತಿಯನ್ನು ಈ ರೀತಿಯಾಗಿ ನಿಯಮನ ಮಾಡುವುದು ಜನರಿಗೆ ಸಾಧ್ಯ, ಅಂಥ ಆತ್ಮನಿಗ್ರಹಕ್ಕೆ ಅನುಕೂಲವಾದ ಶ್ರೇಷ್ಠರ ಮೇಲುಪಂಕ್ತಿ, ಸಮಾಜದ ಸಂಪ್ರದಾಯ, ಜನಾಭಿಪ್ರಾಯದ ಬೆಂಬಲ ಮುಂತಾದ ಸಹಕಾರಿ ಸಂದರ್ಭಗಳು ಆವಶ್ಯಕ. ಇಂಥ ಸಹಕಾರಿ ಸಂಪತ್ತಿಯಿದ್ದರೆ ಎಂಥ ಕಷ್ಟಸಾಧ್ಯವಾದ ಕೆಲಸ ಪದ್ಧತಿಗಳಾದರೂ ರೂಢಿಗೆ ಬರುತ್ತವೆ–ಎಂಬುದು ಪ್ಲೇಟೋವಿನ ಅಭಿಪ್ರಾಯ. "ಆಗತಾನೆ ಹುಟ್ಟಿದ ಶಿಶುವನ್ನು ನಮ್ಮ ವಶಕ್ಕೆ ಕೊಡಿ. ಸಮಾಜದ

ಮೇಲೆ ಸರ್ವಾಧಿಕಾರವನ್ನು ಕೊಡಿ. ಶಿಶುವಿನ ಮನಸ್ಸನ್ನು ಇಷ್ಟಬಂದ ಎರಕಕ್ಕೆ ಹಾಕಿ ಇಷ್ಟಬಂದ ಶಕ್ತಿಗಳುಳ್ಳ ವ್ಯಕ್ತಿಯನ್ನಾಗಿ ಬೆಳಸುವೆವು" – ಎಂದು ಈಚೀಚಿಗೆ ಜಾನ್ ವಾಟ್ಸನ್ನನೇ ಮೊದಲಾದ ಮನಶ್ಶಾಸ್ತ್ರ ನಿಪುಣರು ಹೇಳುತ್ತಿದ್ದಾರೆ. ಪ್ಲೇಟೋ ಇಷ್ಟು ದೂರ ಹೋಗುವುದಿಲ್ಲ. ಹುಟ್ಟು ಗುಣವೇ ಇಲ್ಲದ, ಆನುವಂಶಿಕಗುಣ ಸಂಪತ್ತಿಯೇ ಇಲ್ಲದ, ಮಕ್ಕಳು ಹುಟ್ಟುತ್ತಾರೆಂಬುದನ್ನು ಅವನು ಒಪ್ಪುವುದಿಲ್ಲ. ಜನರಲ್ಲಿ ಹುಟ್ಟುಗುಣಗಳು ಪ್ರಬಲ ರೂಪದಲ್ಲಿ ಇರುವುವೆಂದು ನಂಬಿದ್ದರಿಂದಲೇ, ಪ್ಲೇಟೋ ಅವುಗಳಲ್ಲಿ ಒಳ್ಳೆಯವನ್ನು ಆರಿಸಿಕೊಳ್ಳುವುದಕ್ಕೆ ಅವಕಾಶ ಹೆಚ್ಚಾಗಿ ಸಿಕ್ಕಬೇಕೆಂದೇ ತನ್ನ ಈ ವಿಚಿತ್ರವಾದ ವಿವಾಹಪದ್ಧತಿಯನ್ನು ಯೋಚಿಸಿದ್ದು.

ಅಲ್ಲದೆ, ಈ ವಿವಾಹ ಶಾಸನಗಳ ಪ್ರಕಾರ ಇರುವುದು ಸಾಧ್ಯವೆ?–ಎಂಬ ಪ್ರಶ್ನೆಗೆ ಉತ್ತರವಾಗಿ ಪ್ಲೇಟೋ ಸಂಪ್ರದಾಯದಲ್ಲಿ ಬಂದ ಕಟ್ಟುಗಳ ಬಲವನ್ನು ನಿರ್ದೇಶಮಾಡುತ್ತಾನೆ. ತಾಯಿ, ದೊಡ್ಡಮ್ಮ, ಚಿಕ್ಕಮ್ಮ ಮುಂತಾದ ದೊಡ್ಡವರಲ್ಲಿಯೂ ಅಕ್ಕತಂಗಿಯರಲ್ಲಿಯೂ ಕಾಮಪ್ರವೇಶವನ್ನು ಸಂಪೂರ್ಣವಾಗಿ ತಡೆಯಲು ಸಮಾಜಕ್ಕೆ ಹೇಗೆ ಸಾಧ್ಯವಾಗಿದೆಯೋ ಹಾಗೆಯೇ, ವಿವಾಹಕ್ಕೆ ನಿರ್ದಿಷ್ಟವಾದ ಕಾಲದಲ್ಲಿ ಮಾತ್ರ ಕಾಮಜೀವನಕ್ಕೆ ಅವಕಾಶಕೊಟ್ಟು ಉಳಿದ ಕಾಲದಲ್ಲಿ ಕಾಮದ ಸುಳಿವೇ ಇಲ್ಲದಂತೆ ಇರುವುದು ಸಾಧ್ಯ ಎಂದು ಪ್ಲೇಟೋ ಸಮಾಧಾನ ಹೇಳುತ್ತಾನೆ, ಮತ್ತು ಹುಟ್ಟಿದ ಕೂಡಲೆ ಮಗುವನ್ನು ತಾಯಿಗೆ ತೋರಿಸದೆ ಬೇರೆಮಾಡಿದರೆ ತಾಯಿಗೆ ತನ್ನ ಮಗುವಿನ ಮೇಲಿನ ಹಂಬಲು ಮಾಯವಾಗುತ್ತದೆ. ತಾಯಿ ಕರುಳಿಗೆ ಸಹಜವಾದ ಪ್ರೇಮ ಸಂಪತ್ತಿಯನ್ನು ಆಕಾಲದಲ್ಲಿ ಹುಟ್ಟಿದ ಎಲ್ಲ ಮಕ್ಕಳ ಮೇಲು ಬೀರುತ್ತಾಳೆ; ಎಲ್ಲ ಮಕ್ಕಳನ್ನೂ ತನ್ನ ಮಕ್ಕಳಂತೆಯೇ ಎಣಿಸುವುದಕ್ಕೆ ತಾಯಿಗೆ ಸಾಧ್ಯವಾಗುತ್ತದೆಯೆಂದೂ ಪ್ಲೇಟೋ ಅಭಿಪ್ರಾಯಪಡುತ್ತಾನೆ. ಇದೂ ಅಲ್ಲದೆ, ಈ ವಿಧಿಗಳೆಲ್ಲ ಪಾಲಕವರ್ಗದವರಿಗೆ ಮಾತ್ರ ಹೇಳಿದ್ದೆಂದು ಜ್ಞಾಪಕದಲ್ಲಿಡಬೇಕು. ಪಾಲಕರು ಅಸಾಧಾರಣವಾದ ವಿದ್ಯಾಕ್ರಮದ ಮೂಲಕ ಮುಂದಕ್ಕೆ ಬಂದಿರುತ್ತಾರೆ. ಅಸಾಧಾರಣ ಬುದ್ಧಿಶಕ್ತಿ, ಭಾವಶುದ್ಧಿ, ಧೈರ್ಯ, ಸ್ಥೈರ್ಯ, ರಾಷ್ಟ್ರದ ಏಳಿಗೆಯಲ್ಲಿ ಸಂಪೂರ್ಣಶ್ರದ್ಧೆ, ಅಸಾಧಾರಣವಾದ ಸಂಯಮಶಕ್ತಿ– ಇವುಗಳು ಅವರಲ್ಲಿ ಬೇರೂರಿರುತ್ತವೆಯೆಂಬುದನ್ನೂ ನಾವು ಮರೆಯಬಾರದು. ಇದನ್ನು ನೆನಪಿಟ್ಟುಕೊಂಡು ವಿಮರ್ಶಿಸಿ ನೋಡಿದರೆ, ಪ್ಲೇಟೋವಿನ ಸಾಹಸಪೂರ್ಣವಾದ ಈ ಸಲಹೆಯೂ ಯಶಸ್ವಿಯಾಗಿ ಫಲಕಾರಿ ಯಾದರೂ ಆಗಬಹುದೆಂಬ ಅಭಿಪ್ರಾಯ ಬಲಗೊಳ್ಳುತ್ತದೆ.

"ದೇಶವೆಲ್ಲ ನಮ್ಮದು. ರಾಷ್ಟ್ರದ ಜನರೆಲ್ಲ ನಮ್ಮ ಬಾಂಧವರು. ದೇಶದ ಏಳಿಗೆಯೇ ನಮ್ಮ ಏಳಿಗೆ. ದೇಶದ ಅವನತಿಯೇ ನಮ್ಮ ಅಧೋಗತಿ. ಜನರ ಸುಖವೇ ನಮ್ಮ ಸುಖ; ಅವರ ದುಃಖವೇ ನಮ್ಮ ದುಃಖ." – ಎಂಬಂಥ ಉದಾತ್ತ ಭಾವನೆಗಳು ಇದರಿಂದ ಎಲ್ಲರಲ್ಲೂ ಸಹಜವಾಗಿ ಹರಡುವುವೆಂದು ನಿರೀಕ್ಷಿಸಬಹುದು. ಈ ರೀತಿಯಲ್ಲಿ ನಾಗರಿಕರು ರಾಷ್ಟ್ರದ ಹಿತದಲ್ಲಿ ತಮ್ಮ ಹಿತವನ್ನು ಜ್ಞಾನ ಭಕ್ತಿಪೂರ್ವಕವಾಗಿ, ಹೊರಗಿನ ನಿರ್ಬಂಧವಿಲ್ಲದೆ, ಕಂಡುಕೊಳ್ಳುವ ಸಂಸ್ಕಾರವನ್ನು

ಬೆಳಸುವುದೇ ಪ್ಲೇಟೋವಿನ ಆಶಯ. ನಮ್ಮ ದೇಹದಲ್ಲಿ ಯಾವ ಅಂಗಕ್ಕೆ ನೋವುಂಟಾದರೂ ಆತ್ಮಕ್ಕೆ ನೋವುಂಟಾಗುತ್ತದೆ. ಆತ್ಮಕ್ಕೂ ದೇಹಕ್ಕೂ ಅಂಗಾಂಗಿ ಸಂಬಂಧವಿದೆ. ಇಂಥ ಅಂಗಾಂಗಿ ಸಂಬಂಧವನ್ನು ಜನರಿಗೂ ಅವರ ರಾಷ್ಟ್ರಕ್ಕೂ ಉಂಟುಮಾಡಿ ಬೆಳಸಬೇಕೆಂಬುದು ಪ್ಲೇಟೋವಿನ ಉದ್ದೇಶ.

ಇಂಥ "ಸಮೂಹ ವಿವಾಹ" ಪದ್ಧತಿಯಲ್ಲಿ ಸ್ವೇಚ್ಛಾ ವಿಹಾರಕ್ಕೆ ಅವಕಾಶವಿಲ್ಲ ; ಹೆಂಗಸರನ್ನು ಕೀಳುಭಾವನೆಗೆ ಈಡುಮಾಡಿ, ಅವರಿಗೆ ಅನೇಕ ಪತಿತ್ವಪದ್ಧತಿಯನ್ನು ಅಸಹ್ಯರೀತಿಯಲ್ಲಿ ನಿಯಮಿಸಿಲ್ಲ. ಸ್ತ್ರೀಪುರುಷರಿಬ್ಬರೂ ತಮ್ಮ ಸಂತಾನ ಶಕ್ತಿಯನ್ನು ರಾಷ್ಟ್ರಹಿತಕ್ಕಾಗಿ ಪ್ರಯೋಗವಮಾಡಿ, ಮುಂದಿನ ತಲೆಮಾರಿನವರು ತಮ್ಮ ತಲೆಮಾರಿನವರಿಗಿಂತಲೂ ಉತ್ತಮರಾಗಬೇಕೆಂಬ ದೂರದೃಷ್ಟಿಯಿಂದ ಸಂತಾನಕ್ಕಾಗಿ ಮಾತ್ರ ಕ್ಲುಪ್ತ ಕಾಲದಲ್ಲಿ ಕಾಮಕ್ಕೆ ಎಡೆಗೊಟ್ಟು, ಮಿಕ್ಕ ಕಾಲವನ್ನು ರಾಷ್ಟ್ರಕಾರ್ಯದಲ್ಲಿ ವಿನಿಯೋಗಿಸಬೇಕೆಂದು ವಿಧಿಸುವ ಶಾಸನಪದ್ಧತಿಯಿದು. ಇದನ್ನು ಕಾರ್ಯಗತ ಮಾಡುವುದು ಕಷ್ಟಸಾಧ್ಯವೆನ್ನಬಹುದಾದರೂ ಇದೆಂದಿಗೂ ಸ್ವೇಚ್ಛಾಕಾಮ ಪದ್ಧತಿಯಾಗಲಾರದು. ಇದರಲ್ಲಿ ಸ್ತ್ರೀಪುರುಷರಿಬ್ಬರಿಗೂ ಒಂದೇ ಶಾಸನವು ಸಮಾನವಾಗಿ ಅನ್ವಯಿಸುತ್ತದೆ.

ಪ್ಲೇಟೋವಿನ ಈ ಶಾಸನವನ್ನು ಮನನ ಮಾಡುವಾಗ ನಮಗೆ ಭಾರತೀಯ ಸಂಸ್ಕೃತಿಯಲ್ಲಿ ಸೂಚಿಸಿರುವ ಧ್ಯೇಯವು ನೆನಪಿಗೆ ಬರುವುದು ಸಹಜವಾಗಿದೆ. ನಮ್ಮ ಶಾಸ್ತ್ರ ಸಂಪ್ರದಾಯಗಳಲ್ಲಿಯೂ ದಂಪತಿಗಳು ಸಂತಾನೇಚ್ಛೆಯಿಂದ ಮಾತ್ರ ಕಾಮಕ್ಕೆ ಎಡೆಗೂಡಬೇಕೆಂಬ ನಿಯಮ ಉಕ್ತವಾಗಿದೆ. ಪ್ರಾಣಿಗಳಲ್ಲಿ ಕಾಮಪ್ರವೃತ್ತಿಯು ಪ್ರಕೃತಿನಿಯತವಾಗಿ ಕಾಲಕ್ರಮಬದ್ಧವಾಗಿರುತ್ತದೆ. ಮನುಷ್ಯರಲ್ಲಿ ಯಾದರೋ, ಅವರಿಗೆ ಧ್ಯಾನಶಕ್ತಿಯಿರುವುದರಿಂದ, ಸುಖಾಭಿಲಾಷೆಯುಂಟಾಗಿ ಅದರಿಂದ ಮಿತಿಮೀರಿ ಕಾಮಪ್ರವೃತ್ತಿಯುಂಟಾಗುತ್ತದೆ. ಈ ಸಂಗಾಭಿಲಾಷೆಯನ್ನು ಧ್ಯಾನ ನಿಯಮನಗಳಿಂದಲೇ ತಕ್ಕ ಮಿತಿಯಲ್ಲಿರಿಸಬಹುದಾಗಿದೆ.

ಅಲ್ಲದೆ, ಸುಮಾರು ಅರುವತ್ತು ವರ್ಷ ವಯಸ್ಸಿನಲ್ಲಿ ಗೃಹಸ್ಥನು ತನ್ನ ಮನೆ ಮಠ ಆಸ್ತಿಪಾಸ್ತಿಗಳನ್ನು ಮಕ್ಕಳಿಗೆ ಒಪ್ಪಿಸಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕೆಂದು ಶಾಸ್ತ್ರವಿಧಿಯಿದೆ. ಈ ಶಾಸ್ತ್ರವಿಧಿಯನ್ನು ಮನ್ನಿಸಬೇಕಾದರೆ, ಅಷ್ಟುಹೊತ್ತಿಗೆ ಅವನ ಕೊನೆಯ ಮಗನಿಗೂ ಇಪ್ಪತ್ತು, ಇಪ್ಪತ್ತೈದು ವರ್ಷ ವಯಸ್ಸಾಗಿರಬೇಕಾಯಿತು. ಇಲ್ಲವೆ; ಹಿರಿಯ ಮಗನೇ ತಂದೆಯ ಸ್ಥಾನದಲ್ಲಿ ನಿಂತು ಮಿಕ್ಕವರನ್ನೆಲ್ಲ ನೋಡಿಕೊಳ್ಳಬೇಕಾಗುತ್ತದೆ. ಅಂತೂ, ವೃದ್ಧಾಪ್ಯದಲ್ಲಿ ತೀರ ಚಿಕ್ಕ ವಯಸ್ಸಿನ ಮಕ್ಕಳಿರುವುದು ವಾನಪ್ರಸ್ಥಾಶ್ರಮದ ನಿಯಮಕ್ಕೆ ಅನುಗುಣವಾಗಿರುವಂತೆ ತೋರುವುದಿಲ್ಲ. ಇದರಿಂದಲೂ ಕಾಮಪ್ರವೃತ್ತಿಯನ್ನು ಹಿಡಿತದಲ್ಲಿಟ್ಟು ಅಡಗಿಸಿಡಬೇಕೆಂಬುದಕ್ಕೆ ಪುಷ್ಟಿ ದೊರೆತಂತಾಗುತ್ತದೆ.

* * *

೧೪ನೆಯ ಅಧ್ಯಾಯ

ವಿದ್ಯಾಭ್ಯಾಸ

ಪ್ಲೇಟೋವಿನ ಆದರ್ಶರಾಜ್ಯದಲ್ಲಿ ವಿದ್ಯಾಭ್ಯಾಸಕ್ರಮ ಮತ್ತು ನೀತಿಗಳಿಗೆ ಬಹಳ ಪ್ರಾಶಸ್ತ್ಯವಿದೆ. ಪ್ರಭುತ್ವದವರಲ್ಲೆಲ್ಲ ವಿದ್ಯಾಶಾಖೆಯ ಮಂತ್ರಿಯೇ ಮುಖ್ಯಸ್ಥನಾಗಿರಬೇಕೆಂದು 'ಲಾಸ್' ಗ್ರಂಥದಲ್ಲಿ ಹೇಳಿದ್ದಾನೆ.

ಒಟ್ಟಿನಲ್ಲಿ ಪ್ರಭುತ್ವದವರ ಸರ್ವಕಾರ್ಯಕಲಾಪಗಳ ಮುಖ್ಯೋದ್ದೇಶವೂ ವಿದ್ಯಾಭ್ಯಾಸವೇ ಎನ್ನಬಹುದು. ರಾಷ್ಟ್ರದಲ್ಲಿ ಉದಾತ್ತ ಭಾವನೆಗಳೂ ಧರ್ಮಬುದ್ಧಿಯೂ ಪರಿಶುದ್ಧವಾಧ ನಡತೆಯೂ ತುಂಬಿರಬೇಕೆಂಬುದೇ ಅವರ ಆಶಯ. ಕೇವಲ ದುಷ್ಟನಿಗ್ರಹ, ಶಾಂತಿ ಸ್ಥಾಪನೆ ಮತ್ತು ದಂಡನೀತಿಗಳಲ್ಲಿ ಅವರು ಕೃತಕೃತ್ಯರಾಗುವ ಹಾಗಿಲ್ಲ. ರಾಜ್ಯದಲ್ಲಿ ಸಾತ್ವಿಕ ವಾತಾವರಣ ನೆಲಸಿ ಜನರಲ್ಲಿ ಸತ್ಪ್ರೇರಣೆಗಳಿಗೇ ಉತ್ತೇಜನವೂ ಅವಕಾಶವೂ ಹೆಚ್ಚಾಗಿ ದೊರೆಯುವಂತೆ ನೋಡಿಕೊಳ್ಳುವುದು ಪ್ರಭುಗಳ ಮುಖ್ಯಕಾರ್ಯ.

ಜನರು ತಮ್ಮ ತಮ್ಮ ಸ್ವಭಾವಕ್ಕನುಗುಣವಾದ ಕಾರ್ಯಗಳಲ್ಲಿ ನಿರತರಾಗಿ ಜೀವನಯಾತ್ರೆಯನ್ನು ನಡಸುತ್ತಾರೆ. ಅವರವರ ಗುಂಪಿನಲ್ಲಿ ಅವರ ಸ್ವಧರ್ಮ ವರ್ಗಧರ್ಮಗಳಿಗೆ ಪೋಷಕವಾದ ಧ್ಯೇಯಗಳೂ ನೀತಿ ಸಂಪ್ರದಾಯಗಳೂ ಜನರ ಮನಸ್ಸಿನಲ್ಲಿ ರೂಢಮೂಲವಾಗುತ್ತವೆ. ಜನರ ಅನುಭವಕ್ಷೇತ್ರ ವಿಶಾಲವಾಗುತ್ತ ಬಂದಹಾಗೆಲ್ಲ ಈ ಧರ್ಮಗಳನ್ನು ತತ್ವತಃ ಪರಿಶೀಲನೆಮಾಡಿ ಸಂದರ್ಭಾನುಸಾರವಾಗಿ ಪರಿಷ್ಕಾರ ಮಾಡುತ್ತಿರಬೇಕು. ಇದು ಸೂಕ್ಷ್ಮವಾದ ಕೆಲಸ. ಸಮಾಜದ ಶಾಸನ ಜಾಲಕ್ಕೂ ಆಂತರಿಕ ಅನುಭವ, ಪ್ರತೀತಿ, ಆಶಯಗಳಿಗೂ ಸಮರ್ಪಕವಾದ ಸಂಬಂಧವಿರಬೇಕು. ಶಾಸನ ಸಂಪ್ರದಾಯಗಳು ದುಷ್ಪ್ರೇರಣೆಗಳನ್ನು ಖಂಡಿಸಿ, ದಮನಮಾಡಿ, ಸತ್ಪ್ರೇರಣೆಗಳಿಗೆ ಉತ್ತೇಜನ ಕೊಡುವವಾಗಬೇಕು. ಇದೇ ಒಟ್ಟಿನಲ್ಲಿ ವಿದ್ಯಾಭ್ಯಾಸದ ಕಾರ್ಯ.

ಇದಲ್ಲದೆ, ವಿದ್ಯಾಭ್ಯಾಸವೆಂದರೆ ಸಾಧಾರಣವಾಗಿ ಚಿಕ್ಕಂದಿನಿಂದ ಯೌವನಾ

ವಸ್ಥೆಯ ತನಕ ಮಕ್ಕಳಿಗೆ ಪಾಠಶಾಲೆಗಳಲ್ಲಿಯೋ ಗುರುಗಳ ಆಶ್ರಮಗಳಲ್ಲಿಯೋ ಕೊಡುವ ಶಿಕ್ಷಣಕ್ರಮ. ಈ ವಿದ್ಯಾಭ್ಯಾಸದ ಪರಿಷ್ಕಾರಕ್ಕೆ ಪ್ಲೇಟೋ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾನೆ. ವಿದ್ಯಾಭ್ಯಾಸ ಕ್ರಮದ ಸಹಾಯದಿಂದಲೇ ಯೋಗ್ಯರನ್ನು ಸಮರ್ಥರನ್ನೂ ಆರಿಸಿ ಅವರಿಗೆ ಮತ್ತೂ ಪ್ರೌಢವಾದ ವಿಶೇಷ ಶಿಕ್ಷಣವನ್ನು ಕೊಡಿಸಿ, ಅವರಲ್ಲಿ ವಿಶೇಷ ಸಾಮರ್ಥ್ಯ ತೋರಿಸಿದವರನ್ನು ರಾಜ್ಯಪಾಲಕರ ಸ್ಥಾನಕ್ಕೆ ಎರಿಸುವುದು ಪ್ಲೇಟೋವಿನ ಉದ್ದೇಶ. ತತ್ತ್ವಪ್ರೇಮ, ವಿಜ್ಞಾನದಲ್ಲಿ ನಿಸ್ಸೀಮ ಪ್ರವೀಣತೆ, ರಾಷ್ಟ್ರಪ್ರೇಮ, ವ್ಯವಹಾರದಲ್ಲಿ ವಿವೇಕ, ಧೈರ್ಯ, ಸಂಯಮಶಕ್ತಿ–ಇಂಥ ಸದ್ಗುಣ ಸಂಗ್ರಹವು ಮನದಲ್ಲಿ ಮನೆಮಾಡಿಕೊಂಡಿರುವ ಪ್ರಭುತ್ವದವರು ಸಾಧಾರಣವಾಗಿ ಸಿಕ್ಕುವುದಿಲ್ಲ. ಇಂಥವರನ್ನು ಪ್ರಯತ್ನಪೂರ್ವಕವಾಗಿ ಆರಿಸಿ, ಅವಕಾಶ ಕೊಟ್ಟು ಬೆಳಸಬೇಕು. ಈ ದೃಷ್ಟಿಯಿಂದ ವಿದ್ಯಾಭ್ಯಾಸದ ಶಾಖೆಗಿಂತ ಮುಖ್ಯವಾದ್ದು ಪ್ರಭುತ್ತ್ವ ಕಾರ್ಯದಲ್ಲಿ ಮತ್ತೊಂದಿಲ್ಲವೆಂದೇ ಪ್ಲೇಟೋವಿನ ಅಭಿಪ್ರಾಯ.

ಬಾಲ್ಯವಿದ್ಯಾಭ್ಯಾಸಕ್ಕೆ ಮುಖ್ಯವಾಗಿ ಎರಡು ಅಂಗಗಳಿವೆ. ಒಂದು ಮಾನಸಿಕವಾದ್ದು. ಇನ್ನೊಂದು ಶರೀರಕ್ಕೆ ಸಂಬಂಧಪಟ್ಟದ್ದು. ಮನಸ್ಸಿನ ಬೆಳೆವಣಿಗೆಗೆ ಸಂಬಂಧಪಟ್ಟದ್ದನ್ನೆಲ್ಲ 'ಸಂಗೀತ'ವೆಂದೂ ದೇಹದಾರ್ಢ್ಯವನ್ನು ಸಾಧಿಸುವ ಅಂಗಕ್ಕೆ 'ವ್ಯಾಯಾಮ'ವೆಂದೂ ಕರೆಯುವುದು ಗ್ರೀಕರಲ್ಲಿ ವಾಡಿಕೆಯಾಗಿತ್ತು. ಪ್ಲೇಟೋ ತನ್ನ ಕಾಲದಲ್ಲಿ ಪ್ರಚಾರದಲ್ಲಿದ್ದ ಕ್ರಮವನ್ನು ಕೂಲಂಕಷವಾಗಿ ಪರಿಶೀಲಿಸಿ, ಅದರಲ್ಲಿ ಅಂತರ್ಗತವಾದ ಮೂಲತತ್ತ್ವಗಳನ್ನು ಹೊರಗೆಡವಿ, ಕಂಡುಬಂದ ನ್ಯೂನತೆಗಳನ್ನು ಖಂಡಿಸಿ, ಅದನ್ನು ಪರಿಷ್ಕಾರ ಮಾಡುವುದಕ್ಕೆ 'ರಿಪಬ್ಲಿಕ್' ಮತ್ತು 'ಲಾಸ್' ಎಂಬ ಗ್ರಂಥಗಳಲ್ಲಿ ಹೆಚ್ಚು ಗಮನ ಕೊಟ್ಟಿದ್ದಾನೆ.

ಪ್ಲೇಟೋ ಸಂಗೀತಪದಕ್ಕೆ ವಿಸ್ತಾರವಾದ ಅರ್ಥವನ್ನು ಕೊಡುತ್ತಾನೆ. ಸಂಗೀತವೆಂದರೆ ಇಲ್ಲಿ ಕಾವ್ಯವೂ ಸಮಸ್ತ ಲಲಿತ ಕಲೆಗಳೂ ಲಕ್ಷ್ಯವಾಗಿವೆ. ಈಗ 'ಹ್ಯೂಮ್ಯಾನಿಟೀಸ್' (Humanities) ಎಂಬ ಪದದಿಂದ ನಿರ್ದೇಶವಾಗುವ ಸರ್ವಮಾನವೀಯ ಶಾಸ್ತ್ರ ಕಲೆಗಳೆಲ್ಲವೂ ಇಲ್ಲಿ 'ಸಂಗೀತ' ಎಂಬ ಪದದ ಅರ್ಥ ವ್ಯಾಪ್ತಿಯಲ್ಲಿ ಸೇರುತ್ತವೆ.

ಮಕ್ಕಳ ವಿದ್ಯಾಭ್ಯಾಸವು ಪುರಾಣ ಪುಣ್ಯಕಥೆಗಳ ಮೂಲಕ ನಡೆಯುತ್ತದೆ. ನಮ್ಮಲ್ಲಿ ಪುರಾಣ ಪುಣ್ಯಕಥೆಗಳು, ಸಾಧುಸಂತರ ಜೀವನಕಥೆಗಳು, ಅವರ ಕೀರ್ತನೆಗಳು, ರಾಮಾಯಣ, ಮಹಾಭಾರತ, ಭಾಗವತ ಮೊದಲಾದ ಉದ್ಗ್ರಂಥಗಳಲ್ಲಿ ಉಕ್ತವಾಗಿರುವ ಮಹಾವ್ಯಕ್ತಿಗಳು, – ಇವೆಲ್ಲ ಬಾಲಕರ (ಮತ್ತು ವಯಸ್ಕರ) ವಿದ್ಯಾಭ್ಯಾಸದಲ್ಲಿ ಮುಖ್ಯಸ್ಥಾನವನ್ನು ಪಡೆದಿದೆ. ಗ್ರೀಕರಲ್ಲಿ 'ಹೋಮರ್' 'ಹೆಸಿಯಡ್' ಎಂಬ ಮಹಾಕವಿಗಳು ರಚಿಸಿದ ಗ್ರಂಥಗಳಿಗೆ ಈ ಸ್ಥಾನವಿತ್ತು. ಈ ಗ್ರಂಥಗಳಲ್ಲಿ ಹೇಳಿರುವ ದೇವತೆಗಳ ಕಥೆಗಳೂ, ಹಿಂದಿನ ಕಾಲದ ಮಹಾವ್ಯಕ್ತಿಗಳ ಚರಿತ್ರೆಯೂ ಮಕ್ಕಳ ವಿದ್ಯಾವಿನಯ ಸಂಪಾದನೆಗೆ ಸಾಮಗ್ರಿಗಳಾಗಿದ್ದವು. ಈ ಗ್ರಂಥಗಳ ಸಾರಭಾಗವನ್ನು ಅವರಿಗೆ ಕಂಠಪಾಠಮಾಡಿಸುತ್ತಿದ್ದರು. ಈ ಕಾವ್ಯಗಳನ್ನು ಸುಶ್ರಾವ್ಯವಾಗಿ

ಪತನ ಮಾಡುವುದೇ ಒಂದು ಕಸಬಾಗಿ ಹೋಗಿತ್ತು. ಹೋಮರ್, ಹೆಸಿಯಡ್ ಪ್ರಭೃತಿಗಳ ಮಹಾಕಾವ್ಯಗಳಲ್ಲಿ ಚಿತ್ರಿತವಾದ ದೇವತೆಗಳ ಮತ್ತು ಧೀರರ ಆದರ್ಶಗಳೂ ಆ ಕವಿಗಳು ಉಲ್ಲೇಖಿಸುವ ಸತ್ಯ, ಧರ್ಮ ನೀತಿ ಸಂಪ್ರದಾಯಗಳ ಸೂಕ್ಷ್ಮಾಂಶಗಳೂ ಗ್ರೀಕರ ಮಾನಸಿಕ ವಾತಾವರಣವಾಗಿ ಅನೇಕ ಕಾಲ ಅವರ ಸಂಸ್ಕೃತಿಯನ್ನು ರೂಪುಗೊಳಿಸಿದ್ದವು.

ಆದರು ಪ್ಲೇಟೋವಿನ ಕಾಲದಲ್ಲಾಗಲೆ ತತ್ತ್ವಚಿಂತಕರಿಗೆ ಈ ಗ್ರಂಥಗಳಲ್ಲಿ ಕಾಣುಬರುವ ಅಭಿಪ್ರಾಯಗಳೂ ನೀತಿಗಳೂ ಖಂಡನೆಗೆ ವಿಷಯವಾಗಿದ್ದವು. ಹೋಮರ್ ಹೆಸಿಯಡ್ಡರ ಕಥೆಗಳನ್ನೂ ಇತರ ಕಥೆಗಳನ್ನೂ ಪ್ಲೇಟೋ ಪುನರಾವಿಷ್ಕಾರ ಮಾಡುತ್ತಾನೆ ; ಇವುಗಳಲ್ಲಿ ಕಂಡುಬಂದ ನ್ಯೂನತೆಗಳನ್ನು ತೀವ್ರವಾಗಿ ಖಂಡನೆ ಮಾಡುತ್ತಾನೆ.

ಹೆಸಿಯಡ್ ಕವಿಯು ಗ್ರೀಕರ ಪುರಾಣ ಕಥೆಗಳನ್ನು ರಚಿಸಿದ್ದಾನೆ. ಇವುಗಳ ವಿಷಯ ಪ್ರಪಂಚದ ಆದಿಯಲ್ಲಿ ನಡೆದ ಸಂಗತಿಗಳು. ಮೊಟ್ಟಮೊದಲು ಸಮಸ್ತ ಪ್ರಪಂಚಕ್ಕೂ ಪ್ರಭುವಾದ ಅಸುರರಾಜ 'ಕೋನಸ್' ಎಂಬವನನ್ನು ಅವನ ಮಗ 'ಉರಾನಸ್' ಎಂಬವನು ಕೊಂದು ಪಟ್ಟಕ್ಕೆ ಬಂದ ಕಥೆಯೊಂದು. ಇಂಥ ಕಥೆಗಳು ಒಳ್ಳೆಯವಲ್ಲ ; ಮಕ್ಕಳ ಮನಸ್ಸಿನಮೇಲೆ ಒಳ್ಳೆಯ ಪರಿಣಾಮವನ್ನುಂಟು ಮಾಡುವುದಿಲ್ಲ– ಎಂಬುದು ಪ್ಲೇಟೋವಿನ ಆಕ್ಷೇಪಣೆ.

ಹೋಮರನು ತನ್ನ ಇಲಿಯಡ್ ಮತ್ತು ಒಡಿಸಿಯಸ್ ಎಂಬ ಮಹಾಕಾವ್ಯಗಳಲ್ಲಿ 'ಸ್ಯೂಸ್, ಪೋಸೀಡನ್, ಅಪಾಲೂ, ಅಥೇನಾ', ಮುಂತಾದ ದೇವತೆಗಳ ಕಥೆಗಳನ್ನೂ, ಅಕಿಲೀಸ್ ಅಗಾಮೆಮಾನ್, ಯುಲಿಸಿಸ್' ಮುಂತಾದ ಮಹಾವೀರರ ಕಥೆಗಳನ್ನೂ ಚಿತ್ರಿಸಿದ್ದಾನೆ. ಈ ಕಾವ್ಯಗಳು ಸುಶ್ರಾವ್ಯವಾಗಿಯೂ ಹೃದಯಂಗಮವಾಗಿಯೂ ಇವೆ. ಈ ಗುಣಗಳಿಂದ ಇವುಗಳಲ್ಲಿ ಉಕ್ತವಾದ ವಿಷಯಗಳು ಕೇಳುವವರ ಮನಸ್ಸನ್ನು ಹೊಕ್ಕು ಅವರ ಭಾವನಾ ಪ್ರಪಂಚಕ್ಕೆ ಬಣ್ಣಕೊಡುತ್ತವೆ.

ಈ ಕಥೆಗಳಲ್ಲಿ ಕೆಲವು ದೇವತೆಗಳ ವಿಷಯವಾಗಿ ನಮ್ಮಲ್ಲಿ ಗೌರವವನ್ನು ಹುಟ್ಟಿಸುವಹಾಗಿಲ್ಲ. ಉದಾಹರಣೆಗೆ, "ಸ್ಯೂಸ್' ಎಂಬ ದೇವತೆಗಳ ರಾಜನೇ (ಇವನು ನಮ್ಮಲ್ಲಿ ಸ್ವರ್ಗಾಧಿಪತಿಯಾದ ಇಂದ್ರನಿದ್ದಂತೆ) ಕೆಲವುವೇಳೆ ಅಸಭ್ಯರೀತಿಯಲ್ಲಿ ನಡೆದುಕೊಳ್ಳುತ್ತಾನೆ. ಒಂದು ಸಲ ತನ್ನ ಹೆಂಡತಿಯಾದ 'ಹೀರಾ' ಎಂಬವಳನ್ನು ಹೊಡೆಯುತ್ತಾನೆ. ಅವನ ಮಗ ಮಧ್ಯೆ ಬಂದು ತಾಯಿಯನ್ನು ಬಿಡಿಸಿಕೊಳ್ಳುವುದಕ್ಕೆ ಬಂದಾಗ ಅವನನ್ನು ಹೊಡೆದೋಡಿಸುತ್ತಾನೆ. ಮತ್ತೊಂದು ಸಲ ಮದೋನ್ಮತ್ತನಾಗಿ 'ಹೀರೆ'ಯನ್ನು ಬಹಿರಂಗವಾಗಿ ಕೂಡುತ್ತಾನೆ. ಅಲ್ಲದೆ, ಜನರಿಗೆ ಕೆಟ್ಟ ಬುದ್ಧಿಯನ್ನು ತಾನೇ ಪ್ರೇರಣೆಮಾಡಿ, ಅದಕ್ಕಾಗಿ ಅವರನ್ನು ತಾನೇ ಕ್ರೂರವಾಗಿ ಶಿಕ್ಷೆಗೆ ಗುರಿಮಾಡುತ್ತಾನೆ. ಅಲ್ಲದೆ, ಈ ಸ್ಯೂಸ್ ದೇವಾಧಿದೇವನು ಶ್ರೇಷ್ಠ ನ್ಯಾಯಬುದ್ಧಿಯನ್ನೂ

ತೋರುವುದಿಲ್ಲ. ಜನರಿಗೆ ಸುಖದುಃಖಗಳನ್ನು ಲಾಟರಿಯಮೂಲಕ, ಅವರವರ ಕರ್ಮಗಳಿಗನುಸಾರವಾಗಲ್ಲ, ಕೇವಲ ಆಕಸ್ಮಿಕವಾಗಿ ಹಂಚುತ್ತಾನೆ. ಮತ್ತು ದೇವತೆಗಳು ದ್ವೇಷಾಸೂಯೆಗಳಿಂದ ಪ್ರೇರಿತರಾಗಿ ತಮ್ಮತಮ್ಮೊಳಗೇ ಕಾಳಗಮಾಡುತ್ತಾರೆ. ಮನುಷ್ಯರ ಮನಸ್ತಾಪ ಮತ್ತು ಜಗಳಗಳಲ್ಲಿ ಕೈಹಾಕಿ ಪಕ್ಷಪಾತದಿಂದ ತಮಗಿಷ್ಟ ಬಂದವರಿಗೆ ಸಹಾಯ ಮಾಡುತ್ತಾರೆ. ತಮ್ಮನ್ನು ಪೂಜಿಸದಿದ್ದವರ ಶತ್ರುಗಳಿಗೆ ಬಲಿಕೊಟ್ಟು ಅವರನ್ನು ಕಷ್ಟಕ್ಕೆ ಗುರಿಮಾಡುತ್ತಾರೆ. ದೇವತೆಗಳೂ ಕೂಡ ಮಾತಿಗೆ ತಪ್ಪುತ್ತಾರೆ.

ಹೀಗೆಯೇ 'ಅಕಿಲೀಸ್' ಮುಂತಾದ ವೀರರೂ ಕೂಡ ಎಲ್ಲ ವಿಷಯಗಳಲ್ಲಿಯೂ ಆದರ್ಶಪುರುಷರಾಗಿರುವುದಿಲ್ಲ. ತನ್ನ ಸ್ನೇಹಿತ 'ಪೆಟ್ರೋಕ್ಲೀಸ'ನು ಟ್ರಾಯ್ ಯುದ್ಧದಲ್ಲಿ ಹತನಾದಾಗ ಅಕಿಲೀಸನು ಅಪಾರವಾದ ದುಃಖಹೊಂದಿ, ಅದನ್ನು ಅಸಭ್ಯರೀತಿಯಲ್ಲಿ ವ್ಯಕ್ತಪಡಿಸುತ್ತಾನೆ. ದುಃಖಸಹಿಷ್ಣುತೆಯು ಧೀರನಿಗೆ ಸಹಜಧರ್ಮ, ಆದರೆ ಅಕಿಲೀಸನು ಎದೆ ಬಡಿದುಕೊಂಡು ತಲೆಯ ಮೇಲೆ ಮಣ್ಣು ಸುರಿದುಕೊಂಡು ದುಃಖಪರವಶನಾಗುತ್ತಾನೆ. ಅಲ್ಲದೆ ಪೆಟ್ರೋಕ್ಲೀಸನನ್ನು ಕೊಂದ ಹೆಕ್ಟರನನ್ನು ತಾನು ಕೊಂದು ಮುಯ್ಯಿ ತೀರಿಸಿಕೊಳ್ಳುವಾಗ ಅಸಭ್ಯ ಅಕ್ಷಮ್ಯರೀತಿಯಲ್ಲಿ ತನ್ನ ಆಕ್ರೋಶವನ್ನು ತೋರ್ಪಡಿಸುತ್ತಾನೆ. ಹೇಗೆಂದರೆ : ಪರಾಕ್ರಮದಿಂದ ಹೋರಾಡಿ ಮಡಿದ ಶತ್ರು ಹೆಕ್ಟರನು ಮರ್ಯಾದಾರ್ಹನು. ಅವನ ಮೃತ ಶರೀರಕ್ಕೆ ಅವಮಾನ ಮಾಡುವುದು ಉದಾತ್ತ ಧೀರರಿಗೆ ತರವಲ್ಲ. ಅಕಿಲೀಸನಾದರೋ ಈ ನೀತಿಯನ್ನು ಅಸಡ್ಡೆಮಾಡಿ ಹೆಕ್ಟರನ ಶರೀರವನ್ನು ತನ್ನ ರಥ ಚಕ್ರಕ್ಕೆ ಕಟ್ಟಿ ಟ್ರಾಯ್ ಪಟ್ಟಣದ ಕೋಟೆಯ ಸುತ್ತಲೂ ನೆಲದ ಮೇಲೆ ಎಳೆದಾಡಿಕೊಂಡು ರಥವನ್ನು ಓಡಿಸುತ್ತಾನೆ.

ದೇವತೆಗಳು ಅಚಲವಾದ ಸತ್ಯಪ್ರತಿಪಾದಕರಾಗಿರಬೇಕು. ಪ್ರಪಂಚದಲ್ಲಿ ನಡೆಯುವ ದುಷ್ಕೃತ್ಯಗಳಿಗೆ ಅವರು ಕಾರಣರಲ್ಲ; ಅವು ಮನುಷ್ಯರ ದುಷ್ಪ್ರೇರಣೆಗಳಿಂದಲೇ ಹುಟ್ಟುತ್ತವೆ; ಅವಕ್ಕೆ ದೇವತೆಗಳು ಪ್ರೇರಕರಲ್ಲ, ಉತ್ತರವಾದಿಗಳಲ್ಲ–ಎಂಬ ತತ್ತ್ವಗಳನ್ನು ಪ್ರತಿಬಿಂಬಿಸುವ ರೀತಿಯಲ್ಲಿ ದೇವತೆಗಳ ಕಥೆಗಳನ್ನು ರಚಿಸಬೇಕು. ಉತ್ತಮವಾದ ನೀತಿಧರ್ಮಗಳನ್ನು ಬೋಧಿಸುವ ಕಥೆಗಳನ್ನು ಆರಿಸಿ ವಿದ್ಯಾಗುರುಗಳು ಮಕ್ಕಳ ಮನಸ್ಸಿನ ಮುಂದೆ ಅವನ್ನು ಮಂಡಿಸಬೇಕೇ ಹೊರತು ಹೋಮರ್, ಹೆಸಿಯಡ್ ಕವಿಗಳು ಕೆಲವುವೇಳೆ ನಿರೂಪಿಸುವ ಮೇಲಿನಂಥ ಅನುಚಿತ ಕಥೆಗಳನ್ನೆಲ್ಲ ಬಹಿಷ್ಕರಿಸಿ ಬಿಡಬೇಕು.

ಸಂಗೀತದ ರಾಗಗಳಲ್ಲಿಯೂ ಹೀಗೆಯೇ. ಧೈರ್ಯವನ್ನೂ ಉತ್ಸಾಹವನ್ನೂ ಬೆಳಸುವ ರಾಗಗಳನ್ನೇ ಮಕ್ಕಳಿಗೆ ಹೇಳಿಕೊಡಬೇಕು. ಮನಸ್ಸನ್ನು ಕರಗಿಸಿ ದೃಢ ಸಂಕಲ್ಪ ಶಕ್ತಿಯನ್ನು ಉಡುಗಿಸುವ ರಾಗವುಳ್ಳ ಗೀತಗಳಿಗೆ ಪ್ರಾಶಸ್ತ್ಯಕೊಡಬಾರದು. ಸಂಗೀತದ ವಿಷಯವಾಗಿ ಪ್ಲೇಟೋ ಬಹಳ ಗಹನವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ಸುಶ್ರಾವ್ಯವಾದ ಗೀತವು ಮನಸ್ಸಿನ ಮೂಲೆಮೂಲೆಯನ್ನು ಸುಲಭವಾಗಿ ಪ್ರವೇಶಮಾಡುತ್ತದೆ. ಗೀತದ ರಾಗಗಳು ಮನಸ್ಸಿನ ಓಟ, ಪ್ರವೃತ್ತಿ, ಪ್ರತೀತಿಗಳನ್ನು ಪ್ರವೇಶಮಾಡಿಸಿ ಅವುಗಳಿಗೆ ತಮ್ಮ ಛಾಯೆಯನ್ನೇ ಕೊಡುತ್ತವೆ. ಭಾವನೆಗಳನ್ನಾವರಿಸಿ

ಧ್ಯಾನ ವಿಷಯಗಳಿಗೆ ಬಣ್ಣ ಕೊಡುತ್ತವೆ. ರಾಗಗಳಿಗೆ ಅನುಗುಣವಾದ ಪ್ರತೀತಿಗಳೂ ಭಾವಗಳೂ ಸಂಕಲ್ಪಗಳೂ ಮನಸ್ಸಿನಲ್ಲಿ ಉದ್ಭವವಾಗುತ್ತವೆ. ಚಿತ್ತವೃತ್ತಿಯ ಪರಿಷ್ಕಾರ, ಪರಿಶುದ್ಧತೆಗಳಿಗೆ ಸಂಗೀತವು ಮಹದುಪಕಾರ ಮಾಡುತ್ತದೆ. ಮಕ್ಕಳ ವಿದ್ಯಾಭ್ಯಾಸ ಕಾಲದಲ್ಲಿ ಈ ದೃಷ್ಟಿಯಿಂದ ಆರಿಸಿದ ಗೀತಗಳನ್ನು ಅವರಿಗೆ ಕಂಠಪಾಠ ಮಾಡಿಸಬೇಕು–ಎಂದು ಮುಂತಾಗಿ ಪ್ಲೇಟೋ ವಿದ್ಯಾಭ್ಯಾಸ ಸ್ವರೂಪವನ್ನು ನಿರೂಪಿಸುತ್ತಾನೆ.

ಗೀತಪದ್ಯಗಳಾಗಲಿ ಸಂಗೀತ ಕೃತಿಗಳಾಗಲಿ ಭಾವವನ್ನು ಉತ್ಕಟವಾಗಿ ಪ್ರೇರಿಸಿ ಮನಸ್ಸು ಭಾವನಾಪರವಾಗುವಂತಿರಬಾರದು. ಅಲ್ಲದೆ, ಆತ್ಮಸಂಯಮ ಪದ್ಧತಿಯನ್ನು ಬೆಳಸುವಂಥವಾಗಿರಬೇಕು. ಅತಿಭಾವೋದ್ರೇಕವು ವ್ಯವಹಾರ ಪದ್ಧತಿಯಲ್ಲಾಗಲಿ ಕಾವ್ಯ ಕಲೆಗಳ ಪ್ರಪಂಚದಲ್ಲಾಗಲಿ ಒಂದು ಮಿತಿಯನ್ನು ಮೀರುವುದು ಒಳ್ಳೆಯದಲ್ಲ–ಎಂದು ಪ್ಲೇಟೋ ಅಭಿಪ್ರಾಯಪಡುತ್ತಾನೆ.

ರಾಗಬದ್ಧವಾದ ಗೀತ ಧ್ವನಿಯು ಮನಸ್ಸನ್ನು ಹೊಕ್ಕು ಅದನ್ನು ಸ್ವಾಧೀನ ಪಡಿಸಿಕೊಳ್ಳುವಷ್ಟು ಮಟ್ಟಿಗೆ ಮನಸ್ಸಿನಮೇಲೆ ಪ್ರಭಾವ ಬೀರಲು ಇತರ ಯಾವ ಕಲೆಗೂ ಸಾಧ್ಯವಿಲ್ಲ. ಮಕ್ಕಳ ವಿದ್ಯಾಭ್ಯಾಸದಲ್ಲಿ ಮಾತ್ರವಲ್ಲದೆ ಜೀವನದಲ್ಲಿ ಕೂಡ ಸೂಕ್ಷ್ಮವಾಗಿ ಪರಿಶೀಲನೆ ಮಾಡಿದರೆ ಈ ತತ್ತ್ವವು ಸ್ಪಷ್ಟವಾಗಿ ಕಂಡುಬರುವುದು. ರಾಗಾಭಿರುಚಿಯು ಜನರಲ್ಲಿ ಪರಿವರ್ತನೆಯಾದರೆ ಅವರ ರಾಜ್ಯಪದ್ಧತಿಯಲ್ಲಿಯೂ ಪರಿವರ್ತನೆ ಸ್ವತಃಸಿದ್ಧ ಎಂದು ಹೇಳುವಷ್ಟು ದೂರ ಹೋಗುತ್ತದೆ. ಪ್ಲೇಟೋವಿನ ಅಭಿಪ್ರಾಯ.

ಕಾವ್ಯ ಗೀತಗಳಂತೆಯೇ ಇತರ ಕಲೆಗಳೂ ವಿದ್ಯಾಭ್ಯಾಸಕ್ಕೆ ಅನುವಾಗುತ್ತವೆ. ಚಿತ್ರಕಲೆ ಶಿಲ್ಪಕಲೆಗಳು ಕೂಡ ಮನಸ್ಸಿನ ಬೆಳೆವಣಿಗೆಗೂ ಉತ್ತಮ ಸಂಸ್ಕಾರಕ್ಕೂ ಆವಶ್ಯಕ.

ಮಕ್ಕಳ ಮನಸ್ಸು ಸುಂದರವಾದ, ಆರೋಗ್ಯಕರವಾದ ಮತ್ತು ಆಹ್ಲಾದಕರವಾದ ವಾತಾವರಣದಲ್ಲಿ ಬೆಳಯಬೇಕು. ಈ ವಾತಾವರಣದಲ್ಲಿ ಪ್ರಕೃತಿ ಸೌಂದರ್ಯ, ಮನಸ್ಸಿಗೆ ಗೋಚರವಾದ ಚೈತನ್ಯ ಪ್ರಪಂಚದ ಸೌಂದರ್ಯ ಎಂದು ಎರಡು ವಿಧ. ಇವೆರಡೂ ವಿದ್ಯಾವಾತಾವರಣದಲ್ಲಿ ಸಂಮ್ಮೇಳನಹೊಂದಿ ವಿದ್ಯಾರ್ಥಿಗಳ ಮನಸ್ಸಂಸ್ಕಾರಕ್ಕೆ ಸಹಾಯವಾಗಬೇಕು. ವಿದ್ಯಾರ್ಥಿಗಳ ಧರ್ಮಬುದ್ಧಿಯು ಪರಿಶುದ್ಧವಾಗಿ, ಸೂಕ್ಷ್ಮವಾಗಿ ವಿಕಾಸಗೊಳ್ಳುವಂತೆಯೇ ಅವರ ರಸಾಭಿರುಚಿಯೂ ಶುದ್ಧವಾಗುತ್ತಿರಬೇಕು. ಇವೆರಡೂ "ಸ್ತತ್ತ್ವೋದ್ರೇಕ"ಕ್ಕೆ ಪೋಷಕವಾಗುತ್ತವೆ. ಹೀಗೆ ಬುದ್ಧಿ ಬಲ ಮತ್ತು ರಸಜ್ಞತೆ ಇವೆರಡನ್ನೂ ವಿದ್ಯೆಯಲ್ಲಿ ಮೇಳನ ಮಾಡಬೇಕೆಂದು ಪ್ರತಿಪಾದಿಸುವುದು ಗ್ರೀಕ್ ಸಂಸ್ಕೃತಿಯ ಸಂಕೇತವೆನ್ನಬಹುದು. ಇನ್ನಾವ ಸಂಸ್ಕೃತಿಯೂ ಸೌಂದರ್ಯ ಮತ್ತು ಸತ್ಯಗಳನ್ನು ಈ ರೀತಿ ಸಮತೂಕವಾಗಿ ಮೇಳನ ಮಾಡಿದಂತೆ ತೋರುವುದಿಲ್ಲ. ಪ್ರಕೃತಿ ಕಲೆಗಳ ಸೌಂದರ್ಯವು ಕಿವಿಕಣ್ಣುಗಳ ಮೂಲಕ ಸೂರ್ಯ

ರಶ್ಮಿಯಂತೆ ಮನಸ್ಸಿನೊಳಗೆ ಪ್ರವಹಿಸಿ, ವಿದ್ಯಾರ್ಥಿಗಳಿಗೆ ತಿಳಿಯದೆಯೇ ಅವರ ಆತ್ಮವನ್ನು ಬುದ್ಧಿ (ಅಥವಾ ಸತ್ಯದ) ಸೌಂದರ್ಯಗಳೊಡನೆ ಮೇಳನ ಮಾಡುತ್ತದೆ. ಸೌಂದರ್ಯಾನುಭವದಲ್ಲಿ ಉದ್ರೇಕವಾದ ಆನಂದಪೂರಿತವಾದ ಸಾಮರಸ್ಯವು ಜ್ಞಾನದೃಷ್ಟಿಯಲ್ಲಿಯೂ ಪ್ರತಿಧ್ವನಿತವಾಗುವ ಸಂಭವವಿರುತ್ತದೆ. ಎರಡು ಅನುಭವಗಳಲ್ಲಿಯೂ ಒಂದೇ ಆತ್ಮನು ಪ್ರಮಾತೃವಾದ್ದರಿಂದ.

ಹೀಗೆ ಪ್ಲೇಟೋ ಕಾವ್ಯಗೀತ ಕಲೆಗಳ ಮಹತ್ತ್ವವನ್ನು ವರ್ಣಿಸಿದರೂ, ಅವನಿಗೆ ಕಾವ್ಯಕಲೆಗಳ ಮೇಲೆ ಅವಿಶ್ವಾಸಪೂರ್ಣವಾದ ವಕ್ರದೃಷ್ಟಿಯೂ ಇತ್ತು. ಇದು ಎಲ್ಲರಿಗೂ ಆಶ್ಚರ್ಯವುಂಟುಮಾಡಿದೆ. ಪ್ಲೇಟೋ ಕಾವ್ಯರಚನೆಗೆ ಬೇಕಾದ ಮನೋಧರ್ಮವನ್ನೂ ಭಾಷಾ ಸಾರ್ವಭೌಮತ್ವವನ್ನೂ ಪಡೆದಿದ್ದನು ; ವಿಷಯವನ್ನು ಹೃದಯಂಗಮವಾಗಿ ಸಂವಾದರೂಪದಲ್ಲಿ ಮಂಡಿಸುವ ನಾಟಕಕಾರನಿಗೆ ಸದೃಶವಾದ ಪಾತ್ರರಚನಕೌಶಲ್ಯವು ಸಂಭಾಷಣ ಚಾತುರ್ಯವೂ ಅವನಿಗಿತ್ತು. ಈ ವಿಷಯ ನಿರ್ವಿವಾದವಾಗಿದೆ. ಆದರೂ ಹೋಮರನಂಥ, ಕವಿಗಳು ಕೂಡ ತನ್ನ ಆದರ್ಶರಾಜ್ಯದಲ್ಲಿ ಇರಕೂಡದೆಂದು 'ರಿಪಬ್ಲಿಕ್' ಗ್ರಂಥದಲ್ಲಿ ನಿರೂಪಣೆ ಮಾಡುತ್ತಾನೆ. ಕಾವ್ಯಕ್ಕೂ ತತ್ತ್ವಶಾಸ್ತ್ರಕ್ಕೂ ಪ್ರಾಚೀನ ಕಾಲದಿಂದ ಒಂದು ದೊಡ್ಡ ವಿವಾದ ನಡೆದುಕೊಂಡು ಬಂದಿದೆ ಎಂದು ಸಾರಿ, ಪ್ಲೇಟೋ ತಾನು ತತ್ತ್ವಶಾಸ್ತ್ರದ ಕಡೆ ತೀರ್ಪುಕೊಡುತ್ತಾನೆ.

ಪ್ಲೇಟೋವಿನ ಈ ಖಂಡನೆಗೆ ಹೋಮರ್ ಮುಂತಾದ ಕವಿಗಳು ಉಪಯೋಗಿಸುವ ಕಥಾವಸ್ತುವೇ ಮುಖ್ಯಕಾರಣ. ಅವರು ಕಥಾನಿರೂಪಣೆಯಲ್ಲಿ ಧರ್ಮತತ್ತ್ವಗಳ ಕಡೆಗೆ ಸಾಕಾದಷ್ಟು ಗಮನ ಕೊಡಲಿಲ್ಲವೆಂಬುದು ಮೊದಲನೆಯ ಆಕ್ಷೇಪಣೆ. ಈಗಿನಕಾಲದಲ್ಲಿ ನಾವೆಲ್ ಮತ್ತು ಸಿನಿಮ ಕಥೆಗಳಮೇಲೆಯೂ ಕೆಲವು ವಿಚಾರಪರರು ಇದೇ ರೀತಿಯ ಆಕ್ಷೇಪಣೆಗಳನ್ನು ಹೂಡುತ್ತಾರೆ. ಈ ಚರ್ಚೆಯು ಒಂದಲ್ಲ ಒಂದು ರೀತಿಯಲ್ಲಿ ಹಿಂದಿನಿಂದಲೂ ನಡೆದುಬಂದಿದೆ. ಫಲಿತಾಂಶ ವೇನೆಂದರೆ, ಕಾವ್ಯಕಲೆಗಳು ಸಾಕ್ಷಾತ್ತಾಗಿ ಉಪದೇಶ ಮಾಡುವುದಕ್ಕೆ ಹೊರಟರೆ, ಅವು ತಮ್ಮ ಆತ್ಮಸ್ವಭಾವವನ್ನು ಕಳೆದುಕೊಂಡಂತೆಯೇ ಸರಿ. ಅವುಗಳ ಸ್ವಭಾವಿಕವಾದ ಧ್ಯೇಯ ಮನೋರಂಜನರೂಪವಾದ ಸೌಂದರ್ಯ ಪ್ರತಿಬಿಂಬನೆ, ಸುಂದರ ಕೃತಿನಿರ್ಮಾಣ, ಇವುಗಳಲ್ಲಿ ಪ್ರತಿಬಿಂಬಿತವಾದ್ದು ಪ್ರಪಂಚದ ಸತ್ಯವಾದ್ದರಿಂದ, ಕಾವ್ಯಕಲೆಗಳಲ್ಲಿ ಸತ್ಯವೂ ಕಥಾವಸ್ತುವಿನ ರೂಪದಲ್ಲಿಯೂ ಅದರ ಪಾತ್ರ ನಿರೂಪಣ ರೂಪದಲ್ಲಿಯೂ ಸೇರಿಕೊಂಡೇ ಇರುತ್ತದೆ. ಉತ್ತಮ ಕಾವ್ಯಕಲೆಗಳು ಪರಿಣಾಮದಲ್ಲಿ ಆತ್ಮಸಂಸ್ಕಾರಕಾರ್ಯವನ್ನೆಸಗುವುವು–ಎಂದು ಮುಂತಾಗಿ ಈ ವಿಷಯದಲ್ಲಿ ಪ್ರಾಜ್ಞರಲ್ಲಿ ಸಿದ್ಧಾಂತ ರೂಪುಗೊಳ್ಳುತ್ತಿದೆ. ಈ ಅಂಶವನ್ನು ಪ್ಲೇಟೋ ಕೂಡ ಒಪ್ಪಿಕೊಂಡಿರುವುದು ರಿಪಬ್ಲಿಕ್ ಗ್ರಂಥದಲ್ಲಿಯೇ ಕಂಡುಬರುತ್ತದೆ. 'ಸಿಂಪೋಸಿಯಂ' ಎಂಬ ಸಂವಾದದಲ್ಲಿ ಇನ್ನೂ ಸ್ಪಷ್ಟವಾಗಿ ಕಲೆಯ ಮಹಾತ್ಮೆಯನ್ನು ಪ್ಲೇಟೋ ಪ್ರಶಂಸಿಸುತ್ತಾನೆ.

ಕಾವ್ಯ ನಾಟಕಗಳ ವಿಷಯದಲ್ಲಿ ಖಂಡನಾದೃಷ್ಟಿಯು ಪ್ಲೇಟೋವಿನ ಮನಸ್ಸಿನಲ್ಲಿ ಅಷ್ಟು ಪ್ರಬಲವಾಗುವುದಕ್ಕೆ ತತ್ತ್ವದೃಷ್ಟಿಯಿಂದ ಮತ್ತೊಂದು ಕಾರಣವಿದೆ. ಪ್ಲೇಟೋವಿನ

ತತ್ತ್ವವು ಬಹುಮಟ್ಟಿಗೆ ವೇದಾಂತವನ್ನು ಹೋಲುತ್ತದೆ : ವ್ಯವಹಾರದಲ್ಲಿ ವಸ್ತುಗಳು ಅವುಗಳ ಆತ್ಯಂತಿಕ ಸತ್ಯರೂಪದಲ್ಲಿ ನಮಗೆ ಕಾಣುವುದಿಲ್ಲ; ನಮ್ಮ ಬುದ್ಧಿಗೆ ಗೋಚರವಾಗುವುದಿಲ್ಲ. ನಮ್ಮ ಇಂದ್ರಿಯಗಳೂ ಬುದ್ಧಿಯೂ ಬೇರೆ ವಿಧವಾಗಿ ಸೃಷ್ಟಿಸಲ್ಪಟ್ಟಿದ್ದರೆ, ಪ್ರಪಂಚವು ನಮಗೆ ಬೇರೆ ರೀತಿಯಲ್ಲಿ ಕಾಣುತ್ತಿತ್ತು. ಈಗ ನಮಗೆ ಗೋಚರವಾಗುತ್ತಿರುವುದು ಒಂದು ಬಗೆಯ ಮಾಯಾ ಪ್ರಪಂಚ. ನಮ್ಮ ಜ್ಞಾನದೃಷ್ಟಿಯು ಪರಿಪಕ್ವವಾಗಿ ನಮ್ಮ ಅಜ್ಞಾನವು ಹರಿದುಹೊದರೆ, ಪ್ರಪಂಚವು ಅದರ ಆಂತರಿಕ ಸ್ವಭಾವಕ್ಕೆ ಅನುಗುಣವಾಗಿ ಬೇರೆ ರೀತಿಯಲ್ಲಿ ನಮಗೆ ಕಾಣುತ್ತದೆ. ಈ ತೋರಿಕೆಯ ಪ್ರಪಂಚಕ್ಕೂ ವಾಸ್ತವಪ್ರಪಂಚಕ್ಕೂ ಬಹಳ ಅಂತರವಿದೆ. ತೋರಿಕೆಯ ಪ್ರಪಂಚವು ಅಪೂರ್ಣ, ಪ್ರಾಕೃತ, ಅಸತ್ಯ ಮಿಶ್ರವಾದ್ದು, ಕುರೂಪ ಮಿಶ್ರವಾದ ಸೌಂದರ್ಯವುಳ್ಳದ್ದು. ವಾಸ್ತವಪ್ರಪಂಚವು ಪೂರ್ಣಚೈತನ್ಯಸ್ವರೂಪ, ಸತ್ಯ ಮತ್ತು ಸುಂದರವಾದ್ದು.

ಕಾವ್ಯ ನಾಟಕ ಕಲೆಗಳು ಅಸತ್ಯ ಮಿಶ್ರವಾಧ ತೋರಿಕೆಯ ಪ್ರಪಂಚವನ್ನೇ ಪ್ರತಿಬಿಂಬಿಸುತ್ತವೆ. ಆದ್ದರಿಂದ, ಅವುಗಳ ಸಹಾಯದಿಂದ ನಾವು ಹೊರಗಿನ ದೃಶ್ಯಪ್ರಪಂಚದ ತೋರಿಕೆಯನ್ನು ದಾಟಿ, ಅದರ ಹಿಂದಿನ ಸತ್ಯಪ್ರಪಂಚವನ್ನು ಕಾಣಲಾರೆವು. ಸತ್ಯಕ್ಕೂ ಕಾವ್ಯದ ಅನುಕರಣ ಪ್ರಪಂಚಕ್ಕೂ ಮಧ್ಯೆ ಎರಡು ತೆರೆಗಳು ಅಡ್ಡವಾಗಿವೆ. ಇಂಥ ಸತ್ಯ ಪ್ರತಿಬಿಂಬನೆಯಿಂದ ಆತ್ಮದ ಏಳಿಗೆಗೆ ಏನೂ ಪ್ರಯೋಜನವಾಗುವುದಿಲ್ಲವೆಂಬುದು ತತ್ತ್ವದ ದೃಷ್ಟಿಯಿಂದ ಪ್ಲೇಟೋ ಹೂಡಿದ ಆಕ್ಷೇಪಣೆ.

ಇದು ಕೂಡ ಪ್ಲೇಟೋವಿನ ಅಂತಿಮ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ತೋರಿಕೆಯ ಪ್ರಪಂಚವೂ ವಾಸ್ತವ ಪ್ರಪಂಚವೂ ಬೇರೆ ಬೇರೆಯಲ್ಲ ; ತೋರಿಕೆಯು ಸತ್ಯದ ತೋರಿಕೆಯೇ. ನಮ್ಮ ಅಜ್ಞಾನವು ಹರಿದುಹೋದ ಮೇಲೆ ಕಾಣುವುದು ಒಂದೇ ಸತ್ಯಪ್ರಪಂಚ ; ಆಗ ಮಾಯಾ ಪ್ರಪಂದವು ಕಣ್ಮರೆಯಾಗುತ್ತದೆ. ಅಲ್ಲದೆ ಕಾವ್ಯ, ನಾಟಕ, ಗಾನ, ಚಿತ್ರ, ಶಿಲ್ಪಗಳಲ್ಲಿ ಮೂರ್ತಿಮತ್ತಾಗಿ ತೋರುವುದು ಸತ್ಯಪ್ರಪಂಚದ ಆತ್ಮಸ್ವರೂಪವೇ. ಕವಿಯೂ ಕಲೋಪಾಸಕನೂ ಸೃಷ್ಟಿಕರ್ತನಂತೆ ; ನಾವು ಕಂಡ ಸತ್ಯವನ್ನು ಅವರು ತಮ್ಮ ಕೃತಿಯಲ್ಲಿ ರೂಪಿಸುತ್ತಾರೆ. ಕಲೆಯೆಂದರೆ ಸತ್ಯವನ್ನು ಹೊರಸೂಸುವ, ಸತ್ಯಕ್ಕೆ ಆಕಾರಕೊಡುವ ರೂಪ. ಸತ್ಯ ಸೌಂದರ್ಯಗಳು ಪ್ರಪಂಚದ ಸ್ವರೂಪದಲ್ಲಿಯೂ ಕವಿ ಕಲೆಗಾರನ ಸ್ವರೂಪದಲ್ಲಿಯೂ ಸಂಮೇಳನ ವಾಗಿರುತ್ತವೆ. ಹೊರಗಿನ ಸಂಮೇಳನ ಒಳಗಿನ ಸಂಮೇಳನವನ್ನು ಪ್ರತಿಧ್ವನಿಸುತ್ತದೆ. ಈ ಪ್ರತಿಧ್ವನಿಯ ಅನುಭವವು ಆನಂದದಾಯಕವಾಗಿರುತ್ತದೆ. ಈ ಆನಂಧಪೂರ್ಣವಾದ ಅನುಭವಸಾರವನ್ನು ಅಭಿವ್ಯಕ್ತಗೊಳಿಸುವ ಕವಿಕರ್ಮದಿಂದ ನಿರ್ಮಿತವಾದ ರೂಪವಿಶೇಷವೇ ಕಲೆ. ಇದೇ ಪ್ಲೇಟೋವಿನ ಸಿದ್ಧಾಂತಸಾರ. ಈ ಸಿದ್ಧಾಂತದಲ್ಲಿ ಮೊದಲು ತತ್ತ್ವ ಮತ್ತು ಕಲೆಗಳಿಗೆ ಪರಸ್ಪರ ತೋರಿದ ವಿರೋಧವು ಮಾಯವಾಗುತ್ತದೆ.

ಇದುವರೆಗೆ ಮಾನಸಿಕ ವಿದ್ಯಾತತ್ತ್ವಗಳನ್ನು ಕುರಿತು ಪ್ರಸ್ತಾವಿಸಿದ್ದಾಯಿತು,

ಮಾನಸಿಕ ಶಿಕ್ಷಣದಷ್ಟೇ ಪ್ರಾಶಸ್ತ್ಯವನ್ನು ಪ್ಲೇಟೋಶಾರೀರಕ ಶಿಕ್ಷಣಕ್ಕೂ ಕೊಡುತ್ತಾನೆ. ಲಕ್ಷಣವಾದ ದೇಹದಲ್ಲಿ ಲಕ್ಷಣವಾದ ಮನಸ್ಸು, ಅಥವಾ ಸುಂದರವಾದ ದೇಹದಲ್ಲಿ ಸುಂದರವಾದ ಮನಸ್ಸು–ಎಂಬ ಆದರ್ಶವು ಪುರಾತನ ಗ್ರೀಕರ ಕಾಲದಿಂದಲೂ ಪಾಶ್ಚಾತ್ಯರಲ್ಲಿ ಪ್ರಸಿದ್ಧವಾಗಿದೆ.

ದೇಹಕ್ಕೂ ಮನಸ್ಸಿಗೂ ನಿಕಟವಾದ ಸಂಬಂಧವಿದೆ. ಚೀಲದಲ್ಲಿ ಹಣವಿರುವಂತೆಯಾಗಲಿ ಮನೆಯಲ್ಲಿ ಜನರು ವಾಸಿಸುವಂತೆಯಾಗಲಿ ದೇಹದಲ್ಲಿ ಮನಸ್ಸು ಅದಕ್ಕೆ ಸಮೀಪ ಸಂಬಂಧವಿಲ್ಲದೆ ವಾಸಿಸುತ್ತದೆ ಎಂಬುದು ತಪ್ಪು. ಮನಸ್ಸಿನ ವ್ಯಾಪಾರಕ್ಕೆಲ್ಲ ದೇಹದ ಸಮಗ್ರ ಶಕ್ತಿ ಅವಶ್ಯಕ.

ಶರೀರ ಶಿಕ್ಷಣದ ವಿಷಯವಾಗಿಯೂ ಪ್ಲೇಟೋ ಅನೇಕ ಸೂಚನೆಗಳನ್ನು ಕೊಡುತ್ತಾನೆ. ಈ ಶಿಕ್ಷಣ ಕಾರ್ಯವು ಗರ್ಭದಲ್ಲಿ ಮಗುವಿರುವಾಗಲೇ ಪ್ರಾರಂಭವಾಗುಬೇಕೆಂದು ಅವನು ಹೇಳುತ್ತಾನೆ, ತಾಯಿ ತನ್ನ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕೆಂದು ಸಲಹೆ ಕೊಡುತ್ತಾನೆ. ಅತಿ ಆಯಾಸವಾಗದಂತೆ ತಾಯಿ ಕೂಡ ಕೊಂಚಮಟ್ಟಿಗೆ ದೇಹಶ್ರಮ ಪಡಬೇಕು. ಒಳ್ಳೆಯ ಗಾಳಿಯಲ್ಲಿ ಸ್ವಲ್ಪ ಓಡಾಡಬೇಕು. ಮಗು ಹುಟ್ಟಿದ ಮೇಲೆ ಅದು ನಡಗೆ ಕಲಿಯುವತನಕ ತಾಯಿಯೂ ದಾದಿಯೂ ಮಗುವನ್ನು ಸಮುದ್ರದಮೇಲೆ ಪ್ರಯಾಣ ಮಾಡುವ ಹಡಗು ಓಲಾಡುವಂತೆ, ಮಗುವಿಗೆ ಗಾಬರಿಯಾಗದ ಹಾಗೆ ತೊಟ್ಟಿಲಿನಲ್ಲಿ ತೂಗಬೇಕು. ಮಗು ಓಡಾಡುವುದಕ್ಕೆ ಪ್ರಾರಂಭ ಮಾಡಿದಮೇಲೆ ಅದು ಮೈಕೈಗಳನ್ನು ಸ್ವೇಚ್ಛೆಯಾಗಿ ಚಲನ ಮಾಡುವುದರಲ್ಲಿ ಆಸಕ್ತಿ ತೋರಿಸುತ್ತದೆ. ಈ ಕಾಲದಿಂದ ಮಕ್ಕಳಿಗೆ ಅವರ ವ್ಯಾಯಾಮದಲ್ಲಿ ಗೀತಬದ್ಧವಾದ ಚಲನವಲನಗಳನ್ನು (Musical movements) ಸೇರಿಸುವುದರಲ್ಲಿ ಪ್ರಯೋಜನವಿದೆ. ಶರೀರದ ಚಲನೆಗಳಲ್ಲಿ ಅಂಗವಿನ್ಯಾಸ, ಸಾಧಾರಣವಾದ ಓಡಾಟ, ನಿಲುವಣೆ(ಭಂಗಿ), ಇವುಗಳಲ್ಲಿ–ಘನ, ಗಾಂಭೀರ್ಯ, ಸೊಗಸು, ಒಂದುಬಗೆಯ ನಾಜೂಕು, ಸಮರಸ ಇವನ್ನು ಚಿಕ್ಕಂದಿನಿಂದಲೂ ವ್ಯಾಯಾಮಗಳ ಮೂಲಕ ಅಭಿವ್ಯಕ್ತವಾಗುವ ಹಾಗೆ ಮಾಡುವುದು ಶರೀರ ಶಿಕ್ಷಣದ ಮೊದಲನೆಯ ಉದ್ದೇಶ.

ಎರಡನೆಯ ಉದ್ದೇಶ ಆರೋಗ್ಯಭಾಗ್ಯ, ಅಂಗಪಾಟವ. ಸರ್ಕಸಿನವರಂತೆ ಅಂಗಗ್ಳನ್ನು ರಬ್ಬರಿನಹಾಗೆ ಮಾಡುವ ಗೊಡವೆಗೇನೂ ಹೋಗಬೇಕಾಗಿಲ್ಲ. ತಮ್ಮ ಮೈ ತಮಗೆ ಸ್ವಾಧೀನವಾಗಿರಬೇಕಾದ್ದು ಮುಖ್ಯ.

ಶರೀರ ವ್ಯಾಯಾಮದಿಂದ ಮನಸ್ಸಿನ ಶಕ್ತಿಯನ್ನೂ ಮನಸ್ಸಿಗೆ ಶರೀರದ ಮೇಲಣ ಹತೋಟಿಯನ್ನೂ ಕುದುರಿಸುವುದು ಮತ್ತೂ ಮುಖ್ಯವಾದ ಉದ್ದೇಶ. ಕುಸ್ತಿಯ ಜಟ್ಟಿಗಳ ಹಾಗೆ ಕೇವಲ ಮಾಂಸ ಖಂಡಗಳನ್ನು ಬೆಳಸುವುದು ಅಷ್ಟು ಪ್ರಯೋಜನಕಾರಿಯಲ್ಲ.

ದೇಹದಾರ್ಢ್ಯದೊಡನೆ ಆಯಾಸ, ಹಸಿವು ಬಾಯಾರಿಕೆಗಳನ್ನು ಕೆಲವುಕಾಲ

ಸಹಿಸುವ ಶಕ್ತಿಯೂ ವ್ಯಾಯಾಮಕ್ರಮದ ಆಶಯವಾಗಿರಬೇಕು-ಎಂದು ಮುಂತಾಗಿ ಪ್ಲೇಟೋ ಬರೆಯುತ್ತಾನೆ. ಶರೀರ ಶಿಕ್ಷಣವು ಮನಶ್ಶಿಕ್ಷಣದ ಅಂಗವಾಗಿ, ಶರೀರವು ಮನಸ್ಸಿನ ಇಂಗಿತವನ್ನು ಮಿಂಚಿನಂತೆ ಗ್ರಹಿಸಿ. ಅದರ ಪ್ರಕಾರ ನಡೆದುಕೊಳ್ಳುವ ಅಭ್ಯಾಸವು ಸರಿಯಾದ ವ್ಯಾಯಾಮದ ಮೂಲಕ ಬಲಪಡುತ್ತದೆ.

ಈ ಸಂದರ್ಭದಲ್ಲಿ ಆರೋಗ್ಯಶಾಸ್ತ್ರದ ವಿಷಯವಾಗಿಯೂ ಸ್ವಲ್ಪ ಪ್ರತಿಪಾದನೆ ಮಾಡುತ್ತಾನೆ. ಅವನ ಕಾಲದಲ್ಲಿ ಅಥೆನ್ಸ್ ನಗರವು ಚಕ್ರಾಧಿಪತ್ಯವನ್ನು ಕಟ್ಟಿ, ವ್ಯಾಪಾರದಿಂದಲೂ ನೌಕಾಬಲದಿಂದಲೂ ಸಂಪಾದಿಸಿದ ಏಳಿಗೆಯ ಸ್ಥಿತಿಯಿಂದ ಆಗತಾನೆ ಬಲಗುಂದುತ್ತ ಬರುತ್ತಿತ್ತು. ಜನರಲ್ಲಿ ಸೌಖ್ಯಾಭಿಲಾಷೆಯೂ ಸುಖಸಾಮಗ್ರಿಗಳೂ ವಿಶೇಷವಾಗಿ ಬೆಳೆದಿದ್ದವು. ಅನೇಕ ಬಗೆಯ ದಿವ್ಯ ಭಕ್ಷ್ಯ ಭೋಜ್ಯಗಳಿಂದ ಕೂಡಿದ ಊಟ ಉಪಚಾರಗಳೂ, ಅನೇಕ ವಿಧ ಮಿಠಾಯಿ ಮೊದಲಾದ ಸಿಹಿ ತಿಂಡಿಗಳೂ, ಅನೇಕ ತೆರದ ದ್ರಾಕ್ಷಾರಸ ಮುಂತಾದ ಪಾನಗಳೂ ಧನಿಕರಲ್ಲಿ ಪ್ರಾಶಸ್ತ್ಯ ಪಡೆದಿದ್ದವು. ಈ ವಿಧದ ವಿಷಯಲಾಲಸೆಯನ್ನು ಪ್ಲೇಟೋ ತೀವ್ರವಾಗಿ ಖಂಡಿಸುತ್ತಾನೆ. ಇಂಥ ಅತಿಯಾದ ತಿಂಡಿತೀರ್ಥಗಳ ಅಭ್ಯಾಸದಿಂದ ಜನರಲ್ಲಿ ಅನಾರೋಗ್ಯ ಹೆಚ್ಚುತ್ತಿದೆಯೆಂದೂ, ರೋಗಗಳನ್ನು ನಿವಾರಿಸುವುದಕ್ಕೆಂದು ವೈದ್ಯರ ಸಂಖ್ಯೆಯೂ ಪ್ರಾಬಲ್ಯವೂ ಹೆಚ್ಚುತ್ತಿದೆಯೆಂದೂ, ಇದೆಲ್ಲದರ ಫಲವಾಗಿ ಜನರು ತಮ್ಮ ಪೂರ್ವದ ದೇಹದಾರ್ಢ್ಯವನ್ನೂ ಕಷ್ಟ ಸಹಿಷ್ಣುತೆಯನ್ನೂ ಕಳೆದುಕೊಳ್ಳುತ್ತಿರುವರೆಂದೂ ಆಕ್ಷೇಪಿಸುತ್ತಾನೆ, ಮಿತವಾಗಿಯೂ ಹೆಚ್ಚು ವೈವಿಧ್ಯವಿಲ್ಲದೆಯೂ ಇರುವ ಸಾಧಾರಣ ಆಹಾರಗಳೇ ಆರೋಗ್ಯಕ್ಕೆ ಸಾಕು-ಎಂದೂ, ಬಂದ ವ್ಯಾಧಿಗಳಿಗೆ ವಿಪರೀತವಾಗಿ ಔಷಧ ಸೇವನೆಯು ಅನಾವಶ್ಯಕವೆಂದೂ ಪ್ಲೇಟೋ ಸೂಚಿಸುತ್ತಾನೆ. ಕೆಲವರು ತಮ್ಮ ರೋಗಗಳು ಬೇಗನೆ ವಾಸಿಯಾಗದಿರಲೆಂದು ಅಪೇಕ್ಷಿಸುತ್ತಾರೆ. ನಂಟರಿಷ್ಟರಿಂದ ಉಪಚಾರ ಮಾಡಿಸಿಕೊಳ್ಳುತ್ತಾ ಕೆಲಸಕಾರ್ಯಗಳ ಗೋಜಿನಿಂದ ತಪ್ಪಿಸಿಕೊಂಡು ನಿಶ್ಚಿಂತೆಯಾಗಿರಬಹುದೆಂಬ ಆಸೆಯೇ ಇವಕ್ಕೆ ಮೂಲಕಾರಣವೆಂದು ಖಂಡಿಸುತ್ತಾನೆ.

ದೇಹದಾರ್ಢ್ಯ, ಅಂಗಪಾಟವ, ಸಮರಸವನ್ನು ಸೂಸುವ ನಡಗೆ ನಿಲುವು ಶರೀರವಿನ್ಯಾಸ, ಮನಸ್ಸಿಗೆ ಸಂಪೂರ್ಣವಾದ ಅಧೀನತೆ; ಒಟ್ಟಿನಲ್ಲಿ ಮನುಷ್ಯನ ಆತ್ಮಸ್ವರೂಪಕ್ಕೆ ಅನುಕೂಲವಾಗಿ ವರ್ತಿಸುವ ಮತ್ತು ಅದರ ಅಭಿವ್ಯಕ್ತಿಗೆ ಸಹಾಯಕವಾಗಿರುವ ದೇಹಸ್ಥಿತಿಯೇ ಶರೀರ ಶಿಕ್ಷಣದ ಮುಖ್ಯ ಲಕ್ಷಣ. ಈ ಫಲವು ವಿದ್ಯಾಭ್ಯಾಸದ ಮೊದಲನೆಯ ಹೆಜ್ಜೆಯಿಂದಲೂ ಮಾನಸಿಕ ಶಿಕ್ಷಣಕ್ಕೆ ಹೊಂದಿಕೊಂಡೇ ಸಿದ್ಧಿಸಬೇಕು, ಶರೀರಸಂಪತ್ತೇ ಸ್ವಯಂ ಪ್ರಯೋಜನವಲ್ಲ, ಮಾನಸಿಕ ಸಂಪತ್ತಿಗೆ ಅದು ಅಂಗಸ್ಥಾನದಲ್ಲಿದ್ದು ಅದಕ್ಕೆ ಪೋಷಕವಾಗಿರಬೇಕು. ದೇಹ ಮನಸ್ಸುಗಳ ಈ ಸಮರಸವೇ ಬಾಲ್ಯವಿದ್ಯಾಭ್ಯಾಸದ ಉದ್ದೇಶ.

ವಿದ್ಯಾರ್ಥಿಗಳು (ಬಾಲಕರೂ ಬಾಲಿಕೆಯರೂ) ಯೌವನವನ್ನು ಸಮೀಪಿಸುವ ಸಮಯದಿಂದ, ಅವರಿಗೆ ಇನ್ನೂ ಪ್ರೌಢವಾದ ವಿದ್ಯಾಭ್ಯಾಸವು ಪ್ರಾರಂಭವಾಗಬೇಕು.

ಆಗ ಅವರು ವಿಜ್ಞಾನ ಶಾಸ್ತ್ರಗಳನ್ನು ಪ್ರವೇಶಿಸಬೇಕಾಗಿದೆ. ಅಂಕಗಣಿತ, ರೇಖಾಗಣಿತ, ನಕ್ಷತ್ರಶಾಸ್ತ್ರ (ಖಗೋಳಶಾಸ್ತ್ರ) – ಇವುಗಳ ಮೂಲಕ ಯುವಕ ಯುವತಿಯರ ಬುದ್ಧಿಯು ಬಲಗೊಳ್ಳಬೇಕಾಗಿದೆ. ಗ್ರೀಕರ ಕಾಲದಲ್ಲಿ ಈ ಶಾಸ್ತ್ರಗಳು ಪ್ರಬಲವಾಗುತ್ತಿದ್ದವು. ಈ ಶಾಸ್ತ್ರಗಳಲ್ಲಿ ಅಸಾಧಾರಣ ಪರಿಶ್ರಮವುಳ್ಳವರೂ, ಇವುಗಳಲ್ಲಿ ಹೊಸ ತತ್ತ್ವಗಳನ್ನು ಕಂಡುಹಿಡಿಯುವವರೂ ಬಹಳ ಉತ್ಸಾಹದಿಂದ ತತ್ತ್ವಾನ್ವೇಷಣ ಮಾಡುತ್ತಿದ್ದರು. ಇವರಲ್ಲಿ ಪ್ಲೇಟೋವೂ ಒಬ್ಬ. ಅಂಕಗಣಿತ, ರೇಖಾಗಣಿತ, ಖಗೋಳಶಾಸ್ತ್ರ, ಗ್ರಹನಕ್ಷತ್ರಗಳ ಪರಸ್ಪರಾಪೇಕ್ಷಕವಾದ (–ಸಾಪೇಕ್ಷ) ಚಲನವಲನ–ಇವುಗಳಲ್ಲಿ ಪ್ಲೇಟೋವಿಗೆ ಅಸಾಧಾರಣವಾದ, ಪ್ರತಿಭಾಯುಕ್ತವಾದ ಶಕ್ತ್ಯುತ್ಸಾಹಗಳಿದ್ದವು. ಇವನು ತನ್ನ ನಲವತ್ತನೆಯ ವಯಸ್ಸಿನಲ್ಲಿ ಸ್ಥಾಪಿಸಿದ ವಿದ್ಯಾನಿಲಯದ (Academy) ಹೆಬ್ಬಾಗಿಲ ಮೇಲೆ, "ಗಣಿತ ತಿಳಿಯದವರಿಗೆ ಇಲ್ಲಿ ಪ್ರವೇಶವಿಲ್ಲ" ಎಂದು ಬರಸಿದ್ದನಂತೆ ! ತತ್ತ್ವಶಾಸ್ತ್ರವೆಂದರೆ ಪ್ಲೇಟೋವಿನ ಭಾಗಕ್ಕೆ ಕೇವಲ ಮನೋವ್ಯಾಪಾರವಲ್ಲ ; ಅದರ ಜೊತೆಗೆ ಗ್ರಹ ನಕ್ಷತ್ರಗಳೇ ಮೊದಲಾದ ಬಾಹ್ಯ ಪ್ರಪಂಚದ ನಿಯಮಗಳನ್ನು ಕುರಿತು ಶೋಧನೆ ಪರೀಕ್ಷೆಗಳನ್ನೊಳಗೊಂಡ ಮನನ. ಇಂಥ ವಿದ್ಯೆಗಳಲ್ಲಿ ಮುಂದುವರಿಯ ಬೇಕಾದರೆ ವಿದ್ಯಾರ್ಥಿಗಳಿಗೆ ಅಸಾಧಾರಣ ಬುದ್ಧಿಶಕ್ತಿಯಿರಬೇಕಾಗಿತ್ತು. ಇದರ ಜೊತೆಗೆ ಅಸಾಧಾರಣ ಚಿತ್ತೈಕಾಗ್ರತೆ, ಊಹಾಶಕ್ತಿ, ತತ್ತ್ವದ ಸೂಕ್ಷ್ಮನಿಯಮಗಳ ಸಂಬಂಧ ವಿಶೇಷಗಳನ್ನು ಗ್ರಹಿಸುವ ಸಂಘಟನ ಶಕ್ತಿ ಇವೇ ಮುಂತಾದ ಮನೋಧರ್ಮಗಳು ವಿಫುಲವಾಗಿ ಬೆಳೆಯುತ್ತಾ ಬರಬೇಕು.

ಇವುಗಳ ತಳಹದಿ ಅಪೂರ್ವವಾದ ಜ್ಞಾಪಕಶಕ್ತಿ. ಆರೋಗ್ಯವು ಪುಟಹಾಕಿದ ಚಿನ್ನದಂತಿದ್ದರೆ, ಮೆದುಳು ಹೊಳೆಯುತ್ತ ಮನಸ್ಸಿನ ವೇಗಕ್ಕೆ ಬೆಂಬಲವಾಗುತ್ತದೆ. ಜ್ಞಾಪಕಗ್ರಹಣ ಊಹಾ ಅನುಮಿತ ಶಕ್ತಿಗಳು ಪ್ರಕಾಶಮಾನವಾಗುತ್ತವೆ.

ಪ್ಲೇಟೋವಿಗೆ ಗಣಿತ ಖಗೋಳ ಶಾಸ್ತ್ರಗಳ ಮೇಲೆ ಬಹಳ ಗೌರವವಿತ್ತು. ಇವನು ಒಂದು ಸಲ 'ಸಿರಾಕ್ಯೂಸ್' ನಗರದ ಸರ್ವಾಧಿಕಾರಿ 'ಡಯನ್' ಎಂಬ ಯುವಕನಿಗೆ ರಾಜ್ಯಾಂಗ ಬೋಧಕನಾಗಿ ಆಹ್ವಾನದ ಮೇಲೆ ಹೋಗಿದ್ದನು. ಕೂಡಲೆ, ಮೊದಲನೆಯ ಹೆಜ್ಜೆಯಾಗಿ, ಡಯನ್ ಸರ್ವಾಧಿಕಾರಿಗೆ ರೇಖಾಗಣಿತದ ಪಾಠವನ್ನು ಪ್ರಾರಂಭಿಸಿದನು. ಆದರೆ, ಡಯನ್ನಿಗೆ ಇದು ರುಚಿಸಲಿಲ್ಲ. ಗಣಿತ ನೀರಸವಾಗಿಯೂ ಕಷ್ಟವಾಗಿಯೂ ತೋರಿತು.

ಪ್ರಭುವಿಗೆ ವಿದ್ಯಾಭ್ಯಾಸ ಮಾಡಿಸುವುದಲ್ಲದೆ ಅವನನ್ನು ಅಕ್ಕ ಪಕ್ಕದ ರಾಜ್ಯಗಳೊಡನೆ ಒಪ್ಪಂದ ಮಾಡಿಕೊಂಡು ಕಾರ್ಥೇಜ್ ರಾಜ್ಯದಿಂದ ಸಂಭವಿಸಬಹುದಾದ ಆಕ್ರಮಣವನ್ನು ತಡೆಯಲು ಸಿದ್ಧಮಾಡಿಕೊಳ್ಳುವಂತೆ ಪ್ರೇರಿಸುವುದು ಪ್ಲೇಟೋವಿನ ಉದ್ದೇಶವಾಗಿತ್ತು. ಎರಡು ಕಾರ್ಯಗಳೂ ನಿಷ್ಫಲವಾದವು.

ನಕ್ಷತ್ರ ಗ್ರಹಗಳ ಗತಿಯ ಚಿತ್ರವನ್ನು ಮನನಮಾಡಿ ಅವು ತಮ್ಮ ಚಲನವಲನಗಳಲ್ಲಿ ಅಭಿವ್ಯಕ್ತಪಡಿಸುವ ನಿಯಮಗಳನ್ನೂ ಆಕಾರ ವಿಶೇಷಗಳನ್ನೂ

ಯಥಾವತ್ತಾಗಿ, ಸಂಖ್ಯಾಪ್ರಮಾಣರೂಪಸಹಿತ ಧ್ಯಾನಮಾಡುವ ಮನೋವೃತ್ತಿಯನ್ನು ವಿದ್ಯಾಭ್ಯಾಸದ ಮೂಲಕ ಸಂಪಾದಿಸಿರುವವರಿಗೆ, ಪ್ರಪಂಚವು ಸಮರಸಯುಕ್ತವಾದ ಚೈತನ್ಯ ಸ್ವರೂಪವುಳ್ಳ ಅತೀಂದ್ರಿಯ ಪರವಸ್ತುವಿನ ಅಂತಿಮ ಅಭಿಪ್ರಾಯವಾಗಿತ್ತು. ಇದು 'ಲಾಸ್' ಎಂಬ ಗ್ರಂಥದಲ್ಲಿ ಸ್ಪಷ್ಟವಾಗುತ್ತದೆ.

ಮನೋಬುದ್ಧಿಗಳನ್ನು ಸಂಸ್ಕರಣಮಾಡಿ ಅವುಗಳಿಗೆ ತತ್ತ್ವಾನ್ವೇಷಣ ಮಾರ್ಗವನ್ನು ಸೂಚಿಸುವುದು ಯೌವನದ ವಿದ್ಯಾಭ್ಯಾಸದ ಗುರಿ. ಇಂಥ ವಿದ್ಯಾಭ್ಯಾಸಗಳಲ್ಲಿ ಅಸಾಧಾರಣ ಬುದ್ಧಿ ಶಕ್ತಿಯನ್ನೂ ಆಸಕ್ತಿಯನ್ನೂ ತೋರಿಸಿದವರನ್ನು ಪಾಲಕರವರ್ಗಕ್ಕೆ ಆರಿಸಲಾಗುತ್ತದೆ.

ಅವರು ಮೊದಲು ಸುಮಾರು ೨೦ ರಿಂದ ೩೫ ವರ್ಷದ ವರೆಗೆ 'ಸಹಾಯಕರ' ವರ್ಗದಲ್ಲಿ ಕೆಲಸ ಮಾಡುತ್ತಾರೆ. ಅವರಿಗೆ ಈ ಕಾಲದಲ್ಲಿ ವಿದ್ಯೆಯೂ ಮುಂದೆ ಸಾಗುತ್ತದೆ. ಹಾಗೆಯೆ ಆಡಳಿತದ ಜವಾಬ್ದಾರಿ ಸ್ಥಾನಗಳಲ್ಲಿದ್ದು ಕೊಂಡು ಅನುಭವ ಸಂಗ್ರಹವೂ ನಡೆಯುತ್ತದೆ. ಇಂಥ ಅನುಭವ ಪರೀಕ್ಷೆಯಲ್ಲಿ ಅವರ ಧೈರ್ಯ, ಸ್ಥೈರ್ಯ, ದೇಶಪ್ರೇಮ, ಜನಾನುರಾಗ, ಧೃತಿ, ಕಾರ್ಯದಕ್ಷತೆ, ಪ್ರಾಮಾಣಿಕತೆ, ತಾವು ಕೆಲಸ ಮಾಡಿದ ಶಾಖೆಗಳಿಗೆ ಸಂಬಂಧಪಟ್ಟ ವ್ಯವಹಾರ ವಿಚಾರಗಳಲ್ಲಿ ಸಂಪೂರ್ಣ ಜ್ಞಾನ, ವಾಕ್ಚಾತುರ್ಯ, ವಿವೇಕ ಮುಂತಾದ ಸದ್ಗುಣಗಳು ಪಾಲಕರ ಕಣ್ಣಿಗೆ ಗೋಚರವಾಗುವುವು.

ಈ ಅನುಭವ ಪರೀಕ್ಷೆಯ ಆಧಾರದ ಮೇಲೆ ಸಹಾಯಕರಲ್ಲಿ ಮತ್ತೆ ಆಯ್ಕೆಯಾಗಿ ಸುಮಾರು ೫೫ನೆಯ ವಯಸ್ಸಿನಲ್ಲಿ ಪಾಲಕರ ಪಂಕ್ತಿಗೆ ಹೊಸಬರು ಏರುತ್ತಾರೆ. ಪ್ಲೇಟೋವಿನ ಆದರ್ಶ ರಾಜ್ಯದಲ್ಲಿ ತತ್ತ್ವಪ್ರೇಮಿಗಳೂ ತತ್ತ್ವಜ್ಞಾನಿಗಳೂ ಆದ ಧೀರಸ್ವಭಾವವುಳ್ಳ ಪ್ರಭುಗಳು ಈಡೀ ರಾಷ್ಟ್ರಸಮುದಾಯದಿಂದ, ತತ್ತ್ವನಿಷ್ಠವಾದ ವಿದ್ಯಾ ಅನುಭವ ಮಾರ್ಗಗಳ ಮೂಲಕ ಚುನಾಯಿತರಾಗಿ ರಾಜ್ಯದ ಪರಮಪ್ರಭುತ್ವ ಪೀಠವನ್ನಲಂಕರಿಸುತ್ತಾರೆ.

ರಾಜ್ಯಶಾಸ್ತ್ರದ ದೃಷ್ಟಿಯಲ್ಲಿ, ಇಂಥ ಪ್ರಭುತ್ವದ ಗುಂಪನ್ನು ಸರ್ವದಾ ಸೃಷ್ಟಿಸುತ್ತಿರುವುದೇ ವಿದ್ಯಾಭ್ಯಾಸಕ್ರಮದ ಅಂತಿಮ ಗುರಿ, ಪರಮಪ್ರಯೋಜನ.

* * *

೧೫ನೆಯ ಅಧ್ಯಾಯ

ತತ್ತ್ವಜ್ಞಾನಿ ರಾಜರು

ತನ್ನ ಕಾಲದವರೆಗೂ ನಡೆದು ಬಂದ ಗ್ರೀಕ್ ನಗರಗಳ ಚರಿತ್ರೆ, ಅವುಗಳ ರಾಜ್ಯಾಂಗ ಪದ್ಧತಿಗಳು, ಅವಗಳ ವಿಪ್ಲವಗಳು, ಸುಧಾರಣೆಗಳು, ಸರ್ವಾಧಿಕಾರಿಗಳು, ಸಮಸ್ತ 'ಹೆಲೆನ್' ಜನರ ಯೋಗಕ್ಷೇಮ, ವ್ಯವಹಾರ, ಸುಖದುಃಖಗಳು, ಸೋಲುಗೆಲವುಗಳು–ಇಷ್ಟು ಅನುಭವ ಸಾಮ್ರಾಜ್ಯವನ್ನೂ ಮನಸ್ಸಿನಲ್ಲಿಟ್ಟುಕೊಂಡು ಅದನ್ನು ಮನನ ಮಾಡಿ, ಸೂಕ್ಷ್ಮವಾದ ತತ್ತ್ವಜ್ಞಾನದೃಷ್ಟಿಯಿಂದ ಮನನ ಮಾಡಿ, ಪ್ಲೇಟೋ ಒಂದು ನಿರ್ದಿಷ್ಟವಾದ ಸಿದ್ಧಾಂತಕ್ಕೆ ಬರುತ್ತಾನೆ. ಅದೇನೆಂದರೆ :- **"ತತ್ತ್ವಜ್ಞಾನಿಗಳು ರಾಜಪದವಿಗೆ ಬರುವತನಕ, ಇಲ್ಲವೆ ರಾಜಪದವಿಯಲ್ಲಿ ನಿಂತು ಅಧಿಕಾರ ಮಾಡುವವರು ತತ್ತ್ವಜ್ಞಾನಿಗಳಾಗುವತನಕ, ರಾಜ್ಯಗಳಲ್ಲಿ ಕೇಡು ಹೋಗಿ ಸುಖಶಾಂತಿಗಳು ನೆಲಸುವ ಸಂಭವವಿಲ್ಲ."**

ರಾಜಪದವಿಗೆ ತಕ್ಕವರನ್ನು ಆಯುವ ಕ್ರಮವು ಇದುವರೆಗೆ ಮಾನವನ ಚರಿತ್ರೆಯಲ್ಲಿ ಆಚರಣೆಯಲ್ಲಿದ್ದ ಯಾವ ಪದ್ಧತಿಯಲ್ಲಿಯೂ ಸಮರ್ಪಕವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ರಾಜವಂಶದವರ ಆಳಿಕಯು ಕೆಲವು ಕಾಲ ಚೆನ್ನಾಗಿ ನಡೆದು ಕಡೆಗೆ ಹಾನಿಕರವಾಯಿತು. ರಾಜಪರಂಪರೆಯು ಯೋಗ್ಯರ ಪರಂಪರೆಯೂ ಆಗಲಿಲ್ಲ. ರಾಜರು ಸುಖಾಭಿಲಾಷೆಗೆ ಮನಸೋತು ರಾಜ್ಯಭಾರವನ್ನು ಸರಿಯಾಗಿ ನಡಸದೆ ಹೋದರು. ಪರರಾಜರೋ ಪ್ರಜೆಗಳಲ್ಲಿ ಸಮರ್ಥರೋ ಸಿಂಹಾಸನವನ್ನು ಆಕ್ರಮಿಸಿದರು. ಇವರು ಕೂಡ ಪದವಿಯನ್ನು ಸಂಪಾದಿಸಲು ಸಾಮರ್ಥ್ಯ ತೋರಿದರೇ ಹೊರತು ರಾಜ್ಯವನ್ನು ಧರ್ಮದಿಂದಲೂ ದಕ್ಷತೆಯಿಂದಲೂ ಆಳುವುದಕ್ಕೆ ತಕ್ಕ ಯೋಗ್ಯತೆ ಹೊಂದಿರಲಿಲ್ಲ. ಜನರು ಇಂಥ ರಾಜರಿಂದಲೂ ರಾಜಾಭಾಸರಿಂದಲೂ ಬೇಸತ್ತು ಪ್ರಜಾ ರಾಜ್ಯವನ್ನೇರ್ಪಡಿಸಿದರು. ಈ ಕ್ರಮದಲ್ಲಿಯೂ ಸಾಮಾನ್ಯ ಜನರ ವಿಶ್ವಾಸವನ್ನು ಮೋಸದಿಂದ ಸಂಪಾದಿಸಿ ಅಧಿಕಾರ ಸ್ಥಾನವನ್ನು ಗಳಿಸಿದವರು

ಸಮರ್ಪಕವಾದ ರಾಜ್ಯಭಾರ ಪದ್ಧತಿಯನ್ನು ರೂಢಿಸಲಿಲ್ಲ. ಮಾನವ ಚರಿತ್ರೆಯನ್ನು ಈ ದೃಷ್ಟಿಯಿಂದ ಪರೀಕ್ಷಿಸಿದರೆ ಸಂತತವಾಗಿ ಕಾಣುವುದು ಪ್ರಭುತ್ವ- ವಿಪ್ಲವ ಇವುಗಳ ಏರು ಪೇರುಗಳು. ಪ್ರಭುತ್ವಹೋಗಿ ವಿಪ್ಲವವಾಗುತ್ತದೆ; ವಿಪ್ಲವವು ಶಾಂತಿ ಹೊಂದಿ ಪುನಃ ಪ್ರಭುತ್ವವೇರ್ಪಡುತ್ತವೆ, ಈ ಚಕ್ರನ್ಯಾಯದಲ್ಲಿ ಪ್ರಜಾಸಾಮಾನ್ಯರಿಗೆ ಒಂದೇ ಸ್ಥಾನ- **ಕುದುರೆಯದು**. ಬೇರೆಬೇರೆ ಸವಾರರನ್ನು ಹೊರುವುದೇ ಅದರ ಕರ್ತವ್ಯ. ಸವಾರರ ಬದಲಾವಣೆಯೇ ವಿಪ್ಲವ, ಕ್ರಾಂತಿ, ಸುಧಾರಣೆ ಎಂದು ಹೇಳಿಕೊಳ್ಳುತ್ತದೆ – ಎಂದು ಮುಂತಾಗಿ ಕೆಲವು ಸಮಾಜ ಶಾಸ್ತ್ರಕಾರರ ನಿರಾಶಾಪೂರ್ವಕವಾದ ಅಭಿಪ್ರಾಯ.

ಒಟ್ಟಿನಲ್ಲಿ ಈ ಸಿದ್ಧಾಂತದಲ್ಲಿ ಸ್ವಲ್ಪ ಸತ್ಯವಿದೆ. ಆದರೂ ಅಷ್ಟು ನಿರಾಶೆಗೆ ಕಾರಣವಿಲ್ಲ. ಪ್ಲೇಟೋ ಕೂಡ ಈ ಸತ್ಯದ ಹೊಡೆತಕ್ಕೆ ತಲೆ ಬಾಗಿದ್ದಾನೆ. ಆದರೆ ಈ ಸಮಸ್ಯೆಯು ಮಾನವಜನಾಂಗದ ಬುದ್ಧಿಗೆ ಮೀರಿದ್ದೆಂದು ಅವನಿಗೆ ಭಾಸವಾಗಲಿಲ್ಲ. ಮನುಷ್ಯನು ತನ್ನ ರಾಜ್ಯಾಂಗ ವಿಚಾರವನ್ನು ಶಾಸ್ತ್ರರೀತಿಯಲ್ಲಿ–ಎಂದರೆ ಬುದ್ಧಿ ಪೂರ್ವಕವಾಗಿ–ಕೂಲಂಕಷವಾಗಿ ಪರ್ಯಾಲೋಚಿಸಿ, ಸ್ವಾಭಾವಿಕವಾಗಿ ಬರುವ ದೋಷಗಳನ್ನು ಎದುರಿಸತಕ್ಕ ಮನೋಭಾವವನ್ನು ಬಲಗೊಳಿಸಿ, ಸರ್ವದಾ ಜಾಗ್ರತನಾಗಿದ್ದು ಯೋಗ್ಯಸೂತ್ರಕಾರರನ್ನು ನಿಯಮಿಸಿಕೊಂಡರೆ, ರಾಜ್ಯದ ಅಧೋಗತಿಯನ್ನು ತಡೆದು ಪುರೋಭಿವೃದ್ಧಿಯ ಕಡೆಗೆ ತಿರುಗಿಸಬಹುದು–ಎಂದು ಅವನ ಅಭಿಪ್ರಾಯ. ಈ ಉದಾತ್ತವಾದ ಧ್ಯೇಯವು ನೆರವೇರಬೇಕಾದರೆ ವಿಜ್ಞಾನಶಾಸ್ತ್ರಗಳ ಅಧ್ಯಯನ ಮಾತ್ರವೇ ಸಾಲದು; ತತ್ತ್ವಜ್ಞಾನಬೇಕು–ಎಂಬುದು ಪ್ಲೇಟೋವಿನ ಅಂತಿಮಸಿದ್ಧಾಂತ. ಹಾಗಾದರೆ, ತತ್ತ್ವಜ್ಞಾನವೆಂದರೇನು ? ಅದಕ್ಕೂ ರಾಜ್ಯಭಾರಕ್ರಮಕ್ಕೂ ಏನು ಸಂಬಂಧ ?–ಎಂಬ ಪ್ರಶ್ನೆಗಳು ಸಹಜವಾಗಿಯೇ ಉದ್ಭವಿಸುತ್ತವೆ.

ತತ್ತ್ವಜ್ಞಾನದ ವಿಷಯದಲ್ಲಿ ಯಾವ ಕಾಲದಲ್ಲಿಯೂ ಜನ ಸಾಮಾನ್ಯರಲ್ಲಿ ಸರಿಯಾದ ಅಭಿಪ್ರಾಯವಿರುವುದಿಲ್ಲ. ಅದರ ವಿಷಯದಲ್ಲಿ ಅಪಪ್ರಚಾರ ತಪ್ಪು ತಿಳಿವಳಿಕೆಗಳೇ ಹೆಚ್ಚಾಗಿರುತ್ತವೆ. ಆದ್ದರಿಂದ, ತತ್ತ್ವಜ್ಞಾನಿಗಳು ರಾಜರಾಗಿರುವತನಕ ಜನರಿಗೆ ಸಮರ್ಪಕವಾದ ರಾಜ್ಯಲಾಭವಿಲ್ಲ ಎಂಬ ಅಭಿಪ್ರಾಯ ಜನಾದರಣೀಯವಾಗಲಾರದು; ಇದು ಎಲ್ಲಕ್ಕಿಂತ ದೊಡ್ಡದೂ ಭಯಂಕರವೂ ಆದ ವಿಚಾರತರಂಗವೆಂದು ಭಾವಿಸುತ್ತಾರೆ–ಎಂದೂ ಪ್ಲೇಟೋ ಒಪ್ಪಿಕೊಳ್ಳುತ್ತಾನೆ. ಇಂಥ ಸಿದ್ಧಾಂತವನ್ನು ಕೇಳಿದೊಡನೆ ಜನರು ಆಶ್ಚರ್ಯ ಅಪನಂಬಿಕೆಗಳನ್ನು ಸೂಚಿಸುವ ಒಂದು ದೊಡ್ಡ ನಗೆ ನಗುತ್ತಾರೆ: ಹೊಟ್ಟೆ ಹುಣ್ಣಾಗುವುದೋ ಎಂಬಂತೆ ಗಟ್ಟಿಯಾಗಿ ನಗುತ್ತಾರೆ.–ಎಂದು ಮುಂತಾಗಿ ರಿಪಬ್ಲಿಕ್ ಗ್ರಂಥದಲ್ಲಿ ಈ ವಿಚಾರ ಬಂದಾಗ ವರ್ಣನೆಯಿದೆ.

ತತ್ತ್ವಜ್ಞಾನದ ವಿಷಯದಲ್ಲಿ ಈ ತಪ್ಪು ಅಭಿಪ್ರಾಯವಿರುವುದಕ್ಕೆ ತತ್ತ್ವಪ್ರೇಮಿಗಳ

ಸ್ವಭಾವ ಮತ್ತು ಜನರ ಅಜ್ಞಾನ ಇವೆರಡೂ ಕಾರಣವಾಗಿದೆ; ಗ್ರೀಕ್ ಭಾಷೆಯಲ್ಲಿ 'ಫಿಲೆ' ಎಂದರೆ ಪ್ರೇಮ ಆಸಕ್ತಿ; 'ಸೋಫಿಯ' ಎಂದರೆ ವಿದ್ಯೆ, ಜ್ಞಾನ. 'ಫಿಲಾಸೊಫಿ' ಎಂಬ ಪದಕ್ಕೆ 'ತತ್ತ್ವಪ್ರೇಮ' ಎಂಬುದು ಭಾಷಾಂತರ. ತತ್ತ್ವಜ್ಞಾನಿಗಳು ಎಂಬುದಕ್ಕಿಂತ ತತ್ತ್ವಪ್ರೇಮಿಗಳು ಎಂದು ಹೇಳುವುದೇ ಪ್ಲೇಟೋವಿನ ಪ್ರತಿಪಾದನೆಯ ಸಾರಕ್ಕೆ ಹೆಚ್ಚಾಗಿ ಅನ್ವಯಿಸುತ್ತದೆ. ಏಕೆಂದರೆ, ಇಂದ್ರಿಯಜನ್ಯ ವಿಷಯಗಳ ಆಧಾರದಮೇಲೆ ನಿರ್ಮಾಣವಾಗಿರುವುದರಿಂದ, ಮನುಷ್ಯನ ಜ್ಞಾನವು ಪಾರಮಾರ್ಥಿಕವಾಗಲಾರದು ; ಪಾರಮಾರ್ಥಿಕ ಸತ್ಯದ ಕಡೆಗೆ ನಮ್ಮ ಬುದ್ಧಿಯನ್ನು ತಿರುಗಿಸಿ ಅದರ ಒಂದೆರಡು ಕಿರಣಗಳ ದರ್ಶನವನ್ನು ಮಾತ್ರ ಮಾಡಬಲ್ಲದು– ಎಂಬುದು ಪ್ಲೇಟೋವಿನ ಅಭಿಪ್ರಾಯ. ಆದ್ದರಿಂದ ಅವನು ನಿರ್ದೇಶಿಸುವ ಜ್ಞಾನಿಗಳ ವಿಷಯದಲ್ಲಿ 'ತತ್ತ್ವಪ್ರೇಮಿ' ಎಂಬ ಪದವನ್ನು ಪ್ರಯೋಗಿಸುವುದು ನ್ಯಾಯವಾಗಿದೆ.

ಪ್ರಜಾರಾಜ್ಯದ ಜನರನ್ನು ಒಂದು ದೊಡ್ಡ ಹಡಗಿನ ಮಾಲೀಕನಿಗೂ ರಾಜಕೀಯ ಪಕ್ಷಗಳ ನಾಯಕರನ್ನು ನಾವಿಕರಿಗೂ ಹೋಲಿಸುವ ಸಾಮ್ಯವೊಂದನ್ನು ಪ್ಲೇಟೋ ಕೊಡುತ್ತಾನೆ. ಯಜಮಾನನಿಗೆ ಕಣ್ಣು ಮಂದ; ಕಿವಿ ಸ್ವಲ್ಪ ಕಿವುಡು. ವಯಸ್ಸೂ ಆಗಿ ಹಡಗಿನ ಪಾರುಪತ್ಯ ನಡಸಲು ಅವನಿಗೆ ಅಸಾಧ್ಯವಾಗಿದೆಯಂತೆ. ಹಡಗಿನ ನಾವಿಕರು ನಾನು ತಾನೆಂದು ಮುಂದೆ ಬಂದು ತಮಗೆ ಹಡಗಿನ ನಾಯಕತ್ವವನ್ನು ಒಪ್ಪಿಸುವಂತೆ ಯಜಮಾನನನ್ನು ಕೇಳಿಕೊಳ್ಳುತ್ತಾರೆ. ಆದರೆ ಅವರಾರಿಗೂ ಹಡಗು ನಡೆಸುವುದರಲ್ಲಿ ಅನುಭವ, ಶಾಸ್ತ್ರನಿಷ್ಠವಾದ ಜ್ಞಾನ, ಕಾರ್ಯದಕ್ಷತೆ–ಇಂಥ ಯಾವ ಅರ್ಹತೆಯೂ ಇರುವುದಿಲ್ಲ. ಯಜಮಾನನನ್ನು ಕೆಲವರು ಪ್ರಾರ್ಥಿಸುವರು; ಕೆಲವರು ವಿನಯದಿಂದ ವಶ ಮಾಡಿಕೊಳ್ಳಲು ಪ್ರಯತ್ನ ಪಡುವರು.

ಹೀಗೆಯೇ ಪ್ರಜಾಪಕ್ಷದ ನಾಯಕರು ರಾಜ್ಯಭಾರಕ್ಕೆ ಬೇಕಾದ ಅರ್ಹತೆಯನ್ನು ಪ್ರಯತ್ನತಃ ಸಂಪಾದಿಸುವುದನ್ನು ಬಿಟ್ಟು ಅಜ್ಞರಾದ ಜನಸಾಮಾನ್ಯರನ್ನು ಹೊಗಳಿ, ಅವರ ಆಸೆಗಳನ್ನು ಉದ್ರೇಕಗೊಳಿಸಿ ಅವುಗಳನ್ನು ಸಲ್ಲಿಸಿಕೊಡುತ್ತೇವೆಂದು ಸುಳ್ಳು ಭರವಸೆಕೊಟ್ಟು, ತಾವು ಪ್ರಭುತ್ವಸ್ಥಾನಕ್ಕೆ ಬರುವ ಸಂಪ್ರದಾಯವೇ ಹೆಚ್ಚಾಗಿಹೋಗಿದೆ.

ಈ ಸಂಪ್ರದಾಯ ವಿಷಮಕಾರಿಯಾದ್ದು. ಆದ್ದರಿಂದ ಅಧಿಕಾರವನ್ನ ಪೇಕ್ಷಿಸುವವರು ಅದಕ್ಕೆ ತಕ್ಕ ಅರ್ಹತೆಯನ್ನು ಸಂಪಾದಿಸಬೇಕು. ಈ ಅರ್ಹತೆ ಎರಡು ವಿಧ. ಒಂದು ಬುದ್ಧಿ ಸಂಸ್ಕಾರ–ಕಾವ್ಯ, ಕಲೆ, ಶಾಸ್ತ್ರಗಳ ಮೂಲಕ ಲಭಿಸತಕ್ಕದ್ದು. ಇನ್ನೊಂದು ಭಾವನಾ ಸಂಸ್ಕಾರ–ಕಾವ್ಯ ಕಲೆ ಶಾಸ್ತ್ರಗಳ ಜೊತೆಗೆ ರಾಷ್ಟ್ರಪ್ರೇಮ, ಅನುಭವ ಸಿದ್ಧವಾದ ಶೀಲ, ವಿವೇಕ, ಧೈರ್ಯ, ವಿಷಯಾಸಕ್ತಿಯಲ್ಲಿ ಮಿತಿ, ಜ್ಞಾನ, ಧರ್ಮಬುದ್ಧಿ – ಇವುಗಳ ಮೂಲಕ ಲಭಿಸತಕ್ಕದ್ದು. ಇವೆರಡೂ ಯಾವ ವಿಧವಾದ ವಿದ್ಯಾಭ್ಯಾಸದ ಮೂಲಕವಾದರೂ ಲಭಿಸಬಹುದೆಂಬುದನ್ನು ಆಗಲೇ ಸೂಚಿಸಿದ್ದೇವೆ.

ಆದರೆ ಇಷ್ಟು ಸಾಲದು; ವಿಜ್ಞಾನ ಸಾಲದು, ಇದರ ಜೊತೆಗೆ

ತತ್ತ್ವಪ್ರೇಮವಿರಬೇಕು ಎಂಬುದರ ಮರ್ಮವೇನು?– ಎಂಬ ಪ್ರಶ್ನೆ ಸ್ವಾಭಾವಿಕವಾಗಿಯೇ ಉದ್ಭವಿಸುತ್ತದೆ. ಈ ಪ್ರಶ್ನೆ ನಮ್ಮನ್ನು ಪ್ಲೇಟೋವಿನ ವೇದಾಂತದ ಹೃದಯಕ್ಕೇ ಕೊಂಡೊಯ್ಯುತ್ತದೆ. ಆದರೂ ಅದಕ್ಕೆ ಉತ್ತರವನ್ನು ಸೂಕ್ಷ್ಮವಾಗಿ ಸೂಚಿಸಬೇಕಾಗಿದೆ.

ವಿಜ್ಞಾನಗಳು ಅನೇಕ ಇವೆ. ಒಂದೊಂದು ವಿಜ್ಞಾನವೂ ಒಂದೊಂದು ಅನುಭವದ ಶಾಖೆಯನ್ನು ಶೋಧಿಸುತ್ತದೆ. ವಿಜ್ಞಾನಗಳೆಲ್ಲ. ಪಂಚಭೂತ ದ್ರವ್ಯಗಳ ಸಾರವನ್ನು ಶೋಧಿಸತಕ್ಕವೆಂದು ಹೇಳಿದರೆ ಹಿಂದೆ ಸಾಕಾಗಿತ್ತು. ಈಗಿನಕಾಲದಲ್ಲಿಯಾದರೋ, ವಿಜ್ಞಾನ ಶಾಸ್ತ್ರದ ವಿಷಯಗಳು ಬಹಳ ಸೂಕ್ಷ್ಮವಾಗಿವೆ. ಭೌತಶಾಸ್ತ್ರವೊಂದರಲ್ಲಿಯೇ ಬೆಳಕು, ಶಾಖ, ಕಾಂತತೆ, (ಮ್ಯಾಗ್ನೆಟಿಜಮ್) ವಿದ್ಯುತ್ (ಎಲೆಕ್ಟ್ರಿಸಿಟಿ), ಮುಂತಾದ ಶಾಖೆಗಳೇರ್ಪಟ್ಟಿವೆ. ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಮನಶಾಸ್ತ್ರ, ಸಮಾಜ ಶಾಸ್ತ್ರ, ರಾಜ್ಯಶಾಸ್ತ್ರ, ಮತಶಾಸ್ತ್ರ, ನೀತಿಶಾಸ್ತ್ರ, ಮಾನವಶಾಸ್ತ್ರ, ಜನಾಂಗಶಾಸ್ತ್ರ–ಎಂದು ಮುಂತಾಗಿ ವಿಜ್ಞಾನಗಳು ಬೆಳೆದುಹೋಗಿವೆ.

ಇವುಗಳಲ್ಲಿ ಪ್ರತಿಯೊಂದೂ ಒಂದೊಂದು ಅನುಭವಸೀಮೆ. ಇವು ತಾವು ಆಯ್ದುಕೊಂಡ ಅನುಭವರಾಜ್ಯದಲ್ಲಿ ಕಂಡುಬರುವ ನಿಯಮಜಾಲಗಳನ್ನು ಖಚಿತವಾಗಿ ಬಿಡಿಸಿ, ಸಪ್ರಮಾಣವಾಗಿ ನಿರೂಪಿಸುತ್ತವೆ. ಸಮಸ್ತ ಪ್ರಪಂಚವೂ ನಿಯಮಬದ್ಧವಾಗಿದೆಯೆಂಬುದೇ ವಿಜ್ಞಾನದ ಗುರಿ, ಫಲ. ಸಮಪ್ತ ಪ್ರಪಂಚದ ಅಣುರೇಣುಗಳಲ್ಲಿಯೂ ದೃಶ್ಯಮಾನವಾಗುವ ನಿಯಮಜಾಲ, ಕ್ರಮ, ಪರಸ್ಪರ ಸಾಪೇಕ್ಷತೆ, ಸಾಮರಸ್ಯ–ಇವುಗಳ ಸಮಷ್ಟಿದೃಷ್ಟಿಯೇ ತತ್ತ್ವಜ್ಞಾನ, ಜೀವನಕ್ಕೂ ಇರುವ ಭೇದ ಇದು. ವಿಜ್ಞಾನ ಏಕದೇಶ ಜ್ಞಾನ; ತತ್ತ್ವಜ್ಞಾನ ಎಲ್ಲದರ ಸಮನ್ವಯಜ್ಞಾನ.

ಹೊರಗಿನ ಪ್ರಪಂಚದ ಭಾಗಗಳಲ್ಲಿ ನಿಯಮಜಾಲಗಳನ್ನು ಕಂಡು ಹಿಡಿದು ತೋರಿಸುವಂತೆಯೇ ಒಳಗಿನ ವ್ಯವಹಾರಗಳಲ್ಲಿಯೂ ನಿಯಮ ಸೂತ್ರಗಳನ್ನು ಕಂಡು ಹಿಡಿಯುವುದು ಅವಶ್ಯಕ. ಈ ಕೆಲಸ ಮನಶ್ಯಾಸ್ತ್ರ, ಧರ್ಮಶಾಸ್ತ್ರ, ಸಮಾಜಶಾಸ್ತ್ರ ಮುಂತಾದ ಶಾಸ್ತ್ರಗಳಿಂದ ನಡೆಯುತ್ತದೆ. ಮಾನವಶಾಸ್ತ್ರಗಳಿಗೂ, ಭೌತಶಾಸ್ತ್ರಗಳಿಗೂ ಇರುವ ಸಂಬಂಧವೇನು ಎಂದು ಪ್ರಶ್ನೆಯೆದ್ದರೆ, ತತ್ತ್ವಶಾಸ್ತ್ರವು ಹುಟ್ಟಿಕೊಳ್ಳುತ್ತದೆ. ಮನುಷ್ಯನ ಬುದ್ಧಿ ಆತ್ಮಗಳಿಗೂ ಹೊರಗಿನ ವಿಶ್ವದ ಸ್ವರೂಪಕ್ಕೂ ಏನು ಸಂಬಂಧವೆಂಬ ಪ್ರಶ್ನೆ ತತ್ತ್ವಶಾಸ್ತ್ರದ ಮುಖ್ಯ ವಿಚಾರವನ್ನು ನಿರ್ದೇಶಿಸುತ್ತದೆ.

ವಿಜ್ಞಾನದಲ್ಲಿ ಸಂಪೂರ್ಣಜ್ಞಾನವು ಧ್ಯೇಯವಲ್ಲ. ಪ್ರತಿಯೊಂದು ವಿಜ್ಞಾನವೂ ತಾನು ಆರಿಸಿಕೊಂಡಿರುವ ವಿಚಾರದಲ್ಲಿ ಒಂದು ಮೂಲಭೂತ ಅಭಿಪ್ರಾಯವನ್ನು ಶೋಧನೆಯ ಅನುಕೂಲಕ್ಕಾಗಿ ಒಪ್ಪಿಕೊಂಡು, ತನ್ನ ವಿಶ್ಲೇಷಣಾತ್ಮಕವಾದ ಕ್ರಮವನ್ನು ನಡಸುತ್ತದೆ. ಭೌತಶಾಸ್ತ್ರವು ಕಾಲ, ಆಕಾಶ, ಮತ್ತು ಇಂದ್ರಿಯ ಗೋಚರವಾಗಿ ಅಳತೆಗೆ ಸಿಕ್ಕತಕ್ಕ ವಿಷಯಗಳನ್ನು ಮಾತ್ರ, ಅಥವಾ ವಸ್ತುವಿನ ಹೊರ ಮೈಯನ್ನು ಮಾತ್ರ ಶೋಧನೆ ಮಾಡುತ್ತದೆ. ಆದರೆ, ಆಕಾಶ ಕಾಲ ವಸ್ತುಗಳಿಗೂ ಭೌತಶಾಸ್ತ್ರವು

ಕಂಡುಹಿಡಿಯುವ ನಿಯಮಗಳಿಗೂ ಇರುವ ಸಂಬಂಧವೇನು? ಈ ಹೊರಚೌಕಟ್ಟಿಗೂ ವಸ್ತುವಿನ ಅಂತಸ್ಸಾರಕ್ಕೂ ಏನು ಸಂಬಂಧ? –ಎಂಬ ಪ್ರಶ್ನೆ ಎದ್ದ ಮೇಲೆ, ಹೊರಗಿನ ಶಾಸ್ತ್ರಗಳಿಗೂ ಮಾನಸಿಕ ಶಾಸ್ತ್ರಗಳಿಗೂ ಇರತಕ್ಕ ಸಂಬಂಧವು ಅಗತ್ಯವಾಗಿ ವಿಚಾರಕ್ಕೆ ಬರುತ್ತದೆ. ಭೌತಶಾಸ್ತ್ರದ ವಿಷಯ ಸಾಮ್ರಾಜ್ಯವು ಒಂದು ತೋರುವಿಕೆ, ಅಭಿವ್ಯಕ್ತರೂಪ. ಇದು ನಮ್ಮ ಮನಸ್ಸಿಗೆ ಅನುರೂಪವಾದ ತೋರುವಿಕೆ.

ನಮ್ಮ ಜ್ಞಾನವು ಹೊರಗಿನ ದೃಶ್ಯಪ್ರಪಂಚದ ಒಳಹೊಕ್ಕು ಅದರ ಸಾರಸರ್ವಸ್ವವನ್ನು ಗ್ರಹಿಸಲು ಸಮರ್ಥವಾಗಿದೆಯೆ? ಇದು ವೇದಾಂತದ ಗಹನವಾದ ಪ್ರಶ್ನೆ. ಸಮರ್ಥವಾಗಿದೆಯೆಂದೇ ಉತ್ತರ. ಮನುಷ್ಯನ ಬುದ್ಧಿಯೂ ಆತ್ಮನೂ ಪ್ರಪಂಚದ ರಚನೆ, ನಿಯಮಜಾಲ–ಇವೆರಡೂ ಒಂದೇ ಮೂಲ ತತ್ತ್ವವನ್ನು ಪ್ರತಿಬಿಂಬಿಸುತ್ತವೆ. ಅದನ್ನು ನಮ್ಮ ವೇದಾಂತದಲ್ಲಿ ಬ್ರಹ್ಮವೆಂದು ಕರೆದಿದ್ದಾರೆ. ಪ್ಲೇಟೋ ಅದನ್ನು 'ಪರಮಸತ್' (Idea of the good) ಮತ್ತು 'ದೇವರು' ಎಂದು ಕರೆದಿದ್ದಾನೆ.

ಈ ಜ್ಞಾನವು ಸಮಸ್ತ ವಿಜ್ಞಾನಗಳನ್ನೂ ಸಮನ್ವಯಗೊಳಿಸುತ್ತದೆ. ವಿಶ್ವವೆಲ್ಲ ಪರಮಾತ್ಮನ ಅಭಿವ್ಯಕ್ತಿಗೆ ಪಾತ್ರವಾಗುತ್ತದೆ. ಜೀವರಲ್ಲಿ ಪರಮಾತ್ಮನ ಪ್ರತಿಬಿಂಬರೂಪವಾದ ಆತ್ಮವಸ್ತುವು ವ್ಯಾಪಾರ ಮಾಡುತ್ತದೆ. ಜೀವನವು ಮೊದಲು ಅಜ್ಞಾನದಲ್ಲಿ ಪ್ರಾರಂಭವಾಗುತ್ತದೆ. ಇಂದ್ರಿಯ ಜನ್ಯವಾದ ರೂಪ ರಸ ಗಂಧ ಮುಂತಾದವುಗಳ ಜ್ಞಾನ ಮೊದಲನೆಯ ಮೆಟ್ಟಿಲು. ಆಮೇಲೆ ವ್ಯವಹಾರ ಜ್ಞಾನವು ಸರ್ವರಲ್ಲೂ ಬೆಳೆಯುತ್ತದೆ.

ವಿಜ್ಞಾನ ಶಾಸ್ತ್ರಗಳು ಈ ಇಂದ್ರಿಯ, ವ್ಯವಹಾರ ಜ್ಞಾನಗಳನ್ನು ವ್ಯವಸ್ಥೆಗೊಳಿಸಿ ಇವುಗಳಿಗಿಂತ ಆಳವಾದ ಮಟ್ಟಕ್ಕೆ ನಮ್ಮ ಮನಸ್ಸನ್ನು ಕೊಂಡೊಯ್ಯುತ್ತವೆ. ಹೊರಗಿನ ಪ್ರಪಂಚದ ನಿಯಮ ಬದ್ಧವಾದ ಕ್ರಮಬದ್ಧವಾದ ಸ್ವಭಾವ, ಗತಿ, ಕರ್ಮಗಳನ್ನು ನಾವು ಗ್ರಹಿಸುತ್ತ ಹೋದಹಾಗೆಲ್ಲ ನಮ್ಮ ಮನಸ್ಸೂ ಕೂಡ ನಿಯಮ ಕ್ರಮಬದ್ಧ ವ್ಯಾಪಾರವುಳ್ಳದ್ದಾಗಿ ವಿಸ್ತಾರಹೊಂದುತ್ತ ಬರುತ್ತದೆ.

ವಿಜ್ಞಾನದಿಂದ ತತ್ತ್ವಜ್ಞಾನಕ್ಕೆ ನಾವು ಏರಿದರೆ, ಅನೇಕತ್ವದಿಂದ ಏಕತ್ವಕ್ಕೆ ನಮ್ಮ ದೃಷ್ಟಿಯು ಹರಿಯುತ್ತದೆ. ವಿಶ್ವವು ಏಕಾತ್ಮಕವಾಗಿ, ಏಕಸೂತ್ರವಾಗಿ, ಅದರ ಎಲ್ಲ ವ್ಯಾಪಾರಗಳಲ್ಲಿಯೂ ಒಂದೇ ಮೂಲ ವಸ್ತುವು ಅಭಿವ್ಯಕ್ತವಾಗುವುದು ನಮ್ಮ ಜ್ಞಾನಕ್ಕೆ ಗೋಚರವಾಗುತ್ತದೆ.

ಹೀಗೆಯೇ ಮಾನವ ಜನಾಂಗಗಳ ವಿಷಯವೂ ಕೂಡ. ಪ್ರತಿಯೊಂದು ಜನಾಂಗದಲ್ಲಿಯೂ ರಾಜ್ಯಾಂಗಗಳು ಏರ್ಪಡುವುದು ಮನುಷ್ಯರ ಆತ್ಮಸ್ವರೂಪದಲ್ಲಿ ಅಡಗಿರುವ ವಿಸ್ತರಣ ಧರ್ಮದಿಂದ. ಮೀನುಗಳಾಗಲಿ ಹಾವುಗಳಾಗಲಿ ಪಕ್ಷಿಗಳಾಗಲಿ ಕೋಟ್ಯಂತರ ವರ್ಷಗಳಿಂದ ಒಂದೇ ರೀತಿಯಾದ ಆಕಾರ, ಬುದ್ಧಿ ವಿಶೇಷಗಳನ್ನು ಒಳಕೊಂಡಿರುತ್ತವೆ. ಮನುಷ್ಯನ ನಾಗರಿಕತೆಯ ಕಾಲವು ಇಷ್ಟು ದೀರ್ಘವಾಗಿರುವುದಿಲ್ಲ.

ಸಮಾಜ ಜೀವನದಲ್ಲಿ ಅಡಗಿರುವ ಏಕಾತ್ಮಕವಾದ, ಆತ್ಮಸ್ವರೂಪವಾದ ವಸ್ತುವನ್ನು ಜನರು ಕ್ರಮವಾಗಿ ತಿಳಿದುಕೊಂಡು ಅನುಭವರೂಢ ಮಾಡಿಕೊಂಡು, ರಾಜ್ಯವು ಲಕ್ಷಾಂತರ ದೇಹ ಬುದ್ಧಿಗಳನ್ನೊಳಗೊಂಡ ಒಂದು ಸಮಷ್ಟಿ ಜೀವಿಯೋ ಎಂಬಂತೆ ಐಕ್ಯಭಾವನೆಯನ್ನು ಬೆಳಸಿ, ಸಾಮರಸ್ಯ ಸಹಾನುಭೂತಿ ಮೈತ್ರಿಗಳನ್ನು ಪ್ರತಿಬಿಂಬಿಸಿ, ಜೀವನ ವಿಸ್ತಾರ ಆತ್ಮಲಾಭಗಳನ್ನು ಸಾಧಿಸುವುದೇ ಪರಮ ಪ್ರಯೋಜನ-ಎಂಬ ಬುದ್ಧಿಯು ತತ್ತ್ವಜ್ಞಾನದಿಂದ ದೊರೆಯುವ ಲಾಭ. ತತ್ತ್ವಜ್ಞಾನವು ನಾನಾತ್ವದಲ್ಲಿ ಏಕತ್ವವನ್ನು ಕಾಣುವ ಶಕ್ತಿಯನ್ನು ಸಂಪಾದಿಸಿಕೊಡುತ್ತದೆ.

ಈ ದೃಷ್ಟಿಯ ಫಲ ಸಮಾಜದ ಶಾಸನಗಳನ್ನೂ ಸಂಪ್ರದಾಯಗಳನ್ನೂ ಅಳೆಯುವುದಕ್ಕೆ ನಮಗೆ ಸಿಕ್ಕುವ ಪ್ರಮಾಣ, ಅಳತೆಗೋಲು. ರಾಜ್ಯದ ಶಾಸನವು ರಾಷ್ಟ್ರಹಿತಕ್ಕೆ ಧಕ್ಕೆ ತರತಕ್ಕ ಪ್ರವೃತ್ತಿಗಳನ್ನು ತಡೆಯಬೇಕು. ರಾಷ್ಟ್ರಹಿತಸಾಧನೆಗೆ ಅನುಕೂಲವಾದ ಸನ್ನಿವೇಶಗಳನ್ನು ಹೆಚ್ಚು ಹೆಚ್ಚಾಗಿ ಕಲ್ಪಿಸಬೇಕು. ಇದು ಪ್ಲೇಟೋವಿನ ಆತ್ಮವಾದಿಗಳ ಶಾಸನತತ್ತ್ವ. ಈ ಶಾಸನತತ್ತ್ವದಿಂದ ಈಗಿನ ಕಾಲದಲ್ಲಿ ಮೂಲ ಭೂತ ರಾಜಕೀಯ ಹಕ್ಕುಗಳೆಂದು (Fundamental Rights) ನಾವು ಕರೆಯುವ ಹಕ್ಕುಗಳನ್ನೆಲ್ಲ ಸಿದ್ಧ ಮಾಡಿಕೊಳ್ಳಬಹುದು.

ಇಂಥ ಐಕ್ಯದೃಷ್ಟಿಯು ರಾಜರಿಗೆ, ಪ್ರಭುತ್ವದವರಿಗೆಲ್ಲ-ಅತ್ಯಾವಶ್ಯಕ. ಇದರಮೂಲಕ ಅವರಿಗೆ ತಮ್ಮ ವ್ಯವಹಾರಗಳಲ್ಲಿ ಕೌಶಲವೂ ರಷ್ಟ್ರಹಿತವೂ ತಮ್ಮ ಪ್ರಜೆಗಳಲ್ಲಿ ಉದಾತ್ತವಾದ ಅನುರಾಗವೂ ಉಂಟಾಗುತ್ತದೆ; ಧರ್ಮನಿಷ್ಠೆ ಆಂತರಿಕ ಸ್ವಭಾವವಾಗಿ ಪರಿಣಮಿಸುತ್ತದೆ; ಈ ಎಲ್ಲವೂ ಅವರ ಮಾನಸಿಕ ವಾತಾವರಣವಾಗಿ ನಿಂತು ಫಲಕಾರಿಯಾಗುತ್ತದೆ.

ಈ ತತ್ತ್ವವನ್ನು ಪ್ಲೇಟೋ ಒಂದು ಗುಹಾಸಾಮ್ಯದಿಂದ ಸ್ಪಷ್ಟಪಡಿಸುತ್ತಾನೆ. ಪ್ರಪಂಚದ ಜನರೆಲ್ಲ ಒಂದು ದೊಡ್ಡ ಗುಹೆಯಲ್ಲಿ ಕುಳಿತಿದ್ದಾರೆಂದು ಭಾವಿಸೋಣ. ಅವರೆಲ್ಲ ಗೋಡೆಯನ್ನು ನೋಡುತ್ತ ಕುಳಿತಿದ್ದಾರೆ. ಅವರು ಹಿಂದಿರುಗಿ ನೋಡದಂತೆ (ಅದೃಶ್ಯವಾದ) ಸಂಕೋಲೆಗಳು ಅವರ ಕೈಕಾಲುಗಳನ್ನು ಬಂಧಿಸಿವೆ. ಅವರ ಹಿಂದೆ ಗುಹೆಯ ಉದ್ದಕ್ಕೂ ಬಾಗಿಲಿದೆ. ಬಾಗಿಲಿನ ಹೊಸ್ತಿಲಮೇಲೆ ಎದೆ ಮಟ್ಟದ ಪೌಳಿಗೋಡೆಯಿದೆ. ಗುಹೆಯಲ್ಲಿ ಒಂದು ಬೆಂಕಿ ಉರಿಯುತ್ತಿದೆ. ಪೌಳಿಗೋಡೆಯ ಪಕ್ಕದಲ್ಲಿ ಗುಹೆಯ ಹೊರಗೆ ವಿವಿಧ ಪ್ರಾಣಿಗಳೂ ಮನುಷ್ಯರೂ ಓಡಾಡುತ್ತಿರುತ್ತಾರೆ. ಇದರ ನೆರಳು ಗೋಡೆಯ ಮೇಲೆ ಬಿದ್ದು ಚಲಿಸುತ್ತದೆ. ಗುಹಾವಾಸಿಗಳ ಜ್ಞಾನವೆಲ್ಲ ಈ ನೆರಳುಗಳ ಪರಿಚಯ. ಅವರಿಗೆ ಪ್ರಪಂಚದ ವಾಸ್ತವ ಸ್ವರೂಪವು ಗೊತ್ತಿಲ್ಲ.

ಅವರಲ್ಲೊಬ್ಬನು ಆಕಸ್ಮಿಕವಾಗಿ ಹೊರಗೆ ಬರುತ್ತಾನೆಂದು ಇಟ್ಟುಕೊಳ್ಳೋಣ. ಆಗ ಅವನಿಗೆ ಪ್ರಪಂಚದ ನಿಜ ಸ್ವರೂಪ ಗೋಚರವಾಗುತ್ತದೆ. ಆಗ ಅವನಿಗೆ ಆಗುವ ಜ್ಞಾನೋದಯವೇ ತತ್ತ್ವಜ್ಞಾನದಿಂದ ನಮಗೆ ಆಗುವ ಅಜ್ಞಾನದ ಅಸ್ತಮಯ, ಜ್ಞಾನದೀಪದಲ್ಲಿ ಸಮಸ್ತ ವಸ್ತುಗಳ ಯಥಾರ್ಥಜ್ಞಾನ. ಹೊರಗೆ ಬಂದವನು

ಆಶ್ಚರ್ಯದಿಂದ ಚಕಿತನಾಗುತ್ತಾನೆ. ತಾನು ಮೊದಲು ಜ್ಞಾನವೆಂದು ತಿಳಿದ ನೆರಳಿನ ಪರಿಚಯ ಎಷ್ಟು ತಪ್ಪು ಎಂಬುದು ಆತನಿಗೆ ಭಾಸವಾಗುತ್ತದೆ. ಹತ್ತಿರದಲ್ಲಿರುವ ಪರ್ವತವನ್ನು ಅವನು ಏರುತ್ತ ಹೋಗುತ್ತಾನೆ. ಹತ್ತುತ್ತ ಹತ್ತುತ್ತ ಅವನ ದಿಗಂತವು ವಿಸ್ತರಿಸುತ್ತ ಬರುತ್ತದೆ. ಕೊನೆಗೆ ಶಿಖರಕ್ಕೇರಿ ಪ್ರಪಂಚವನ್ನೆಲ್ಲ ಸಮಷ್ಟಿದೃಷ್ಟಿಯಿಂದ ನೋಡುತ್ತಾನೆ. ಸರ್ವಪ್ರಪಂಚವನ್ನೂ ಒಬ್ಬ ಸೂರ್ಯನು ಹೇಗೆ ಬೆಳಗುತ್ತಾನೆಂಬ ತತ್ತ್ವವು ಅವನ ಮನಸ್ಸಿಗೆ ಹೊಳೆಯುತ್ತದೆ. ವಿಜ್ಞಾನ ತತ್ತ್ವಜ್ಞಾನಗಳ ವ್ಯಾಸಂಗವು ಹೀಗೆಯೇ. ವ್ಯಾಸಂಗ ಮಾಡುತ್ತ ಮಾಡುತ್ತ ಜ್ಞಾನದ ದಿಗಂತ ವಿಸ್ತಾರವಾಗುತ್ತದೆ; ಕಡೆಗೆ ಸರ್ವವ್ಯಾಪಕವಾದ ಯಥಾರ್ಥಜ್ಞಾನ ಗೋಚರವಾಗುತ್ತದೆ.

ಇಂಥ ಪ್ರಕಾಶಮಾನವಾದ ಏಕಾತ್ಮಕವಾದ ವಸ್ತು ಸ್ವರೂಪವನ್ನು ತಿಳಿದಮೇಲೆ, ಗುಹೆಯಲ್ಲಿ ಅಜ್ಞಾನದಲ್ಲಿ ಮುಳುಗಿ ತಮ್ಮ ಅಜ್ಞಾನಪೂರ್ಣವಾದ ನೆರಳಿನ ಪರಿಚಯವನ್ನೇ ವಾಸ್ತವ ವಸ್ತು ಸ್ವರೂಪವೆಂದು ತಿಳಿದಿರುವ ತನ್ನ ಸಹವಾಸಿಗಳ ಮೇಲೆ ನಮ್ಮ ತತ್ತ್ವಜ್ಞಾನಿಗೆ ಕರುಣೆ ಹುಟ್ಟುತ್ತದೆ. ತನ್ನಷ್ಟಕ್ಕೆ ತಾನು ಪರ್ವತದ ತಪ್ಪಲಲ್ಲಿ ಸುಖವಾಗಿ ಜೀವಿಸುವುದನ್ನು ಬಿಟ್ಟು ಅವನು ಮತ್ತೆ ಗುಹೆಯನ್ನು ಪ್ರವೇಶಿಸುತ್ತಾನೆ. ತನ್ನ ಸಹವಾಸಿಗಳಿಗೆ ಉಪದೇಶಮಾಡಿ ಅವರನ್ನು ಗುಹೆಯ ಹೊರಕ್ಕೆ ಕರೆದುಕೊಂಡು ಬರುತ್ತಾನೆ. ಅವರಿಗೂ ತತ್ತ್ವಪ್ರಕಾಶವಾಗುವಂತೆ ಸಹಾಯ ಮಾಡುತ್ತಾನೆ, ಉಪದೇಶ ಮಾಡುತ್ತಾನೆ.

ನಮ್ಮ ಸಾಧಾರಣ ವ್ಯವಹಾರ ಜ್ಞಾನವು ಗುಹೆಯಲ್ಲಿಯ ನೆರಳುಗಳ ಪರಿಚಯವನ್ನು ಹೋಲುತ್ತದೆ. (ನಮ್ಮಲ್ಲಿ ವೇದಾಂತಿಗಳು ಮಾಯೆ ಎನ್ನುವುದು ಇದನ್ನೇ).

ತತ್ತ್ವಜ್ಞಾನಿಯು ಗುಹಾವಾಸಿಗಳಿಗೆ ಜ್ಞಾನೋದಯ ಮಾರ್ಗವನ್ನು ತೋರಿಸುತ್ತಾನೆ, ಹಾಗೆಂದರೆ, ತತ್ತ್ವಪ್ರೇಮಿಗಳು ಅವಶ್ಯಕವಾಗಿ ಸಾಧಾರಣ ಜನರಿಗೂ ತಮ್ಮ ಜ್ಞಾನದೃಷ್ಟಿ ಲಭಿಸುವಂತೆ ಉಪದೇಶ ಮಾಡುತ್ತಾರೆ. ಇಂಥ ಉಪದೇಶ ಕಾರ್ಯದಲ್ಲಿ ಸರ್ವೋತ್ಕೃಷ್ಟವಾದ್ದೆಂದರೆ, ರಾಜ್ಯಭಾರ ನಡಸುವುದು; ವ್ಯವಹಾರದಲ್ಲಿ ತತ್ತ್ವ ದೃಷ್ಟಿಯನ್ನುಪಯೋಗಿಸಿ ಜನರಲ್ಲಿ ಒಗ್ಗಟ್ಟನ್ನು ಪರಸ್ಪರ ಸಹಾಯ ಬುದ್ಧಿ, ಅನುರಾಗ ಮುಂತಾದ್ದನ್ನೂ ಹೆಚ್ಚಿಸುವುದು; ದುಷ್ಟರನ್ನು ಶಿಕ್ಷಿಸುವುದು; ಶಿಷ್ಟರನ್ನು ಪಾಲಿಸುವುದು; ಸರ್ವರಿಗೂ ಆತ್ಮೋದ್ಧಾರ ಮಾರ್ಗದಲ್ಲಿ ಉತ್ತೇಜನ ಸಹಾಯಗಳನ್ನು ನೀಡುವುದು.

ಪ್ಲೇಟೋವಿನ ಪ್ರಕಾರ ತತ್ತ್ವಪ್ರೇಮಿಗಳು ತಮಗೆ ಜ್ಞಾನಸಂಪಾದನೆಯಾದಮೇಲೆ ವ್ಯವಹಾರ ಪ್ರಪಂಚದಲ್ಲಿ ಭಾಗವಹಿಸುವುದು ಅವರ ಧರ್ಮ, ಅವರ ಇಷ್ಟ. ಅವರು ಕೇವಲ ಜ್ಞಾನಾನುಭವದ ಆತ್ಮತೃಪ್ತಿಯಲ್ಲಿಯೇ ಸಂತುಷ್ಟರಾಗಿ ಸಮಾಜವನ್ನು ಬಿಟ್ಟು ಸಂನ್ಯಾಸಿಗಳಾಗಿ ಜೀವಿಸುವುದು ಸರಿಯಲ್ಲ. ಅವರ ಜ್ಞಾನವು ಸಂಪೂರ್ಣವಾಗಿದ್ದರೆ ಅವರು ಹಾಗೆ ಇಚ್ಛಿಸಲಾರರು ಎಂಬುದು ಪ್ಲೇಟೋವಿನ ಅಭಿಪ್ರಾಯ.

ಅವರು ಹೀಗೆ ರಾಜಕೀಯ ರಂಗಕ್ಕೆ ಬಂದು ಫಲಕಾರಿಯಾಗಿ ಕೆಲಸ ಮಾಡಲು ಜನರೂ ಸಹಾಯ ಮಾಡಬೇಕು. ಜ್ಞಾನದ ಮೇಲೆ ಅವರಿಗೆ : ಶ್ರದ್ಧೆ ಆಸಕ್ತಿ ಮರ್ಯಾದೆ ಇದ್ದು, ತತ್ತ್ವಪ್ರೇಮಿಗಳಿಗೆ ಉತ್ತೇಜನ ಕೊಟ್ಟು ಅವರನ್ನು ಅಧಿಕಾರ ಸ್ಥಾನಗಳಿಗೆ ಆರಿಸಬೇಕು. ಇಲ್ಲದಿದ್ದರೆ, ತತ್ತ್ವಪ್ರೇಮಿಗಳು ಬಿರುಗಾಳಿಯೋ ಮಳೆಯೋ ಪ್ರಚಂಡವಾದಾಗ ಒಂದು ಗೋಡೆಯ ಪಕ್ಕದಲ್ಲಿ ಅಥವಾ ಸೂರಿನ ಕೆಳಗೆ ನಿಂತು ನಿರಾಶರಾಗಿ ನಿಷ್ಕ್ರಿಯರಾಗಿ ಕಾಲಕಳೆಯಬೇಕಾಗುತ್ತದೆ. ತತ್ತ್ವ, ಧರ್ಮ, ಉದಾತ್ತ ಜೀವನ-ಇವುಗಳಿಗೆ ಪ್ರಜಾರಾಜ್ಯದಲ್ಲಿ ಮರ್ಯಾದೆ ಕಡಮೆ, ಇದನ್ನು ವಿದ್ಯಾಪದ್ಧತಿಯ ಮೂಲಕ ಸರಿಪಡಿಸಿ ಕೊಳ್ಳಬೇಕು.

ಬಡಗಿ, ಕಮ್ಮಾರ, ಹಡಗು ಕಟ್ಟುವವನು, ಮನೆ ಕಟ್ಟುವವರು, ವೈದ್ಯರು, ಉಪಾಧ್ಯಾಯರು, ಯೋಧರು, ಇವರಿಗೆಲ್ಲ ನಿಷ್ಕೃಷ್ಟವಾದ ಕೆಲಸವಿರುತ್ತದೆ. ಆ ಕೆಲಸವನ್ನು ನಿರ್ವಹಿಸಲು ಉಪಯುಕ್ತವಾದ ವಿಜ್ಞಾನವೋ ಸಲಹೆಗಳೋ ರೂಪುಗೊಂಡಿವೆ. ಆದರೆ ರಾಜರೋ ರಾಜ್ಯಪಾಲಕರೋ ಪ್ರಭುತ್ವದವರೋ ಮಂತ್ರಿಗಳೋ (ಹೆಸರು ಏನೇ ಆಗಿರಲಿ) ಮಾಡಬೇಕಾದ ಕೆಲಸವೇನು ? ಇದನ್ನು ಖಚಿತವಾಗಿ ಬೋಧಿಸುವ ಶಾಸ್ತ್ರವಿದೆಯೆ ? – ಎಂಬ ಪ್ರಶ್ನೆಗೆ ಪ್ಲೇಟೋ ಉತ್ತರ ಕೊಡುತ್ತಾನೆ. ಈ ಉತ್ತರವನ್ನು ಸಂಪಾದಿಸಲು ಇವನು ತನ್ನ ಜೀವಮಾನವನ್ನೆಲ್ಲ ಸೂರೆಕೊಟ್ಟಿದ್ದಾನೆ.

'ಪಾಲಿಟಿಕ' ಎಂಬ ಗ್ರಂಥದಲ್ಲಿ, ಈ ವಿಷಯವಾಗಿ ಒಂದು ಸಾಮ್ಯವನ್ನು ಕೊಡುತ್ತಾನೆ. ರಾಜ್ಯಭಾರಕಾರ್ಯವು ಬಟ್ಟೆ ನೇಯುವ ಕೆಲಸದಂತೆ. ಕುರಿ ಕಾಯುವವರು, ನೂಲು ತೆಗೆಯುವವರು, ನೂಲಿಗೆ ಬಣ್ಣ ಹಾಕುವವರು, ಮರದ ಮಗ್ಗವನ್ನು ಮಾಡುವವರು, ಅವರಿಗೆ ಮರವನ್ನು ಕುಯ್ದು ಅಣಿ ಮಾಡಿಕೊಡುವವರು-ಇಂಥ ನಾನಾವಿಧ ಕಸಬುಗಾರರು ನಿಯ್ಗೆಯವನಿಗೆ ಅಂತಿಮ ಪ್ರಯೋಜನವಾದ ಬಟ್ಟೆಯನ್ನು ತಯಾರು ಮಾಡುವುದಕ್ಕೆ ಸಹಾಯ ಮಾಡುತ್ತಾರೆ. ಆದರೆ, ಬಟ್ಟೆ ನೆಯ್ದು ಜನರ ಉಪಯೋಗಕ್ಕೆ ಸಿದ್ಧಮಾಡುವುದು ನೆಯ್ಗೆಯವನ ಕೆಲಸ. ರಾಜ್ಯದಲ್ಲಿ ಕೂಡ ಹೀಗೆಯೇ ಕೃಷಿಗಾರರು, ಕೈಗಾರಿಕೆಯವರು, ವಾಹನಕಾರರು, ಅವುಗಳನ್ನು ನಡಸುವವರು, ಉಪಾಧ್ಯಾಯರು, ವಿವಿಧ ರೂಪದ ಪ್ರಯೋಜನಗಳನ್ನು ಸಾಧಿಸುವವರು-ಇವರೆಲ್ಲ ಇರುತ್ತಾರೆ. ಆದರೆ ಇವರೆಲ್ಲರ ಕೆಲಸವೂ ಸಫಲವಾಗಬೇಕಾದರೆ ರಾಜಕಾರ್ಯವು ಅವಶ್ಯಕ. ಜನರಲ್ಲಿ ಕಲಹವು ಮಿತಿಮೀರಿದರೆ ಮಿಕ್ಕ ಸಂಪತ್ತೆಷ್ಟಿದ್ದರೂ ಪ್ರಯೋಜನವಿಲ್ಲದೆ ಹಾಳಾಗಿಹೋಗುತ್ತದೆ, ಎಷ್ಟ ಜ್ಞಾನವಿದ್ದರೇನು, ಎಷ್ಟು ಕಾವ್ಯ ಸಮೃದ್ಧಿಯಿದ್ದರೇನು ; ಎಷ್ಟು ಕಲೆಗಳ ಸೌಂದರ್ಯ ಸಂಪತ್ತಿಯಿದ್ದರೇನು ; ಎಷ್ಟು ಉತ್ಪಾದನಾಕೌಶಲವಿದ್ದು ವಿಪುಲವಾದ ಅರ್ಥ ಸೌಕರ್ಯಗಳಿದ್ದರೇನು, ಇವುಗಳನ್ನೆಲ್ಲಾ ಒಂದಕ್ಕೊಂದು ವಿರೋಧವಾಗದಂತೆ ಸತತವಾಗಿ, ಕೆಲವನ್ನು ಕುಂಠಿಸುತ್ತಾ ಕೆಲವಕ್ಕೆ ಉತ್ತೇಜನ ಕೊಡುತ್ತಾ ಎಲ್ಲದರಿಲ್ಲಿಯೂ ಸಾತ್ತ್ವಿಕ ಸಂಪತ್ತನ್ನು ವೃದ್ಧಿಮಾಡುತ್ತಾ,

ಕೆಟ್ಟ ಪ್ರವೃತ್ತಿಗಳನ್ನು ದಮನ ಮಾಡುತ್ತಾ ಸರ್ವರಿಗೂ ಆದರ್ಶಪ್ರಾಯರಾದ ಮತ್ತು ರಾಜ್ಯದ ಸಮೂಹ ಶಕ್ತಿಯನ್ನು ಶಾಸನಬದ್ಧವಾಗಿ ಪ್ರಯೋಗಿಸಲು ಅರ್ಹರಾದ ಪಾಲಕರಿದಲ್ಲದಿದ್ದರೆ ನಾಗರಿಕತೆಯು ಮುರಿದು ಬೀಳುವುದು. ಒಳಗಿನ ಸಂಸ್ಕೃತಿಯನ್ನು ತಮಸ್ಸು ಆವರಿಸುವುದು. ಇದನ್ನು ತಪ್ಪಿಸಿ, ಸತತವಾಗಿ ಸರ್ವವರ್ಗಗಳ ಕಾರ್ಯಗಳನ್ನೂ ಸಮನ್ವಯ ಮಾಡುತ್ತ ಮತ್ತು ಮಾಡಿಸುತ್ತಾ, ಎಲ್ಲ ರಂಗಗಳಲ್ಲಿಯೂ ಸತ್ತ್ವೋದ್ರೇಕಕ್ಕೆ ಸಹಾಯ ಮಾಡುತ್ತ, ನಾಗರಿಕರಿಗೆ ಇಹಪರಗಳ ಪುರೋಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಬೇಕಾದ ಆರ್ಥಿಕ ಮಾನಸಿಕ ವಾತಾವರಣವನ್ನು ಸೃಷ್ಟಿಸುತ್ತ, ಕೃತಕೃತ್ಯರಾಗುವ ತತ್ತ್ವಪ್ರೇಮಿಗಳಾದ ನಾಯಕರು ರಾಜ್ಯೋನ್ನತಿಗೆ ಆವಶ್ಯಕ.

ಇದೇ ಪ್ಲೇಟೋವಿನ ಅಂತಿಮ ನಿರ್ಧಾರ. ರಾಜ್ಯದ ನಾಯಕರಿಗೆ ತತ್ತ್ವಜ್ಞಾನವು ಅವಶ್ಯಕ. ರಾಜ್ಯಪರಿಪಾಲನೆಯು ಒಂದು ಶಾಸನ ಬದ್ಧವಾದ ಕಲೆ. ಅದರ ನಿರ್ವಹಣೆಗೆ ಸಾಮಾನ್ಯ ವ್ಯವಹಾರ ಜ್ಞಾನ ಸಾಲದು. ದೇಹದಾರ್ಢ್ಯ ಮನೋಬುದ್ಧಿಶಕ್ತಿಗಳು ಸಾಕಾದಷ್ಟು ಇರುವ ಅಧಿಕಾರಿಗಳಿಗೆ ಪ್ಲೇಟೋ ನಿರ್ದೇಶಿಸಿದ ರೀತಿಯಲ್ಲಿ ವಿದ್ಯಾಶಿಕ್ಷಣಲಾಭವಾಗಿ, ಅವರ ಪ್ರಭುತ್ವಸಾಮರ್ಥ್ಯವೂ ಸಾತ್ತ್ವಿಕಗುಣ ಸಂಪತ್ತಿಯೂ ವೃದ್ಧಿಗೊಂಡು, ರಾಜ್ಯದಲ್ಲಿ ಒಂದು ನಾಯಕವರ್ಗವು ಸಿದ್ಧವಾಗಬೇಕು.

ಈ ಅಧಿಕಾರಿವರ್ಗವು ಕೇವಲ ಪ್ರಜಾಭಿಪ್ರಾಯದಿಂದ ರೂಪಿತವಾದರೆ ಸಾಲದು. ಅಸಂಸ್ಕೃತ ಜನಸ್ತೋಮವು ದಕ್ಷರಾದ ಪ್ರಭುಗಳನ್ನು ಆರಿಸಲು ಸಮರ್ಥವಾದದ್ದಲ್ಲ. ಸಾಮಾನ್ಯ ಜನರನ್ನು ಸ್ವಾರ್ಥಪರರೂ ದುಷ್ಟರೂ ಮೋಸಗೊಳಿಸಿ, ಅವರಿಗೆ ಎಲ್ಲ ಸೌಕರ್ಯಗಳನ್ನೂ ಕೊಡಿಸುವೆವೆಂದು ಆಸೆತೋರಿಸಿ, ಅಧಿಕಾರಕ್ಕೆ ಬರುವ ಸಂಭವವೇ ಹೆಚ್ಚು. ಇಂಥ ದುರವಸ್ಥೆಯಿಂದ ಪಾರಾಗಬೇಕಾದರೆ ಪಾರಮಾರ್ಥಿಕ ದೃಷ್ಟಿ, ವ್ಯವಹಾರ ಕೌಶಲ, ಸಮಾಜಸೇವೆ– ಈ ಗುಣಸಂಪತ್ತಿಯನ್ನು ಗಳಿಸಿದ ಒಂದು ಅಧಿಕಾರಿ ವರ್ಗವು ರಾಜ್ಯದಲ್ಲಿ ಏರ್ಪಡಬೇಕು. ಈ ವರ್ಗದ ನಾಯಕರು ಸತತವಾಗಿ ಜನಸಾಮಾನ್ಯರಿಂದ ಯೋಗ್ಯರಾದವರನ್ನು ವಿದ್ಯಾನುಭವ ಪರೀಕ್ಷೆಗಳ ಮೂಲಕ ಆಯ್ದುಕೊಳ್ಳುತ್ತ ಪ್ರಭುತ್ವದ ಗುಂಪು ಸದಾ ಕರ್ತವ್ಯನಿಷ್ಠೆಯಲ್ಲಿ ನಿರತವಾಗಿರುವಂತೆ ನೋಡಿಕೊಳ್ಳುತ್ತಿರಬೇಕು. ಇದು ಅವರ ಧರ್ಮ; ರಾಜ ಅಥವಾ ರಾಜ್ಯ ಧರ್ಮ.

ಎಲ್ಲಿಯವರೆಗೆ ಪ್ರಪಂಚದ ರಾಷ್ಟ್ರಗಳಲ್ಲಿ ಹೀಗೆ ಶಿಕ್ಷಿತರೂ ತತ್ತ್ವಪ್ರೇಮಿಗಳೂ ಆದ ಸಾತ್ತ್ವಿಕಾಧಿಕಾರಿಗಳು ಪ್ರಭುತ್ವ ಸ್ಥಾನಕ್ಕೆ ಬರುವುದಿಲ್ಲವೋ, ಅಥವಾ ರಾಜ್ಯಾಧಿಕಾರದಲ್ಲಿರುವವರು ತತ್ತ್ವಪ್ರೇಮದ ಪ್ರಭಾವಕ್ಕೆ ಸಿಕ್ಕಿ ತತ್ತ್ವದೃಷ್ಟಿಯ ಸ್ಫೂರ್ತಿಯನ್ನು ಹೊಂದದೆ ರಾಜ್ಯಭಾರ ಮಾಡುವ ಪದ್ಧತಿ ನಡೆಯುತ್ತಿರುವುದೋ, ಅಲ್ಲಿಯವರೆಗೆ ಮಾನವನ ರಾಜ್ಯಗಳಲ್ಲಿ ಕೇಡಿನ ಪರಂಪರೆ ತಪ್ಪುವುದಿಲ್ಲ. ಇದು ಪ್ಲೇಟೋವಿನ ಸಿದ್ಧಾಂತ.

ಈ ಸಿದ್ಧಾಂತವು ಭಾರತ ಸಂಸ್ಕೃತಿಯ ಮೂಲತತ್ತ್ವಕ್ಕನುಸಾರವಾಗಿದೆ.

ರಾಜಧರ್ಮವು ಬ್ರಹ್ಮಜ್ಞಾನ ಮೂಲಕವಾಗಿರಬೇಕು–ಎಂಬುದು ಮನಧರ್ಮಶಾಸ್ತ್ರದ ತಿರುಳೆಂದು ಹೇಳಬಹುದು.

ಸರ್ವೇಷಾಮಪಿ ಚೈತೇಷಾಮಾತ್ಮಜ್ಞಾನಂ ಪರಂ ಸ್ಮೃತಂ । ೧೨–೮೫
ಸೇನಾಪತ್ಯಂ ಚ ರಾಜ್ಯಂ ಚ ದಂಡನೇತೃತ್ವಮೇವ ಚ ।
ಸರ್ವಲೋಕಾಧಿಪತ್ಯಂ ಚ ವೇದಶಾಸ್ತ್ರವಿದರ್ಹತಿ ॥ ೧೨–೧೦೦

ಎಲ್ಲ ಜ್ಞಾನಗಳಿಗಿಂತ ಆತ್ಮಜ್ಞಾನವೇ ಶ್ರೇಷ್ಠ.

ವೇದವನ್ನರಿತವನು (ಅರ್ಥಾತ್ ಬ್ರಹ್ಮಜ್ಞಾನವುಳ್ಳವನು) ಸೇನಾಪತಿತ್ವಕ್ಕೂ ರಾಜ್ಯಪ್ರಭುತ್ವಕ್ಕೂ ಅರ್ಹನಾಗುತ್ತಾನೆ.

ಏಕೆಂದರೆ, ಸರ್ವವನ್ನೂ ಆತ್ಮನಲ್ಲಿ ಕಾಣಲು ಶಕ್ತಿಯುಳ್ಳವನು ಅಧರ್ಮ ಕೆಲಸಗಳಿಗೆ ಮನಗೊಡುವುದಿಲ್ಲ.

ಸರ್ವಮಾತ್ಮನಿ ಸಂಪಶ್ಯೇತ್ ಸಚ್ಚಾಸಚ್ಚ ಸಮಾಹಿತಃ ।
ಸರ್ವಂ ಹಿ ಆತ್ಮನಿ ಸಂಪಶ್ಯನ್ ನಾಧರ್ಮೇ ಕುರುತೇ ಮನಃ ॥ ೧೨–೧೧೮

ಮತ್ತು

ಏವಂ ಯಃ ಸರ್ವಭೂತೇಷು ಪಶ್ಯತ್ಯಾತ್ಮಾನಮಾತ್ಮನಾ ।
ಸ ಸರ್ವಸಮತಾಮೇತ್ಯ ಬ್ರಹ್ಮಾಭ್ಯೇತಿ ಪರಂ ಪದಂ ॥ ೧೨–೧೨೫

ಹೀಗೆ ಯಾರು ಎಲ್ಲ ಪ್ರಾಣಿಗಳಲ್ಲಿಯೂ ಆತ್ಮವಸ್ತುವನ್ನು ತನ್ನ ಆತ್ಮ ಸಾಕ್ಷಾತ್ಕಾರದಿಂದ ನೋಡಲು ಸಮರ್ಥನೋ, ಅವನು **ಸರ್ವ ಸಮತಾ**ಭಾವವನ್ನು ಹೊಂದಿ ಕೊನೆಗೆ ಪರಬ್ರಹ್ಮನ ಸ್ಥಾನವನ್ನು ಸೇರುತ್ತಾನೆ.

ಈ ದೃಶ್ಯವೇ ಪ್ಲೇಟೋವಿನ ಅಂತಃಸ್ಫೂರ್ತಿಯೂ ಕೂಡ : ನಾನಾತ್ವದಲ್ಲಿ ಏಕತ್ವದ ದರ್ಶನ; ಅಂಥ ಏಕತ್ವವು ಆತ್ಮಸ್ವರೂಪವುಳ್ಳದ್ದೆಂಬ ನಂಬಿಕೆ.

ಈ ಗ್ರಂಥದಲ್ಲಿ ಪ್ಲೇಟೋವಿನ ರಾಜ್ಯತತ್ತ್ವಗಳನ್ನು ಸಿಂಹಾವಲೋಕನ ಮಾಡಿದ ಹಾಗಾಯಿತು. ಇಂಥ ದೃಷ್ಟಿಯ ಸತ್ಯಾಂಶವೆಷ್ಟು, ಪ್ರಯೋಜನವೇನು? ಇದು ಈಗಿನ ರಾಷ್ಟ್ರ ನಿರ್ಮಾಣ, ರಾಜ್ಯಚಾಲನ ಕಾರ್ಯಗಳಲ್ಲಿ ಎಷ್ಟುಮಟ್ಟಿಗೆ ಸಹಾಯಕವಾಗುತ್ತದೆ ? ಎಂಬ ಈ ಪ್ರಶ್ನೆಗಳು ವಾಚಕರ ಮನಸ್ಸಿನಲ್ಲಿ ಉದ್ಭವಿಸುವುದು ಸಹಜವಾಗಿದೆ. ಇವುಗಳ ಉತ್ತರದ ದಿಗ್ದರ್ಶನವನ್ನು ಸ್ಥೂಲವಾಗಿ ಸೂಚಿಸುತ್ತೇವೆ.

ರಾಜ್ಯಶಾಸ್ತ್ರದ ವಿಚಾರಾಂಗಗಳಲ್ಲಿ ರಾಜ್ಯಸ್ವರೂಪವೆಂಬುದೇ ಮೊದಲನೆಯ ಪ್ರಶ್ನೆ. ರಾಜ್ಯವೆಂದರೆ ಒಂದು ಸಮಾಜವನ್ನು ಆಳುವ ಪ್ರಭುತ್ವಸಂಸ್ಥೆ, ಪರಮಾಧಿಕಾರವನ್ನು ಹೊಂದಿರುವ ಪ್ರಭುತ್ವ ವರ್ಗ. ಅಂದಮೇಲೆ ಇವರಿಗೆ ಈ

ಪರಮಾಧಿಕಾರವು ಹೇಗೆ ಸಲ್ಲುತ್ತದೆ? ಇದನ್ನು ಜನರು ಏಕೆ ಮನ್ನಿಸಬೇಕು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪ್ರಭುತ್ವದ ಆಧಾರವೇನು? ಎಂಬುದು ರಾಜ್ಯಶಾಸ್ತ್ರದ ಮೂಲಪ್ರಶ್ನೆ.

ಈ ಪ್ರಶ್ನೆಗೆ ಎರಡು ವಿಧವಾದ ಉತ್ತರ ಈ ಶಾಸ್ತ್ರದ ಇತಿಹಾಸದಲ್ಲಿ ಕಂಡುಬಂದಿದೆ. ಒಂದು ಚಾರ್ವಾಕ ಲೋಕಾಯತ ಮತಗಳಿಗೆ ಅನುಗುಣವಾದ, ಪ್ರಕೃತಿತತ್ತ್ವಪ್ರಧಾನವಾದ ಉತ್ತರ. ಇದರ ಪ್ರಕಾರ ರಾಜ್ಯವೆಂಬುದು ಬಲಿಷ್ಠರ ಗುಂಪು ; ಯುದ್ಧ ಕದನಗಳ ಮೂಲಕ ಅದು ಜಯಶಾಲಿಗಳಿಗೆ ಲಭಿಸುತ್ತದೆ. ಬಲವೇ ರಾಜ್ಯದ ಸಾರಪದಾರ್ಥ. ಬಲವುಳ್ಳವರು ರಾಜರು, ಇವರ ಬಲಪ್ರಯೋಗದ ಗುರಿಯಾದರೋ ತಮ್ಮ ಹಿತಸಾಧನೆಯೇ ಆಗಿರುವುದು ಸ್ವಾಭಾವಿಕವಾಗಿದೆ. ಮನುಷ್ಯನು ಇತರ ಪ್ರಾಣಿಗಳಂತೆ ಸ್ವಾರ್ಥಪರ. ತನ್ನ ಪ್ರಾಣವನ್ನೂ ಅದರ ರಕ್ಷಣೆಗೆ ಪೋಷಣೆ ಏಳಿಗೆಗಳಿಗೆ ಬೇಕಾದ ಸುಖ ಸಾಮಗ್ರಿಗಳನ್ನೂ ಕಾಪಾಡಿಕೊಳ್ಳುವುದೇ ಎಲ್ಲರ ಸ್ವಭಾವ. ಬಲಿಷ್ಠರು ತಮ್ಮ ಶಕ್ತಿಯನ್ನೆಲ್ಲ ಇಂಥ ಇಷ್ಟಸಾಧನಕ್ಕಾಗಿ ಉಪಯೋಗಿಸಿಕೊಳ್ಳುವರು, ಇವರು ಸಮಾಜದ ಪ್ರಜೆಗಳನ್ನು ತಮ್ಮ ಅನುಕೂಲಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ. ಇದಕ್ಕಾಗಿ ಹತ್ತಾರು ಸಂಪ್ರದಾಯಗಳೂ ಮನೋವೃತ್ತಿಗಳೂ ಸಮಾಜದಲ್ಲಿ ಏರ್ಪಡುತ್ತವೆ. ಪ್ರಭುತ್ವದವರು ಮುಖ್ಯವಾಗಿ ತಮ್ಮ ಅನುಕೂಲಕ್ಕಾಗಿ ರಾಜ್ಯಭಾರ ಮಾಡುತ್ತಾರೆ. ಪ್ರಜೆಗಳ ಸುಖಶಾಂತಿಗಳು ಪರಂಪರೆಯಿಂದ ಫಲಿಸತಕ್ಕವು. ತಮ್ಮ ಪುರೋಭಿವೃದ್ಧಿಗೆ ಧಕ್ಕೆಬರದಿರುವಷ್ಟು ಮಾತ್ರದ ಸ್ವಾತಂತ್ರ್ಯವನ್ನು ಪ್ರಜೆಗಳಿಗೆ ಬಿಟ್ಟುಕೊಡುತ್ತಾರೆ.

ಇದು ಪ್ರಕೃತಿತತ್ತ್ವವು ಪ್ರಧಾನವೆಂದೆಣಿಸುವವರ ಮತ. ಈಗಿನ ಪ್ರಪಂಚದಲ್ಲಿ ಈ ತತ್ತ್ವವು ಕಾರ್ಲ್ ಮಾರ್ಕ್ಸನ ಸಾಮ್ಯವಾದ ಸಮಾಜವಾದಗಳ ತಳಹದಿಯಾಗಿ ಎಲ್ಲೆಲ್ಲಿಯೂ ಪ್ರಬಲವಾಗುತ್ತಿದೆ. ಇದರ ಪ್ರಕಾರ ವರ್ಗಯುದ್ಧವು ಮಾನವನ ಸ್ವಭಾವಕ್ಕೆ ಸೇರಿದ ವಾಸ್ತವಾಂಶ. ಎಲ್ಲ ರೀತಿಯ ರಾಜ್ಯಗಳೂ ಕೂಡ ಇಂಥ ವರ್ಗಯುದ್ಧವನ್ನೇ ಪ್ರತಿಬಿಂಬಿಸುತ್ತವೆ. ಮೊದಲು ದನಕಾಯುವವರ ಸಮಾಜದಲ್ಲಿ ಬಲಿಷ್ಠರಿಗೆ ದನದ ಮುಂದೆಯೆಲ್ಲ ಸೇರಿತ್ತು. ಮಿಕ್ಕವರೆಲ್ಲ ಅವರ ಊಳಿಗದವರು. ಪ್ರಭುತ್ವದವರು ತಮ್ಮ ಬಲದಿಂದ ಸಮಾಜದ ಆಸ್ತಿಯನ್ನೆಲ್ಲ ಆಕ್ರಮಿಸಿ ಅದರ ನಿರಂಕುಶ ಸ್ವಾಮಿಗಳಾಗುತ್ತಾರೆ. ಇಂಥ ಆಸ್ತಿಯೆಂಬುದು ಕಾಲಕ್ರಮೇಣ ರೂಪಾಂತರ ಹೊಂದುತ್ತ ಬರುತ್ತವೆ. ಮೊದಲು ದನಕರುಗಳು ಆಮೇಲೆ ಭೂಮಿ, ತರುವಾಯ ಕೈಗಾರಿಕೆಗೆ ಬೇಕಾದ ಯಂತ್ರೋಪಕರಣಗಳು, ವ್ಯಾಪಾರಕ್ಕೆ ಬೇಕಾದ ಹಣ–ಇವುಗಳ ಮೇಲೆ ಸ್ವಾಮ್ಯವನ್ನು ಪಡೆದವರೇ ರಾಜರು, ರಾಜ್ಯಪ್ರವರ್ತಕರು. ಈಗಿನ ಕಾಲದಲ್ಲಿ ಸರ್ಕಾರವೆಂಬುದು ಕೈಗಾರಿಕೆ ವ್ಯವಸಾಯಗಳ ಸ್ವಾಮ್ಯವನ್ನು ಹೊಂದಿದ ಧನಿಕರ ಪ್ರತಿನಿಧಿ. ಈಗಿನ ರಾಜ್ಯಸೂತ್ರಗಳೆಲ್ಲ ಧನಿಕರ ಅನುಕೂಲಕ್ಕಾಗಿ ರೂಪುಗೊಂಡಿವೆ. ಪ್ರಜೆಗಳ ಅನುಕೂಲವು ಅಮುಖ್ಯವಾಗಿ, ಅನಿರ್ದಿಷ್ಟವಾಗಿ ಪರೋಕ್ಷ ಪರಂಪರೆಯಿಂದ ಏರ್ಪಡುವ ವಿಷಯವಾಗಿದೆ.

ಪ್ಲೇಟೋವಿನ ತತ್ತ್ವವೂ ಭಾರತೀಯ ರಾಜಧರ್ಮವೂ ಈ ಮಾರ್ಕ್ಸ್ ಪ್ರತಿಪಾದನೆಗೆ ನೇರ ವಿರುದ್ಧವಾಗಿವೆ. ಈ ದೃಷ್ಟಿಯ ಪ್ರಕಾರ, ರಾಜ್ಯವೆಂಬುದು ಎಲ್ಲ ಪ್ರಜೆಗಳ ಹಿತವನ್ನೂ ನೆರವೇರಿಸಿ ಕೊಡಲು ಏರ್ಪಟ್ಟ ಸಂಸ್ಥೆ. ವರ್ಗಯುದ್ಧವು ಸಮಾಜ ರಾಜ್ಯಗಳ ಸ್ವಭಾವ ಮೂಲವಾದ ತತ್ತ್ವವಲ್ಲ. ಇದರ ಬದಲಾಗಿ ವರ್ಗಸಾಮರಸ್ಯವನ್ನು ಪ್ರಯತ್ನ ಪೂರ್ವಕವಾಗಿ ರಾಜ್ಯದಲ್ಲಿ ರೂಢಮೂಲ ಮಾಡಬಹುದು. ಪ್ರಭುತ್ವದವರು ತಮ್ಮ ವರ್ಗಸ್ವಾರ್ಥವನ್ನು ನಿಯಮನ ಮಾಡಿಕೊಂಡು ಎಲ್ಲ ವರ್ಗಗಳವರ ಹಿತವನ್ನು ಸಾಧಿಸುವ ಸೂತ್ರಗಳನ್ನು ನಿರ್ಮಿಸಿಕೊಳ್ಳಬೇಕು.

ಇವರು ಹೀಗೆ ನಿರ್ಮಿಸಿಕೊಳ್ಳಲು ಮಾನವ ಸ್ವಭಾವದಲ್ಲಿ ಅನುಕೂಲಿಸುವ ಆಧಾರವಿದೆ. ಏನೆಂದರೆ, ಮಾನವನು ಕೇವಲ ಪ್ರಾಣಿಸಮಾನನಲ್ಲ. ಇವನಲ್ಲಿ ಆತ್ಮನೆಂಬ ಚೈತನ್ಯ ಸ್ವರೂಪವಾದ ಶ್ರೇಷ್ಠ ವಸ್ತುವಿದೆ. ಇದು ಎಲ್ಲಾ ಮಾನವರಲ್ಲಿಯೂ ಪ್ರತಿಬಿಂಬಿತವಾಗಿದೆ. ಆದುದರಿಂದ ಎಲ್ಲ ಮಾನವರ ಶ್ರೇಯೋಮಾರ್ಗವೂ ಒಂದೇ. ಪರರ ಶ್ರೇಯಸ್ಸನ್ನು ವೃದ್ಧಿಗೊಳಿಸುವುದರಲ್ಲಿ ಎಲ್ಲರ ಸ್ವಂತ ಶ್ರೇಯಸ್ಸೂತಾನಾಗಿಯೇ ವೃದ್ಧಿಗೊಳ್ಳುವುದು. ಹಿಂದೆ ಆಗಲೇ ನಿರೂಪಿಸಿರುವಂತೆ ಇದೇ ಪ್ಲೇಟೋವಿನ ದೃಷ್ಟಿ.

ಪ್ಲೇಟೋವಿನ ಮತ್ತು ಭಾರತದ ರಾಜ್ಯಧರ್ಮದ ಸೂತ್ರಗಳೂ ಈಗಿನ ರಾಜ್ಯನಿರ್ಮಾಣ ಕಾರ್ಯದಲ್ಲಿ ಅಮೂಲ್ಯವಾದ ಸಹಾಯವನ್ನೊದಗಿಸುತ್ತವೆ. ರಾಜ್ಯಸಂಸ್ಥೆಯನ್ನು ಸರ್ವ ಪ್ರಜಾಪ್ರತಿನಿಧಿಯನ್ನಾಗಿ ಮಾಡಿ ನಿಲ್ಲಿಸಿ, ಅದರ ಮೂಲಕ ವರ್ಗಸಾಮರಸ್ಯವನ್ನೂ ವ್ಯಕ್ತಿ ಪುರೋಭಿವೃದ್ಧಿಯನ್ನೂ ಸಾಧಿಸಿಕೊಳ್ಳಲು ಪ್ಲೇಟೋವಿನ ತತ್ತ್ವವು ಶಾಸ್ತ್ರಸಮ್ಮತವಾದ ಆಧಾರವನ್ನು ಸೂಚಿಸುತ್ತದೆ.

ವಿಜ್ಞಾನಗಳ ಏಕದೇಶ ದೃಷ್ಟಿಯನ್ನು ಸರಿಪಡಿಸಿ, ಎಲ್ಲ ವಿಜ್ಞಾನಗಳನ್ನೂ ಸಮನ್ವಯಗೊಳಿಸಿ, ಅವುಗಳೆಲ್ಲವುಗಳ ಮೂಲಕವೂ ಪ್ರಪಂಚವನ್ನಾವರಿಸಿ ಪ್ರತ್ಯೇಕವಾಗಿ ಪ್ರಕಾಶಿಸುವ ಆತ್ಮಚೈತನ್ಯ ಶಕ್ತಿಯ ದರ್ಶನವನ್ನು ಉಂಟುಮಾಡಿಕೊಡುವುದು ವಿಶ್ವಶಾಂತಿಗೂ ಸಮಸ್ತ ಜನಕಲ್ಯಾಣಕ್ಕೂ ದಾರಿಯಾದಂತಾಗುತ್ತದೆ.

ಎರಡೆಯದಾಗಿ ಇಂಥ ವರ್ಗಸಾಮರಸ್ಯ ಮತ್ತು ಸರ್ವಜನ ಹಿತಗಳನ್ನು ಸಾಧಿಸಲು ರಾಜ್ಯದಲ್ಲಿರುವ ಎಲ್ಲ ಮೇಧಾವಿಗಳೂ ಸೇರಿ ಶ್ರೇಷ್ಠವಾದ ಪ್ರಭುತ್ವವರ್ಗವೊಂದನ್ನು ಶಾಸ್ತ್ರರೀತಿಯಾಗಿ ರಚಿಸಬೇಕು. ಇಂಥ ಸುಸಂಸ್ಕೃತ ನಾಯಕ ವರ್ಗವು ತನ್ನ ಉನ್ನತ ವಿದ್ಯಾಸಂಸ್ಕಾರ ಶಿಕ್ಷಣ ಕ್ರಮಗಳನ್ನು ಸತತವಾಗಿ ಆಚರಣೆಯಲ್ಲಿಟ್ಟು ಕೊಂಡು, ಇಡೀ ಸಮಾಜಕ್ಕೆ ವಿದ್ಯಾಭ್ಯಾಸವನ್ನೊದಗಿಸಿ, ತನ್ಮೂಲಕ ಯೋಗ್ಯರನ್ನು ಆರಿಸಿಕೊಳ್ಳುತ್ತಿರಬೇಕು.

ಹೀಗೆ ಉತ್ತಮಪ್ರಭುವರ್ಗದ ಸೃಷ್ಟಿಸ್ಥಿತಿನಿಯಮಗಳು ಪ್ಲೇಟೋ ಹೇಳಿದ ರೀತಿಯಲ್ಲಿ ಏರ್ಪಟ್ಟದ್ದೇ ಆದರೆ, ಮಾನವ ಸಮಾಜವೂ ರಾಜ್ಯವೂ ಕೃತಕೃತ್ಯವಾಗುವುವೆಂಬುದರಲ್ಲಿ ಸಂಶಯವಿಲ್ಲ.

ಇಂಥ ಅಧಿಕಾರಿ ವರ್ಗವನ್ನು ಏರ್ಪಡಿಸಲು ಈಗಿನ ಪ್ರಜಾರಾಜ್ಯಪದ್ಧತಿಯಲ್ಲಿ ಹೇಗೆ ಸಾಧ್ಯವಾದೀತೆಂದು ವಿಚಾರಮಾಡುವುದು ಅತ್ಯಾವಶ್ಯಕ. ಕೇವಲ ಚುನಾವಣೆಗಳ ಮೂಲಕ ಅಧಿಕಾರಿಗಳು ಪ್ರಭುತ್ವಕ್ಕೆ ಬಂದರೂ ಅವರ ವಿದ್ಯಾವಿನಯಸಂಪತ್ತಿಗಳು ಹೇಗಿರಬೇಕೆಂಬುದನ್ನು ಜನಸಾಮಾನ್ಯರಲ್ಲಿ ಪ್ರಚಾರ ಮಾಡಿದ್ದೇ ಆದರೆ, ಯೋಗ್ಯರನ್ನಾರಿಸಲು ವೋಟರುಗಳಿಗೆ ಅನುಕೂಲವಾಗುತ್ತದೆ. ಆದರ್ಶ ರಾಜ್ಯಕ್ಕೆ ಆದರ್ಶ ನಾಯಕರು ಅವಶ್ಯಕ. ಇವೆರಡು ಆದರ್ಶಗಳೂ ಪ್ಲೇಟೋವಿನ ರಿಪಬ್ಲಿಕ್, ಲಾಸ್, ಪಾಲಿಟಿಕಸ್ ಮುಂತಾದ ಸಂವಾದ ರೂಪವಾದ ಗ್ರಂಥಗಳಲ್ಲಿ ಖಚಿತವಾಗಿಯೂ ಹೃದಯಂಗಮವಾಗಿಯೂ ಕಾಣಬರುತ್ತವೆ.

ಶ್ರೇಷ್ಠರ ಆಚರಣೆಯೇ ಜನಸಾಮಾನ್ಯರಿಗೆ ಪ್ರಮಾಣವೆಂದು ಭಗವದ್ಗೀತೆಯಲ್ಲಿ ಹೇಳಿದಂತೆ, ಪ್ಲೇಟೋ ಸೂಚಿಸುವ ಆದರ್ಶನಾಯಕರು ವಿದ್ಯಾಶಿಕ್ಷಣಗಳ ಮೂಲಕ ಸಿದ್ಧರಾದದ್ದೇ ಆದರೆ, ಸಮಾಜದಲ್ಲಿ ಜನರನ್ನು ಅಧೋಗತಿಗೆ ಸೆಳೆಯುವ ಮನೋವೃತ್ತಿಗಳು ದುರ್ಬಲವಾಗುತ್ತವೆ. ಇಷ್ಟೇ ಅಲ್ಲ. ಎಲ್ಲ ವರ್ಗ ವ್ಯಕ್ತಿಗಳ ಮನಸ್ಸನ್ನೂ ಆತ್ಮೋನ್ನತಿಯ ಮಾರ್ಗಕ್ಕೆ (ಅವರವರ ದಿನಚರಿಯ ಆಸಕ್ತಿಗಳ ಮೂಲಕವೇ) ಸೆಳೆಯುವ ಮಾನಸಿಕ ಪ್ರವಾಹವು ಏರ್ಪಡುತ್ತದೆ. ಅವನತಿ ಮಾರ್ಗವನ್ನು ತಡೆದು ಏಳಿಗೆಯ ದಾರಿಯನ್ನು ಸುಗಮಮಾಡುತ್ತದೆ.

ಪ್ಲೇಟೋ ನಿರ್ದೇಶಿಸುವುದು ಮೂಲಶಾಸನ, ಮೂಲಧರ್ಮಗಳನ್ನು ಮಾತ್ರ. ಇವು ಸಿದ್ಧಿಸಿದರೆ ಸಮಾಜದ ಕಾರ್ಯಭಾರಕ್ಕೆ ಬೇಕಾದ ಪರಂಪರಾ ಸೂತ್ರಗಳು ತಾವಾಗಿಯೇ ಆಯಾಯ ಸನ್ನಿವೇಶಗಳಲ್ಲಿ ತೋರಿಬರುವುವು.

ಪ್ಲೇಟೋವಿನ ದರ್ಶನವನ್ನು ಮನನ ಮಾಡುವುದರಿಂದ ಮತ್ತೊಂದು ಪ್ರಯೋಜನವಿದೆ. ಈಗಿನ ಕಾಲದಲ್ಲಿ ಏಕದೇಶಜ್ಞಾನವನ್ನೊಳಕೊಂಡ ಏಕಪಕ್ಷೀಯ ಧ್ಯೇಯಗಳೂ ಕಾರ್ಯಕ್ರಮಗಳೂ ಬಹಳ ಹಾವಳಿ ಮಾಡುತ್ತಿವೆ. ನಾಯಕರ ಮನಸ್ಸಿನಲ್ಲಿ ಇವು ಗೊಂದಲವನ್ನೆಬ್ಬಿಸಿವೆ. 'ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ' ಎಂಬ ಮಂತ್ರಪದಗಳು ಫ್ರೆಂಚರ ಕ್ರಾಂತಿಯ ದಿನಗಳಿಂದಲೂ (೧೭೮೯) ಉದಾರಿಗಳ ಮನಸ್ಸನ್ನಾವರಿಸಿವೆ. ಈಗಿನ ತಲೆಮಾರಿನವರಲ್ಲಿ **'ವರ್ಗರಹಿತ ಜಾತ್ಯತೀತ ಸಮಾಜ, ಮತಾತೀತ ರಾಜ್ಯ, ಆರ್ಥಿಕ ಸೌಕರ್ಯ ಮಟ್ಟ, ಸಾಮಾಜಿಕ ಭದ್ರತೆ ಅಥವಾ ಸುರಕ್ಷಿತತೆ, ಶ್ರಮಜೀವಿಗಳ ದೌಲತ್ತು'** – ಎಂಬಿವೇ ಮುಂತಾದ ಉನ್ಮಾದಕ ಮಂತ್ರಗಳು ಪ್ರಜಾಹೃದಯವನ್ನೂ ವಿಚಾರಪರರನ್ನೂ ಮುಗ್ಧಗೊಳಿಸಿವೆ. ಇವುಗಳಲ್ಲೆಲ್ಲ ಅಂಗೀಕಾರಾರ್ಹವೂ ಅವಶ್ಯಕವೂ ಶೀಘ್ರದಲ್ಲಿಯೇ ಕಾರ್ಯಗತವಾಗಬೇಕಾಗಿಯೂ ಇರುವ ತತ್ತ್ವಾಂಶಗಳಿವೆ. ಆದರೆ, ಈ ತತ್ತ್ವಾಂಶಗಳು ವಿನಾಶಕಾರಿಯಾದ ಅತತ್ವಾಂಶಗಳಿಂದ ಆವರಿಸಲ್ಪಟ್ಟಿರುವುದರಿಂದ, ಸಂಸ್ಕಾರ ಶೋಧನೆಗಳಿಲ್ಲದೆ ಇವು ಶಾಸನ ರಂಗದಲ್ಲಿ ಪ್ರಯೋಗವಾದರೆ, ಅದರಿಂದ ಪ್ರಯೋಜನಕ್ಕಿಂತ ವಿಪತ್ತುಗಳೇ ಹೆಚ್ಚಾಗಿ ಉಂಟಾಗುವ ಸಂದರ್ಭಗಳಿವೆ.

ಈ ಎಲ್ಲ ವಿಚಾರತರಂಗಗಳನ್ನೂ ಶೋಧನೆಮಾಡಿ ಉತ್ತಮ ಪ್ರಮೇಯಗಳನ್ನು ಹಿಡಿದು, ಪ್ರಚಲಿತ ಏಕಪಕ್ಷೀಯ ಘೋಷಣೆಗಳನ್ನು ಕಾರ್ಯನೀತಿಗಳನ್ನೂ ತಿದ್ದಿಕೊಂಡು, ಸಮಾಜ ರಾಜ್ಯಗಳ ಸುಧಾರಣೆಯನ್ನು ನಡಸುವುದಕ್ಕೆ, ಪ್ಲೇಟೋವಿನ ತತ್ತ್ವಗಳೂ (ತತ್ತ್ವಶೋಧನ ತತ್ತ್ವನಿರೂಪಣ ರೀತಿ ವೈಖರಿಗಳೂ) ಸಹಕಾರಿಯಾಗಿವೆ.

* * *

ಪ್ರಿಯ ಕನ್ನಡ ಬಂಧುಗಳೆ,

೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೪ನೇ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ-ಕನ್ನಡಿಗ-ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಚಿತ್ರದುರ್ಗದಲ್ಲಿ ನಡೆಯುತ್ತಲಿರುವ ಅಖಿಲ ಭಾರತ ೭೫ನೆಯ ಅಮೃತ ಮಹೋತ್ಸವ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮